ರಾಷ್ಟ್ರ ಜಾಗೃತಿಯ ದೈನಿಕ


ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ದೇಶದ ಮೊದಲ ಸ್ವದೇಶಿ ಹೈಡ್ರೋಜನ್ ರೈಲು ಸಂಚಾರಕ್ಕೆ ಅನುಮತಿ ೦೫

ರಾಜ್ಯದಲ್ಲಿ ಇಂದು ಪಲ್ಸ್ ಪೋಲಿಯೊ ಹನಿ ನೀಡಿಕೆ



೦೨

ಬೆಂಗಳೂರು
ಭಾನುವಾರ, 28 ಜೂನ್ 2026
ಸಂಪುಟ 33, ಸಂಚಿಕೆ 238, ಪುಟಗಳು 12+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ : ಚತುರ್ದಶಿ, ನಕ್ಷತ್ರ : ಜ್ಯೇಷ್ಠ

ದಿನದ ಮಾತು

ಅನೇಕರು ತಮ್ಮ ಜೀವನದಲ್ಲಿ ಮುಂದೆ ಸಾಗದಿರುವುದಕ್ಕೆ ಕಾರಣ ಅವರು ಮಾತನಾಡುತ್ತಲೇ ಕಾಲವನ್ನು ವ್ಯಯ ಮಾಡಿದ್ದು.

▲ ರಾಮಕೃಷ್ಣ ಪರಮಹಂಸ

ಸೀಸುವಿನ ಗಾನಾರ್ಥಮಂಜರಿ (ಗಾನಾರ್ಥಮಂ ಜರಿ!)

ವಕ್ರದೃಷ್ಟಿ

• ಎಸ್. ರಾಮನಾಥ್

• ಪುಟ ೬

ಕಿರುಸುದ್ದಿ

ಕೊಪ್ಪಳದಲ್ಲಿ ರಸ್ತೆ ಅಪಘಾತ ಐವರು ಬಲಿ, ಇಬ್ಬರು ಗಂಭೀರ

• **ಕೊಪ್ಪಳ:** ಜಿಲ್ಲೆಯ ಕುಕನೂರು ತಾಲೂಕಿನ ಭಾನಾಪುರ ಸಮೀಪದ ರಾಷ್ಟ್ರೀಯ ಹೆದ್ದಾರಿ 63ರಲ್ಲಿ ಶನಿವಾರ ಬೆಳಗಿನ ಜಾವ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಐವರು ಮೃತಪಟ್ಟಿದ್ದು, ಇಬ್ಬರ ಸ್ಥಿತಿ ಗಂಭೀರವಾಗಿದೆ. ಆರು ಮಂದಿ ಗಾಯಗೊಂಡಿದ್ದಾರೆ.

• ಪುಟ ೩

ಪಾರದರ್ಶಕ ತನಿಖೆ ಖಚಿತಪಡಿಸಲು ಬದ್ಧ

• **ಅಯೋಧ್ಯೆ:** ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಹಾಗೂ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಮತ್ತು ಟ್ರಸ್ಟ್ ಸದಸ್ಯ ಅನಿಲ್ ಮಿಶ್ರಾ ಅವರ ರಾಜೀನಾಮೆ ಸಲ್ಲಿಸಿರುವುದನ್ನು ದೃಢೀಕರಿಸಿದ್ದು, ಶ್ರೀರಾಮ ಮಂದಿರ ದೇಣಿಗೆ ದುರುಪಯೋಗ ಆರೋಪಗಳ ಬಗ್ಗೆ ಪಾರದರ್ಶಕ ತನಿಖೆಯನ್ನು ಖಚಿತಪಡಿಸಲು ನಾವು ಬದ್ಧರಾಗಿದ್ದೇವೆ ಎಂದು ಭರವಸೆ ನೀಡಿದೆ.

• ಪುಟ ೫

ದೂರದೃಷ್ಟಿಯ ದೊರೆ ಕೆಂಪೇಗೌಡ: ಡಿಕೆಶಿ

• ಪುಟ ೩

ತುಮಕೂರಲ್ಲಿ ಕಾರು ಸ್ಫೋಟಿಸಿಕೊಂಡು ಆತ್ಮಹತ್ಯೆ

• ಪುಟ ೨

ದೇಸಿ ಗಸ್ತು ಹಡಗು ಅಕ್ಷಯ್ ಕರಾವಳಿ ಪಡೆಗೆ ಸೇರ್ಪಡೆ

• ಪುಟ ೫

ಬಾ.ಮಾ.ಹರೀಶ್ ಪುತ್ರ ಹೃದಯಾಘಾತದಿಂದ ನಿಧನ

• ಪುಟ ೩



ಭಾರತ ವಿಶ್ವ ಸಂಜೀವಿನಿ

• ಪುಟ ೫

ಸುದ್ದಿ ಸಮಗ್ರ

ಸ್ಮರಣಾ ಫಲಕದಲ್ಲಿ ಜಾಗ ಕೊಡುವವರ ಹೆಸರು: ಸಿಎಂ

ಭೂದಾನಿಗಳ ಸ್ಮರಣೆ

• **ಬೆಂಗಳೂರು:** ಕೈಗಾರಿಕಾ ಪ್ರದೇಶ, ಶಾಲೆಗಳು, ಕೆರೆ, ರಸ್ತೆ ನಿರ್ಮಾಣ ಸೇರಿದಂತೆ ಜನಪರ ಯೋಜನೆಗಳಿಗೆ ಯಾವುದೇ ತಕರಾರು ಮಾಡದೆ ಜಾಗ ನೀಡುವ ಭೂ ಮಾಲೀಕರ ಹೆಸರನ್ನು ವಾಲ್ ಆಫ್ ಗ್ರಾಟಿಟ್ಯೂಡ್ (ಕೃತಜ್ಞತಾ ಫಲಕ)ದಲ್ಲಿ ಸೇರಿಸಲು ಸರ್ಕಾರ ತೀರ್ಮಾನಿಸಿದೆ. ಆ ಮೂಲಕ ಭೂ ಮಾಲೀಕರ ತ್ಯಾಗ ಸ್ಮರಿಸಲಾಗುವುದು ಎಂದು ಸಿಎಂ ಡಿ.ಕೆ. ಶಿವಕುಮಾರ್ ಅವರು ಘೋಷಿಸಿದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನೂತನವಾಗಿ ನಿರ್ಮಿಸುತ್ತಿರುವ ಕೆಂಪೇಗೌಡ ಬಡಾವಣೆಯಲ್ಲಿ ಶನಿವಾರ ನಡೆದ 517ನೇ ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾವು ಎಸ್.ಎಂ. ಕೃಷ್ಣ ಅವರ ಹೆಸರಿನಲ್ಲಿ 10 ಪಥಗಳ ರಸ್ತೆಗೆ ಚಾಲನೆ ನೀಡಿದ್ದೇವೆ. ಈ ರಸ್ತೆ 11 ಕಿ.ಮೀ.ಗೆ ನಿಲ್ಲುವುದಿಲ್ಲ, ಮುಂದೆ ಇದು 123 ಕಿ.ಮೀ. ರಸ್ತೆಯಾಗಿ ವಿಸ್ತರಣೆಯಾಗಲಿದೆ. ಈ ರಸ್ತೆಯಲ್ಲಿ ವಾಲ್ ಆಫ್ ಗ್ರಾಟಿಟ್ಯೂಡ್ (ಉಪಕಾರ ಸ್ಮರಣೆ) ನಿರ್ಮಿಸಲು ಮುಂದಾಗಿದ್ದೇವೆ. ಆ ಮೂಲಕ ಈ ರಸ್ತೆಗಾಗಿ ಜಮೀನು ನೀಡಿದವರ ಹೆಸರನ್ನು ಶಾಶ್ವತವಾಗಿ ಉಳಿಸುವ ಕೆಲಸವನ್ನು ನಮ್ಮ ಸರ್ಕಾರ ಮುಂದಿನ ದಿನಗಳಲ್ಲಿ ಮಾಡಲಿದೆ. ಇದನ್ನು ಎಲ್ಲಾ ಕಡೆಗಳಲ್ಲೂ ಮಾಡಲಾಗುವುದು ಎಂದು ತಿಳಿಸಿದರು. ಎಲ್ಲಿ ಶ್ರಮ ಇದೆಯೋ ಅಲ್ಲಿ ಫಲವಿದೆ. ಯಾವುದೇ ಜಮೀನು ಉಳುಮೆ ಮಾಡದೆ ಮಟ್ಟ ಮಾಡಲು ಸಾಧ್ಯವಿಲ್ಲ.

➡ ಪುಟ ೨

3 ಕೆ ನೆನಪಿಟ್ಟುಕೊಳ್ಳಬೇಕು

ಬೆಂಗಳೂರಿಗರು ಮೂರು ಕೆ ಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಬೆಂಗಳೂರು ಕಟ್ಟಿದ ಕೆಂಪೇಗೌಡರು, ವಿಧಾನಸೌಧ ಕಟ್ಟಿದ ಕೆಂಗಲ್ ಹನುಮಂತಯ್ಯ ಹಾಗೂ ಬೆಂಗಳೂರನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದ ಎಸ್.ಎಂ. ಕೃಷ್ಣ ಅವರು. ಶ್ರೀ ನಿರ್ಮಲಾನಂದ ಸ್ವಾಮೀಜಿ ಹಾಗೂ ಶ್ರೀ ನಂಜಾವಧೂತ ಸ್ವಾಮೀಜಿಗಳು ಸೇರಿ ಜೂ. 27ರಂದು ಕೆಂಪೇಗೌಡ ಜಯಂತಿ ಆಚರಣೆ ಮಾಡಬೇಕು ಎಂದು ತೀರ್ಮಾನ ಮಾಡಿದ ಬಳಿಕ ನಾವು ಕೆಂಪೇಗೌಡ ಜಯಂತಿ ಆಚರಿಸಿಕೊಂಡು ಬರುತ್ತಿದ್ದೇವೆ. ಆ ಸಮಯದಲ್ಲಿ ನನಗೆ ಬೆಂಬಲವಾಗಿ ನಿಂತ ದೇವೇಗೌಡ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ತಿಳಿಸಿದರು.



ಹೆಬ್ಬಾಳದ ಬಳಿ ಕಡಿಮೆ ಅಂತರದ ಟನಲ್ ರಸ್ತೆ ನಿರ್ಮಾಣ ಕೆಲಸವನ್ನು ಕೆಲವೇ ದಿನಗಳಲ್ಲಿ ಆರಂಭ ಮಾಡಲಾಗುವುದು. ಸಂಚಾರ ದಟ್ಟಣೆ ನಿವಾರಣೆಗೆ ಅನೇಕ ಯೋಜನೆ ರೂಪಿಸಲಾಗಿದೆ. ನೀವು ನನ್ನ ಮೇಲೆ ಇಟ್ಟಿರುವ ವಿಶ್ವಾಸ ಉಳಿಸಿಕೊಂಡು ಹೋಗುತ್ತೇನೆ.

■ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ

123 ಕಿ.ಮೀ. ಬೆಂಗಳೂರು ಬಿಸಿನೆಸ್ ಕಾರಿಡಾರ್

123 ಕಿ.ಮೀ ಉದ್ದದ ಬೆಂಗಳೂರು ಬಿಸಿನೆಸ್ ಕಾರಿಡಾರ್ ರಸ್ತೆ ನಿರ್ಮಾಣ ಪ್ರಕ್ರಿಯೆ ಚಾಲನೆಯಲ್ಲಿದ್ದು, ಟೆಂಡರ್ ಕರೆಯಲಾಗಿದೆ. ಎಲೆಕ್ಟ್ರಾನಿಕ್ ಸಿಟಿಯಿಂದ ಮೈಸೂರು ರಸ್ತೆ ಸೇರುವ ಹಂತಕ್ಕೂ ಅಂತಿಮ ಅಧಿಸೂಚನೆ ಸದ್ಯದಲ್ಲೇ ಹೊರಡಿಸುತ್ತೇವೆ. ಈ ರಸ್ತೆ ಇಲ್ಲವಾದರೆ ಬೆಂಗಳೂರು ಉಳಿಯಲು ಸಾಧ್ಯವಿಲ್ಲ, ಹೀಗಾಗಿ ನಾನು ದಿಟ್ಟ ತೀರ್ಮಾನ ಮಾಡಲಿದ್ದೇನೆ. ಭೂಮಿ ಕಳೆದುಕೊಳ್ಳುವ ಜಮೀನು ಮಾಲೀಕರಿಗೆ 35% ವಾಣಿಜ್ಯ ಭೂಮಿ, 40% ವಸತಿ ಪ್ರದೇಶ ಭೂಮಿ, ಟಿಡಿಆರ್ ನೀಡಲು ಸರ್ಕಾರ ಮುಂದಾಗಿದೆ. ಭೂ ಮಾಲೀಕರು ತಮಗೆ ಯಾವ ಆಯ್ಕೆ ಬೇಕೋ ಅದನ್ನು ತೆಗೆದುಕೊಳ್ಳಬಹುದು ಎಂದು ವಿವರಿಸಿದರು.

ಜಿಕೆವಿಕೆ, ಎಂಜಿನಿಯರ್ ಎಸ್.ವಿಶ್ವನಾಥ್, ರಾಹುಲ್ ದ್ರಾವಿಡ್‌ಗೆ ಕೆಂಪೇಗೌಡ ಪ್ರಶಸ್ತಿ

ಕೆಂಪೇಗೌಡ ಅಂತರರಾಷ್ಟ್ರೀಯ ಪ್ರಶಸ್ತಿಯನ್ನು ಆಧುನಿಕ ಕೃಷಿ ಹಾಗೂ ನವೀನ ತಂತ್ರಜ್ಞಾನವನ್ನು ರೈತರಿಗೆ ತಲುಪಿಸುವ ಮೂಲಕ ಹೆಸರು ಮಾಡಿರುವ ಜಿಕೆವಿಕೆ, ನಗರ ಯೋಜನಾ ತಜ್ಞರಾಗಿ ಪ್ರಸಿದ್ಧಿ ಹೊಂದಿರುವ ಎಂಜಿನಿಯರ್ ಎಸ್. ವಿಶ್ವನಾಥ್ ಹಾಗೂ ಮಾಜಿ ಕ್ರಿಕೆಟಿಗ ರಾಹುಲ್ ದ್ರಾವಿಡ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ರಾಹುಲ್ ದ್ರಾವಿಡ್ ಅವರು ವಿದೇಶದಲ್ಲಿದ್ದ ಕಾರಣಕ್ಕೆ ಅವರು ಪ್ರಶಸ್ತಿ ಸ್ವೀಕರಿಸಲು ಸಾಧ್ಯವಾಗಲಿಲ್ಲ, ಜಿಕೆವಿಕೆ ಸಂಸ್ಥೆಯ ಪರವಾಗಿ ಉಪಕುಲಪತಿಗಳಾದ ಎಸ್.ವಿ.ಸುರೇಶ್ ಅವರು ಪಡೆದುಕೊಂಡರು.

ರೈತರ ಹಿತ ಪರಿಗಣಿಸಿ ಸಮಸ್ಯೆ ಬಗೆಹರಿಸಿ: ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್

ಕಾವೇರಿ ವಿವಾದ ಇತ್ಯರ್ಥಕ್ಕೆ ಸಲಹೆ



• **ಬೆಂಗಳೂರು:** ಕಾವೇರಿ ಜಲವಿವಾದದಲ್ಲಿ ರೈತರ ಹಿತ ಪರಿಗಣಿಸಿ ಸಮಸ್ಯೆ ಬಗೆಹರಿಸುವುದು ಪಕ್ಷಿಕ ಪರಿಹಾರ, ರೈತರ ವಿಚಾರದಲ್ಲಿ ಕಾಳಜಿ ತೋರುವುದು ಮುಖ್ಯ ಎಂದು ಉಪ ರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅಭಿಪ್ರಾಯಪಟ್ಟರು.

ನಾಡಪ್ರಭು ಕೆಂಪೇಗೌಡ ಪ್ರತಿಷ್ಠಾನವು ನಗರದ ಜ್ಞಾನಜ್ಯೋತಿ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ಬೆಂಗಳೂರು ನಿರ್ಮಾತೃ ನಾಡಪ್ರಭು ಕೆಂಪೇಗೌಡ ಜನ್ಮದಿನೋತ್ಸವದಲ್ಲಿ ಭಾಗವಹಿಸಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಗಣ್ಯರಿಗೆ ಪ್ರಶಸ್ತಿ ಪ್ರದಾನಿಸಿದರು.

ತಮಿಳುನಾಡು ಮತ್ತು ಕರ್ನಾಟಕದ ಮಧ್ಯೆ ಕಾವೇರಿ ಜಲವಿವಾದಕ್ಕೆ ನಾವು ಒಂದು ಪರಿಹಾರ ಕಂಡುಕೊಳ್ಳಬೇಕು. ಈ ಸಮಸ್ಯೆ ಬಹಳ ವರ್ಷ ಮುಂದುವರಿಯಲು ಬಿಡಬಾರದು. ರೈತರು ಯಾರೇ ಆದರೂ ರೈತರೇ. ಇಲ್ಲಿ ಭಾಷೆ, ಪ್ರಾಂತದ ವಿಚಾರಬರುವುದಿಲ್ಲ, ರೈತರು ನಮಗೆ ಅನ್ನದಾತರು. ಎರಡೂ ರಾಜ್ಯಗಳ ರೈತರ ಹಿತ ನೋಡಿಕೊಳ್ಳಬೇಕು. ರಾಜಕೀಯವಾಗಿ ನೋಡುವ ಬದಲು ರೈತರ ಹಿತಾಸಕ್ತಿ ಗಮನಿಸಿ ಸಮಸ್ಯೆ ಬಗೆಹರಿಸಬೇಕು ಎಂದು ಸಲಹೆ ನೀಡಿದರು. ಇದೇ ವೇಳೆ ತಮ್ಮ ಮನೆಯಲ್ಲಿ ಕರ್ನಾಟಕ ಪೊನ್ನಿ ಎಂಬ ತಳಿಯ ಅಕ್ಕಿಯನ್ನು ಪ್ರತಿದಿನ ಬಳಸುವುದಾಗಿ ತಿಳಿಸಿದರು.

➡ ಪುಟ ೨

ರಾಜ್ಯದ ಪರವಾಗಿ ಧ್ವನಿಗೂಡಿಸಿ: ಎಚ್‌ಡಿಕೆ

ಕೆಂಪೇಗೌಡ ಅಂದಾಜಿಗೆ ಬೆಂಗಳೂರು ನಗರದ ಏಳಿಗೆ ಮತ್ತು ಅವರ ದೂರದೃಷ್ಟಿ ನೆನಪಾಗುತ್ತದೆ. ಅವರು ಸಾವಿರಾರು ಕೆರೆಗಳನ್ನು ಕಟ್ಟಿದ್ದರು. ನಾವಿಂದು ಬೆಂಗಳೂರು ನಗರ ಅಭಿವೃದ್ಧಿ ಹೆಸರಲ್ಲಿ ಹಲವಾರು ಕೆರೆಗಳನ್ನು ಮುಚ್ಚಿದ್ದೇವೆ. ಬೆಂಗಳೂರು ನಗರ ಬೆಳೆಯುತ್ತಿರುವುದನ್ನು ನೋಡಿದರೆ ನೀರಿನ ಸಮಸ್ಯೆ ಎದುರಿಸುವ ಆತಂಕ ಇದೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು. ಉಪರಾಷ್ಟ್ರಪತಿಗಳಿಗೆ ನೀರಿನ ಹಂಚಿಕೆ ವಿಚಾರದಲ್ಲಿರುವ ಸಮಸ್ಯೆ ಸಂಪೂರ್ಣ ಅರಿವಿದೆ. ಬೆಂಗಳೂರು ನಗರಕ್ಕೆ ಭವಿಷ್ಯದಲ್ಲಿ ನೀರಿನ ಅಭಾವ ಉಂಟಾಗಲಿದೆ. ಆದ್ದರಿಂದ ಜಲ ವಿವಾದದ ವಿಷಯದಲ್ಲಿ ಉಪರಾಷ್ಟ್ರಪತಿಗಳು ನಮ್ಮ ರಾಜ್ಯದ ಪರವಾಗಿ ಧ್ವನಿಗೂಡಿಸಬೇಕು. ಇದರಿಂದ ದೊಡ್ಡ ಶಕ್ತಿ ಬರುತ್ತದೆ ಎಂದು ಮನವಿ ಮಾಡಿದರು.

ಎಚ್‌ಡಿಕೆ, ಸುಧಾಕರ್ ಬೆಂಬಲಿಗರಿಂದ ಪ್ರತಿಭಟನೆ, ಗದ್ದಲ

ಪ್ರದೀಪ್ ಈಶ್ವರ್ ವಿರುದ್ಧ ಆಕ್ರೋಶ

• **ಚಿಕ್ಕಬಳ್ಳಾಪುರ:** ನಗರದ ಕನ್ನಡ ಭವನದಲ್ಲಿ ನಡೆದ ಕೆಂಪೇಗೌಡ ಜಯಂತಿ ಆಚರಣೆ ವೇಳೆ ಶಾಸಕ ಪ್ರದೀಪ್ ಈಶ್ವರ್ ಅವರನ್ನು ವೇದಿಕೆಯಿಂದ ಆಚೆ ಕಳುಹಿಸುವಂತೆ ಕುಮಾರಸ್ವಾಮಿ, ಸಂಸದ ಡಾ.ಕೆ. ಸುಧಾಕರ್ ಬೆಂಬಲಿಗರು ಆಕ್ರೋಶ ವ್ಯಕ್ತಪಡಿಸಿದ್ದರಿಂದ ಗದ್ದಲ ಗಲಾಟೆ ಕಾರಣವಾಯಿತು. ಕಾರ್ಯಕ್ರಮಕ್ಕೆ ಆಗಮಿಸಿದ್ದ ಚಿಕ್ಕಬಳ್ಳಾಪುರ ಆದಿಚುಂಚನಗಿರಿ ಶಾಖಾ ಮಠದ ಸ್ವಾಮೀಜಿ ಮತ್ತು ಜಿಲ್ಲಾಧಿಕಾರಿ ಆಕ್ರೋಶಿತರನ್ನು ಸಮಾಧಾನಪಡಿಸುವ ಪ್ರಯತ್ನಿಸಿದರೂ ಪರಿಸ್ಥಿತಿ ಹತೋಟಿಗೆ ತರಲು ಸಾಧ್ಯವಾಗಲಿಲ್ಲ. ಕಾರ್ಯಕ್ರಮದಿಂದ ತಮ್ಮ ಬೆಂಬಲಿಗರೊಂದಿಗೆ ಹೊರನಡೆದ ಪ್ರದೀಪ್ ಈಶ್ವರ್ ವಿರೋಧಿಗಳಿಗೆ ತೊಡೆ ತಟ್ಟಿ ಪಂಥಾಹ್ವಾನ ನೀಡಿದ ಘಟನೆ ನಡೆಯಿತು.

ಇದರಿಂದ ಕನ್ನಡ ಭವನದ ಮುಂದೆ ದೊಡ್ಡ ಹೈಡ್ರಾಮಾ ಸೃಷ್ಟಿಯಾಯಿತು. ಪ್ರದೀಪ್ ಈಶ್ವರ್ ತೋಳು ತಟ್ಟಿದ್ದರಿಂದ ಒಕ್ಕಲಿಗ ಯುವಕರು ಮತ್ತು ಪ್ರದೀಪ್ ಈಶ್ವರ್ ಬೆಂಬಲಿಗರ ನಡುವೆ ಗಲಾಟೆ ತಾರಕಕ್ಕೇರಿತು. ಜನರನ್ನು ನಿಯಂತ್ರಿಸಲು ಪೊಲೀಸರು ಲಘು ಲಾಠಿ ಪ್ರಹಾರ ಕೂಡ ನಡೆಸಿದರು. ಶಾಸಕ ಪ್ರದೀಪ್ ಈಶ್ವರ್ ಕುಮಾರಸ್ವಾಮಿ ವಿರುದ್ಧ ಕಿಡಿಕಾರಿದರು.

ಈ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ಪ್ರದೀಪ್ ಈಶ್ವರ್, ನಾನು ಜಿಲ್ಲೆಯ ಶೋಷಿತ ಸಮುದಾಯದ ಶಾಸಕ. ಕಾರ್ಯಕ್ರಮಕ್ಕೆ ಕರೆದು ಅವಮಾನ ಮಾಡೋದು ಸರಿನಾ? ಜಿಲ್ಲೆಯಲ್ಲಿ ಶೋಷಿತರು, ಅಲ್ಪಸಂಖ್ಯಾತರು ಬದುಕಬಾರದೇ ಎಂದು ಪ್ರಶ್ನಿಸಿದರು.

ಕುಮಾರಣ್ಣ ನೀವು ಒಬಿಸಿ ಹುಡುಗಗನ್ನು ಟಾರ್ಗೆಟ್ ಮಾಡಿದ್ದೀರಾ? ನಾನು ಒಬ್ಬನೇ ಒಕ್ಕಲಿಗ ನಾಯಕ ಡಿಕೆಶಿ ಪರವಾಗಿ ನಿಂತಿರೋದು. ನಿಮಗೆ ಕ್ಷೇತ್ರದಲ್ಲಿ ಒಕ್ಕಲಿಗರ ಬೇಟಿಯಾರದು, ಬೇರೆಯವರು ಬೇರೆಯಾರದು. ಖಬರ್ದಾರ್ ಕುಮಾರಣ್ಣ ನಿಮ್ಮ ಚೇಲಾಗಳಿಗೆ ಹೆದರಲ್ಲ ಎಂದು ಎಚ್ಚರಿಕೆ ನೀಡಿದರು.

ಅಧ್ಯಕ್ಷ ಪ್ಯಾಟ್ರಿಕ್ ಹರ್ಮಿನ್‌ರಿಂದ ಗೌರವ ರಕ್ಷೆ ಸ್ವೀಕರಿಸಿದ ಪ್ರಧಾನಿ

ಸೀಶೆಲ್ಸ್: ಮೋದಿಗೆ ಅದ್ದೂರಿ ಸ್ವಾಗತ

• **ವಿಕ್ಟೋರಿಯಾ (ಸೀಶೆಲ್ಸ್):** ಮೂರು ದಿನಗಳ ಪ್ರವಾಸದಂಗವಾಗಿ ಶನಿವಾರ ಸೀಶೆಲ್ಸ್‌ಗೆ ಬಂದಿಳಿದ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಇಲ್ಲಿನ ಭಾರತೀಯ ಸಮುದಾಯ ಆತ್ಮೀಯ ಅತ್ಮೀಯವಾಗಿ ಸ್ವಾಗತಿಸಿತು.

ಗುಜರಾತ್‌ನ ಕರ್ಬಾ ಸಾಂಪ್ರದಾಯಿಕ ನೃತ್ಯ, ಭರತನಾಟ್ಯಸಹಿತ ಭಾರತದ ಹಲವು ನೃತ್ಯ ಪ್ರಕಾರಗಳ ಪ್ರದರ್ಶನದೊಂದಿಗೆ ಪ್ರಧಾನಿ ಮೋದಿ ಅವರನ್ನು ಪ್ರೀತಿಯಿಂದ ಬರಮಾಡಿಕೊಂಡರು. ಭಾರತೀಯ ನೃತ್ಯ ಪ್ರದರ್ಶನ ಕಂಡು ಸಂತಸಪಟ್ಟ ಪ್ರಧಾನಿ ಮೋದಿ, ಅದ್ಭುತ ಸಾಂಸ್ಕೃತಿಕ ಬಾಂಧವ್ಯವಿದು ಎಂದು ಎಕ್ಸ್ ಹಾಕಿರುವ ಪೋಸ್ಟ್‌ನಲ್ಲಿ ಖುಷಿ ವ್ಯಕ್ತಪಡಿಸಿದ್ದಾರೆ. ಇಲ್ಲಿನ ಭಾರತೀಯ ಸಮುದಾಯ ಭಾರತದ ವಿವಿಧ ಪ್ರದೇಶಗಳ ಸಂಸ್ಕೃತಿಯನ್ನು ಸಂರಕ್ಷಿಸಿ, ಸಂಭ್ರಮಿಸುತ್ತಿರುವ ರೀತಿ ನಿಜಕ್ಕೂ ಪ್ರಶಂಸಾರ್ಹ ಎಂದು ಪೋಸ್ಟ್‌ನಲ್ಲಿ ಪ್ರಧಾನಿ ಬಣ್ಣಿಸಿದ್ದಾರೆ.

➡ ಪುಟ ೨



ಜಗತ್ತಿನ ಅತ್ಯಂತ ಹಿರಿಯ ಆಮೆಯೊಂದೆ ಪರಿಗಣಿತ 194 ವರ್ಷದ ಜೋನಾಥನ್ ಸಹಿತ ಹಲವು ಬೃಹತ್ ಆಮೆಗಳಿಗೆ ಪ್ರಧಾನಿ ಮೋದಿ ಆಹಾರ ನೀಡಿದರು.

ಮುಂದಿನ ವರ್ಷಾರಂಭಕ್ಕೆ ಅಧ್ಯಕ್ಷ ಟ್ರಂಪ್ ಭಾರತ ಭೇಟಿ

• **ನ್ಯೂಯಾರ್ಕ್:** ಭಾರತ-ಅಮೆರಿಕದ ಅತ್ಯಂತ ಆಪ್ತ ಪಾಲುದಾರ ಮತ್ತು ಮಿತ್ರ ರಾಷ್ಟ್ರವಾಗಿದೆ. ಪ್ರಧಾನಿ ಮೋದಿ ಮತ್ತು ಅಧ್ಯಕ್ಷ ಟ್ರಂಪ್ ನಡುವಿನ ಸಂಬಂಧ ಅತ್ಯುತ್ತಮವಾಗಿದೆ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ತಿಳಿಸಿದ್ದಾರೆ. ಟ್ರಂಪ್ ಅವರು ಮುಂದಿನ ವರ್ಷದ ಆರಂಭದಲ್ಲಿ ಭಾರತಕ್ಕೆ ಭೇಟಿ ನೀಡುವ ಸಾಧ್ಯತೆ ಇದೆ ಎಂದು ಹೇಳಿದ್ದಾರೆ. ಸುದ್ದಿ ಸಂಸ್ಥೆಯೊಂದರ ಜತೆಗೆ ಮಾತನಾಡಿರುವ ರುಬಿಯೋ, ಈ ಭೇಟಿ, ಅಧ್ಯಕ್ಷ ಟ್ರಂಪ್ ಮತ್ತು ಪ್ರಧಾನಿ ನರೇಂದ್ರ ಮೋದಿ ನಡುವಿನ ಬಲವಾದ ವೈಯಕ್ತಿಕ ಸಂಬಂಧವನ್ನು ಎತ್ತಿ ತೋರಿಸುತ್ತದೆ ಎಂದು ತಿಳಿಸಿದ್ದಾರೆ.



• ವಿವರ ಪುಟ ೫

ಹಿನ್ನೀರಿನಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಪಡಿಸಿ ಕೋಟ್ಯಂತರ ರೂಪಾಯಿ ಉಳಿಸಲು ಮನವಿ

ರೀಲಾಂಚ್‌ಗೆ ಕಾದಿರುವ ಸಿಗಂದೂರು ಲಾಂಚ್

▶ ಜಿ. ನಾಗೇಶ್ ಸಾಗರ

• **ಸಾಗರ:** ಸುಮಾರು ಐದು ದಶಕಗಳ ಕಾಲ ಶರಾವತಿ ಮುಳುಗಡೆ ಸಂತ್ರಸ್ತರು, ಸಿಗಂದೂರು ದೇವಿ ದರ್ಶನಕ್ಕೆ ಬರುವ ಭಕ್ತಾದಿಗಳಿಗೆ ಸೇವೆ ನೀಡಿದ್ದ ಮೂರು ಲಾಂಚ್‌ಗಳು ದಡ ಸೇರಿ ಒಂದು ವರ್ಷ ಸಮೀಪಿಸಿದೆ. ಕೇವಲ ಒಂದು ವರ್ಷದಲ್ಲಿ ಮೂರು ಲಾಂಚ್ ಮಳೆ ಬಿಸಿಲಿನ ಹೊಡೆತಕ್ಕೆ ಸಿಲುಕಿ ತುಕ್ಕು ಹಿಡಿಯುತ್ತಿದ್ದರೂ ಜನಪ್ರತಿನಿಧಿಗಳು, ಅಧಿಕಾರಿಗಳು ಗಮನಹರಿಸಿಲ್ಲ ಎನ್ನುವ ಚರ್ಚೆ ಸಾಮಾಜಿಕ ಜಾಲತಾಣದಲ್ಲಿ ಜೋರಾಗಿಯೇ ನಡೆಯುತ್ತಿದೆ.

ನಾಡಿಗೆ ಬೆಳಕು ನೀಡಲು ಸರ್ವಸ್ವ ಕಳೆದುಕೊಂಡ ಹಿನ್ನೀರ ಜನರಿಗೆ ರಾಜ್ಯ ಸರ್ಕಾರ ಸಾಗರ ಕೇಂದ್ರಕ್ಕೆ ಸಂಪರ್ಕ ಬೇಡಿಕೊಳ್ಳಲು ಲಾಂಚ್ ಸೇವೆಯನ್ನು ಒದಗಿಸಿತ್ತು. ಇದಾಗಿ ಕೆಲವೆ ವರ್ಷಗಳಲ್ಲಿ ಸಿಗಂದೂರು ಚೌಡೇಶ್ವರಿ ದೇವಿ ಪ್ರಸಿದ್ಧಿಗೆ ಬಂದಿದ್ದರಿಂದ ರಾಜ್ಯದ ವಿವಿಧ ಪ್ರದೇಶದಿಂದ ಪ್ರವಾಸಿಗರು ಇಲ್ಲಿಗೆ ಬರಲು ಆರಂಭಿಸಿದ್ದರು.

➡ ಪುಟ ೩



▶ ಐದು ದಶಕ ಕಾಲ ನಿರಂತರ ಸೇವೆ

▶ ಕೋಟಿಗಟ್ಟಲೆ ಬೆಲೆಬಾಳುವ ಲಾಂಚ್

ಸಿಎಂ ಸುವೇಂದು ಅಧಿಕಾರಿ ಘೋಷಣೆ

ಭೂ, ಲವ್ ಜಿಹಾದ್ ತಡೆಗೆ ಕಠಿಣ ಕ್ರಮ

• **ಕೋಲ್ಕತ್ತಾ:** ಪಶ್ಚಿಮ ಬಂಗಾಳದಲ್ಲಿ ಸಮಾನ ನಾಗರಿಕ ಸಂಹಿತೆ(ಏಸಿಸಿ) ಜಾರಿಗೊಳಿಸುವ ನಿಟ್ಟಿನಲ್ಲಿ ರಾಜ್ಯ ಸರಕಾರ ತ್ವರಿತ ಹೆಜ್ಜೆಯಿಡಲಿದೆ. ಇದರ ಬೆನ್ನಲ್ಲೇ ಭೂ ಜಿಹಾದ್, ಲವ್ ಜಿಹಾದ್ ಮತ್ತು ಬಲವಂತದ ಮತೀಯ ಮತಾಂತರ ವಿರುದ್ಧ ಕಡಿವಾಣ ಹಾಕಲು ಕಠಿಣ ಕಾಯಿದೆಗಳನ್ನು ಅನುಷ್ಠಾನಗೊಳಿಸಲಿದೆ ಎಂದು ಮುಖ್ಯಮಂತ್ರಿ ಸುವೇಂದು ಅಧಿಕಾರಿ ಘೋಷಿಸಿದ್ದಾರೆ.

ತಾಳ್ಳೆ ಕಾಯ್ದೆಗಳನ್ನು, ಸರಕಾರದಲ್ಲಿ ನಂಬಿಕೆ ಇಡಿ ಮತ್ತು ಇವುಗಳ ಅನುಷ್ಠಾನಕ್ಕೆ ನಮಗೆ ಸ್ವಲ್ಪ ಸಮಯ ಕೊಡಿ ಎಂದು ಸಿಎಂ ಅಧಿಕಾರಿ ಜನರನ್ನು ಕೋರಿದ್ದಾರೆ.

ಕೈಸ್ತರಿಕ ಸಂಸ್ಥೆಗಳಲ್ಲಿ ವಂದೇಮಾತರಂ ಗಾಯನ ಕಡ್ಡಾಯಗೊಳಿಸುವ ನಿರ್ಧಾರವನ್ನು ಉಲ್ಲೇಖಿಸಿ, ಪ್ರಸಕ್ತ ಹೆಜ್ಜೆನೇ ವಂದೇಮಾತರಂ ಹಾಡುವಾಗ ಎದ್ದು ನಿಲ್ಲುತ್ತಾರೆ. ಪ್ರತಿಯೊಬ್ಬರೂ ವಂದೇಮಾತರಂ ಹಾಡುತ್ತಿಲ್ಲ ಎಂದ ಅವರು, ಋಷಿ ಅರವಿಂದ, ನೇತಾಜಿ, ಶ್ಯಾಮ ಪ್ರಸಾದ್ ಮುಖರ್ಜಿಯವರು ಜನಿಸಿದ ಈ ಪುಣ್ಯ ಭೂಮಿಯಲ್ಲಿ ವಂದೇ ರಾಷ್ಟ್ರ ವಿರೋಧಿ ಚಟುವಟಿಕೆಗಳಿಗೆ ಅವಕಾಶ ಕೊಡುವುದಿಲ್ಲ ಎಂದು ಘೋಷಿಸಿದರು.



➡ ಪುಟ ೨


ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,40,000 (2,40,000) ಅಪರಂಜಿ ಚಿನ್ನ: 1,43,950 (1,41,600) ಆಭರಣ ಚಿನ್ನ: 1,31,950 (1,29,800) (ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿ.ಗೆ, ರೂ.ಗಳಲ್ಲಿ, (ಆವರಣದಲ್ಲಿ ಹಿಂದಿನ ದಿನದ ದರ)

$1 = ₹94.36

ರಾಜ್ಯದಲ್ಲಿಂದು ಪಲ್ಸ್ ಪೋಲಿಯೊ

• **ಬೆಂಗಳೂರು:** ಆರೋಗ್ಯ ಇಲಾಖೆ ವತಿಯಿಂದ ರಾಜ್ಯಾದ್ಯಂತ ಜೂ.28 (ಭಾನುವಾರ) ರಂದು ಪಲ್ಸ್ ಪೋಲಿಯೊ ಲಸಿಕೆ ಅಭಿಯಾನ ಹಮ್ಮಿಕೊಳ್ಳಲಾಗಿದ್ದು, ಬೆಳಗ್ಗೆ 8 ಗಂಟೆಗೆ ಸದಾಶಿವನಗರದ ತಮ್ಮ ನಿವಾಸದಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಭಿಯಾನಕ್ಕೆ ಚಾಲನೆ ನೀಡಲಿದ್ದಾರೆ.

ರಾಜ್ಯದಲ್ಲಿ ಐದು ವರ್ಷದೊಳಗಿನ 64.84 ಲಕ್ಷ ಮಕ್ಕಳಿಗೆ ಪೋಲಿಯೊ ಹನಿ ನೀಡುವ ಗುರಿಯನ್ನು ಆರೋಗ್ಯ ಇಲಾಖೆ ಹೊಂದಿದೆ. ಇದಕ್ಕಾಗಿ 36,076 ಲಸಿಕಾ ಬೂತ್‌ಗಳನ್ನು ಸ್ಥಾಪಿಸಲಾಗಿದ್ದು, ರಾಜ್ಯದ ಎಲ್ಲ ಸರ್ಕಾರಿ ಆಸ್ಪತ್ರೆಗಳು, ಅಂಗನವಾಡಿ ಕೇಂದ್ರಗಳು ಹಾಗೂ ವಿವಿಧ ಸಾರ್ವಜನಿಕ ಸ್ಥಳಗಳಲ್ಲಿ ಲಸಿಕೆ ವಿತರಣೆ ನಡೆಯಲಿದೆ.



ಗುಡ್ಡಗಾಡು ಪ್ರದೇಶಗಳ ಮಕ್ಕಳನ್ನು ತಲುಪಲು 988 ಮೊಬೈಲ್ ತಂಡಗಳನ್ನು ರಚಿಸಲಾಗಿದೆ. ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಪ್ರಯಾಣಿಸುವ ಮಕ್ಕಳಿಗೆ ಲಸಿಕೆ ನೀಡಲು 2,125 ಟ್ರಾನ್ಸಿಟ್ ತಂಡಗಳನ್ನು ನಿಯೋಜಿಸಲಾಗಿದೆ. ಅಭಿಯಾನದ ಯಶಸ್ವಿ ಅನುಷ್ಠಾನಕ್ಕಾಗಿ ಒಟ್ಟು 1.14 ಲಕ್ಷಕ್ಕೂ ಹೆಚ್ಚು ಆರೋಗ್ಯ ಸಿಬ್ಬಂದಿ ಹಾಗೂ ಕಾರ್ಯಕರ್ತರನ್ನು ನಿಯೋಜಿಸಲಾಗಿದೆ.

ಐದು ವರ್ಷದೊಳಗಿನ ಪ್ರತಿ ಮಗುವಿಗೂ ತಪ್ಪದೆ ಪೋಲಿಯೊ ಹನಿ ಹಾಕಿಸಬೇಕು ಎಂದು ಆರೋಗ್ಯ ಇಲಾಖೆ ಮನವಿ ಮಾಡಿದೆ. ಇದೇ ವೇಳೆ, ಸಾರ್ವಜನಿಕರಿಗೆ ಸಮೀಪದ ಲಸಿಕಾ ಕೇಂದ್ರವನ್ನು ಸುಲಭವಾಗಿ ಪತ್ತೆಹಚ್ಚಲು ಮೊಬೈಲ್‌ನಲ್ಲಿ ಪ್ಲೇ ಸ್ಟೋರ್‌ನಲ್ಲಿ ಲಭ್ಯವಿರುವ ನಿಯರ್ ಬೈ ವ್ಯಾಕ್ಸಿನ್ ಸೆಂಟರ್ ಮೊಬೈಲ್ ಆ್ಯಪ್ ಅನ್ನು ಅಭಿವೃದ್ಧಿಪಡಿಸಲಾಗಿದೆ. ಅದರ ಮೂಲಕ ಸಮೀಪದ ಲಸಿಕಾ ಕೇಂದ್ರದ ಮಾಹಿತಿ ಪಡೆಯಬಹುದಾಗಿದೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಅಂಕೋಲಾ ಮೂಲದ ಪ್ರೇಮಿಗಳ ನಡುವೆ ಜಗಳ | ಚೂರಿ ಇರಿತ

ಕಾರಲ್ಲೇ ಬಾಂಬ್ ಸ್ಫೋಟಿಸಿಕೊಂಡು ಆತ್ಮಹತ್ಯೆ

• **ತುಮಕೂರು:** ಚಲಿಸುತ್ತಿದ್ದ ಕಾರಿನಲ್ಲೇ ಯುವತಿಯೊಂದಿಗೆ ಜಗಳವಾಡಿದ ಯುವಕನೊಬ್ಬ, ಆಕೆಗೆ ಚಾಕುವಿನಿಂದ ಇರಿದು, ಬಳಿಕ ತಾನು ಪೆಟ್ರೋಲ್ ಬಾಂಬ್ ಸ್ಫೋಟಿಸಿಕೊಂಡು ಸಜೀವ ದಹನವಾಗಿರುವ ಘಟನೆ ಶಿರಾ ತಾಲೂಕಿನ ಜೋಗಿಹಳ್ಳಿ ಬಳಿಯ ರಾಷ್ಟ್ರೀಯ ಹೆದ್ದಾರಿಯಲ್ಲಿ ನಡೆದಿದೆ. ನಾಗೇಂದ್ರ (30) ಮೃತಪಟ್ಟಿದ್ದು, ರಮ್ಯಾ (23) ಗಂಭೀರವಾಗಿ ಗಾಯಗೊಂಡಿದ್ದು, ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇಬ್ಬರೂ ಉತ್ತರ ಕನ್ನಡ ಜಿಲ್ಲೆ ಅಂಕೋಲಾ ಮೂಲದವರಾಗಿದ್ದು, ಬೆಂಗಳೂರಿನಿಂದ ಅಂಕೋಲಾಗೆ ತೆರಳುವ ವೇಳೆ ಈ ಘಟನೆ ನಡೆದಿದೆ.

ಘಟನೆ ಹಿನ್ನೆಲೆ: ಬೆಂಗಳೂರಿನ ಜಯನಗರದ 1ನೇ ಬ್ಲಾಕ್‌ನಲ್ಲಿ ವಾಸವಾಗಿದ್ದ ರಮ್ಯಾ ಖಾಸಗಿ ಆಸ್ಪತ್ರೆಯೊಂದರಲ್ಲಿ ಲ್ಯಾಬ್ ಟೆಕ್ನೀಷಿಯನ್ ಆಗಿ ಕೆಲಸ ಮಾಡುತ್ತಿದ್ದು, 6 ವರ್ಷಗಳಿಂದ ನಾಗೇಂದ್ರ ಹಾಗೂ ರಮ್ಯಾ ಪ್ರೀತಿಸುತ್ತಿದ್ದರು. ಕಳೆದ ಹಲವು ದಿನಗಳಿಂದ ಇಬ್ಬರ ನಡುವೆ ಮನಸ್ತಾಪ ಉಂಟಾಗಿತ್ತು. ಇದರಿಂದಾಗಿ ರಮ್ಯಾ ನಾಗೇಂದ್ರನ ಫೋನ್ ನಂಬರ್ ಬ್ಲಾಕ್ ಮಾಡಿದ್ದಳು. ಶನಿವಾರ ಬೆಳಗ್ಗೆ ರಮ್ಯಾಳ ರೂಂ ಬಳಿ ಬಂದಿದ್ದ ನಾಗೇಂದ್ರ ಆಕೆಯನ್ನು ಬಲವಂತವಾಗಿ ಕರೆದುಕೊಂಡು ಬೆಂಗಳೂರಿನಿಂದ ಅಂಕೋಲಾಕ್ಕೆ ಖಾಸಗಿ ಟ್ಯಾಕ್ಸಿಯೊಂದರಲ್ಲಿ ತೆರಳುತ್ತಿದ್ದ.

ಜೋಗಿಹಳ್ಳಿ ಬಳಿ ಬರುತ್ತಿದ್ದಂತೆ ಇಬ್ಬರ ನಡುವೆ ವೈಯಕ್ತಿಕ ವಿಚಾರವಾಗಿ ವಾಗ್ವಾದ ಶುರುವಾಗಿದ್ದು, ಮಾತಿನ ಚಕಮಕಿ ತಾರಕಕ್ಕೇರಿದಾಗ, ನಾಗೇಂದ್ರ ರಮ್ಯಾಳಿಗೆ ಚಾಕುವಿನಿಂದ ಇರಿದಿದ್ದಾನೆ. ಚಾಕು ಇರಿತದಿಂದ ಗಾಬರಿಗೊಂಡ ರಮ್ಯಾ ತಕ್ಷಣವೇ ಚಲಿಸುವ ಕಾರಿನಿಂದ ಜಿಗಿದಿದ್ದಾಳೆ. ತಕ್ಷಣ ಕ್ಯಾಬ್ ಚಾಲಕ ಪ್ರವೀಣ್ ಕುಮಾರ್ ನಾಯಕ ಕಾರನ್ನು ನಿಲ್ಲಿಸಿ ಆಕೆಯನ್ನು ರಕ್ಷಿಸಲು ಹೋಗಿದ್ದಾನೆ. ಕಾರಿನೊಳಗೆ ಏಕಾಂಗಿಯಾದ ನಾಗೇಂದ್ರ ತಕ್ಷಣವೇ ಡೋರ್ ಲಾಕ್ ಮಾಡಿಕೊಂಡಿದ್ದಾನೆ.



ಬಳಿಕ ತಾನು ಮೊದಲೇ ತಂದಿದ್ದ ಪೆಟ್ರೋಲ್ ಬಾಂಬ್ ಅನ್ನು ಕಾರಿನೊಳಗೆ ಸ್ಫೋಟಿಸಿಕೊಂಡಿದ್ದಾನೆ. ಸ್ಫೋಟದ ತೀವ್ರತೆಗೆ ಕಾರು ಸಂಪೂರ್ಣವಾಗಿ ಹೊತ್ತಿ ಉರಿ ದಿದ್ದು, ನಾಗೇಂದ್ರ ಕಾರಿನೊಳಗೇ ಸಜೀವ ದಹನವಾಗಿದ್ದಾನೆ. ಸ್ಥಳಕ್ಕೆ ಕಳ್ಳಂಬೆಳ್ಳ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದ್ದಾರೆ.

ಭೂದಾನಿಗಳ ಸ್ಮರಣೆ

ಪುಟ ೧ ಭೂಮಿ ಕಳೆದುಕೊಂಡವರ ಬಗ್ಗೆ ನಮಗೆ ಕಾಳಜಿ ಇದೆ. ಕೆಂಗೇರಿ ಹಾಗೂ ಯಲಹಂಕ ಪಟ್ಟಣ ನಿರ್ಮಾಣ ಮಾಡಿದ್ದು ಹೇಗೆ? ಪರಮೇಶ್ವರ್ ಅವರು ತುಮಕೂರಿನಲ್ಲಿ ಟೌನ್‌ಶಿಪ್ ಮಾಡಲು ಮುಂದಾಗಿದ್ದಾರೆ. ಅವು ಭೂಮಿಯಲ್ಲವೇ? ಮನುಷ್ಯನ ಹುಟ್ಟು ಆಕಸ್ಮಿಕ, ಸಾವು ಅನಿವಾರ್ಯ. ಜನನ ಉಚಿತ, ಮರಣ ಖಚಿತ. ಈ ಹುಟ್ಟು ಸಾವಿನ ಮಧ್ಯೆ ನಾವು ಏನು ಸಾಧನೆ, ತ್ಯಾಗ ಮಾಡುತ್ತೇವೆ ಎಂಬುದು ಮುಖ್ಯ. ಈ 10 ಪಥದ ರಸ್ತೆಗೆ ಭೂಮಿ ತ್ಯಾಗ ಮಾಡಿದ ಎಲ್ಲರಿಗೂ ಸಾಷ್ಟಾಂಗ ನಮನ ಸಲ್ಲಿಸುತ್ತೇನೆ ಎಂದರು.

ಶಾಲಾ ಮಕ್ಕಳಿಗೆ ಗಿಡ ನೆಟ್ಟು ಬೆಳೆಸುವ ಸ್ಪರ್ಧೆ: ಹಸಿರು ಬೆಂಗಳೂರು ಕಟ್ಟಬೇಕು, ಆ ಮೂಲಕ ಕೆಂಪೇಗೌಡರ ದೂರದೃಷ್ಟಿ ಉಳಿಯಬೇಕು ಎಂದು ಬಿಡಿಎ ವತಿಯಿಂದ ಇಂದು 15 ಲಕ್ಷ ಸಸಿಗಳನ್ನು ನೆಡಲಾಗಿದೆ. ಇದು ದಾಖಲೆಯ ತೀರ್ಮಾನ. ಇದೇ ರೀತಿ ಬೆಂಗಳೂರಿನಲ್ಲಿ ಪ್ರತಿ ಶಾಲೆಗಳು ಒಂದೊಂದು ಪ್ರದೇಶದ ಉಸ್ತುವಾರಿ ವಹಿಸಿಕೊಂಡು ಅಲ್ಲಿ ಮಕ್ಕಳಿಂದ ಗಿಡ ನೆಡಿಸಿ ಬೆಳೆಸುವ ಕಾರ್ಯಕ್ರಮ ಮಾಡಬೇಕು. ಈ ವಿಚಾರದಲ್ಲಿ ಜಿಬಿಎ ವತಿಯಿಂದ ಸ್ಪರ್ಧೆ ಏರ್ಪಡಿಸಲಾಗುವುದು ಎಂದು ತಿಳಿಸಿದರು. ಬೆಂಗಳೂರು ವಿವಿಯಲ್ಲಿ ಕೆಂಪೇಗೌಡ ಅಧ್ಯಯನ ಕೇಂದ್ರ ಸ್ಥಾಪಿಸಲು ತೀರ್ಮಾನಿಸಲಾಗಿದೆ. ಕೆ.ಎಚ್. ಮುನಿಯಪ್ಪನವರು ತಮ್ಮ ಕ್ಷೇತ್ರದಲ್ಲಿ 9.5 ಎಕರೆ ಜಾಗ ನೀಡಿದ್ದು, ಅಲ್ಲಿ ಕೆಂಪೇಗೌಡ ಅಧ್ಯಯನ ಕೇಂದ್ರ ಸ್ಥಾಪಿಸಲು ತೀರ್ಮಾನಿಸಲಾಗಿದೆ. ಚಿತ್ರದುರ್ಗದಲ್ಲಿ 10 ಕೋಟಿ ಮೊತ್ತದ ಅಭಿವೃದ್ಧಿ ಕಾರ್ಯಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

> **ಕಳೆದ ಎರಡು ವರ್ಷ ಐದು ತಿಂಗಳಲ್ಲಿ ಬಿಡಿಎ ಪ್ರಾಧಿಕಾರವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವುದರ ಜತೆಗೆ ಕೆಂಪೇಗೌಡ ಬಡಾವಣೆ ಅಭಿವೃದ್ಧಿಗೆ ಶ್ರಮಿಸಲಾಗಿದೆ. ಡಿ.ಕೆ.ಶಿವಕುಮಾರ್ ಅವರ ಮಾರ್ಗದರ್ಶನದಲ್ಲಿ ಇಲ್ಲಿಯವರೆಗೂ ಹಲವಾರು ಬದಲಾವಣೆಗಳನ್ನು ತಂದು ಜಮೀನನ್ನು ಕಳೆದುಕೊಂಡ ರೈತರಿಗೆ ಅವರಿಗೆ ಸಿಗಬೇಕಾದ ಎಲ್ಲಾ ಸೌಲಭ್ಯ ಒದಗಿಸಲಾಗಿದೆ.**
> ■ **ಎನ್.ಎ. ಹ್ಯಾರಿಸ್,** ಬಿಡಿಎ ಅಧ್ಯಕ್ಷ

ಕಿಡಿ ನುಡಿ

• ವಾಸುದೇವರಾವ್ ಕಕ್ಕೇರಿಜೆ

◈ ನಾನಿರದಿದ್ದರೆ ಇಸ್ರೇಲ್ ಇರುತ್ತಿರಲಿಲ್ಲ
- ಟ್ರಂಪ್ ಹೇಳಿಕೆ
- ಹೌದು, ಕೋಳಿ ಕೂಗದಿರುತ್ತಿದ್ದರೆ ಬೆಳಗಾಗುತ್ತಿರಲಿಲ್ಲ!

ದಿನ ಭವಿಷ್ಯ

ಮೇಷ: ಅಹಿತಕರ ಪ್ರಸಂಗ. ಆತ್ಮವಿಶ್ವಾಸಕ್ಕೆ ಕುಂದು. ನಿರ್ಭೀತಿಯಿಂದ ಕಾರ್ಯ ನಿರ್ವಹಿಸಿ. ಈ ಬಗ್ಗೆ ಇತರರಿಗೆ ವಿವರಣೆ ಕೊಡುವ ಅಗತ್ಯ ಇಲ್ಲ.

ವೃಷಭ: ಶುಭ ಸುದ್ದಿ ಕೇಳುವಿರಿ. ಕೌಟುಂಬಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಅವಕಾಶ. ನಿಮ್ಮ ನಿರ್ವಹಣೆ ಉತ್ತಮ ಪಡಿಸಿಕೊಳ್ಳಲು ಯತ್ನಿಸಿ.

ಮಿಥುನ: ಮನದ ಶಾಂತಿ ಕಾಯಲು ಸಂಘರ್ಷಗಳಿಂದ ದೂರವಿರಿ. ಸವಾಲು ಎದುರಿಸುವ ತಾಕತ್ತು ನಿಮಗಿದೆ, ಧೈರ್ಯ ಬೇಕು ಅಷ್ಟೆ.

ಕಟಕ: ಆರ್ಥಿಕವಾಗಿ ಫಲಪ್ರದ ದಿನ. ಇತರರು ಹರಡುವ ವದಂತಿಗೆ ಕಿವಿಗೊಡಬೇಡಿ. ಆತ್ಮೀಯ ಬಂಧುಮಿತ್ರರ ಕಾಣುವ ಅವಕಾಶ ಸಿಗಲಿದೆ.

ಸಿಂಹ: ಅಸಹನೀಯ ಸ್ನಾವೇಶ ಎದುರಿಸುವ ಪ್ರಸಂಗ ಬಂದೀತು. ತಕ್ಷಣ ಭಾವಾವೇಶದಿಂದ ಪ್ರತಿಕ್ರಿಯಿಸದಿರಿ. ತಾಳ್ಮೆಯಿಂದ ನಿಭಾಯಿಸಿ.

ಕನ್ಯಾ: ಸಿಹಿ-ಕಹಿ ಎರಡೂ ಪ್ರಸಂಗ ಎದುರಿಸುವಿರಿ. ವಾಗ್ವಾದದಿಂದ ದೂರ ಇರುವುದೇ ಒಳಿತು. ಅಪ್ತರ ಜತೆ ಪ್ರವಾಸ ಹೋರಡುವ ಅವಕಾಶ.

ತುಲಾ: ನಿಮ್ಮ ಭಾವನೆ ಸ್ಪಷ್ಟವಾಗಿ ವ್ಯಕ್ತಪಡಿಸಿ. ಅದಕ್ಕೆ ಮುಜುಗರ ಬೇಕಿಲ್ಲ, ಗೊಂದಲಕ್ಕೆ ಆಸ್ಪದ ನೀಡಬೇಡಿ. ಹಣಕಾಸು ಒತ್ತಡ ಎದುರಿಸುವಿರಿ.

ವೃಶ್ಚಿಕ: ನೆಗೆಟಿವ್ ಮನಸ್ಥಿತಿಯ ಜನರನ್ನು ದೂರವಿಡಿ. ಹಳೆಯ ಸ್ನೇಹಿತರ ಭೇಟಿ ಸಾಧ್ಯತೆ. ಕೌಟುಂಬಿಕ ಬಿಕ್ಕಟ್ಟು ಶೀಘ್ರ ಪರಿಹಾರ ಕಾಣಲಿದೆ.

ಧನು: ನಿಮ್ಮ ದೀರ್ಘ ಅನುಭವ ಇಂದು ನೆರವಿಗೆ ಬರಲಿದೆ. ಬಿಕ್ಕಟ್ಟನ್ನು ಸಮರ್ಥವಾಗಿ ನಿಭಾಯಿಸುವಿರಿ. ಹಣದ ಸಮಸ್ಯೆ ನಿವಾರಣೆ.

ಮಕರ: ನಾಯಕತ್ವದ ಗುಣ ಪ್ರದರ್ಶಿಸುವ ಪ್ರಸಂಗ ಬರಲಿದೆ. ದಿಟ್ಟ ನಿರ್ಧಾರ ತಾಳಲು ಹಿಂಜರಿಕೆ ತೋರದಿರಿ. ಕೌಟುಂಬಿಕ ಅಸಹಕಾರ ಕಾಣುವಿರಿ.

ಕುಂಭ: ಆತ್ಮವಿಶ್ವಾಸ ಹೆಚ್ಚಿಸುವ ಪ್ರಸಂಗ. ಭಾವುಕತೆ ಬಿಟ್ಟು ಪ್ರಾಯೋಗಿಕ ನೆಲೆಯಲ್ಲಿ ಚಿಂತಿಸಿ. ಆಗ ನಿಮ್ಮನ್ನು ಕಾಡುವ ಸಮಸ್ಯೆ ಇತ್ಯರ್ಥವಾದೀತು.

ಮೀನ: ಹಣದ ಕೊರತೆ ನೀಗುವುದು. ಸಂಬಂಧದಲ್ಲಿ ಯಾವುದೇ ಅನುಮಾನ ಉಳಿಯದಿರಲಿ. ಎಲ್ಲವನ್ನು ಸ್ಪಷ್ಟಪಡಿಸಿಕೊಳ್ಳಿ.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ : 3,8,2,5

ಭೂ, ಲವ್ ಜಿಹಾದ್ ತಡೆಗೆ ಕಠಿಣ ಕ್ರಮ

ಪುಟ ೧ **ವಿಪಕ್ಷಗಳ ವಿರೋಧ:** ಪ.ಬಂಗಾಳ ಸಮಾನ ನಾಗರಿಕ ಸಂಹಿತೆ ಮಸೂದೆ 2026 ಜಾರಿ ಪ್ರಕ್ರಿಯೆ ಸದ್ಯ ಪ್ರಗತಿಯಲ್ಲಿದೆ. ವಿಪಕ್ಷಗಳು ಯುಸಿಸಿ ಜಾರಿ ವಿರುದ್ಧ ಆಕ್ಷೇಪಿಸಿವೆ. ಯುಸಿಸಿ ಸಾಮಾಜಿಕ ವೈರುಧ್ಯಗಳನ್ನು ಗಾಢಗೊಳಿಸುವುದು ಎಂಬುದು ವಿಪಕ್ಷಗಳ ಆರೋಪವಾಗಿದೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಶಂಕರ್ ಘೋಷ್ ತಿಳಿಸಿದ್ದಾರೆ.

ಮೋಸದ ಮತಾಂತರ ಪಿಡುಗಿಗೆ ಕಡಿವಾಣ: ಅಧಿಕಾರಕ್ಕೆ ಬಂದ ಆರು ತಿಂಗಳಲ್ಲಿ ಬಂಗಾಳದಲ್ಲಿ ಯುಸಿಸಿ ಜಾರಿಗೊಳಿಸಲಾಗುವುದು ಎಂದು ಬಿಜೆಪಿ ಚುನಾವಣಾ ಪ್ರಣಾಳಿಕೆಯಲ್ಲಿ ಆಶ್ವಾಸನೆ ನೀಡಿತ್ತು. ಮೋಸದಿಂದ, ಆಮಿಷದಿಂದ, ಬಲವಂತವಾಗಿ ಮತಾಂತರಿಸುವ ವಿರುದ್ಧ ಕಠಿಣವಾದ ಮತಾಂತರ ವಿರೋಧಿ ಕಾಯಿದೆ ಜಾರಿಗೊಳಿಸಲಾಗುವುದು, ಜೇಗು ಪ್ರದೇಶ, ಮೀಸಲು ಅರಣ್ಯ ಹಾಗೂ ಸರಕಾರಿ ಭೂಮಿಗಳ ಅಕ್ರಮ ಅತಿಕ್ರಮಣವನ್ನು 200 ದಿನಗಳೊಳಗೆ ತೆರವುಗೊಳಿಸಲಾಗುವುದು ಎಂದು ಪ್ರಣಾಳಿಕೆಯಲ್ಲಿ ಆಶ್ವಾಸನೆ ನೀಡಿತ್ತು.

ಮಾಜಿ ಸಿಎಂ ಸಿದ್ದುಗೆ ಮೈಸೂರಿನಲ್ಲಿ ಅದ್ದೂರಿ ಸ್ವಾಗತ

• **ಮೈಸೂರು:** ತವರು ಜಿಲ್ಲಾ ಕೇಂದ್ರವಾದ ಮೈಸೂರಿಗೆ ಶನಿವಾರ ಸಂಜೆ ಆಗಮಿಸಿದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಅವರ ಅಭಿಮಾನಿಗಳು, ಕಾಂಗ್ರೆಸ್‌ನ ಮುಖಂಡರು, ಕಾರ್ಯಕರ್ತರು ಅದ್ದೂರಿ ಸ್ವಾಗತ ನೀಡಿದರು. ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿದ ಹಾಗೂ ಎಐಸಿಸಿ ಕಾರ್ಯಕಾರಿ ಸಮಿತಿ ಸದಸ್ಯರಾಗಿ ನೇಮಕಗೊಂಡ ಬಳಿಕ ಇದೇ ಮೊದಲ ಬಾರಿಗೆ ತವರು ಜಿಲ್ಲಾ ಕೇಂದ್ರವಾದ ಮೈಸೂರಿಗೆ ಶನಿವಾರ ಆಗಮಿಸಿದ ಸಿದ್ದರಾಮಯ್ಯ ಅವರಿಗೆ ಅದ್ದೂರಿ ಸ್ವಾಗತ ದೊರೆಯಿತು. ನಗರದ ಹೈವೇ ಸರ್ಕಲ್‌ನಲ್ಲಿ ಪಕ್ಷದಿಂದ ಅವರನ್ನು ಬರಮಾಡಿಕೊಳ್ಳಲಾಯಿತು.

ಕೆಂಪೇಗೌಡ ಜಯಂತಿಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ

ಆಧುನಿಕ ಬೆಂಗಳೂರು ನಿರ್ಮಾತೃ

• **ಬೆಂಗಳೂರು:** ಬೆಂಗಳೂರು ನಗರವನ್ನು ರಾಷ್ಟ್ರಮಟ್ಟ ಮಾತ್ರವಲ್ಲದೇ, ಅಂತಾರಾಷ್ಟ್ರೀಯ ಮಟ್ಟದಲ್ಲೂ ಬೆಳೆಯಲು ನಾಡಪ್ರಭು ಕೆಂಪೇಗೌಡರೇ ಕಾರಣ ಎನ್ನಲು ಹೆಮ್ಮೆ ಎನಿಸುತ್ತದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ತಿಳಿಸಿದ್ದಾರೆ.

ನಾಡಪ್ರಭು ಕೆಂಪೇಗೌಡ ಪ್ರತಿಷ್ಠಾನದ ವತಿಯಿಂದ ಶನಿವಾರ ಸದಾಶಿವನಗರದ ಕೆಂಪೇಗೌಡ ಗಡಿಗೋಪುರ ಉದ್ಯಾನವನದಲ್ಲಿ ನಾಡಪ್ರಭು ಕೆಂಪೇಗೌಡ ಜಯಂತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಸಮಾಜಸೇವಕ ಆರ್.ಸಿ.ರವಿಶಂಕರ್ ಅವರ ಸನ್ಮಾನ ನೆರವೇರಿಸಿ ಮಾತನಾಡಿದ ಅವರು, 517 ವರ್ಷಗಳ ನಂತರದಲ್ಲೂ ನಾಡ ಪ್ರಭು ಕೆಂಪೇಗೌಡರನ್ನು ನಾವು ನೆನಪಿಸುತ್ತಿದ್ದೇವೆ ಎಂದರೆ, ಅವರು ಬೆಂಗಳೂರು ನಗರ, ನಾಡಿಗೆ ಕೊಟ್ಟ ಕೊಡುಗೆ ಎಂದರು.

ಅಷ್ಟೇ ಅಲ್ಲ, ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನಾಡಪ್ರಭು ಕೆಂಪೇಗೌಡರ ಹೆಸರೇ ಶ್ರೇಷ್ಠ ಎಂದು ತೀರ್ಮಾನ ತೆಗೆದು ಕೊಂಡರು ಎಂದು ಸ್ಮರಿಸಿದರು. ಶಾಸಕ ಡಾ. ಸಿ.ಎನ್. ಅಶ್ವತ್ಥನಾರಾಯಣ್ ಅವರು ಮಾತನಾಡಿ, ನಾಡಪ್ರಭು ಕೆಂಪೇಗೌಡರ ಪ್ರೇರಣೆ ನಮ್ಮೆಲ್ಲರ ಮೇಲಿರಲಿ ಎಂದು ಆಶಿಸಿದರು. ಯಡಿಯೂರಪ್ಪ ಸಿಎಂ ಆಗಿದ್ದಾಗ ವಿಮಾನ ನಿಲ್ದಾಣಕ್ಕೆ ಕೆಂಪೇಗೌಡರ ಹೆಸರು ನಾಮಕರಣ ಮಾಡಿದ್ದ ವಿಚಾರವನ್ನು ಪ್ರಸ್ತಾಪಿಸಿ ಮೆಚ್ಚುಗೆ ಸೂಚಿಸಿದರು.

ಯಡಿಯೂರಪ್ಪನವರು ಎರಡನೇ ಬಾರಿ ಅವರು ಸಿಎಂ ಆಗಿದ್ದಾಗ ವಿಮಾನ ನಿಲ್ದಾಣದ ಬಳಿ ಕೆಂಪೇಗೌಡರ ಪ್ರತಿಮೆ ನಿರ್ಮಾಣಕ್ಕೆ ಒಪ್ಪಿಗೆ ಸೂಚಿಸಿದರು. 108 ಅಡಿಯ ಪ್ರತಿಮೆಗೆ 65 ಕೋಟಿ ರೂ., ಥೀಮ್‌ಪಾರ್ಕಿಗೆ 20 ಕೋಟಿ ರೂ. ಹಾಗೂ ನಾಡಪ್ರಭು ಕೆಂಪೇಗೌಡರ ವೀರಸಮಾಧಿಗೆ ಜಮೀನು ಸ್ವಾಧೀನಕ್ಕೆ 10 ಕೋಟಿ ರೂ. ನೀಡಿದ್ದಲ್ಲದೇ, ಬೆಂವಿವಿ ಅಧ್ಯಯನ ಕೇಂದ್ರಕ್ಕೆ ಅವಶ್ಯಕ ಹಣ ಬಿಡುಗಡೆ ಮಾಡಿದ್ದರು ಎಂದರು. ಪ್ರತಿ ಗ್ರಾಮದಿಂದ ಮೃತ್ತಿಕೆಯನ್ನೂ ತರಲಾಗಿತ್ತು.

ಇದು ಯಡಿಯೂರಪ್ಪನವರ ನೇತೃತ್ವ ಮಾತ್ರವಲ್ಲದೇ ಹೃದಯವಂತಿಕೆಯ ಕೆಲಸ ಎಂದರು. ರಕ್ಷಣಾ ವೇದಿಕೆಯ ಅಧ್ಯಕ್ಷ ಶಿವ ರಾಮೇಗೌಡ, ಮಂಜುನಾಥ್, ಡಾ.ರಾಜೇಶ್, ಜಯಪಾಲ್, ಸುಮಂಗಲಾ ಕೇಶವ್ ಮೊದಲಾದ ಪ್ರಮುಖರು ವೇದಿಕೆಯಲ್ಲಿದ್ದರು.



> **ನಾಡಪ್ರಭು ಕೆಂಪೇಗೌಡರ ಹೆಸರು ಕೇವಲ ಕರ್ನಾಟಕ, ದೇಶ ಮಾತ್ರವಲ್ಲದೇ, ಇಡೀ ವಿಶ್ವದಲ್ಲಿ ಚರ್ಚೆ ಆಗುವಂತೆ ಆಗಬೇಕೆಂಬ ಸದುದ್ದೇಶದಿಂದ ಹಿಂದಿನ ಸಿಎಂ ಬಿ.ಎಸ್.ಯಡಿಯೂರಪ್ಪನವರು ಅಧ್ಯಯನ ಕೇಂದ್ರಕ್ಕೆ 50 ಕೋಟಿ ರೂ. ಕೊಟ್ಟಿದ್ದರು. ಪ್ರತಿಮೆ ನಿರ್ಮಾಣಕ್ಕೆ ಹಣ ಕೊಟ್ಟದ್ದಲ್ಲದೇ, ಪಾರ್ಕ್ ನಿರ್ಮಿಸಲು ತಿಳಿಸಿದ್ದರು.**
> ■ **ಬಿ.ವೈ.ವಿಜಯೇಂದ್ರ,** ಬಿಜೆಪಿ ರಾಜ್ಯಾಧ್ಯಕ್ಷ

ಸೈಬರ್ ಅಪರಾಧ: ತಾಂತ್ರಿಕ ಸಾಮರ್ಥ್ಯ ಇನ್ನಷ್ಟು ಬಲ

• **ಬೆಂಗಳೂರು:** ಸೈಬರ್ ಅಪರಾಧಗಳ ಸಂಖ್ಯೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ತಾಂತ್ರಿಕ ಸಾಮರ್ಥ್ಯವನ್ನು ಇನ್ನಷ್ಟು ಬಲಪಡಿಸುವುದು, ಆಧುನಿಕ ತಂತ್ರಜ್ಞಾನಗಳ ಅಳವಡಿಕೆ, ಸಾರ್ವಜನಿಕರಿಗೆ ತ್ವರಿತ ಸೇವೆ ಒದಗಿಸುವತ್ತ ಹೆಚ್ಚಿನ ಆದ್ಯತೆ ನೀಡುವಂತೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅಧಿಕಾರಿಗಳಿಗೆ ಸೂಚಿಸಿದರು.

ಶನಿವಾರ ಬೆಂಗಳೂರಿನ ಬಹುಮಹಡಿ ಕಟ್ಟಡದಲ್ಲಿರುವ ಪೊಲೀಸ್ ಕಂಪ್ಯೂಟರ್ ವಿಭಾಗಕ್ಕೆ ಭೇಟಿ ನೀಡಿ, ಇಲಾಖೆಯ ಕಾರ್ಯಚಟುವಟಿಕೆಗಳ ಕುರಿತು ಸಮಗ್ರ ಪರಿಶೀಲನೆ ನಡೆಸಿದರು. ಮಾಹಿತಿ ತಂತ್ರಜ್ಞಾನದ ಸಮರ್ಪಕ ಬಳಕೆಯ ಮೂಲಕ ಪೊಲೀಸ್ ಸೇವೆಗಳನ್ನು ಇನ್ನಷ್ಟು ಪಾರದರ್ಶಕ, ಪರಿಣಾಮಕಾರಿ ಹಾಗೂ ಜನಸ್ನೇಹಿಯಾಗಿರೂಪಿಸುವ ಅಗತ್ಯವನ್ನು ಒತ್ತಿ ಹೇಳಿದರು.

ಪೊಲೀಸ್ ಇಲಾಖೆಯ ಡಿಜಿಟಲ್ ಸೇವೆಗಳು ಮತ್ತು ಮಾಹಿತಿ ವ್ಯವಸ್ಥೆಗಳನ್ನು ಮತ್ತಷ್ಟು ಕಾರ್ಯಕ್ಷಮಗೊಳಿಸುವ ಮೂಲಕ ಆಡಳಿತದಲ್ಲಿ ಪಾರದರ್ಶಕತೆ ಹಾಗೂ ಉತ್ತರದಾಯಿತ್ವವನ್ನು ಹೆಚ್ಚಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸಚಿವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.



ಪೊಲೀಸ್ ಕಂಪ್ಯೂಟರ್ ವಿಭಾಗವು ರಾಜ್ಯ ಪೊಲೀಸ್ ಇಲಾಖೆಯ ತಾಂತ್ರಿಕ ಬೆನ್ನೆಲುಬಾಗಿದ್ದು, ಇಲಾಖೆಯ ವಿವಿಧ ಡಿಜಿಟಲ್ ಜಾಲತಾಣಗಳು, ಮಾಹಿತಿ ನಿರ್ವಹಣಾ ವ್ಯವಸ್ಥೆಗಳು, ಸಾಫ್ಟ್‌ವೇರ್ ವೇದಿಕೆಗಳು ಹಾಗೂ ಮಾಹಿತಿ ತಂತ್ರಜ್ಞಾನ ಸಂಬಂಧಿತ ಸೇವೆಗಳ ಸಮನ್ವಯ ಮತ್ತು ನಿರ್ವಹಣೆಯನ್ನು ಕೈಗೊಳ್ಳುತ್ತಿದೆ ಎಂದು ಸಚಿವ ಖರ್ಗೆ ತಿಳಿಸಿದರು.

ಇದರೊಂದಿಗೆ, ಸೈಬರ್ ಅಪರಾಧ ವಿಭಾಗವು ಆನ್‌ಲೈನ್ ವಂಚನೆ, ಕ್ರಿಪ್ಟೋಕರೆನ್ಸಿ ವಂಚನೆ, ಹ್ಯಾಕಿಂಗ್ ಸೇರಿದಂತೆ ವಿವಿಧ ರೀತಿಯ ಸೈಬರ್ ಅಪರಾಧಗಳ ತನಿಖೆಯನ್ನು ಪರಿಣಾಮಕಾರಿಯಾಗಿ ನಡೆಸುತ್ತಿದೆ. ಸೈಬರ್ ಫೋರೆನ್ಸಿಕ್ ಘಟಕವು ಡಿಜಿಟಲ್ ಸಾಕ್ಷ್ಯಗಳನ್ನು ವೈಜ್ಞಾನಿಕವಾಗಿ ಸಂಗ್ರಹಿಸಿ ವಿಶ್ಲೇಷಿಸುವುದರ ಜೊತೆಗೆ ರಾಜ್ಯದ ವಿವಿಧ ಪೊಲೀಸ್ ಠಾಣೆಗಳಿಗೆ ಅಗತ್ಯ ತಾಂತ್ರಿಕ ನೆರವನ್ನು ಒದಗಿಸುತ್ತಿದೆ ಎಂದರು.

ಕಾವೇರಿ ವಿವಾದ ಇತ್ಯರ್ಥಕ್ಕೆ ಸಲಹೆ

ಪುಟ ೧ **ನದಿ ಜೋಡಣೆಯೇ ಪರಿಹಾರ!:** ಕರ್ನಾಟಕ-ತ.ನಾಡು ನಡುವೆ ಕಾವೇರಿ ಸಮಸ್ಯೆ ಬಗೆಹರಿಸಲು ಕೇಂದ್ರ ಸಚಿವ ಕುಮಾರಸ್ವಾಮಿ ಅವರು ವಿನಂತಿಸಿದರು. ನದಿ ಜೋಡಣೆ ಬಗ್ಗೆ ಬಹಳ ಗಂಭೀರವಾದ ಚರ್ಚೆ ನಡೆಯುತ್ತಿದೆ. ನದಿ ಜೋಡಣೆಯೂ ಒಂದು ಪರಿಹಾರವೇ. ಭಾರತದ ಎಲ್ಲಾ ನದಿಗಳನ್ನು ಜೋಡಿಸಿ, ಒಂದು ಹನಿ ನೀರೂ ವ್ಯರ್ಥವಾಗದಂತೆ ನಿರ್ವಹಿಸಬೇಕು. ಗೋದಾವರಿ ಮತ್ತು ಕಾವೇರಿ ನದಿ ಜೋಡಣೆ ಮಾಡಬಹುದಲ್ಲವೇ ಎಂದು ನಾನು ಚಂದ್ರಬಾಬು ನಾಯ್ಡು ಅವರೊಂದಿಗೆ ಆಗಾಗ ಚರ್ಚೆ ಮಾಡುತ್ತಿರುತ್ತೇನೆ. ಆದರೆ, ಇದು ತಕ್ಷಣಕ್ಕೆ ಆಗುವ ಕೆಲಸವಲ್ಲ ಎಂದರು.

ಬೆಂಗಳೂರಿನಂಥ ನಾಡು ಕಟ್ಟಿದ ಕೆಂಪೇಗೌಡರಿಗೆ ದೂರದೃಷ್ಟಿ ಇತ್ತು. ಅದರ ಲಾಭವನ್ನು ನಾವೀಗ ಅನುಭವಿಸುತ್ತಿದ್ದೇವೆ. ಕೆಂಪೇಗೌಡ ನಗರ ನಿರ್ಮಾತೃ, ಅವರು ಪರಂಪರೆಯನ್ನೇ ಹುಟ್ಟು ಹಾಕಿದವರು, ದೂರದೃಷ್ಟಿ ನಾಯಕ. ಅವರ ದೂರದೃಷ್ಟಿಗೆ ಬೆಂಗಳೂರು ನಗರ ಸಾಕ್ಷಿಯಾಗಿದೆ. ಅವರು ಕಟ್ಟಿದ ಬೆಂಗಳೂರು ಇಂದು ಮಿನಿ ಭಾರತವೇ ಆಗಿದೆ. ಅವರು ಆಡಳಿತ ಎಂದರೆ, ಜನರಿಗೆ ಕೇವಲ ಸೇವೆಗಳನ್ನು ನೀಡುವುದು ಎಂದು ತಿಳಿಯದೆ ಸುಸ್ಥಿರವಾಗಿ ನಗರ ನಿರ್ಮಾಣ ಮಾಡಿದ್ದಾರೆ. ಕೆರೆಗಳ ಜಾಲದ ಮೂಲಕ ಜಲ ನಿರ್ವಹಣೆ, ಪರಿಸರದ ಸಂರಕ್ಷಣೆಯ ಮಾದರಿಯನ್ನು 500 ವರ್ಷಗಳ ಹಿಂದೆಯೇ ಕೆಂಪೇಗೌಡರು ತೋರಿಸಿಕೊಟ್ಟಿದ್ದಾರೆ ಎಂದು ವಿವರಿಸಿದರು.

ಆದಿಚುಂಚನಗಿರಿ ಮಹಾಸಂಸ್ಥಾನದ ಶ್ರೀ ನಿರ್ಮಲಾನಂದನಾಥ ಮಹಾಸ್ವಾಮೀಜಿ, ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಮತ್ತು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಮಾದಾರ ಚೆನ್ನಯ್ಯ ಮಠದ ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಕೇಂದ್ರ ಸಚಿವ ವಿ. ಸೋಮಣ್ಣ, ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್. ಅಶೋಕ, ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ, ನಾಡಪ್ರಭು ಕೆಂಪೇಗೌಡ ಪ್ರತಿಷ್ಠಾನದ ಅಧ್ಯಕ್ಷ ಪ್ರೊ.ಎಂ. ಕೃಷ್ಣೇಗೌಡ ಅವರು ವೇದಿಕೆಯಲ್ಲಿದ್ದರು.

ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಟಿ.ವಿ. ಮೋಹನ್ ದಾಸ್ ಪೈ, ಎ.ಸಿ. ಲಕ್ಷ್ಮಣ್ ಅವರಿಗೆ ನಾಡಪ್ರಭು ಕೆಂಪೇಗೌಡ ಅಂತಾರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ ಗಣ್ಯರಿಗೆ ಕರುನಾಡ ಪ್ರಭು ಕೆಂಪೇಗೌಡ ಪ್ರಶಸ್ತಿ ನೀಡಲಾಯಿತು.



> **ನಗರ ನಿರ್ಮಾಣವೆಂದರೆ ಕೇವಲ ಕಟ್ಟಡ, ರಸ್ತೆಗಳ ನಿರ್ಮಾಣವಲ್ಲ ಎಂದು ಕೆಂಪೇಗೌಡರು ತಿಳಿದಿದ್ದರು. ಅವರು ಐದು ಶತಮಾನಗಳ ಹಿಂದೆಯೇ ಜಲ ನಿರ್ವಹಣೆ, ಪರಿಸರ ಸಂರಕ್ಷಣೆ, ಸಾಮಾಜಿಕ ಸಾಮರಸ್ಯ ಇತ್ಯಾದಿ ಕುರಿತು ಸುಸ್ಥಿರ ಯೋಜನೆಯೊಂದಿಗೆ ನಗರ ನಿರ್ಮಿಸಿದ್ದರು.**
> ■ **ಥಾವರ್‌ಚಂದ್ ಗೆಹಲೋತ್,** ರಾಜ್ಯಪಾಲ



> **ಕೆಂಪೇಗೌಡರು ಬೆಂಗಳೂರು ನಗರವನ್ನು ಕಟ್ಟಿ 64 ಸಮುದಾಯಗಳಿಗೆ 64 ಪೇಟೆಗಳನ್ನು ನಿರ್ಮಾಣ ಮಾಡಿ ಕೊಟ್ಟಿದ್ದರು. ಇದಕ್ಕೆ ಕಾರಣ ಈ ನಗರವನ್ನು ನಿರ್ಮಾಣ ಮಾಡಿರುವ ಕೆಂಪೇಗೌಡರ ದೂರದೃಷ್ಟಿ. ಅವರು ಕೇವಲ ಭೌತಿಕವಾಗಿ ನಗರ ನಿರ್ಮಿಸಿಲ್ಲ, ನಿಷ್ಕಾಮ ಸೇವೆ ಮಾಡಿ ಎಲ್ಲ ಮತದವರಿಗೆ ದೇವಾಲಯಗಳನ್ನು ಮಾಡಿಕೊಟ್ಟಿದ್ದರು.**
> ■ **ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ,** ಆದಿಚುಂಚನಗಿರಿ ಮಠ

ಸೀಶೆಲ್ಸ್: ಮೋದಿಗೆ ಅದ್ದೂರಿ ಸ್ವಾಗತ

ಪುಟ ೧ **ಶ್ರೀರಾಮ ಭಜನೆ, ಶಿವತಾಂಡವಸ್ತೋತ್ರದೊಂದಿಗೆ ಭರತನಾಟ್ಯ:** ಪ್ರಧಾನಿ ಮೋದಿ ಸೀಶೆಲ್ಸ್‌ನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿಯುತ್ತಿದ್ದಂತೆ ನಿಲ್ದಾಣದ ಹೊರಗಡೆ ಜಮಾಯಿಸಿದ್ದ ಅಸಂಖ್ಯ ಜನರು ಹರ್ಷೋಲ್ಲಾಸದಿಂದ ಭಾರತದ ತ್ರಿವರ್ಣ ಧ್ವಜ ಬೀಸಿ ಪ್ರಧಾನಿ ಮೋದಿ ಅವರನ್ನು ಎದುರುಗೊಂಡರು. ಭಾರತೀಯರ ಜತೆ ಪ್ರಧಾನಿ ಮೋದಿ ಕೆಲ ಕ್ಷಣ ಸಂವಾದ ನಡೆಸಿದರು. ಶ್ರೀರಾಮ ಸಂಕೀರ್ತನೆ ಮತ್ತು ಶಿವತಾಂಡವ ಸ್ತೋತ್ರದ ಹಿನ್ನೆಲೆಯೊಂದಿಗೆ ಆಕರ್ಷಕ ಭರತನಾಟ್ಯವನ್ನು ಲಯಬದ್ಧವಾಗಿ ಭಾರತೀಯ ಸಮುದಾಯ ಪ್ರದರ್ಶಿಸಿತು.

ಆತ್ಮೀಯ ಸ್ವಾಗತ ನೀಡಿದ ಸೀಶೆಲ್ಸ್ ಅಧ್ಯಕ್ಷ ಡಾ.ಹರ್ಮಿನ್ ಶನಿವಾರ ಮಧ್ಯಾಹ್ನ ಸೀಶೆಲ್ಸ್ ವಿಮಾನ ನಿಲ್ದಾಣ ತಲುಪಿದ ಪ್ರಧಾನಿ ಮೋದಿ ಅವರನ್ನು ಸಂಪುಟ ಸಹೋದ್ಯೋಗಿಗಳು ಮತ್ತು ಸರಕಾರಿ ಅಧಿಕಾರಿಗಳೊಡಗೂಡಿ ಅಧ್ಯಕ್ಷ ಪ್ಯಾಟ್ರಿಕ್ ಹರ್ಮಿನ್ ವೈಯಕ್ತಿಕವಾಗಿ ಆತ್ಮೀಯವಾಗಿ ಸ್ವಾಗತಿಸಿದರು. ಸಾಂಪ್ರದಾಯಿಕ ಗೌರವ ರಕ್ಷೆಯನ್ನೂ ಪ್ರಧಾನಿ ಮೋದಿ ಸ್ವೀಕರಿಸಿದರು. ಹರ್ಮಿನ್ ಆಮಂತ್ರಣ ಮೇರೆಗೆ ಸೀಶೆಲ್ಸ್‌ಗೆ ಭೇಟಿ ನೀಡಿರುವ ಪ್ರಧಾನಿ ಮೋದಿ ಅಲ್ಲಿನ ರಾಷ್ಟ್ರೀಯ ದಿನಾಚರಣೆ ಕಾರ್ಯಕ್ರಮದಲ್ಲಿ ಗೌರವ ಅತಿಥಿಯಾಗಿ ಪಾಲ್ಗೊಳ್ಳುವರು.

194 ವರ್ಷದ ಜೋನಾಥನ್‌ಗೆ ಆಹಾರ ನೀಡಿದ ಮೋದಿ: ಸೀಶೆಲ್ಸ್ ಅಧ್ಯಕ್ಷ ಡಾ. ಪ್ಯಾಟ್ರಿಕ್ ಹರ್ಮಿನ್ ಜತೆ ಸೀಶೆಲ್ಸ್‌ನ ರಾಷ್ಟ್ರೀಯ ಬೊಟಾನಿಕಲ್ ಗಾರ್ಡನ್‌ಗೆ ಭೇಟಿ ನೀಡಿದ ಪ್ರಧಾನಿ ಮೋದಿ, ಅಲ್ಲಿ ಬೃಹತ್ ಆಮೆಗಳು ವಾಸವಿರುವ ಪ್ರದೇಶಕ್ಕೆ ಭೇಟಿ ನೀಡಿದರು. ಅಲ್ಲಿರುವ ಜಗತ್ತಿನ ಅತ್ಯಂತ ಹಿರಿಯ ಆಮೆಯೆಂದೇ ಪರಿಗಣಿತ 194 ವರ್ಷದ ಜೋನಾಥನ್ ಸಹಿತ ಹಲವು ಬೃಹತ್ ಆಮೆಗಳಿಗೆ ಪ್ರಧಾನಿ ಮೋದಿ ಆಹಾರ ನೀಡಿದರು. ಉಭಯ ನಾಯಕರು ಬೊಟಾನಿಕಲ್ ಗಾರ್ಡನ್‌ನಲ್ಲಿ ಸ್ಮಾರಕ ಸಸಿಗಳನ್ನು ನೆಟ್ಟರು. ನಂತರ ಗಾರ್ಡನ್‌ನ ಸಂರಕ್ಷಣಾ ಸಿಬ್ಬಂದಿಯಿಂದ ಪ್ರಧಾನಿ ಮೋದಿ ಗಾರ್ಡನ್‌ನ ವಿಶೇಷತೆಗಳ ಬಗ್ಗೆ ಮಾಹಿತಿ ಪಡೆದರು. ವಿಮಾನ ನಿಲ್ದಾಣದಿಂದ ಬೊಟಾನಿಕಲ್ ಗಾರ್ಡನ್‌ಗೆ ಪಯಣಿಸುವಾಗ ಅಧ್ಯಕ್ಷ ಹರ್ಮಿನ್ ಜತೆಗೆ ತೆಗೆದ ಫೋಟೋವನ್ನು ಎಕ್ಸ್‌ನಲ್ಲಿ ಶೇರ್ ಮಾಡಿರುವ ಪ್ರಧಾನಿ ಮೋದಿ, ಸೀಶೆಲ್ಸ್ ಅಧ್ಯಕ್ಷ ಡಾ.ಪ್ಯಾಟ್ರಿಕ್ ಹರ್ಮಿನ್ ಜತೆ ಸೀಶೆಲ್ಸ್‌ನ ರಾಷ್ಟ್ರೀಯ ಬೊಟಾನಿಕಲ್ ಗಾರ್ಡನ್‌ಗೆ ಹೊರಟಿರುವೆ ಎಂದು ಎಕ್ಸ್‌ಗೆ ಪೋಸ್ಟ್ ಹಾಕಿದ್ದಾರೆ.

ಗಸ್ತು ನೌಕೆ, ಆಂಬುಲೆನ್ಸ್ ಹಸ್ತಾಂತರ: 100 ಕೋಟಿ ರೂ. ವೆಚ್ಚದಲ್ಲಿ ಸ್ವದೇಶಿ ನಿರ್ಮಿತ ವೇಗದ ಗಸ್ತು ನೌಕೆ ಲೆಸ್ಪಾರ್, ಆಂಬುಲೆನ್ಸ್, ಲೇಸರ್ ರೇಡಿಯಲ್ ದೋಣಿಗಳು ಹಾಗೂ ಸೀಶೆಲ್ಸ್ ರಕ್ಷಣಾ ಪಡೆಗೆ ಉಪಯುಕ್ತ ವಾಹನಗಳನ್ನು ಸೀಶೆಲ್ಸ್ ಅಧ್ಯಕ್ಷ ಡಾ.ಪ್ಯಾಟ್ರಿಕ್ ಅವರಿಗೆ ಪ್ರಧಾನಿ ಮೋದಿ ಹಸ್ತಾಂತರಿಸಿದರು. ಇವುಗಳಲ್ಲಿ ಒಂದು ಗಸ್ತು ನೌಕೆ, 10 ಆಂಬುಲೆನ್ಸ್, 10 ಬಸ್ಸು ವಾಹನಗಳು ಹಾಗೂ 5 ಸೆಟ್ ದೋಣಿಗಳು ಸೇರಿವೆ. ಇದು ಭಾರತ ಮತ್ತು ಸೀಶೆಲ್ಸ್ ನಡುವಿನ ರಕ್ಷಣಾ ಮತ್ತು ಸಾಗರ ಸುರಕ್ಷತೆ ಪಾಲುದಾರಿಕೆಯಲ್ಲಿನ ಪ್ರಗತಿಯ ಮೈಲಿಗಲ್ಲು ಎಂದು ಮೋದಿ ಬಣ್ಣಿಸಿದ್ದಾರೆ. ಸೀಶೆಲ್ಸ್‌ನ ಹೆಮ್ಮೆಯ ನಂಬಿಕಸ್ಥ ಪಾಲುದಾರ ರಾಷ್ಟ್ರವಾಗಿ ಭಾರತ ನಿಂತಿದೆ ಎಂದಿದ್ದಾರೆ.

ಗಿಡ ನೆಟ್ಟು ಜಾಗತಿಕ ಸಂದೇಶ: ಸೀಶೆಲ್ಸ್ ಅಧ್ಯಕ್ಷ ಡಾ.ಪ್ಯಾಟ್ರಿಕ್ ಹರ್ಮಿನ್‌ರೊಂದಿಗೆ ರಾಷ್ಟ್ರೀಯ ಸಸ್ಯೋದ್ಯಾನದಲ್ಲಿ ಗಿಡ ನೆಡುವ ಕಾರ್ಯಕ್ರಮದಲ್ಲಿ ಭಾಗವಹಿಸಿದ ಪ್ರಧಾನಿ ಮೋದಿ, ಕೊಕೊ ದೆ ಮೆರ್ ಗಿಡವನ್ನು ನೆಡುವ ಮೂಲಕ ಜಾಗತಿಕ ಸಂದೇಶ ನೀಡಿದರು. ಸೀಶೆಲ್ಸ್‌ನ ವಿಶೇಷ ಗಿಡ ಕೊಕೊ ದೆ ಮೆರ್ ಅನ್ನು ನೆಡಲಾಯಿತು. ವಿಶ್ವದ ಅತಿ ದೊಡ್ಡ ಬೀಜ ಮತ್ತು ಅತ್ಯಧಿಕ ಭಾರದ ಹಣ್ಣಿಗೆ ಹೆಸರಾದ ಈ ಮರವು ಸೀಶೆಲ್ಸ್ ರಾಷ್ಟ್ರ ಲಾಂಛನದಲ್ಲೂ ಸ್ಥಾನವನ್ನು ಪಡೆದಿದೆ. ಫ್ರಾನ್ಸ್, ಸೀಶೆಲ್ಸ್ ಎರಡೂ ತಮ್ಮ ಮುಂದಿನ ಪೀಳಿಗೆಗೆ ಪರಿಸರ ಸಂರಕ್ಷಣೆಯ ಸಂಕಲ್ಪ ಹೊಂದಿವೆ. ಪರಿಸರ ಸ್ನೇಹಿ ಹಸಿರು ವಿಶ್ವದ ನಿರ್ಮಾಣವನ್ನು ಸಾರುವ ಕಾರ್ಯಕ್ರಮ ಇದಾಗಿತ್ತು ಎಂದು ಮೋದಿ ಎಕ್ಸ್‌ನಲ್ಲಿ ಹೇಳಿದ್ದಾರೆ.

ಏನಿದು ಕೊಕೊ ದೆ ಮೆರ್? ಕೊಕೊ ದ ಮೆರ್ (ಸಮುದ್ರ ತೆಂಗು), ಇದು ಸೀಶೆಲ್ಸ್ ದ್ವೀಪರಾಷ್ಟ್ರದ ಪ್ರಸ್ಲಿನ್ ಮತ್ತು ಕ್ಯೂರಿಯೂಸ್ ದ್ವೀಪಗಳಲ್ಲಿ ಮಾತ್ರ ಸ್ವಾಭಾವಿಕವಾಗಿ ಬೆಳೆಯುವ ವಿಶ್ವದ ಅತಿ ದೊಡ್ಡ ಕಾಯಿ ಹೊಂದಿರುವ ಅಪರೂಪದ ತಾಳೆ ಜಾತಿಯ ಮರವಾಗಿದೆ.

ರೀಲಾಂಚ್‌ಗೆ ಕಾದಿರುವ ಸಿಗಂದೂರು ಲಾಂಚ್

ಪುಟ ೧ ಒಂದೇ ಲಾಂಚ್ ಇದ್ದುದರಿಂದ ಪ್ರಯಾಣ ಸಂದರ್ಭದಲ್ಲಿ ಸ್ಥಳೀಯರು, ಪ್ರವಾಸಿಗರ ನಡುವೆ ಪರಸ್ಪರ ಘರ್ಷಣೆ ನಡೆಯುತ್ತಿತ್ತು. ನಂತರ ಒಂದರ ಹಿಂದೆ ಒಂದರಂತೆ ಮೂರು ಲಾಂಚ್ ಬಿಡಲಾಗಿದೆ.

ತುಕ್ಕು ಹಿಡಿಯುತ್ತಿವೆ: ಸಿಗಂದೂರು ಸೇತುವೆ ಸೇವೆ ಪ್ರಾರಂಭಿಸಿ ಒಂದು ವರ್ಷ ಸಮೀಪಿಸಿದೆ. ಜುಲೈನಲ್ಲಿ ಸೇತುವೆ ಅಧಿಕೃತ ಕಾರ್ಯಾರಂಭ ಮಾಡಿದ್ದರೂ, ಜೂನ್ ಅಂತ್ಯದಿಂದಲೇ ಬಹುತೇಕ ವಾಹನ ಸಂಚಾರ, ಜನ ಸಂಚಾರಕ್ಕೆ ಸೇತುವೆ ಮುಕ್ತವಾಗಿತ್ತು. ಇದರಿಂದಾಗಿ ಅಂಬಾರಗೋಡ್ಲು-ಕಳಸವಳ್ಳಿ ನಡುವೆ ಸಂಪರ್ಕ ಕಲ್ಪಿಸಿದ್ದ ಮೂರು ಲಾಂಚ್‌ಗಳನ್ನು ಪ್ರಯಾಣಿಕರಿಲ್ಲದ ಹಿನ್ನೆಲೆಯಲ್ಲಿ ಕಳಸವಳ್ಳಿ ದಡಕ್ಕೆ ತಂದು ನಿಲ್ಲಿಸಲಾಯಿತು. ಅಂದಿನಿಂದ ಇಂದಿನವರೆಗೆ ಲಾಂಚ್‌ಗಳು ನೀರಿನಲ್ಲಿ ಸಂಚರಿಸಲೇ ಇಲ್ಲ.

ಮೂರು ಲಾಂಚ್‌ನ ಬಹುತೇಕ ಭಾಗಗಳು ತುಕ್ಕು ಹಿಡಿಯಲಾರಂಭಿಸಿವೆ. ಇನ್ನು ಕೆಲವರು ಲಾಂಚ್‌ನ ಕಬ್ಬಿಣ ಇನ್ನಿತರೆ ಬೆಲೆಬಾಳುವ ಭಾಗಗಳನ್ನು ಮಾರಾಟ ಮಾಡುತ್ತಿದ್ದಾರೆ. ಒಂದೊಂದು ಲಾಂಚ್ ನಾಲ್ಕೈದು ಕೋಟಿ ರೂ. ಬೆಲೆಬಾಳುತ್ತದೆ. ಅಂತಹದ್ದರಲ್ಲಿ ಮೂರು ಲಾಂಚ್‌ಗಳನ್ನು ಹೀಗೆ ತುಕ್ಕು ಹಿಡಿಯಲು ಬಿಟ್ಟಿರುವುದು, ಬಿಡಿಭಾಗಗಳನ್ನು ಕಳ್ಳತನ ಮಾಡಿಕೊಂಡು ಹೋಗಲು ಅವಕಾಶ ಕೊಟ್ಟಿರುವುದು ಎಷ್ಟು ಸರಿ.

> **ಲಾಂಚ್‌ಗಳನ್ನು ಒಂದೇ ಕಡೆ ನಿಲ್ಲಿಸಿರುವುದರಿಂದ ತುಕ್ಕು ಹಿಡಿದು ಹಾಳಾಗುತ್ತಿವೆ. ಬೇಸಿಗೆಯ ಹದಿನೈದು ಇಪ್ಪತ್ತು ದಿನ ಮಡೆನೂರು ಡ್ಯಾಂ ನೀರಿನಿಂದ ಮೇಲೆದ್ದು ಬರುತ್ತಿದ್ದು ಪ್ರವಾಸಿಗರಿಗೆ ಅದನ್ನು ನೋಡಿ ಬರಲು ಸೂಕ್ತ ರಸ್ತೆ ವ್ಯವಸ್ಥೆ ಇಲ್ಲ. ಲಾಂಚ್ ಮೂಲಕ ಪ್ರವಾಸಿಗರನ್ನು ಅಲ್ಲಿಗೆ ಕರೆದೊಯ್ದು ಅತ್ಯಂತ ವಿನ್ಯಾಸಮಯವಾಗಿ ನಿರ್ಮಿಸಿರುವ ಡ್ಯಾಂ ತೋರಿಸಿಕೊಂಡು ಬರಬಹುದು. ನಮಗೆ ಸೇವೆ ನೀಡಿದ್ದ ಮೂರು ಲಾಂಚ್ ನಮ್ಮಲ್ಲಿಯೇ ಇದ್ದು, ಸದ್ಬಳಕೆಯಾಗಬೇಕು. ಈ ನಿಟ್ಟಿನಲ್ಲಿ ಜನಪ್ರತಿನಿಧಿಗಳು ಗಮನಹರಿಸಬೇಕು.**
> ■ **ಜೆ.ಟಿ.ಸತ್ಯನಾರಾಯಣ,** ತುಮರಿ ಗ್ರಾಪಂ ಮಾಜಿ ಅಧ್ಯಕ್ಷ

ಹೆಚ್ಚು ಭಾರ ಇರುವುದರಿಂದ ಈ ಲಾಂಚ್‌ಗಳನ್ನು ಲಾರಿ ಇನ್ನಿತರೆ ವಾಹನ ಮೂಲಕ ಇನ್ನೊಂದು ಕಡೆ ಸಾಗಿಸಲು ಬರುವುದಿಲ್ಲ. ಇರುವ ಜಾಗದಲ್ಲಿಯೇ ಅದನ್ನು ಪುನರ್ ಬಳಕೆ ಮಾಡಿಕೊಳ್ಳುವತ್ತ ಯೋಜನೆ ರೂಪಿಸಬೇಕಾಗಿದೆ. ಲಾಂಚ್‌ಗೆ ಮೂವರು ಕಾಯಂ ಡ್ರೈವರ್ ಇದ್ದರು. ಈ ಪೈಕಿ ಈಗ ಒಬ್ಬರು ಮಾತ್ರ ಇದ್ದು ಅವರು ಪ್ರತಿದಿನ ಬಂದು ಲಾಂಚ್ ನೋಡಿಕೊಂಡು ಹೋಗುತ್ತಿದ್ದಾರೆ.

ಪರ್ಯಾಯ ವ್ಯವಸ್ಥೆ ಮಾಡಬಹುದಾ?: ಉಪಯೋಗಕ್ಕೆ ಬರದೆ ನಿಂತ ಲಾಂಚ್‌ಗಳನ್ನು ಪ್ರವಾಸೋದ್ಯಮ ಇಲಾಖೆ ಮೂಲಕ ತೇಲುವ ಹೋಟೆಲ್ ಮಾಡುವುದಾಗಿ ಶಾಸಕರು ಭರವಸೆ ನೀಡಿದ್ದರು. ಆದರೆ ಅದು ದುಬಾರಿ ಮತ್ತು ಕಾರ್ಯಸಾಧುವಲ್ಲ ಎನ್ನುವ ಚರ್ಚೆ ಹಿನ್ನೆಲೆಯಲ್ಲಿ ಅದನ್ನು ಕೈಬಿಟ್ಟಿದ್ದಾರೆ ಎನ್ನಲಾಗುತ್ತಿದೆ. ಈಚೆಗೆ ಸಂಸದ ಬಿ.ವೈ. ರಾಘವೇಂದ್ರ, ವಾಟರ್ ಏರೋಡ್ರಂ ಪ್ರವಾಸೋದ್ಯಮ ಹಿನ್ನೀರಿನಲ್ಲಿ ಅಭಿವೃದ್ಧಿಪಡಿಸುವ, ಯುದ್ಧ ವಿಮಾನಗಳ ಡೆಮೋ ಹಿನ್ನೀರಿನ ಮೇಲೆ ಸ್ಥಾಪಿಸುವ ಯೋಜನೆ ಕುರಿತು ವಿಶ್ವಾಸದ ಮಾತುಗಳನ್ನು ಆಡಿದ್ದರು.

> **ಸಂತ್ರಸ್ತ ಜನರಿಗೆ ಐದು ದಶಕ ಕಾಲ ನಿರಂತರ ಸೇವೆ ನೀಡಿದ ಲಾಂಚ್ ಜತೆ ನಮಗೆ ಅವಿನಾಭಾವ ಸಂಬಂಧವಿದ್ದು ಅದನ್ನು ಇಲ್ಲಿಯೇ ಉಳಿಸಿಕೊಳ್ಳಲು ನಾವು ಬಯಸುತ್ತೇವೆ. ಸಂಸದರು ವಾಟರ್ ಏರೋಡ್ರಂ ಪರಿಕಲ್ಪನೆ ನೀಡಿದ್ದು ಅದು ಅನುಷ್ಠಾನಕ್ಕೆ ಬಂದರೆ ಪ್ರವಾಸಿಗರಿಗೆ ಲಾಂಚ್ ಅಗತ್ಯವಾಗಿ ಬೇಕಾಗುತ್ತದೆ. ಈ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ತಕ್ಷಣ ಕಾರ್ಯಪ್ರವೃತ್ತವಾಗಬೇಕು.**
> ■ **ಶ್ರೀನಿವಾಸ್ ಗಡ್ಡೆಮನೆ,** ತುಮರಿ ಗ್ರಾಪಂ ಸದಸ್ಯ

ಒಂದೊಮ್ಮೆ ವಾಟರ್ ಏರೋಡ್ರಂ ವ್ಯವಸ್ಥೆ ಮಾಡಿದರೆ ದಡದಿಂದ ಅಲ್ಲಿಗೆ ಪ್ರವಾಸಿಗರನ್ನು ಕರೆದುಕೊಂಡು ಹೋಗಿ ಬರಲು ಲಾಂಚ್ ಬಳಕೆ ಮಾಡಬಹುದು. ಇದರ ಜತೆಗೆ ಬೇಸಿಗೆಯ ಒಂದು ತಿಂಗಳು ಕಾಲ ನೀರಿನಿಂದ ಮೇಲೆದ್ದು ನಿಲ್ಲುವ ಮಡೆನೂರು ಡ್ಯಾಂ ದರ್ಶಿಸಲು ಪ್ರವಾಸಿಗರಿಗೆ ಈ ಲಾಂಚ್ ಮೂಲಕ ಕರೆದೊಯ್ಯಲು ಸಾಧ್ಯವಿದೆ. ಪ್ರವಾಸಿಗರಿಗೆ ಶರಾವತಿ ಹಿನ್ನೀರಿನ ಪ್ರಕೃತಿ ಸೌಂದರ್ಯವನ್ನು ತೋರಿಸಲು ಲಾಂಚ್ ಮೂಲಕ ಒಂದೆರಡು ಸುತ್ತು ಹಾಕಿಸಿ, ದರ ನಿಗದಿಪಡಿಸಲು ಅವಕಾಶ ಇದೆ. ಅಂತಹದ್ದನ್ನು ರಾಜ್ಯ ಪ್ರವಾಸೋದ್ಯಮ ಇಲಾಖೆ ಗಮನಿಸಬೇಕು. ಶಾಸಕರು ಈ ಬಗ್ಗೆ ಸಂಬಂಧಪಟ್ಟವರಿಗೆ ಸೂಚನೆ ನೀಡಿದರೆ ಲಾಂಚ್ ತುಕ್ಕು ಹಿಡಿದು ಎಳ್ಳಷ್ಟೂ ಉಪಯೋಗ ಬರದೆ ಇರುವುದನ್ನು ತಪ್ಪಿಸಿ, ಸದ್ಬಳಕೆ ಮಾಡಿಕೊಳ್ಳಬಹುದು ಎನ್ನುವುದು ಹಿನ್ನೀರಿನ ಜನರ ಅಭಿಪ್ರಾಯ. ಇನ್ನೆರಡು ಮೂರು ತಿಂಗಳಿನಲ್ಲಿ ಹಸಿರುಮಕ್ಕಿ ಲಾಂಚ್ ಸಹ ಸೇವೆಯಿಂದ ನಿವೃತ್ತವಾಗಲಿದ್ದು, ಸೇತುವೆ ನಿರ್ಮಾಣ ಕಾರ್ಯ ನಡೆಯುತ್ತಿದೆ.

ಅನೈತಿಕ ಮಾರ್ಗದಿಂದ ಕೈ ಅಡ್ಡಮತದಾನ: ಸಿ.ಟಿ.ರವಿ

• **ಬೆಂಗಳೂರು:** ವಿಧಾನಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್‌ನವರು ಅನೈತಿಕ ಮಾರ್ಗದಿಂದ ಅಡ್ಡಮತದಾನ ಮಾಡಿಸಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಆರೋಪಿಸಿದ್ದಾರೆ.



ವಿಧಾನಪರಿಷತ್ ಚುನಾವಣೆಯಲ್ಲಿ ನಡೆದ ಅಡ್ಡಮತದಾನದ ಕುರಿತು ಆಂತರಿಕ ತನಿಖಾ ವರದಿಯನ್ನು ಶನಿವಾರ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ಸಲ್ಲಿಸಿದ ನಂತರ ಮಾಧ್ಯಮಗಳೊಂದಿಗೆ ಮಾತನಾಡಿ, ಅಡ್ಡಮತದಾನ ಆಗಿರುವುದು ಕಾಂಗ್ರೆಸ್ ಮೇಲಿನ ಅಭಿಮಾನಕ್ಕೆ ಅಂತ ಕಾಂಗ್ರೆಸ್ ನಾಯಕರು ಭಾವಿಸಬಾರದು. ಬೇರೆ ರಾಜ್ಯಗಳಲಿ ಅಡ್ಡಮತದಾನ ಆದಾಗ ಕಾಂಗ್ರೆಸ್‌ನವರು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ವಿರುದ್ಧ ಅಂತ ಉಪದೇಶ ಮಾಡ್ತಾರೆ. ಆದರೆ ಈಗ ಅಡ್ಡಮತದಾನದ ಮೂಲಕ ಪ್ರಜಾಪ್ರಭುತ್ವವನ್ನು ಅಪಮೌಲ್ಯಗೊಳಿಸಿದ್ದಾರೆ. ಆದ್ದರಿಂದ ಇನ್ನು ಮುಂದೆ ಅವರಿಗೆ ಅಡ್ಡ ಮತದಾನ ಆದರೆ ಪ್ರಶ್ನಿಸುವ ಯಾವುದೇ ನೈತಿಕತೆ ಇಲ್ಲ ಎಂದರು.

ಚುನಾವಣೆಯಲ್ಲಿ ಯಾವ ಎಚ್ಚರಿಕೆ ವಹಿಸಬೇಕಿತ್ತು ಯಾವ ಎಚ್ಚರಿಕೆ ವಹಿಸಿಲ್ಲ ಎಂಬುದು ವರದಿಯಲ್ಲಿ ಇದೆ. ಇದು ಆಂತರಿಕ ತನಿಖೆ ಆಗಿರುವುದರಿಂದ ಹೆಚ್ಚಿನ ಮಾಹಿತಿ ನೀಡಲಾಗದು ಎಂದು ಹೇಳಿದರು. ಅಡ್ಡಮತದಾನದ ಕುರಿತು ಆಂತರಿಕ ತನಿಖೆ ಮಾಡಲು ನನ್ನೊಂದಿಗೆ ಮಾಜಿ ಸಚಿವ ಎನ್. ಮಹೇಶ, ಶಾಸಕ ಮಹೇಶ್ ಟೆಂಗಿನಕಾಯಿ ಅವರು ಸೇರಿದ ಮೂರು ಜನರ ಸಮಿತಿ ಮಾಡಿದ್ದರು. ಆದಷ್ಟು ಬೇಗ ಆಂತರಿಕವಾಗಿ ತನಿಖೆ ನಡೆ ವರದಿ ನೀಡಿ ಎಂದು ರಾಜ್ಯಾಧ್ಯಕ್ಷರು ನಿರ್ದೇಶನ ನೀಡಿದ್ದರು. ಅಡ್ಡಮತದಾನ ಮಾಡಿದವರ ಬಗ್ಗೆ ಮಾಧ್ಯಮ ಮತ್ತು ಸಾರ್ವಜನಿಕ ವಲಯದಲ್ಲಿ ಅನುಮಾನ ಕಂಡು ಬಂದವರ ಪಟ್ಟಿ ಮಾಡಿ ಅವರೊಂದಿಗೆ ಚರ್ಚೆ ಮಾಡಿದ್ದೇವೆ. ಅಭ್ಯರ್ಥಿಗಳ ಜತೆಗೆ ಮಾತುಕತೆ ನಡೆಸಿ, ಅಭಿಪ್ರಾಯ ಸಂಗ್ರಹಿಸಿದ್ದೇವೆ ಎಂದರು.



ರಾಷ್ಟ್ರೀಯ ಸ್ವಯಂಸೇವಕ ಸಂಘ (ಪುಟ್ಟೇನಹಳ್ಳಿ ನಗರ, ಜಯನಗರ ಭಾಗ) ವತಿಯಿಂದ ಆರ್‌ಬಿಐ ಬಡಾವಣೆ ಆಟದ ಮೈದಾನದಲ್ಲಿ ಆಯೋಜಿಸಿದ್ದ ಹಿಂದು ಸಾಮ್ರಾಜ್ಯ ದಿನೋತ್ಸವ ಕಾರ್ಯಕ್ರಮದಲ್ಲಿ ಆರ್‌ಎಸ್‌ಎಸ್‌ನ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಅವರು ಬೌದ್ಧಿಕ್ ನೀಡಿದರು. ಈ ವೇಳೆ ಕರ್ನಾಟಕ ದಕ್ಷಿಣ ಪ್ರಾಂತ ಸಂಘಚಾಲಕ ಜಿ.ಎಸ್.ಉಮಾಪತಿ, ಜಯನಗರ ಭಾಗ ಸಂಘಚಾಲಕ ನರಹರಿ ರಾವ್ ಇದ್ದರು.

ಬಸ್ ಪ್ರಯಾಣ ದರ ಏರಿಕೆಗೆ ಚಿಂತನೆ: ಬೈರತಿ ಸುರೇಶ್

• **ಬೆಂಗಳೂರು:** ದಿನದಿಂದ ದಿನಕ್ಕೆ ಪೆಟ್ರೋಲ್, ಡೀಸೆಲ್ ದರಗಳು ಹೆಚ್ಚಾಗುತ್ತಿವೆ. ಎಲ್ಲಾ ಸಾರಿಗೆ ನಿಗಮಗಳಿಗೆ ಸುಮಾರು 5 ಸಾವಿರ ಕೋಟಿ ರೂ. ನಷ್ಟವಾಗುತ್ತಿದೆ. ಈ ಹಿನ್ನೆಲೆಯಲ್ಲಿ



ಬಸ್ ಪ್ರಯಾಣ ದರ ಏರಿಕೆ ಮಾಡುವ ಬಗ್ಗೆ ಚಿಂತನೆ ನಡೆಸಲಾಗಿದೆ ಎಂದು ಸಾರಿಗೆ ಸಚಿವ ಬೈರತಿ ಸುರೇಶ್ ತಿಳಿಸಿದರು.

ಹೆಬ್ಬಾಳದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಬಸ್ ಪ್ರಯಾಣ ದರ ಏರಿಕೆ ಮಾಡುವ ಬಗ್ಗೆ ಸರ್ಕಾರಕ್ಕೆ ಇಲಾಖೆಯಿಂದ ಇದುವರೆಗೆ ಯಾವುದೇ ಪ್ರಸ್ತಾವನೆ ಸಲ್ಲಿಸಿಲ್ಲ, ಮುಂದಿನ ಸಂಪುಟ ಸಭೆಗಳಲ್ಲಿ ಈ ಬಗ್ಗೆ ಪ್ರಸ್ತಾವನೆ ಮಂಡಿಸಲಾಗುತ್ತದೆ ಎಂದರು. ಸಾರಿಗೆ ದರ ಏರಿಕೆ ಬಗ್ಗೆ ಮುಖ್ಯಮಂತ್ರಿಗಳು ಮತ್ತು ಸರ್ಕಾರ ಅಂತಿಮ ನಿರ್ಧಾರ ತೆಗೆದುಕೊಳ್ಳಲಿದೆ. ಆದಾಗ್ಯೂ, ಜನ ಸಾಮಾನ್ಯರಿಗೆ ಹೊರೆ ಆಗದ ರೀತಿಯಲ್ಲಿ ಪ್ರಯಾಣ ದರ ಹೆಚ್ಚಳ ಮಾಡುವ ಚರ್ಚೆಗಳು ನಡೆದಿವೆ ಎಂದರು.

ಸುರಂಗ ರಸ್ತೆ ನಿರ್ಮಾಣಕ್ಕೆ ಭೂಮಿಪೂಜೆ

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಹೆಬ್ಬಾಳ ಜಂಕ್ಷನ್‌ನಿಂದ ಯುಎಎಸ್ ಕ್ವಾಟರ್ಸ್ ವರೆಗಿನ ಸುರಂಗ ರಸ್ತೆ ನಿರ್ಮಾಣಕ್ಕೆ ಸಿಎಂ ಡಿ.ಕೆ ಶಿವಕುಮಾರ್ ಭಾನುವಾರ ಬೆಳಗ್ಗೆ 9.30 ಕ್ಕೆ ಹೆಬ್ಬಾಳ ಜಂಕ್ಷನ್‌ನಲ್ಲಿ ಭೂಮಿಪೂಜೆ ನೆರವೇರಿಸಲಿದ್ದಾರೆ. ಮೇಖ್ರಿ ವೃತ್ತದಿಂದ ಹೆಬ್ಬಾಳ ಜಂಕ್ಷನ್ ವರೆಗೆ ಸಾಕಷ್ಟು ಸಂಚಾರ ದಟ್ಟಣೆ ಉಂಟಾಗುತ್ತಿತ್ತು. ಇದರಿಂದ ವಿಮಾನ ನಿಲ್ದಾಣ ಸೇರಿದಂತೆ ಇತರೆಡೆಗೆ ಹೋಗುವುದು ಕಷ್ಟವಾಗುತ್ತಿತ್ತು. ಈ ಸಮಸ್ಯೆ ನಿವಾರಣೆಗೆ ರಾಜ್ಯ ಕಾಂಗ್ರೆಸ್ ಸರ್ಕಾರ ಸುರಂಗ ರಸ್ತೆ ನಿರ್ಮಾಣಕ್ಕೆ ನಿರ್ಧರಿಸಿದೆ ಎಂದರು.

ಕಿರುಸುದ್ದಿ

ಜಿಲ್ಲಾ ನ್ಯಾ, ತಹಸೀಲ್ದಾರ್ ಕಚೇರಿಗೆ ಬಾಂಬ್ ಬೆದರಿಕೆ

• **ಬೀದರ್:** ನಗರದ ಜಿಲ್ಲಾ ನ್ಯಾಯಾಲಯ ಹಾಗೂ ತಹಸೀಲ್ದಾರ್ ಕಚೇರಿಗೆ ಶನಿವಾರ ಬಾಂಬ್ ಬೆದರಿಕೆಯ ಇಮೇಲ್ ಬಂದಿದೆ. ಜಿಲ್ಲಾ ಸತ್ರ ನ್ಯಾಯಾಲಯದ ಅಧಿಕೃತ ಇ-ಮೇಲ್ ವಿಳಾಸಕ್ಕೆ ಬಾಂಬ್ ಬೆದರಿಕೆ ಮೇಲ್ ಬಂದಿರುವ ವಿಷಯ ಗೊತ್ತಾಗುತ್ತಿದ್ದಂತೆ ನ್ಯಾಯಾಧೀಶರು, ವಕೀಲರು ಹಾಗೂ ಕಕ್ಷಿದಾರರು ಕಟ್ಟಡದಿಂದ ಹೊರಭಾಗಕ್ಕೆ ಬಂದರು. ತಕ್ಷಣವೇ ಮಾರ್ಕೆಟ್ ಠಾಣೆ ಪೊಲೀಸರಿಗೆ ತಿಳಿಸಲಾಯಿತು. ಶ್ವಾನ ದಳ ಹಾಗೂ ಬಾಂಬ್ ನಿಷ್ಕ್ರಿಯ ದಳದೊಂದಿಗೆ ಸ್ಥಳಕ್ಕೆ ಬಂದು ಪೊಲೀಸರು ಪರಿಶೀಲನೆ ನಡೆಸಿದರು. ನ್ಯಾಯಾಲಯಕ್ಕೆ ಹೊಂದಿಕೊಂಡಿರುವ ತಹಸೀಲ್ದಾರ್ ಕಚೇರಿಗೂ ಇಂಥದ್ದೇ ಮೇಲ್ ಬಂದಿತು. ಅಲ್ಲೂ ಕೂಡ ಪರಿಶೀಲಿಸಿದಾಗ, ಇದೊಂದು ಸುಳ್ಳು ಬೆದರಿಕೆಯ ಇಮೇಲ್ ಎಂಬುದು ದೃಢಪಟ್ಟಿತು. ಕೆಲ ತಿಂಗಳ ಹಿಂದೆ ನಗರದ ಗುರುದ್ವಾರಕ್ಕೂ ಇದೇ ರೀತಿಯ ಮೇಲ್ ಬಂದಿತ್ತು.

ಭಾ.ಮಾ.ಹರೀಶ್‌ರವರ ಪುತ್ರ ಚಾರಣದ ವೇಳೆ ಸಾವು

• **ನಗರ(ಹೊಸನಗರ):** ರಾಜ್ಯದ ಪ್ರಸಿದ್ಧ ಪ್ರವಾಸಿ ತಾಣವಾದ ಹೊಸನಗರ ತಾಲೂಕಿನ ಕೊಡಚಾದ್ರಿ ಬೆಟ್ಟದಲ್ಲಿ ಬೆಂಗಳೂರಿನಿಂದ ಚಾರಣಕ್ಕಾಗಿ ಬಂದಿದ್ದ ತಂಡದಲ್ಲಿದ್ದ ರಾಜ್ಯ ಚಲನಚಿತ್ರ ವಾಣಿಜ್ಯ ಮಂಡಳಿಯ ಮಾಜಿ ಅಧ್ಯಕ್ಷರು ಮತ್ತು ಸಿನಿಮಾ ನಿರ್ಮಾಪಕರಾದ ಭಾ.ಮಾ.ಹರೀಶ್‌ರವರ ಪುತ್ರ ಉಲ್ಲಾಸ್(28) ತೀವ್ರ ಹೃದಯಾಘಾತದಿಂದ ಸಾವನ್ನಪ್ಪಿರುವ ಹೃದಯ ವಿದ್ರಾವಕ ಘಟನೆ ಶನಿವಾರ ನಡೆದಿದೆ. ಬೆಳಗ್ಗೆ ಚಾರಣ ಹೊರಟಿದ್ದ 13 ಯುವಕರ ತಂಡ ಕೊಡಚಾದ್ರಿಯ ತುತ್ತ ತುದಿ ಸರ್ವಜ್ಞ ಪೀಠಕ್ಕೆ ತೆರಳಿ ವಾಪಾಸಾಗುವ ಮಾರ್ಗದ ಮಧ್ಯೆ ಉಲ್ಲಾಸ ಹೃದಯಾಘಾತದಿಂದ ಕುಸಿದಿದ್ದಾರೆ. ತಕ್ಷಣ ಉಲ್ಲಾಸ ಅವರನ್ನು ಬೆಟ್ಟದ ನಡುವಿನ ಕಿರಿದಾದ ಕಾಲು ಮಾರ್ಗದಲ್ಲಿ ಕೊಡಚಾದ್ರಿಯ ಪರ್ವತೇಶ್ವರ ದೇಗುಲದವರೆಗೂ ಹೊತ್ತು ತರಲಾಯಿತು. ನಂತರ ದುರ್ಗಮ ಮಾರ್ಗದಲ್ಲಿ ಜೀಪ್ ಮೂಲಕ ಕಟ್ಟಿನಹೊಳೆಯವರೆಗೆ ತಂದು ಆಂಬುಲೆನ್ಸ್ ಮೂಲಕ ನಗರ ಸಂಯುಕ್ತ ಆಸ್ಪತ್ರೆಗೆ ಚಿಕಿತ್ಸೆಗೆ ತರಲಾಗಿತ್ತು. ಈ ಮಧ್ಯೆ ಪ್ರಥಮ ಚಿಕಿತ್ಸೆಗೆ ತೆರಳಲು ಸುಮಾರು 2 ತಾಸುಗಳಾಗಿದ್ದು, ಹೊಸನಗರ ತಾಲೂಕು ಆಸ್ಪತ್ರೆಗೆ ತೆರಳುವ ವೇಳೆಗೆ ಉಲ್ಲಾಸ್ ಸಾವನ್ನಪ್ಪಿದ್ದರು. ಮೃತ ಯುವಕನ ಮರಣೋತ್ತರ ಪರೀಕ್ಷೆಯು ಹೊಸನಗರ ತಾಲೂಕು ಸರ್ಕಾರಿ ಆಸ್ಪತ್ರೆಯಲ್ಲಿ ನಡೆದಿದೆ. ಈ ಕುರಿತು ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಪೊಲೀಸರು ವಿಚಾರಣೆ ಕೈಗೊಂಡಿದ್ದಾರೆ.

ಅಪಘಾತದಲ್ಲಿ ಕುಟುಂಬದ ಐವರು ಸೇರಿ 6 ಮಂದಿ ಸಾವು

• **ಕೊಪ್ಪಳ:** ಜಿಲ್ಲೆಯ ಕುಕನೂರು ತಾಲೂಕಿನ ಭಾನಾಪುರ ಸಮೀಪದ ರಾಷ್ಟ್ರೀಯ ಹೆದ್ದಾರಿ 63ರಲ್ಲಿ ಶನಿವಾರ ಬೆಳಗಿನ ಜಾವ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಐವರು ಮೃತಪಟ್ಟಿದ್ದಾರೆ. ಹಾವೇರಿ ಜಿಲ್ಲೆಯ ರಟ್ಟೀಹಳ್ಳಿ ತಾಲೂಕಿನ ಕಬ್ಬಾರ್ ಗ್ರಾಮದ ನಿವಾಸಿಗಳು ಓಮಿನಿ ವಾಹನದಲ್ಲಿ ಮಂತ್ರಾಲಯಕ್ಕೆ ತೆರಳುತ್ತಿದ್ದ ವೇಳೆ, ಪಕ್ಕದ ರಸ್ತೆಯಲ್ಲಿ ಸಂಚರಿಸುತ್ತಿದ್ದ ಅಶೋಕ್ ಲೇಲ್ಯಾಂಡ್ ಲಾರಿ ನಿಯಂತ್ರಣ ತಪ್ಪಿ ಡಿವೈಡರ್ ದಾಟಿ ಎದುರು ಬರುತ್ತಿದ್ದ ಓಮಿನಿ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ಈ ದುರಂತ ಸಂಭವಿಸಿದೆ. ಅಪಘಾತದಲ್ಲಿ ಪ್ರೇಮಾ (ಕಂಚವ್ವ) ಬಾಳೆಕಾಯಿ (35), ಅಮ್ಮಣಾ ಕೊಟ್ರಾಳ್ (25), ಅವರ ಪುತ್ರ ಪ್ರಣವ್ (10), ರಮೇಶ್ ಬಣ್ಣದ (45) ಹಾಗೂ ಪ್ರವೀಣ್ ಬಾಳೆಕಾಯಿ (23) ಚೆನ್ನಯ್ಯ (30) ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅಪಘಾತದಲ್ಲಿ ಉಳಿದ ಗಾಯಗೊಂಡ 5 ಮಂದಿ ಕೊಪ್ಪಳ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ನಾಡಪ್ರಭುವಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಮನ | 28 ವಿಧಾನಸಭಾ ಕ್ಷೇತ್ರಗಳಲ್ಲಿ 28 ವರ್ಷ ಕಾರ್ಯಕ್ರಮ

ದೂರದೃಷ್ಟಿಯ ನಾಡಪ್ರಭು ಕೆಂಪೇಗೌಡ

• **ದೇವನಹಳ್ಳಿ:** ನಾಡಪ್ರಭು ಕೆಂಪೇಗೌಡ ಜಯಂತಿ ಕಾರ್ಯಕ್ರಮವನ್ನು ಕೇವಲ ವಿಧಾನಸೌಧ ಹೊರತಾಗಿ, ಬೆಂಗಳೂರಿನ 28 ವಿಧಾನಸಭಾ ಕ್ಷೇತ್ರಗಳಲ್ಲಿ ಮುಂದಿನ 28 ವರ್ಷಗಳ ಕಾಲ ಒಂದೊಂದು ಕ್ಷೇತ್ರದಲ್ಲಿ ರಾಜ್ಯಮಟ್ಟದ ಕೆಂಪೇಗೌಡ ಜಯಂತಿ ಆಚರಣೆ ಮಾಡಲು ತೀರ್ಮಾನಿಸಲಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ತಿಳಿಸಿದರು.

ಬೆಂಗಳೂರು ನಿರ್ಮಾತೃ, ಸರ್ವ ಜನಾಂಗದ ನಾಯಕ, ಬೆಂದಕಾಳೂರು ಕಟ್ಟಿದ ದೂರದೃಷ್ಟಿಯ ನಾಯಕ ಕೆಂಪೇಗೌಡರ 517ನೇ ಜಯಂತಿ ಅಂಗವಾಗಿ ದೇವನಹಳ್ಳಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಇರುವ ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ ಕಂಚಿನ ಬೃಹತ್ ಪ್ರತಿಮೆಗೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ 517ನೇ ಕೆಂಪೇಗೌಡ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ನಂತರ ಪ್ರತಿಮೆಯ ಪಕ್ಕದಲ್ಲಿ ನಿರ್ಮಾಣ ಮಾಡಿರುವ ಥೀಮ್ ಪಾರ್ಕ್ ಅನ್ನು ವೀಕ್ಷಿಸಿ ಮುಖ್ಯಮಂತ್ರಿಗಳು ಮಾತನಾಡಿ, ಇಂದು ಯಶವಂತಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಈ ಕಾರ್ಯಕ್ರಮ ಮಾಡುತ್ತಿದ್ದು, ಮುಂದಿನ ವರ್ಷ ಶಾಸಕರೊಂದಿಗೆ ಚರ್ಚಿಸಿ ಬ್ಯಾಟ ರಾಯನಪುರ, ಯಲಹಂಕ, ಕೆ.ಆರ್.ಪುರ ಅಥವಾ ಬೇರೆ ಕ್ಷೇತ್ರಗಳಲ್ಲಿ ಕೆಂಪೇಗೌಡರ ಜಯಂತಿಯ ರಾಜ್ಯಮಟ್ಟದ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ಆಚರಿಸಲಾಗುವುದು.

ಮುಂದಿನ ಸಾವಿರಾರು ವರ್ಷಗಳ ದೂರದೃಷ್ಟಿ ಇಟ್ಟುಕೊಂಡು ಕೋಟ್ಯಂತರ ಉದ್ಯೋಗ ಸೃಷ್ಟಿ ಹಾಗೂ ಜನರಿಗೆ ಜೀವನ ಕಟ್ಟಿಕೊಳ್ಳುವಂತೆ ಅಂದಿನ ಬೆಂದಕಾಳೂರು(ಬೆಂಗಳೂರು) ಅನ್ನು ವ್ಯವಸ್ಥಿತವಾಗಿ ನಿರ್ಮಿಸಿದ ದೂರದೃಷ್ಟಿಯ ಮಹಾಚೇತನ ಕೆಂಪೇಗೌಡರು ಎಂದು ಸಿಎಂ ನಾಡಪ್ರಭು ಕೆಂಪೇಗೌಡರನ್ನು ಬಣ್ಣಿಸಿದರು. ಕೆಂಪೇಗೌಡರ ಚಿಂತನೆ, ಆಚಾರ, ವಿಚಾರ ಎಲ್ಲವನ್ನು ಗಮನದಲ್ಲಿಟ್ಟುಕೊಂಡು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮ್ಯಾರಥಾನ್ ಓಟ, ಬೆಂಗಳೂರಿನಲ್ಲಿ 15 ಲಕ್ಷ ಸಸಿ ನೆಡುವ ಕಾರ್ಯಕ್ರಮ, ಮಾಗಡಿಯಲ್ಲಿ 100 ಕೋಟಿ ರೂ. ವೆಚ್ಚದಲ್ಲಿ ಕೆಂಪೇಗೌಡರ ಕೋಟೆ ಸಮಗ್ರ ಅಭಿವೃದ್ಧಿ ಕಾರ್ಯ ಹಮ್ಮಿಕೊಂಡಿದ್ದೇವೆ, ಮಾಗಡಿಯಲ್ಲಿರುವ ಕೆಂಪೇಗೌಡರ ಸಮಾಧಿ ಬಳಿ 10 ಎಕರೆ ಜಮೀನು ಸ್ವಾಧೀನ ಪ್ರಕ್ರಿಯೆ ಆರಂಭವಾಗಿದ್ದು, ಈಗಾಗಲೇ ಐದೂವರೆ ಎಕರೆ ಖರೀದಿ ಮಾಡಲಾಗಿದೆ" ಎಂದು ಮಾಹಿತಿ ನೀಡಿದರು.



> ರಾಜ್ಯಾದ್ಯಂತ ಎಲ್ಲಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಹಾಗೂ ವಾರ್ಡ್ ಮಟ್ಟದಲ್ಲಿ ಈ ಕಾರ್ಯಕ್ರಮ ಆಚರಣೆಗೆ ಜಿಬಿಎ ವತಿಯಿಂದ ಆದೇಶ ಮಾಡಲಾಗಿದೆ. ಕೆಂಪೇಗೌಡರ ಆಚಾರ ವಿಚಾರ ಅಳವಡಿಸಿಕೊಂಡು ಬೆಂಗಳೂರಿನ ಅಭಿವೃದ್ಧಿಗೆ ಯೋಜನೆ ರೂಪಿಸಲಾಗುವುದು. ಬೆಂಗಳೂರಿಗೆ ಹೊಸ ರೂಪ ನೀಡಲು ಕ್ರಮ ಕೈಗೊಳ್ಳಲಾಗುವುದು.
> ■ ಡಿ.ಕೆ.ಶಿವಕುಮಾರ್, ಸಿಎಂ

ಕೆಂಪೇಗೌಡರು ಎಲ್ಲಾ ವರ್ಗದ ಆಸ್ತಿ

ಬೆಂಗಳೂರಿನಲ್ಲಿ 1.40 ಕೋಟಿ ಜನಸಂಖ್ಯೆ ಇದ್ದು, 1.30 ಕೋಟಿ ವಾಹನಗಳ ಸಂಖ್ಯೆ ಇವೆ. ನಾವು ಎಷ್ಟೇ ಮೆಟ್ರೋ, ಸಾರ್ವಜನಿಕ ಸಾರಿಗೆ ತಂದರೂ ಒಬ್ಬರು ಒಂದೊಂದು ವಾಹನ ಇಟ್ಟುಕೊಂಡಿದ್ದಾರೆ. ಮುಂದಿನ ಒಂದು ವರ್ಷದಲ್ಲಿ ವಿಮಾನ ನಿಲ್ದಾಣಕ್ಕೆ ಮೆಟ್ರೋ ಸಂಪರ್ಕ ಸಾಧಿಸಲು ಮುಂದಾಗಿದ್ದೇವೆ, ನಮ್ಮ ಮುಂದಿನ 2 ವರ್ಷಗಳ ಅವಧಿಯಲ್ಲಿ 500 ಕಿ.ಮೀ ಉದ್ದದ ಮೆಟ್ರೋ ವಿಸ್ತರಣೆಗೆ ಆಲೋಚನೆ ಮಾಡಿದ್ದು, ಕೃಷ್ಣಭೈರೇಗೌಡರು ಈ ಬಗ್ಗೆ ಚಿಂತನೆ ಮಾಡಲಿದ್ದಾರೆ. ಈ ಕಾರ್ಯಕ್ರಮ ಒಂದು ಜಾತಿಗೆ ಸೀಮಿತವಲ್ಲ, ಇದು ಕೆಂಪೇಗೌಡರ ದೂರದೃಷ್ಟಿ, ಆಚಾರ, ವಿಚಾರಗಳು, ನೀತಿಯನ್ನು ಬಿಂಬಿಸುವ ಮಹತ್ವದ ಕಾರ್ಯಕ್ರಮವಾಗಿದೆ. ಕೆಂಪೇಗೌಡರು ರಾಜ್ಯದ ಎಲ್ಲಾ ವರ್ಗದ ಆಸ್ತಿಯಾಗಿದ್ದಾರೆ ಎಂದು ಸಿಎಂ ತಿಳಿಸಿದರು.

ಪ್ರಾಧಿಕಾರದಿಂದ ಒಪ್ಪಿಗೆ: 108 ಅಡಿಯ ಈ ಕಂಚಿನ ಪ್ರತಿಮೆ ಬಳಿ ಕಳೆದ ವರ್ಷಕ್ಕಿಂತ ಈ ವರ್ಷ ಹೆಚ್ಚು ಹೂವು ರೂಪಿಸಲಾಗಿದೆ. ಇಲ್ಲಿನ ಕಾಮಗಾರಿ ಸಂಪೂರ್ಣ ಮುಗಿದ ಬಳಿಕ ಇದನ್ನು ಉದ್ಘಾಟನೆ ಮಾಡುತ್ತೇವೆ, ಈ 'ಕೆಂಪೇಗೌಡರ ಥೀಮ್ ಪಾರ್ಕ್' ಅನ್ನು ವಿಮಾನ ನಿಲ್ದಾಣ ಪ್ರಾಧಿಕಾರ ನಿರ್ವಹಣೆ ಮಾಡಲು ಸೂಚಿಸಿದ್ದೇನೆ. ಇದಕ್ಕೆ ಪ್ರಾಧಿಕಾರವೂ ಒಪ್ಪಿದ್ದು, ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಕಾರ್ಯಕ್ರಮದಲ್ಲಿ ಆದಿಚುಂಚನಗಿರಿಯ ನಿರ್ಮಲಾನಂದನಾಥ ಸ್ವಾಮೀಜಿ, ಸಿರಾ ತಾಲೂಕಿನ ಸ್ಪಟಿಕಪುರಿಯ ನಂಜಾವಧೂತ ಸ್ವಾಮೀಜಿ ಹಾಗೂ ವಿಶ್ವ ಒಕ್ಕಲಿಗರ ಸಂಸ್ಥಾನದ ನಿಶ್ಚಲಾನಂದನಾಥ ಸ್ವಾಮೀಜಿ ದಿವ್ಯ ಸಾನ್ನಿಧ್ಯವನ್ನು ವಹಿಸಿದ್ದರು. ಕಾರ್ಯಕ್ರಮದ ವೇದಿಕೆಯಲ್ಲಿ ಸಚಿವರಾದ ಕೆ.ಎಚ್.ಮುನಿಯಪ್ಪ, ಕೃಷ್ಣ ಭೈರೇಗೌಡ, 5ನೇ ಹಣಕಾಸು ಆಯೋಗದ ಅಧ್ಯಕ್ಷ ಸಿ.ನಾರಾಯಣಸ್ವಾಮಿ, ಶಾಸಕರಾದ ಪ್ರದೀಪ್ ಈಶ್ವರ, ರಿಜ್ವಾನ್ ಅರ್ಷದ್, ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ ರಾವ್, ನಗರ ಪೊಲೀಸ್ ಆಯುಕ್ತ ಸೀಮಂತ್‌ಕುಮಾರ್ ಸಿಂಗ್ ಇದ್ದರು.

15 ಲಕ್ಷ ಸಸಿ ನೆಟ್ಟು ದಾಖಲೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಐದು ನಗರ ಪಾಲಿಕೆ, ವಿವಿಧ ಸರ್ಕಾರಿ ಇಲಾಖೆ ಹಾಗೂ ಸಾರ್ವಜನಿಕ ಸಂಘ-ಸಂಸ್ಥೆಗಳ ಸಹಭಾಗಿತ್ವದಲ್ಲಿ ಬೆಂಗಳೂರು ನಗರ ಪುನಶ್ಚೇತನ ಮಿಷನ್ 2026-30ರ ಅಂಗವಾಗಿ, ನಾಡಪ್ರಭು ಕೆಂಪೇಗೌಡರ ದಿನಾಚರಣೆಯ ಪ್ರಯುಕ್ತ 2026 ಶನಿವಾರ ನಗರದ ವಿವಿಧ ಭಾಗಗಳಲ್ಲಿ 12 ಗಂಟೆಗಳಲ್ಲಿ 15 ಲಕ್ಷ ಸ್ಥಳೀಯ ತಳಿ ಸಸಿಗಳನ್ನು ಸುಮಾರು 65 ಸಾವಿರಕ್ಕೂ ಹೆಚ್ಚು ಸ್ವಯಂ ಸೇವಕರು, ಎನ್‌ಜಿಒಗಳು ಸಸಿ ನೆಡುವ ಮೂಲಕ ಗಿನ್ನಿಸ್ ದಾಖಲೆ ಬರೆದಿದ್ದಾರೆ.



10 ಕಿಮಿ ಮ್ಯಾರಾಥಾನ್

ಈ ಕಾರ್ಯಕ್ರಮದ ಅಂಗವಾಗಿ ಬಿಡಿಎ ವತಿಯಿಂದ ಹಮ್ಮಿಕೊಳ್ಳಲಾದ ಕೆಂಪೇಗೌಡ ರನ್-2026 ಸಹ ಯಶಸ್ವಿಯಾಗಿ ನಡೆಯಿತು. 5 ಕಿ.ಮೀ. ಮತ್ತು 10 ಕಿ.ಮೀ. ಓಟಗಳಲ್ಲಿ ಸಾವಿರಾರು ಓಟಗಾರರು ಉತ್ಸಾಹದಿಂದ ಭಾಗವಹಿಸಿದರು. ಓಟವು ನಗರದ ಎಸ್.ಎಂ.ಕೃಷ್ಣ ರಸ್ತೆ, ಚಲ್ಲಘಟ್ಟ ಮೆಟ್ರೊ ನಿಲ್ದಾಣದಿಂದ ಆರಂಭಗೊಂಡು, ಅದೇ ಸ್ಥಳದಲ್ಲಿ ಸಮಾಪ್ತಿಗೊಂಡಿತು. ಈ ಬೃಹತ್ ಸಸಿ ನೆಡುವ ಅಭಿಯಾನದಲ್ಲಿ ಸಾವಿರಾರು ನಾಗರಿಕರು, ವಿದ್ಯಾರ್ಥಿಗಳು, ಸರ್ಕಾರಿ ಅಧಿಕಾರಿಗಳು, ನಿವಾಸಿಗಳ ಕಲ್ಯಾಣ ಸಂಘಗಳು, ಸ್ವಯಂಸೇವಾ ಸಂಸ್ಥೆಗಳು, ಕಾರ್ಪೊರೇಟ್ ಸ್ವಯಂಸೇವಕರು ಹಾಗೂ ಪರಿಸರ ಸಂಘಟನೆಗಳು ಉತ್ಸಾಹದಿಂದ ಪಾಲ್ಗೊಂಡು ಹಸಿರು ಹಾಗೂ ಸುಸ್ಥಿರ ಬೆಂಗಳೂರಿನ ನಿರ್ಮಾಣಕ್ಕೆ ಕೈಜೋಡಿಸಿದರು.

ಪ್ರಮುಖ ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ

ಬತ್ತುತ್ತಿರುವ ಜೀವನದಿ ಕಾವೇರಿ

• **ಮಡಿಕೇರಿ:** ಕೊಡಗು ಜಿಲ್ಲೆಯಲ್ಲಿ ಮಳೆಯ ಕೊರತೆಯಿಂದಾಗಿ ಜೀವನದಿ ಕಾವೇರಿ ನದಿಯಲ್ಲಿ ನೀರಿನ ಹರಿವು ಸಂಪೂರ್ಣ ಕಡಿಮೆಯಾಗಿದ್ದು, ಭವಿಷ್ಯದಲ್ಲಿ ಬೆಂಗಳೂರು, ಮೈಸೂರು ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗುವ ಆತಂಕ ತಲೆದೋರಿದೆ.

ಜಿಲ್ಲೆಗೆ ಮುಂಗಾರು ಕಾಲಿರಿಸಿದ್ದರೂ, ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗದ ಪರಿಣಾಮ ಕಾವೇರಿಯಲ್ಲಿ ಹರಿವು ಗಣನೀಯವಾಗಿ ಕುಸಿದಿದೆ ಸಮರ್ಪಕ ಮಳೆಗಾಲದ ಆರಂಭದಲ್ಲೇ ತುಂಬಿ ಹರಿಯಬೇಕಿದ್ದ ನದಿ ಈಗ ಕಲ್ಲುಗಳ ನಡುವೆ ಸಣ್ಣ ಹರಿವಿಗೆ ಸೀಮಿತವಾಗಿದೆ. ಕೊಡಗು-ಮೈಸೂರು ಗಡಿಯ ಕೊಪ್ಪ ಸೇತುವೆ ಬಳಿ ನದಿಯ ನೀರಿನ ಮಟ್ಟ ತೀವ್ರವಾಗಿ ಕುಸಿ ದಿದೆ. ಈ ಸಮಯದಲ್ಲಿ ಸುಮಾರು 10 ರಿಂದ 15 ಅಡಿ ನೀರು ಹರಿಯುವ ಪ್ರದೇಶದಲ್ಲಿ ಈಗ ಕೇವಲ ಅರ್ಧದಿಂದ ಒಂದು ಅಡಿ ಮಟ್ಟದಲ್ಲಿ ಮಾತ್ರ ನೀರು ಕಾಣಸಿಗುತ್ತಿದೆ. ಜಲಮೂಲದಲ್ಲಿನ ನೀರಿನ ಮಟ್ಟ ಕುಸಿತಕ್ಕೆ ಕೈಗನ್ನಡಿ ಹಿಡಿಯುವಂತೆ ನದಿಯ ಪರಿಸ್ಥಿತಿ ಗಂಭೀರವೆನಿಸಿದೆ.

ಜಿಲ್ಲೆಯಲ್ಲಿ ಈಗಾಗಲೇ ಶೇ. 70ರಷ್ಟು ಮಳೆ ಕೊರತೆ ದಾಖಲಾಗಿರುವುದು ಜಲಮೂಲಗಳ ಮೇಲೆ ನೇರ



ಪರಿಣಾಮ ಬೀರಿದೆ. ವಿಶೇಷವಾಗಿ ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆಯ ಅಭಾವದಿಂದ ನದಿ ಹರಿವು ಕುಂಠಿತವಾಗಿದೆ.

ಇದರಿಂದಾಗಿ ಕಾವೇರಿ ನೀರನ್ನೇ ಅವಲಂಬಿಸಿರುವ ಬೆಂಗಳೂರು, ಮೈಸೂರು, ಮಂಡ್ಯ, ಕೊಡಗು ಸೇರಿದಂತೆ ಹಲವು ಪ್ರದೇಶಗಳಲ್ಲಿ ಭವಿಷ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣಗೊಳ್ಳುವ ಭೀತಿ ಎದುರಾಗಿದೆ. ಜೊತೆಗೆ ಕೃಷಿ ಚಟುವಟಿಕೆಗಳೂ ಹೊಡೆತ ಬೀಳುವ ಸಾಧ್ಯತೆ ಹೆಚ್ಚಿದೆ. ಕಾವೇರಿ ನದಿಯ ಪ್ರಮುಖ ಜಲಾಶಯಗಳಾದ ಕೆಆರ್‌ಎಸ್ ಹಾಗೂ ಹಾರಂಗಿ ಜಲಾಶಯಗಳಲ್ಲೂ ನೀರಿನ ಸಂಗ್ರಹ ನಿರೀಕ್ಷಿತ ಮಟ್ಟ ತಲುಪದಿರುವುದು ಮತ್ತಷ್ಟು ಆತಂಕಕ್ಕೆ ಕಾರಣವಾಗಿದೆ.

ಜಿಲ್ಲಾ ನ್ಯಾಯಾಲಯ, ಕೇಂದ್ರೀಯ ವಿದ್ಯಾಲಯಕ್ಕೆ ಬಾಂಬ್ ಬೆದರಿಕೆ

• **ಮಡಿಕೇರಿ:** ನಗರದ ಹೊರವಲಯದಲ್ಲಿರುವ ಪಿಎಂಶ್ರೀ ಕೇಂದ್ರೀಯ ವಿದ್ಯಾಲಯ ಮತ್ತು ಜಿಲ್ಲಾ ನ್ಯಾಯಾಲಯಕ್ಕೆ ಶನಿವಾರ ಬಾಂಬ್ ಬೆದರಿಕೆಯ ಇ-ಮೇಲ್ ಬಂದಿದೆ. ಬೆದರಿಕೆ ಸಂದೇಶದ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಕೇಂದ್ರೀಯ ವಿದ್ಯಾಲಯದ ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ಮನೆಗೆ ಕಳುಹಿಸಲಾಗಿದೆ.

ನ್ಯಾಯಾಲಯದ ಒಳಗೆ ವಕೀಲರು ಮತ್ತು ಸಿಬ್ಬಂದಿ ಪ್ರವೇಶಕ್ಕೆ ನಿರ್ಬಂಧ ಹೇರಲಾಗಿದ್ದು, ಕಲಾಪಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ. ಮಡಿಕೇರಿ ನ್ಯಾಯಾಲಯಕ್ಕೆ ಕಳೆದ ಫೆಬ್ರವರಿ 16ರಂದು ಮೊದಲ ಸಲ ಮತ್ತು ಜೂ.23 ರಂದು ಎರಡನೇ ಸಲ ಬಾಂಬ್ ಬೆದರಿಕೆ ಸಂದೇಶ ಬಂದಿತ್ತು. ಪರಿಶೀಲನೆ ಸಂದರ್ಭ ಹುಸಿ ಬಾಂಬ್ ಬೆದರಿಕೆ ಎಂದು ತಿಳಿದು ಬಂದಿತ್ತು. ಮಡಿಕೇರಿ ಕೋರ್ಟ್ ಸಮೀಪದಲ್ಲೇ ಪಿಎಂಶ್ರೀ ವಿದ್ಯಾಲಯವಿದ್ದು, ಈ ಬಾರಿ ಇದ್ದಿಗೂ ಕೂಡಾ ಬಾಂಬ್ ಬೆದರಿಕೆ ಸಂದೇಶ ಬಂದಿರುವುದು ವಿಶೇಷವಾಗಿದೆ. ಹಾಗೆಯೇ ಚಾಮರಾಜನಗರ ಜಿಲ್ಲಾ ನ್ಯಾಯಾಲಯಕ್ಕೂ ಬಾಂಬ್ ಬೆದರಿಕೆ ಬಂದಿದ್ದು, ತೀವ್ರ ತಪಾಸಣೆ ನಡೆಸಿದ್ದಾರೆ.

ಘಜ್ನಿ ಬಿಟ್ಟರೆ ದೇಶ ಲೂಟಿ ಮಾಡಿದ್ದು ಬಿಜೆಪಿ: ಹರಿಪ್ರಸಾದ್

• **ಬೆಂಗಳೂರು:** ಬಿಜೆಪಿಗರು ಇತಿಹಾಸ ಅಂದ್ರೆ, ಮಹಮ್ಮದ್ ಘಜ್ನಿ ಅಂದಾರೆ, ಲೂಟಿ ಹೊಡೆದವನು ಅಂತ ಪದೇ ಪದೇ ಹೇಳುತ್ತಾರೆ, ಆದರೆ ಘಜ್ನಿ ಬಿಟ್ಟರೆ ಬಿಜೆಪಿಯವರೇ ದೇಶವನ್ನು ಲೂಟಿ ಮಾಡಿದ್ದು ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ವಾಗ್ದಾಳಿ ನಡೆಸಿದರು.



ಕೆಪಿಸಿಸಿ ಕಚೇರಿಯಲ್ಲಿ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ಈ ಹಿಂದೆ ರಾಮಮಂದಿರ ಕಟ್ಟಲ ಅಂತ ಲೂಟಿ ಹೊಡೆದಿದ್ದು. ಅಂಬಾನಿ ಕೊಟ್ಟ 900 ಕೋಟಿ ದೇಣಿಗೆಗೂ ಲೆಕ್ಕ ಇಲ್ಲ, ಈಗ ಪೇಜಾವರ ಶ್ರೀಗಳು ಲೆಕ್ಕ ಕೇಳಿದ್ದಾರೆ ಎಂದು ತಿಳಿಸಿದರು.

ಪ್ರಹ್ಲಾದ್ ಜೋಶಿ ಅವರು ಕೇಂದ್ರದ ಮಂತ್ರಿ, ಆಹಾರ ಧಾನ್ಯ ಭಂಡಾರದ ಮೂರ್ತಿ, ನಾನ್ಯಾಕೆ ಅವರ ಮಾತು ಕೇಳಬೇಕು, ರಾಜ್ಯಕ್ಕೆ ಬೇಕಾದ ವಿಷಯಗಳ ಬಗ್ಗೆ ಸಂಸತ್ತಿನಲ್ಲಿ ಎಷ್ಟು ಮಾತನಾಡಿದ್ದಾರೆ, ಕಸ ಬಂದಿದ್ದರೆ, ಭದ್ರ ಯೋಜನೆ ಸೇರಿದಂತೆ ರಾಜ್ಯಕ್ಕೆ ಬರಬೇಕಾದ ಹಣದ ಬಗ್ಗೆ ಮಾತನಾಡಿದ್ದಾರಾ, ಬರೀ ತಮ್ಮ ರಾಜಕೀಯ ಅಸ್ತಿತ್ವಕ್ಕಾಗಿ ನೀಡುವ ಹೇಳಿಕೆಗಳಿಂದ ನಾನೇನು ಕಲಿಯಬೇಕಾಗಿಲ್ಲ, ಆ ದುರ್ಗತಿ ಬಂದಿಲ್ಲ ಎಂದರು.

ಬಿಡದಿ ಟೌನ್‌ಶಿಪ್ ಕುರಿತು ಎಲ್ಲೋ ರಸ್ತೆಯಲ್ಲಿ ಕುಳಿತು ಮಾತನಾಡೋಕೆ ಆಗುತ್ತಾ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರನ್ನು ಪ್ರಶ್ನಿಸಿರುವ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರು, ಸಿಎಂ ವಿಧಾನಸೌಧಕ್ಕೆ ಚರ್ಚೆಗೆ ಬನ್ನಿ ಅಂದಿದ್ದಾರೆ, ನಾವು ರೈತರು, ಕಾರ್ಮಿಕರ ಜೊತೆ ಮಾತನಾಡುತ್ತೇವೆ. ಬನ್ನಿ ಪವಿತ್ರವಾದ ವಿಧಾನಸೌಧದಲ್ಲಿ ಮಾತನಾಡೋಣ ಎಂದು ಸವಾಲು ಹಾಕಿದರು.

ಬಿಡದಿ ಟೌನ್‌ಶಿಪ್ ವಿರೋಧಿಸಿ ಬೈರಮಂಗಲ ಗ್ರಾಮದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಸಚಿವ ಕಿಡಿ

ರೈತರ ಪರವಾದ ಹೋರಾಟಕ್ಕೆ ನಾನು ಬದ್ಧ: ಎಚ್‌ಡಿಕೆ

• **ರಾಮನಗರ:** ಬಿಡದಿ ಟೌನ್ ಶಿಪ್ ವಿಚಾರದಲ್ಲಿ ನನ್ನನ್ನು ಅಪಪ್ರಚಾರ ನ್ಯಾಯದಲ್ಲಿ ನಿಲ್ಲಿಸುವ ಹುನ್ನಾರ ನಡೆಯುತ್ತಿದ್ದು, ಇದರಿಂದ ನಾನು ವಿಚಲಿತನಾಗುವುದಿಲ್ಲ, ರೈತರ ಪರವಾದ ಹೋರಾಟಕ್ಕೆ ನಾನು ಬದ್ಧನಾಗಿದ್ದು, ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ತಿಳಿಸಿದರು.

ಬಿಡದಿ ಟೌನ್‌ಶಿಪ್ ವಿರೋಧಿಸಿ ಬೈರಮಂಗಲ ಗ್ರಾಮದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಮಾತನಾಡಿದ ಅವರು, ಟೌನ್‌ಶಿಪ್ ವಿಚಾರದಲ್ಲಿ ಸರ್ಕಾರ ಜಂಟಿ ಸರ್ವೆ ನಡೆಯುತ್ತಿದ್ದು, ರೈತರ ಪರವಾಗಿ ಏನು ಮಾಡಬೇಕು ಎಂಬುದು ಗೊತ್ತಿದೆ. ಯಾವುದೇ ಆಮಿಷಗಳಿಗೆ ಒಳಗಾಗದೆ ರೈತರು ನಡೆಸುವ ಹೋರಾಟಕ್ಕೆ ನಾನು ಬೆಂಬಲವಾಗಿ ನಿಲ್ಲುತ್ತೇನೆ ಎಂದು ತಿಳಿಸಿದರು.

ನನ್ನ ಬಳಿಗೆ ಸಹಿಸದೆ ನನ್ನ ವಿರುದ್ಧ ನಾಲ್ಕು ದೂರುಗಳನ್ನು ದಾಖಲಿಸಿದ್ದಾರೆ. ಎರಡು ಬಾರಿ ಸಿಎಂ ಆಗಿ ಕೆಲಸ ಮಾಡಿದ ನನ್ನ ವಿರುದ್ಧ ಯಾವುದೇ ಹಗರಣಗಳಿದ್ದರೆ ಅದನ್ನು ಹೊರಗೆ ತರಲಿ. ನನ್ನನ್ನು ಜೈಲಿಗೆ ಕಳುಹಿಸುತ್ತೇನೆ ಎನ್ನುತ್ತಿರುವವರು, ಮೊದಲು ಅವರೇ ಜೈಲಿಗೆ



> ನಾನು ಸಿಎಂ ಆಗಿದ್ದಾಗ ರೈತರ ಬದುಕಿಗೆ ಕಾಯಕಲ್ಪ ಮಾಡಲು, ಬೆಂಗಳೂರಿನ ಸಮಸ್ಯೆ ನಿವಾರಣೆ ಕೆಲಸ ಮಾಡಿದೆ. ಗ್ರಾಮೀಣ ಭಾಗದ ಜನರ ಸಮಸ್ಯೆ ಅರಿಯಲು ಗ್ರಾಮವಾಸ್ತವ್ಯ ಪ್ರಾರಂಭ ಮಾಡಿದ್ದು ಇಂದಿಗೂ ಜನರ ಮನಸ್ಸಿನಲ್ಲಿ ಉಳಿದಿದೆ.
> ■ ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಹೋದರು ಎಂಬುದನ್ನು ಜನರಿಗೆ ತಿಳಿಸಲಿ ಎಂದು ಸವಾಲು ಹಾಕಿದರು. ಕೆಂಪೇಗೌಡರ ಜಯಂತಿ ಹೆಸರಿನಲ್ಲಿ ಹಣವಿದ್ದು ಬಳ್ಳ ನಿಡ ನಡೆಯುವುದಿಲ್ಲ, ಕೋಟಿಗಟ್ಟಲೆ ಲೂಟಿ ಹೊಡೆಯಲು ಹೊರಟಿದ್ದಾರೆ.

ನಕಲಿ ದಾಖಲೆ ಸೃಷ್ಟಿ ಮಾಡಿ ಕಾಲೇಜು ಕಟ್ಟಲು ಅಮಾಯಕರ ಭೂಮಿ ಲೂಟಿ ಹೊಡೆದಿದ್ದಾರೆ. ಇವರಿಂದ ನಮ್ಮ ಕುಟುಂಬ ಬದುಕುತ್ತಿಲ್ಲ ಎಂದು ತಿಳಿಸಿದರು.

ಈಗಲ್ಟನ್ ರೆಸಾರ್ಟ್‌ನವರು ಬಳಿಕ ಮಾಡಿಕೊಂಡಿರುವ ಸರ್ಕಾರಿ ಖರಾಬ್ ಭೂಮಿಗೆ 12 ಕೋಟಿ ಹಣ ನಿಗದಿಪಡಿಸಿರುವ ಸರ್ಕಾರ ಅದರ ಪಕ್ಕದಲ್ಲಿಯೇ ಇರುವ ರೈತರ ಭೂಮಿಗೆ ಎರಡು ಕೋಟಿ ನಿಗದಿಪಡಿಸಿರುವುದನ್ನು ನೋಡಿದರೆ ಎಷ್ಟು ಹಣ ಲೂಟಿ ಹೊಡೆಯಲು ಮುಂದಾಗಿದ್ದಾರೆ ಎಂಬುದು ತಿಳಿಯುತ್ತದೆ ಎಂದು ತಿಳಿಸಿದರು.

ಬೈರಮಂಗಲ ಗ್ರಾಮದ ರೈತರ ಹೋರಾಟ ರಾಜ್ಯದ ಇಂದಿನ ಪರಿಸ್ಥಿತಿಯಲ್ಲಿ ಹೊಸ ಆಯಾಮ ಸೃಷ್ಟಿಸಲಿದೆ. ಜನರ ಆಶೀರ್ವಾದದಿಂದ ಐದು ಬಾರಿ ಮುಖ್ಯಮಂತ್ರಿ ಮಾಡುತ್ತೇನೆ. ಆದರೆ, ತಾಕತ್ತು ಇದ್ದರೆ ರಾಮನಗರದಲ್ಲಿ ಚುನಾವಣೆ ಗೆಲ್ಲಲಿ ಮಡಿಲು ಮಾಡುವ ರೈತರನ್ನು ಕಾಪಾಡುವುದು ಎಂದು ತಿಳಿಸಿದರು.

ನನ್ನ ಜಮೀನಿನಲ್ಲಿ ತೆಂಗು, ಮಾವು ಬೆಳೆದಿದ್ದೇನೆಯೇ ಹೊರತು ಜಮೀನಿನಲ್ಲಿ ರಿಯಲ್ ಎಸ್ಟೇಟ್ ಮಾಡಿಲ್ಲ. ಇಂದು ರೈತರನ್ನು ಲೂಟಿ ಮಾಡಿ ರಿಯಲ್ ಎಸ್ಟೇಟ್ ಮಾಡಲು ಹೊರಟಿರುವವರು ಉತ್ತರ ಕೊಡಬೇಕು ಎಂದರು.

ಮೂವತ್ತು ವರ್ಷ ಕಳೆದರೂ ನೈಸ್ ರಸ್ತೆಗೆ ಭೂಮಿ ಕಳೆದುಕೊಂಡ ನಾಲ್ಕು ಸಾವಿರ ರೈತರಿಗೆ ಪರ್ಯಾಯ ಭೂಮಿ ನೀಡಿಲ್ಲ, ಹಲವು ಜನ ಮರಣವಾಗಿದ್ದಾರೆ. ಈಗ ಬಿಡದಿಯಲ್ಲಿ ರೈತರನ್ನು ಒಕ್ಕಲೆಬ್ಬಿಸಲು ಹೊರಟಿದ್ದಾರೆ. ನಾನು ಸಿಎಂ ಆಗಿದ್ದಾಗ ಬಿಡದಿ ರೈತರಿಗೆ ನೋವು ನೀಡಿ ಟೌನ್ ಶಿಪ್ ನಿರ್ಮಾಣ ಮಾಡುವುದಿಲ್ಲ ಎಂದು ನಿರ್ಧರಿಸಿ ಹೇಳಿಕೆ ದಾಖಲಿಸಿದ್ದೆ. ಆದರೂ ಸಿಎಂ ಅವರು ನನ್ನ ವಿರುದ್ಧ ನೀಡುತ್ತಿರುವ ಹೇಳಿಕೆ ಬೇಸರ ತಂದಿದೆ ಎಂದರು.

ರಾಜ್ಯದ ಯಾವುದೇ ಭಾಗದ ರೈತರು ತಮ್ಮ ಭೂಮಿ ಕಳೆದುಕೊಂಡು ಬೀದಿಗೆ ಬರಬೇಡಿ, ರೈತರ ಕಣ್ಣಲ್ಲಿ ನೀರು ತರಿಸುವ ಕೆಲಸ ಮಾಡಿದರೆ ನನ್ನ ಮನಸಿಗೆ ಒಪ್ಪುವುದಿಲ್ಲ ಎಂದ ಅವರು ಸಿಎಂ ಅವರು ಟೌನ್ ಶಿಪ್ ಬಗ್ಗೆ ಚರ್ಚಿಸಲು ವಿಧಾನಸೌಧಕ್ಕೆ ಕರೆದರು. ಆದರೆ ನಾನು ರೈತರ ಸಮ್ಮುಖದಲ್ಲಿಯೇ ತೀರ್ಮಾನಕ್ಕೆ ಆಹ್ವಾನ ಕೊಟ್ಟೆ, ಆದರೆ ಅವರು ಬರಲಿಲ್ಲ ಎಂದರು.

ಟೌನ್‌ಶಿಪ್ ವಿಚಾರ ರೈತರಿಗೆ ತೊಂದರೆ ಸಲ್ಲ: ಸೋಮಣ್ಣ

• **ದಾವಣಗೆರೆ:** ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳುವುದರಲ್ಲಿ ಅರ್ಥವಿದೆ. ಅಭಿವೃದ್ಧಿ ಹಾಗೂ ಟೌನ್ ಶಿಪ್ ನಿರ್ಮಾಣದ ಹೆಸರಿನಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ರೈತರಿಗೆ ತೊಂದರೆ ಕೊಡಬಾರದು ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದರು. ಶನಿವಾರ ಸುದ್ದಿಗಾರರ ಜತೆ ಮಾತನಾಡಿ, ಈ ವಿಚಾರದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಠಮಾರಿ ಧೋರಣೆ ಕೈಬಿಟ್ಟು ಜನರ ಭಾವನೆಗಳಿಗೆ ಸ್ಪಂದಿಸಬೇಕು ಎಂದು ಅವರು ಸಲಹೆ ನೀಡಿದರು.

ಕಿರುಸುದ್ದಿ

ಗ್ರಾಮಾಭಿವೃದ್ಧಿಯಿಂದ ದೇಶಾಭಿವೃದ್ಧಿ: ಶಾಸಕ ಉದಯ



• **ಮದ್ದೂರು:** ಗ್ರಾಮಗಳ ಅಭಿವೃದ್ಧಿಯಿಂದಲೇ ದೇಶದ ಅಭಿವೃದ್ಧಿ ಸಾಧ್ಯ ಎಂದು ಶಾಸಕ ಕೆ.ಎಂ. ಉದಯ ಹೇಳಿದರು. ತಾಲೂಕಿನ ಹುಲಿಗೆರೆಪುರ, ನಗರಕೆರೆ, ಉಪ್ಪರದೊಡ್ಡಿ ಹಾಗೂ ಅಜ್ಜಹಳ್ಳಿ ಗ್ರಾಮಗಳಲ್ಲಿ ಸುಮಾರು 790 ಲಕ್ಷ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.

ಉಪ್ಪರದೊಡ್ಡಿ ಗ್ರಾಮದ ಬಹುತೇಕ ಜನರು ದಿನಗೂಲಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದು, ಅವರಿಗೆ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸಿ ಗ್ರಾಮದ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು ಎಂದು ತಿಳಿಸಿದರು. ಚುನಾವಣೆಯಲ್ಲಿ ಈ ಗ್ರಾಮದ ಜನರು ನನಗೆ ಏಕಪಕ್ಷೀಯ ಬೆಂಬಲ ನೀಡಿ ಮತ ನೀಡಿದ್ದಾರೆ. ಆದ್ದರಿಂದ ನಾನು ಈ ಗ್ರಾಮದ ಜನರಿಗೆ ಸದಾ ಚಿರಋಣಿಯಾಗಿದ್ದೇನೆ. ಅವರ ವಿಶ್ವಾಸಕ್ಕೆ ತಕ್ಕಂತೆ ಗ್ರಾಮದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ, ಎಂದು ಹೇಳಿದರು. ಬಿಡದಿ ವಿಚಾರಕ್ಕೆ ಸಂಬಂಧಿಸಿದಂತೆ ಮಾತನಾಡಿದ ಶಾಸಕ ಕೆ.ಉದಯ, ಈ ಯೋಜನೆಯನ್ನು ಈ ಹಿಂದೆಯೇ ಜಾರಿಗೊಳಿಸಬೇಕಾಗಿತ್ತು. ಆದರೆ ಆಗ ಅಧಿಕಾರದ ಲ್ಲಿದ್ದವರು ಅದನ್ನು ಅನುಷ್ಠಾನಗೊಳಿಸಲು ಸಾಧ್ಯವಾಗಲಿಲ್ಲ, ಈಗ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೇತೃತ್ವದಲ್ಲಿ ಯೋಜನೆಗೆ ವೇಗ ನೀಡಲಾಗುತ್ತಿದ್ದು, ಅದನ್ನು ಕೆಲವರು ರಾಜಕೀಯ ಕಾರಣಗಳಿಂದ ವಿರೋಧಿಸುತ್ತಿದ್ದಾರೆ ಎಂದು ಆರೋಪಿಸಿದರು. ಈ ವಿಚಾರದಲ್ಲಿ ಯಾವುದೇ ನೈಜ ಸಮಸ್ಯೆಗಳಿದ್ದರೆ ಮುಖ್ಯಮಂತ್ರಿಗಳು ಚರ್ಚೆಗೆ ಅವಕಾಶ ನೀಡಿದ್ದರು. ಆ ಅವಕಾಶವನ್ನು ಗೌರವಯುತವಾಗಿ ಬಳಸಿಕೊಳ್ಳಬೇಕಿತ್ತು. ಆದರೆ ಕೆಲವು ನಾಯಕರು ಅನಗತ್ಯ ಹೇಳಿಕೆಗಳನ್ನು ನೀಡಿ ರಾಜಕೀಯ ಪ್ರದರ್ಶನಕ್ಕೆ ಮುಂದಾಗಿದ್ದಾರೆ ಎಂದು ಅವರು ಟೀಕಿಸಿದರು. ಈ ಸಂದರ್ಭದಲ್ಲಿ ಡಿಸಿಸಿ ಬ್ಯಾಂಕ್ ನಿರ್ದೇಶಕ ಸಂದರ್ಶ್.ಪಿ., ನಗರಕೆರೆ ಗ್ರಾಮ ಪಂಚಾಯಿತಿಯ ಮಾಜಿ ಅಧ್ಯಕ್ಷ ಸಂದೀಪ್, ಮಾಜಿ ಅಧ್ಯಕ್ಷೆ ಶಿಲ್ಪಾ, ರಿತೇಶ್, ಅಭಿ, ಕೃಷ್ಣ, ನಿಂಗಪ್ಪ, ಪ್ರವೀಣ್, ಪುಟ್ಟ ಸೇರಿದಂತೆ ಗ್ರಾಮಸ್ಥರು ಹಾಗೂ ಮುಖಂಡರು ಉಪಸ್ಥಿತರಿದ್ದರು.

ಯೋಗ ದಿನಾಚರಣೆ



• **ಅರಸೀಕೆರೆ:** ತಾಲೂಕಿನ ಕಸಬಾ ಹೋಬಳಿಯ ಮುದ್ದನಹಳ್ಳಿ ಸಿದ್ದೇಶ್ವರ ಪ್ರೌಢಶಾಲೆಯಲ್ಲಿ ವಿಶ್ವ ಯೋಗ ದಿನಾಚರಣೆಯನ್ನು ವಿದ್ಯಾರ್ಥಿಗಳ ಸಕ್ರಿಯ ಭಾಗವಹಿಸುವಿಕೆಯೊಂದಿಗೆ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ವಿವಿಧ ಯೋಗಾಸನಗಳು ಹಾಗೂ ಪ್ರಾಣಾಯಾಮಗಳನ್ನು ಪ್ರದರ್ಶಿಸಿ, ಯೋಗದ ಮಹತ್ವವನ್ನು ಅರುಹಿಕೊಂಡರು. ಈ ಸಂದರ್ಭದಲ್ಲಿ ಶಾಲೆಯ ಮುಖ್ಯ ಶಿಕ್ಷಕರಾದ ಕಲ್ಯಾಣ್ ಕುಮಾರ್ ಅವರು ಮಾತನಾಡಿ, ಯೋಗವು ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡುವ ಅತ್ಯುತ್ತಮ ಸಾಧನವಾಗಿದ್ದು, ವಿದ್ಯಾರ್ಥಿಗಳು ಪ್ರತಿದಿನ ಯೋಗಾಭ್ಯಾಸ ಮಾಡುವ ಮೂಲಕ ಆರೋಗ್ಯಕರ ಜೀವನಶೈಲಿಯನ್ನು ರೂಢಿಸಿಕೊಳ್ಳಬೇಕು ಎಂದು ತಿಳಿಸಿದರು. ಯೋಗವು ಏಕಾಗ್ರತೆ, ಆತ್ಮವಿಶ್ವಾಸ ಹಾಗೂ ಶಿಸ್ತು ಬೆಳೆಸುವುದರ ಜೊತೆಗೆ ಒತ್ತಡ ನಿವಾರಣೆಗೆ ಸಹಕಾರಿ ಎಂದು ಅವರು ವಿವರಿಸಿದರು. ಕಾರ್ಯಕ್ರಮದಲ್ಲಿ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿ ವಿಶ್ವ ಯೋಗ ದಿನದ ಸಂದೇಶವನ್ನು ಸಾರಿದರು. ಈ ಕಾರ್ಯಕ್ರಮವು ವಿದ್ಯಾರ್ಥಿಗಳಲ್ಲಿ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಯಿತು.

ಗ್ರಾಪಂ ಮಾಜಿ ಅಧ್ಯಕ್ಷ ಮಹೇಶ್‌ಗೆ ಮಾತೃ ವಿಯೋಗ



ಕೆಂಗೇರಿ: ಯಶವಂತಪುರ ವಿಧಾನಸಭಾ ಕ್ಷೇತ್ರದ ರಾಮೋಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಜಿ.ಮಹೇಶ್ ಅವರ ತಾಯಿ ಕೆಂಪಮ್ಮ (79) ನಿಧನರಾಗಿದ್ದಾರೆ. ಕೆಂಪಮ್ಮ ಅವರ ಅಂತ್ಯಕ್ರಿಯೆಯನ್ನು ಭಾನುವಾರ (ಜೂ.28)ಮಧ್ಯಾಹ್ನ 1.30ಕ್ಕೆ ಸ್ವಗ್ರಾಮ ಭೀಮನ ಕುಪ್ಪೆ ಗ್ರಾಮದಲ್ಲಿ ನೆರವೇರಿಸಲಾಗುವುದು. ಇವರು ಮೂರು ಜನ ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳನ್ನು ಅಗಲಿದ್ದಾರೆ.

ಮಂಡ್ಯ ಜಿಲ್ಲಾ ಲೇಖಕಿಯರ ಸಮ್ಮೇಳನದಲ್ಲಿ ಜಾನಪದ ವಿವಿ ವಿಶ್ರಾಂತ ಕುಲಪತಿ ಪದ್ಮಾ ಶೇಖರ್ ಹೇಳಿಕೆ

ಮಹಿಳೆಗೆ ಎಲ್ಲಾ ಕ್ಷೇತ್ರದಲ್ಲೂ ಮೀಸಲು ಸಿಗಲಿ



• **ಮಂಡ್ಯ:** ಮಂಡ್ಯ ಮಣ್ಣು ಸಾಮಾನ್ಯ ಮಣ್ಣಲ್ಲ. ಈ ಮಣ್ಣಿನೊಳಗೆ ರಾಷ್ಟ್ರಮಟ್ಟದಲ್ಲಿ ದಾಖಲಿಸುವ ಹಲವಾರು ಘಟನಾವಳಿಗಳು ನಡೆದಿವೆ. ಹಾಗಾಗಿ ಈ ಪಾವನ ಮಣ್ಣಿನಿಂದಲೇ ಎಲ್ಲಾ ಕ್ಷೇತ್ರದಲ್ಲೂ ಮಹಿಳಾ ಲಿಂಗ ಜಾತಿಯ ಹಕ್ಕೊತ್ತಾಯ ಮಂಡನೆಯಾಗಬೇಕು ಎಂದು ಜಾನಪದ ವಿವಿ ವಿಶ್ರಾಂತ ಕುಲಪತಿ ಡಾ.ಪದ್ಮಾ ಶೇಖರ್ ಅನಿಸಿಕೆ ವ್ಯಕ್ತಪಡಿಸಿದರು.

ಕುವೆಂಪುನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಕರ್ನಾಟಕ ಲೇಖಕಿಯರ ಸಂಘ ಬೆಂಗಳೂರು ಹಾಗೂ ಜಿಲ್ಲಾ ಘಟಕದಿಂದ ನಡೆಯುತ್ತಿರುವ ಜಿಲ್ಲಾ ಲೇಖಕಿಯರ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು. ಮಹಿಳೆಯರು ಎಲ್ಲಾ ಆಯಾಮಗಳಲ್ಲೂ ಉತ್ತಮ ಕೃತಿಗಳನ್ನು ರಚಿಸಿದ್ದಾರೆ. ಅವುಗಳನ್ನು ವಿಮರ್ಶೆಗೊಳಪಡಿಸುವ ಅಗತ್ಯವಿದೆ. ವಿಮರ್ಶೆಗೊಳಪಡಿಸುವ ಕೆಲಸವನ್ನು ಲೇಖಕಿಯರ ಸಂಘ ಮಾಡಬೇಕು. ಇದರಿಂದ ಅತ್ಯುತ್ತಮ ಕೃತಿಗಳು ಹೊರಬರಲಿವೆ ಎಂದು ಹೇಳಿದರು. ಕೃತಿಗಳ ವಿಮರ್ಶೆಗೊಳಪಡಿಸುವ ಮೂಲಕ ಮಹಿಳಾ ಲೇಖಕಿಯರಿಗೆ ಬಹುಶ್ರುತೀಯ ವೇದಿಕೆ ಸೃಷ್ಟಿಸಬೇಕು. ಆಗ ಯಾವುದೇ ಸಮಸ್ಯೆಗಳ ಬಗ್ಗೆ ಚಿಂತಿಸಿ, ಚರ್ಚಿಸಿ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗಲಿದೆ. ಇದು ರಾಷ್ಟ್ರಮಟ್ಟದಲ್ಲಿಯೂ ಅಭಿಪ್ರಾಯ ವ್ಯಕ್ತಪಡಿಸುವಂತಿರಬೇಕು. ಅದಕ್ಕಾಗಿಯೇ ಮಹಿಳಾ ಲಿಂಗಜಾತಿಯ ಹಕ್ಕೊತ್ತಾಯ ಮಂಡನೆ ಈ ಸಮ್ಮೇಳನದಿಂದಲೇ ಪ್ರಾರಂಭವಾಗಲಿ ಎಂದು ಹೇಳಿದರು. ಸಾಹಿತ್ಯ ಎಂಬುದು ಅಭಿವ್ಯಕ್ತಿಯ –ರೀತಿ. ಸಾಹಿತ್ಯದ ಪ್ರಾಕಾರಗಳು ಸಂಸ್ಕೃತಿ, ಪರಂಪರೆ ಸೇರಿದಂತೆ ಅನೇಕ ಮಗ್ಗುಲುಗಳನ್ನು ಒಳಗೊಂಡಿದೆ. ಸಾಕಷ್ಟು ಪ್ರಾಕಾರಗಳು ನಿರ್ದಿಷ್ಟ ಕಾಲಘಟ್ಟದಲ್ಲಿ ಅಭಿವ್ಯಕ್ತಪಡಿಸುವುದಾಗಿದ್ದು, ಸಮಕಾಲೀನವಾಗಿವೆ. ಮಂಡ್ಯ ಜಿಲ್ಲೆಯಲ್ಲೂ ಅನೇಕ ಮಹಿಳಾ ಲೇಖಕಿಯರು, ಕವಯಿತ್ರಿಯರು ಉತ್ತಮ ಕೃತಿ, ಕಾದಂಬರಿ, ಕವನಗಳನ್ನು ರಚಿಸಿದ್ದಾರೆ. ಆ ಪರಂಪರೆ ಈಗಲೂ ಮುಂದುವರೆದಿದೆ ಎಂದು ಶ್ಲಾಘಿಸಿದರು.

ಮಂಡ್ಯದ ಮಣ್ಣು ಪ್ರತಿಭಾ ಎದೆ ನಾಡಾಗಿತ್ತು. ಈ ಮಣ್ಣಿನ ಅನೇಕರು ಇತಿಹಾಸ ಪುಟಗಳನ್ನು ಸೇರಿದ್ದಾರೆ. ಬರೆಯುವವರಿಗೆ ಸೂಚಿದಾಯಕವಾಗಿದ್ದಾರೆ. ಸಾಹಿತ್ಯ, ರಾಜಕಾರಣ, ರಂಗಭೂಮಿ, ಕಲೆ, ಹೋರಾಟ, ಚಳವಳಿ ಸೇರಿದಂತೆ ವಿವಿಧ ಪರಂಪರೆಗೆ ನೆಲೆ ಒದಗಿಸಿದ್ದಾರೆ. ಜಿಲ್ಲೆಯ ಸಾಹಿತ್ಯವನ್ನು ಒಂದೇ ತಕ್ಕಡಿಯಲ್ಲಿ ತೂಗಲು ಸಾಧ್ಯವಿಲ್ಲ, ವಿಭಿನ್ನತೆಯಿಂದ ಕೂಡಿರುವ ಸಾಹಿತ್ಯಕ್ಕೆ ಹೊಸ ದಿಕ್ಕನ್ನು ಪರಿಚಯಿಸುವ ಕೆಲಸ ಆಗಿದೆ ಎಂದು ಹೇಳಿದರು.

ಲೇಖಕಿಯರಾದ ತ್ರಿವೇಣಿ, ಆಯಾಂಥ ಪದ್ಮಾವತಿ, ಜಯಲಕ್ಷ್ಮಿ ಸೀತಾಪುರ ಸೇರಿದಂತೆ ಅನೇಕರು ಮಹಿಳಾ ಲೇಖಕಿಯರು ಸೀಗೆ ಸಂಬಂಧಿಸಿದ ಕೃತಿಗಳನ್ನು ರಚಿಸಿದ್ದಾರೆ. ಸೃಜನಶೀಲತೆ ಸಾಹಿತ್ಯಕ್ಕಿಂತ ಸೃಜನಶೀಲತೇತರ ಸಾಹಿತ್ಯ ಬರೆಯುವುದು ಕಷ್ಟ. ಅದನ್ನು ಸಾಧಿಸಿ ತೋರಿಸಿದ್ದಾರೆ. ಜಗತ್ತಿನ ಸೀ ಪ್ರಭೆಯನ್ನು ಸ್ಪಷ್ಟವಾಗಿ ತೋರಿಸಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಡಾ.ಆರ್.ಸುನಂದಮ್ಮ, ಜಿಲ್ಲಾಧ್ಯಕ್ಷೆ ಡಾ.ಮೀರಾ ಶಿವಲಿಂಗಯ್ಯ, ಸಾಹಿತಿಗಳಾದ ಡಾ. ಸುಜಾತಾ ಭೂಮಿಗೌಡ, ಡಾ. ಹೆಚ್.ಎಲ್. ಪುಷ್ಪ, ಡಾ.ಮಂಜುಳಾ ಹುಲ್ಲಹಳ್ಳಿ, ಡಾ.ಎಂ.ಕೆಂಪಮ್ಮ, ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಉಪಾಧ್ಯಕ್ಷೆ ವಿಜಯಲಕ್ಷ್ಮೀ ಇದ್ದರು.

ಜಿಲ್ಲಾ ಲೇಖಕಿಯರ ಸಮ್ಮೇಳನದ ಸರ್ವಾಧ್ಯಕ್ಷೆ ಡಾ. ಪೂರ್ಣಿಮಾ ವಿಶ್ಲೇಷಣೆ

ನೈತಿಕ ಪ್ರಜ್ಞೆ ಮೂಡಿಸುವ ಸಾಹಿತ್ಯ ಸೃಷ್ಟಿಸಿ



• **ಮಂಡ್ಯ:** ಸಮಾಜದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ನಡೆಯುತ್ತಿರುವುದಕ್ಕಿಂತಲೇ ಮಹಿಳೆಯರಿಂದ ಪುರುಷರ ಮೇಲೂ ದೌರ್ಜನ್ಯ ನಡೆಯುತ್ತಿರುವ ವರದಿಗಳಿವೆ. ಕಾನೂನಿನ ದುರುಪಯೋಗವಾಗುತ್ತಿದೆ. ಪುರುಷ ದ್ವೇಷವನ್ನು ಪ್ರೇರೇಪಿಸುವ ಮಹಿಳಾ ಸಾಹಿತ್ಯ ನಿಲ್ಲಬೇಕು ಎಂದು ಜಿಲ್ಲಾ ಲೇಖಕಿಯರ ಸಮ್ಮೇಳನದ ಸರ್ವಾಧ್ಯಕ್ಷೆ ಡಾ.ಟಿ.ಸಿ.ಪೂರ್ಣಿಮಾ ಹೇಳಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಶನಿವಾರ ಕರ್ನಾಟಕ ಲೇಖಕಿಯರ ಸಂಘ ಹಾಗೂ ಜಿಲ್ಲಾ ಸಂಘದ ವತಿಯಿಂದ ಆಯೋಜಿಸಿದ್ದ ಜಿಲ್ಲಾ ಲೇಖಕಿಯರ ಸಮ್ಮೇಳನಾಧ್ಯಕ್ಷರ ಭಾಷಣದಲ್ಲಿ ಮಾತನಾಡಿ, ಸಮಾಜದಲ್ಲಿ ಹೆಚ್ಚುತ್ತಿರುವ ಅಪರಾಧ ಪ್ರಕರಣಗಳ ಬಗ್ಗೆ ಜಾಗೃತಿ ಮೂಡಿಸಬೇಕಿದೆ. ವಿಕೃತಿಯಿಂದ ಜನಸಾಮಾನ್ಯರನ್ನು ಅದರಲ್ಲೂ ಯುವ ಸಮುದಾಯವನ್ನು ವಿಮುಖಗೊಳಿಸಬೇಕಿದೆ. ನೈತಿಕ ಪ್ರಜ್ಞೆಯುಳ್ಳ ಸಂಸ್ಕೃತಿ-ಸಂಸ್ಕಾರಗಳತ್ತ ಅವರನ್ನು ಹೊರಳಿಸಬೇಕೆಂದು ಹೇಳಿದರು. ವಿಶ್ವಾಸ ಕುಲಪತಿ ಸುಜಾತಾ ಭೂಮಿಗೌಡ ಮಾತನಾಡಿ, ಮಂಡ್ಯದ ಜನರಲ್ಲಿ ಧಾರಾಳತನ ತುಂಬಾ ಇತ್ತು. ಅದು ತಪ್ಪ ಕ್ಷೇತ್ರದ ಗಡಿಯನ್ನು ದಾಟಿ ವಿಸ್ತರಿಸಿಕೊಳ್ಳುವ ಎ ನೆಲೆಗಳನ್ನು ಒಳಗೊಂಡಿದೆ. ಪ್ರೀತಿಯಲ್ಲಿರಲಿ, ಊಟದಲ್ಲಿರಲಿ, ಸ್ನೇಹ ಎಲ್ಲದರಲ್ಲೂ ಈ ಧಾರಾಳತನ ಕಂಡುಬರುತ್ತದೆ. ಇದರ ಜೊತೆ ಸಿಟ್ಟಿಗೂ ಧಾರಾಳತೆ ಇದೆ ಎಂದು ಧಿಮಂತ್ ಸಮ್ಮೇಳನ ಸ್ಮರಣ ಸಂಚಿಕೆ ಸಂಪಾದಕಿ ಗಣ್ಯರು.

ಸ್ಮರಣ ಸಂಚಿಕೆಗೆ ಲೇಖನಗಳನ್ನು ಸಂಗ್ರಹಿಸುವಲ್ಲಿ ಉತ್ತಮ ಸ್ಪಂದನೆ ದೊರಕಿದೆ. ಈ ಸಂಚಿಕೆಯನ್ನು ಕಾಲಾನುಕ್ರಮ ಹೊರತರದೆ ಸಮ್ಮೇಳನವನ್ನು ಪ್ರತಿನಿಧಿಸುವ ರೀತಿ ಹಾಗೂ ಪರಾಮರ್ಶೆಗೆ ದೊರಕುವ ರೀತಿಯಲ್ಲಿ ಗಟ್ಟಿತನ ಹೊಂದಿದೆ. ಜಗೆ ಮಾತ್ರ ಸೀಮಿತಗೊಳ್ಳದೆ ರಾಜ್ಯವ್ಯಾಪಿ ಪ್ರತಿನಿಧಿಸುವಂತಿದೆ ಎಂದರು.

ಕರ್ನಾಟಕ ಲೇಖಕಿಯರ ಸಂಘದ ನಿಕಟಪೂರ್ವ ರಾಜ್ಯಾಧ್ಯಕ್ಷೆ ಎಚ್.ಎಲ್.ಪುಷ್ಪ ಮಾತನಾಡಿ, ಕಳೆದ ಕೆಲವು ದಿನದಿಂದ ನಡೆಯುತ್ತಿರುವ ಮೋಸ, ವಂಚನೆ, ಕೊಲೆ ಪ್ರಕರಣಗಳನ್ನು ಗಮನಿಸಿದಾಗ ಇಂದಿನ ಸಮಾಜ ಯಾವ ದಿಕ್ಕಿಗೆ ಸಾಗುತ್ತಿದೆ. ಮಾಧ್ಯಮಗಳು ನಮ್ಮ ಬೆನ್ನ ಹಿಂದೆ ನಿಂತು ಬೆಳೆಯುತ್ತಿರುವುದನ್ನು ಗಮನಿಸಿ ಮುನ್ನಡೆಯಬೇಕಿದೆ. ಸಾಮಾಜಿಕ ಮಾಧ್ಯಮದ ಲೆಕ್ಕಾಚಾರದಲ್ಲಿ ಜೀವನ ನಡೆಯುತ್ತಿದ್ದು, ಪ್ರಚಾರ-ಅಪಪ್ರಚಾರ ಸಾಗುತ್ತಿದೆ. ತಪ್ಪಿತೋದ ಕಾನೂನಿನ ನಿಯಂತ್ರಣ ಇರುವಂತೆ ಏನು ಬೇಕಾದರೂ ಮಾಡಿ ಬಿಡುವ ಎಂಬ ಸ್ವಾವಲಂಬ ಸೃಷ್ಟಿಯಾಗಿದೆ ಎಂದು ಹೇಳಿದರು.

ಭವ್ಯ ಮೆರವಣಿಗೆ

ಜಿಲ್ಲೆಯಲ್ಲಿ ನಡೆದ ಪ್ರಥಮ ಲೇಖಕಿಯರ ಸಮ್ಮೇಳನದ ಸರ್ವಾಧ್ಯಕ್ಷೆ ಡಾ.ಟಿ.ಸಿ.ಪೂರ್ಣಿಮಾ ಅವರನ್ನು ಭವ್ಯ ಮೆರವಣಿಗೆಯೊಂದಿಗೆ ಅಂಬೇಡ್ಕರ್ ಭವನಕ್ಕೆ ಕರೆತರಲಾಯಿತು. ನಿವೃತ್ತ ಐಎಎಸ್ ಅಧಿಕಾರಿ ಡಾ.ಟಿ.ಸಿ.ಪೂರ್ಣಿಮಾ ಅವರನ್ನು ಜಿಲ್ಲಾ ಲೇಖಕಿಯರ ಸಂಘದ ಅಧ್ಯಕ್ಷೆ ಮೀರಾ ಶಿವಲಿಂಗಯ್ಯ ಪುಷ್ಪ ಗುಚ್ಛ ನೀಡಿ ಸ್ವಾಗತಿಸಿದರು. ರೈತ ಸ್ಥಾನಗಾರಿಂದ ಆರಂಭವಾದ ಮೆರವಣಿಗೆಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಉಪ ನಿರ್ದೇಶಕಿ ಮಮತಾಶ್ರೀ ಹಾಗೂ ನಗರಸಭೆ ಆಯುಕ್ತ ಯು.ಪಿ.ಪಂಪಾಶ್ರೀ ಚಾಲನೆ ನೀಡಿದರು. ಪೂರ್ಣಕುಂಭ, ಮಂಗಳವಾದ್ಯ, ಜಾನಪದ ಕಲಾತಂಡಗಳು ಹಾಗೂ ನೂರಾರು ಲೇಖಕಿಯರ ಭಾವಚಿತ್ರಗಳನ್ನು ಹಿಡಿದ ಯುವತಿಯರು ಹಾಗೂ ಮಹಿಳೆಯರು ತೆರೆದ ವಾಹನದಲ್ಲಿ ಸಮ್ಮೇಳನಾಧ್ಯಕ್ಷರನ್ನು ಮೆರವಣಿಗೆ ಮೂಲಕ ಅಂಬೇಡ್ಕರ್ ಭವನಕ್ಕೆ ಕರೆತರಲಾಯಿತು. ಮೆರವಣಿಗೆಯು ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಸಮ್ಮೇಳನಕ್ಕೆ ವಿಶೇಷ ಮೆರುಗು ನೀಡಿತು.

ಹೆಣ್ಣುಮಕ್ಕಳಿಗೆ ಮದುವೆ ಬದಲು ಶಿಕ್ಷಣ ಕೊಡಿಸಿ



• **ತಾವರೆಕೆರೆ:** ಹೆಣ್ಣು ಕಲಿತರೆ ಶಾಲೆಯೊಂ ತೆರೆದಂತೆ ಆದ್ದರಿಂದ ಹೆಣ್ಣು ಮಕ್ಕಳಿಗೆ ಮಕ್ಕಳಿಗೆ ಮದುವೆ ಬದಲು ಶಿಕ್ಷಣ ಕೊಡಿಸಿ ನಂತರ ಮದುವೆ ವರಿ ಎಂದು ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿ ಶಿವಮ್ಮ ಹೇಳಿದರು.

ಅವರು ತಾಲೂಕಿನ ಮುಗಬಾಳ ಗ್ರಾಮ ಪಂಚಾಯಿತಿಯಲ್ಲಿ ತಾಲೂಕು ಆಡಳಿತ, ತಾಲೂಕು ಪಂಚಾಯ್ತಿ ಶಿಶು ಅಭಿವೃದ್ಧಿ ಯೋಜನೆ ಹೊಸಕೋಟೆ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವರ್ಷಿಪದಿಂದ ಬೇಟಿ ಬಚಾವೋ ಬೇಟಿ ಪಡಾವೋ ಅರಿವು ಕಾರ್ಯಕ್ರಮ ಉದ್ದೇಶಿಸಿ ಅವರು ಮಾತನಾಡಿದರು.

ಮಹಿಳೆ ಅನ್ನೆತಿಕ ಕಳ್ಳ ಸಾಗಾಣಿಕೆ ತಡೆಯುವಲ್ಲಿ ಗ್ರಾಮ ಪಂಚಾಯಿತಿಗಳಲ್ಲಿ ಕಾವಲು ಪಡೆಗಳರುತ್ತವೆ ಮತ್ತೆ ಬಾಲ್ಯ ವಿವಾಹ ನಿಯಂತ್ರಣ ನಮ್ಮ ಎಲ್ಲಾ ಕಾರ್ಯಕರ್ತೆಯರಿಗೆ ಮಾಹಿತಿ ಇದ್ದರೆ ಏನು ಮಾಡಬೇಕು ತಡೆಯಬೇಕು. ಹೆಣ್ಣುಮಕ್ಕಳಿಗೆ 18 ವರ್ಷ ತುಂಬುವ ಮೊದಲು ಮದುವೆ ತಡೆಯಲು 1098ಗೆ ಕಾಲ್ ಮಾಡಿ ವಿಷಯ ಮುಟ್ಟಿಸಬೇಕು. ನೀವಾಗಿಯೇ ಹೋದರೆ ಸಮಸ್ಯೆಗಳಿಗೆ ಸಿಲುಕುತ್ತೀರಾ ಮಕ್ಕಳ ರಕ್ಷಣಾ ಘಟಕದಿಂದ ಬಂದು ಕೌನ್ಸೆಲಿಂಗ್ ಮಾಡಿ ಮುಚ್ಚಳಿಕೆ ಬರೆಸಿಕೊಳ್ಳುತಾರೆ ಹಾಗೇ ಶಿಕ್ಷೆಗೆ ಗುರಿಯಾಗುತ್ತೀರಿ ಎಂದರು.

ಅದೇ ರೀತಿ ಋತುಚಕ್ರ, ನೈರ್ಮಲ್ಯ ಹೇಗೆ ಕಾಪಾಡಿಕೊಳ್ಳಬೇಕು, ಸೇಪ್ಟಿ ಡಿಸ್ಪೋಜರ್ ಬಳಸುವುದು ಮಾಹಿತಿಯನ್ನು ನೀಡಿ ಗರ್ಭ ತಾರತಮ್ಯ ಮಾಡಬಾರದು, ಅದು ಕಾನೂನು ಬಾಹಿರ ಶಿಕ್ಷೆ, ಗ್ಯಾರಂಟಿ ಎಂಬ ಮಾಹಿತಿಯನ್ನು ನೀಡಬೇಕು ಎಂದರು.

ಪಿಡಿಒ ಲೋಕೇಶ್ ಮಾತನಾಡಿ, 18 ವಯಸ್ಸಿನ ಹೆಣ್ಣು ಮಕ್ಕಳಿಗೆ ಮದುವೆ ಮಾಡುವುದು ಕಾನೂನು ಪ್ರಕಾರ ಅಪರಾಧ. ಮಕ್ಕಳ ಸಹಾಯವಾಣಿಗೆ ಯಾರು ಬೇಕಾದರೂ ಕಾಲ್ ಮಾಡಬಹುದು ಅದನ್ನು ಗೌಪ್ಯವಾಗಿಡಲಾಗುತ್ತದೆ. ಯಾರಿಗೂ ಗೊತ್ತಾಗಲ್ಲ. ಭಯ ಪಡಬೇಡಿ ಒಂದು ವೇಳೆ ನಮಗೂ ತಿಳಿಸಿದರೆ ನಾವು ಅದನ್ನು ತಡೆಯುವ ಕೆಲಸ ಇಲಾಖೆ ಜೊತೆ ಕೈಜೋಡಿಸಿ ಕ್ರಮ ಕೈಗೊಳ್ಳಲಾಗುವುದು ಎಂದರು.

ನಂತರ ಮುಗಬಾಳ ಗ್ರಾಮದಲ್ಲಿ ಶಾಲಾ ಮಕ್ಕಳ ಜೊತೆ ಅರಿವು ಜಾಥಾ ನಡೆಸಲಾಯಿತು. ಈಸಂದರ್ಭದಲ್ಲಿಅಂಗನವಾಡಿ ಕಾರ್ಯಕರ್ತೆಯರು, ಗರ್ಭಿಣಿಯರು, ಪಂಚಾಯ್ತಿ ಸಿಬ್ಬಂದಿ ಹಾಜರಿದ್ದರು.

ಪೋಷಕರಿಗೆ ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿ ಶಿವಮ್ಮ ಸಲಹೆ

ನರಸಿಂಹಮೂರ್ತಿ ಲಯನ್ಸ್ ಸಂಸ್ಥೆ ಅಧ್ಯಕ್ಷ

• **ದೇವನಹಳ್ಳಿ:** ಲಯನ್ಸ್ ಸಂಸ್ಥೆ ಸೇವೆ ಅವಿಸ್ಮರಣೀಯವಾದದ್ದು, ಬಡವರಿಗೆ, ಮಧ್ಯಮ ವರ್ಗದ ಜನರಿಗೆ ಆರೋಗ್ಯ ಸೇವೆ, ಉಚಿತ ಸೇವೆಗಳನ್ನು ನೀಡುವುದರ ಮೂಲಕ ಉತ್ತಮವಾಗಿ ಕಾರ್ಯನಿರ್ವಹಿಸಿಕೊಂಡು ಬರುತ್ತಿದೆ ಎಂದು ಪಿ.ಎಂ.ಜೆ.ಎಫ್ ಮಲ್ಟಿಪಲ್ ಕೌನ್ಸಿಲ್ ಛೇರ್ಮನ್ ಎಂ.ಡಿ 317 ಲಯನ್ ಎನ್. ಮೋಹನಕುಮಾರ್ ತಿಳಿಸಿದರು.



ಪಟ್ಟಣದ ಲಯನ್ಸ್ ಸೇವಾ ಭವನದಲ್ಲಿ ಗ್ಯಾದರ್ ಜೊತೆಗೂಡಿ ದೀಪ ಬೆಳಗಿಸುವ ಮೂಲಕ ಉದ್ಘಾಟನೆ ನೆರವೇರಿಸಿ ನೂತನ ಅಧ್ಯಕ್ಷರು ಹಾಗೂ ಪದಾಧಿಕಾರಿಗಳಿಗೆ ಪ್ರಮಾಣ ವಚನ ಬೋಧಿಸಿ ಮಾತನಾಡಿದ ಅವರು, ದೇವನಹಳ್ಳಿ ಲಯನ್ಸ್ ಸಂಸ್ಥೆ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿದ್ದು ಲಯನ್ಸ್ ಸಂಸ್ಥೆಯಿಂದ ಸಾಕಷ್ಟು ಅಧ್ಯಕ್ಷರ ಹಾದಿಯಾಗಿ ಜನರ ಸೇವಾ ಕಾರ್ಯಗಳು ಆಗಿದ್ದು, ಕಣ್ಣಿನ ಶಸ್ತ್ರ ಚಿಕಿತ್ಸೆ, ರಕ್ತದಾನ ಶಿಬಿರ, ವ್ಯಕ್ತಿತ್ವ ವಿಕಸನ ಸೇರಿದಂತೆವಿದ್ಯಾರ್ಥಿಗಳಿಗೆಅನುಕೂಲವಾಗುವ ದೃಷ್ಟಿಯಿಂದ ಪ್ರೋತ್ಸಾಹ ನೀಡುವ ಕೆಲಸ ಮಾಡಿಕೊಂಡು ಬರುತ್ತಿರುವುದು ಶ್ಲಾಘನೀಯ ವಾದದ್ದು, ನೂತನವಾಗಿ ಅಧ್ಯಕ್ಷರಾಗಿರುವ ನರಸಿಂಹಮೂರ್ತಿ ಎಲ್ಲಾ ಪದಾಧಿಕಾರಿಗಳ ಸಹಕಾರದಿಂದ ಮತ್ತಷ್ಟು ಸೇವಾ ಕಾರ್ಯಗಳನ್ನು ಮಾಡುವುದರ ಮೂಲಕ ನೂತನ ಅಧ್ಯಕ್ಷರು ಹೆಚ್ಚು ಕ್ರಿಯಾಶೀಲರಾಗಬೇಕು ಎಂದರು.

ಲಯನ್ಸ್ ಸಂಸ್ಥೆಯ ನೂತನ ಅಧ್ಯಕ್ಷ ಲಯನ್ ನರಸಿಂಹಮೂರ್ತಿ ಮಾತನಾಡಿ, ದೇವನಹಳ್ಳಿ ಲಯನ್ಸ್ ಸಂಸ್ಥೆ 50 ವರ್ಷಗಳಿಂದಲೂ ನಿರಂತರ ಸೇವೆಯನ್ನು ಮಾಡಿಕೊಂಡು ಬರುತ್ತಿರುವ ಏಕೈಕ ಸಂಸ್ಥೆ ನಮ್ಮ ಲಯನ್ಸ್ ಸೇವಾ ಸಂಸ್ಥೆ ಎಂದರೆ ತಪ್ಪಾಗಲಾರದು. ನಮ್ಮ ತಾಲೂಕಿನವರಲ್ಲದೆ ಅಕ್ಕ-ಪಕ್ಕದ ತಾಲೂಕುಗಳಿಂದಲೂ ಇಲ್ಲಿಗೆ ಆಗಮಿಸಿ ಪ್ರಯೋಜನ ಆರೋಗ್ಯ ಶಿಬಿರ, ಕಣ್ಣಿನ ತಪಾಸಣೆ ಮತ್ತು ಶಸ್ತ್ರ ಚಿಕಿತ್ಸೆ ಪಡೆದಿದ್ದಾರೆ. ಆಯುಷ್ ಇಲಾಖೆಯಿಂದ ಹೋಮಿಯೋಪತಿ ಉಚಿತ ತಪಾಸಣೆ ಹಾಗೂ ಔಷಧ ವಿತರಣೆ, ಇದಕ್ಕೆಲ್ಲ ಸಹಕರಿಸಿದ ಸಂಸ್ಥೆಯ ಎಲ್ಲಾ ಹಿರಿಯರಿಗೆ ಕೃತಜ್ಞತೆಗಳು, ಮುಂದೆಯೂ ಇಂತಹ ಇನ್ನೂ ಅನೇಕ ಸಾಮಾಜಿಕ ಕಾರ್ಯಗಳನ್ನು ನಮ್ಮ ಸಂಸ್ಥೆಯಿಂದ ಮಾಡಲಾಗುವುದು ಎಂದರು.

ಈ ವೇಳೆ ಮಾಜಿ ಶಾಸಕ ಲಯನ್ಸ್ ಸೇವಾ ಪ್ರತಿಷ್ಠಾನದ ಅಧ್ಯಕ್ಷ ಲಯನ್ ಜಿ.ಚಂದ್ರಣ್ಣ, ಸೆಕೆಂಡ್ ಹೋಸ್ಪಿಟಲ್ ಲಯನ್ ಸುವರ್ಣ ನಾರಾಯಣಸ್ವಾಮಿ, ಸಿ.ಅಶ್ವತ್ಥನಾರಾಯಣ್, ಇತರರು ಇದ್ದರು.

ಸಮಾಜಸೇವೆಯಿಂದ ಆತ್ಮತೃಪ್ತಿ: ರಾಜೇಂದ್ರನ್

• **ದಾಬಸ್‌ಪೇಟೆ:** ಮಕ್ಕಳು ಓದುವುದರಿಂದ ಒಳ್ಳೆಯ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯ. ನಾವು ಮಾಡುವ ಸೇವೆ ಸಮಾಜಕ್ಕೆ ನೆರವಾಗು ವುದರಿಂದ ಆತ್ಮತೃಪ್ತಿ ಸಿಗುತ್ತದೆ ಎಂದು ರಾಜಮನೆ ಇಂಡಸ್ಟ್ರೀಸ್ ನ ಮಾಲೀಕರಾದ ರಾಜೇಂದ್ರನ್ ಹೇಳಿದರು.



ನೆಲಮಂಗಲ ತಾಲೂಕು ಸೋಂಪುರ ಹೋಬಳಿ ನರಸೀಪುರದ ಅಕ್ಕಾರಾಮ ಪ್ರೌಢಶಾಲೆಯಲ್ಲಿ ಸರ್ಕಾರಿ ಶಾಲಾ ಮಕ್ಕಳಿಗಾಗಿ ನಿರ್ಮಿಸಿದ್ದ "ಹೈಟೆಕ್ ಶೌಚಾಲಯವನ್ನು ಉದ್ಘಾಟನೆ" ಮಾಡಿ ಮಾತನಾಡಿದ ಅವರು, ಶಾಲೆಗೆ ಮಕ್ಕಳ ಕಲಿಕೆಗಾಗಿ ಸ್ಮಾರ್ಟ್ ಬೋರ್ಡ್ ಅಳವಡಿಸಲಾಗಿದೆ. ಮುಂದೆ ಸೋಲಾರ್ ಪ್ಯಾನೆಲ್ ಅಳವಡಿಸಿಕೊಡುವುದಾಗಿ ಅವರು ಭರವಸೆ ನೀಡಿದರು. 6 ಲಕ್ಷ ರೂಪಾಯಿ ವೆಚ್ಚದಲ್ಲಿ ಹೆಣ್ಣು ಹಾಗೂ ಗಂಡು ಮಕ್ಕಳಿಗೆ ಶೌಚಾಲಯವನ್ನು ನಿರ್ಮಿಸಲಾಗಿದೆ. ಅದನ್ನು ಸುಂದರವಾಗಿ ಬಳಸಿಕೊಳ್ಳಬೇಕು ಎಂದು ಹೇಳಿದರು. ದೊಬ್ಬಸ ಸಂಸ್ಥೆ ಅಧ್ಯಕ್ಷ ವಿಜಯ್ ಕುಮಾರ್ ಸಲಹೆ ನೀಡಿದರು. ದೊಬ್ಬಸ ಸಂಸ್ಥೆಯು ಸೇವಾಗುಣವನ್ನು ಮೈಗೂಡಿಸಿಕೊಂಡು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿದೆ. ಅದಕ್ಕೆ ರಾಜಮನೆ ಇಂಡಸ್ಟ್ರೀಸ್ ತಮ್ಮ ಸಿಎಸ್ ಆರ್ ಫಂಡ್ ಮೂಲಕ ನೆರವು ನೀಡುತ್ತಿದೆ ಎಂದು ತಿಳಿಸಿದರು ಸೋಂಪುರ ದೊಬ್ಬಸ ಸಂಸ್ಥೆ ಅಧ್ಯಕ್ಷ ದೇವರಾಜು ತಿಳಿಸಿದರು.

ದೊಬ್ಬಸ ಸಂಸ್ಥೆಯ ಜಿ.ಶ್ರೀರಣ್ಣ, ವಿಶ್ವನಾಥ್ ಬಾಬು, ಚೆನ್ನತಿಮ್ಮಯ್ಯ, ಶಶಿಧರ್ ಯುವರಾಜ್, ಗ್ರಾಪಂ ಮಾಜಿ ಅಧ್ಯಕ್ಷ ಜಿ.ನಾಗರಾಜು ರಾಮಾಂಜನೇಯ ಇದ್ದರು.

ಸೇವಂತಿಗೆ ದರ ದಿಢೀರ್ ಹೆಚ್ಚಳ | ಸಾಲು–ಸಾಲು ಹಬ್ಬಗಳು | ಬೆಳೆಗಾರರಲ್ಲಿ ಖುಷಿ ತಂದ ದರ ಹೆಚ್ಚಳ

ಗಗನಕ್ಕೇರಿದ ಹೂವಿನ ದರ, ಬೆಳೆಗಾರರಿಗೆ ಬಂಪರ್ ಬೆಲೆ

▸ ತಾವರೆಕೆರೆ ಟಿ.ನಾಗರಾಜ್

ದಿಗಂತ ವಿಶೇಷ



• **ತಾವರೆಕೆರೆ:** ಹೂವುಗಳೆಂದರೆ ಅಲಂಕಾರ, ಸೌಂದರ್ಯದ ಸಂಕೇತ, ಹಬ್ಬಹರಿದಿನಗಳಿಗೆ ಹೆಚ್ಚಾಗಿ ಸೇವಂತಿಗೆ, ಚೆಂಡು ಇತರೆ ಹೂವುಗಳು ಬಳಕೆಯಾದರೆ ಹೆಚ್ಚಾಗುತ್ತವೆ. ಮಹಿಳೆಯರ ಅಂದ ಹೆಚ್ಚಿಸಲು ಮಲ್ಲಿಗೆ, ಮಳ್ಳೆ, ಸೇವಂತಿಗೆ, ಕಾಕಡ ಹೂವುಗಳು ಬಳಕೆಯಾಗುತ್ತವೆ. ಅದರಲ್ಲೂ ದೇವರುಗಳಿಗೆ ಹೆಚ್ಚಾಗಿ ಸೇವಂತಿಗೆ ಹೂವು ಬಳಸು ವುದು ವಾಡಿಕೆ. ಆದರೆ ಇತ್ತೀಚಿನ ದಿನಗಳಲ್ಲಿ ದಿಢೀರನೆ ಸೇವಂತಿಗೆ ದರ ಏರಿಕೆಯಾಗಿದ್ದು ತಾವರೆಕೆರೆ ವ್ಯಾಪ್ತಿಯ ಹೂವು ಬೆಳೆಗಾರರ ಮೊಗದಲ್ಲಿ ಮಂದ ಹಾಸ ಮೂಡಿದೆ.

ಕೆಲವೇ ದಿನಗಳಲ್ಲಿ ಆಷಾಢಮಾಸ ಸಮೀಪಿಸುತ್ತಿದ್ದರೂ ಸಹ ಸಭೆ ಸಮಾರಂಭ ದರವೃದ್ಧಿ ಸೇವಂತಿಗೆ ದಿಢೀರನೆ ದರ ಏರಿಕೆಯಾಗಿದ್ದು ಬೆಳೆಗಾರರು ಲಾಭದ ನಿರೀಕ್ಷೆಯಲ್ಲಿದ್ದಾರೆ. ಸೇವಂತಿಗೆ ಕೆಜಿಗೆ 250 ರೂ.ಗಡಿ ದಾಟಿರುವುದು ಇದೇ ಮೊದಲು, ಮುಖ್ಯವಾಗಿ ವೈಟ್ ಸೇವಂತಿ ಕೆಜಿ ಗೆ 750 ರೂ. ಗಡಿ ದಾಟಿ ಇತರೆ ಹೂವುಗಳಾದ ಸೇವಂತಿ ಪರ್ಪಲ್ 140 ರಿಂದ 180 ರೂ., ಮಾರಿಗೋಲ್ಡ್ 240 ರಿಂದ 280 ರೂ., ಪರ್ಪಲ್ 200 ರಿಂದ 260 ರೂ., ಚೆಂಡು 80 ರಿಂದ 100 ರೂ., ಮಲ್ಲಿಗೆ 650 ರೂ., ಕಾಕಡ 360 ರಿಂದ 410 ರೂ., ಕನಕಾಂಬರ 600 ರೂ.ಗೆ ಮಾರಾಟವಾಗುತ್ತಿದ್ದು, ಹೂವು ಬೆಳೆದ ರೈತರ ಕಷ್ಟಗಳು ಪರಿಹಾರವಾಗುವ ಎಲ್ಲಾ ಸೂಚನೆಗಳು ಕಾಣುತ್ತಿವೆ. ಆದರೆ ಗ್ರಾಹಕರ ಜೇಬಿಗೆ ಕತ್ತರಿ ಬಿದ್ದಂತಾಗಿದೆ. ಹೂವಿನ ದರ ಗಗನಕ್ಕೇರಿದ್ದು ಮುಂದಿನ ದಿನಗಳಲ್ಲಿ ಹಬ್ಬಗಳು ಸಮೀಪಿಸುತ್ತಿರುವುದರಿಂದ ಬೆಳೆಗಾರರು ಖುಷಿಯಾಗಿದ್ದಾರೆ. ಕೆಲ ರೈತರು ನೀರಾವರಿ ಪ್ರದೇಶದಲ್ಲಿ ಹೂವಿನ ಬೆಳೆ ಬೆಳೆದು ಬೆಲೆ ಹೆಚ್ಚಾದ ಕಾರಣ ಮಾರುಕಟ್ಟೆಯಲ್ಲಿ ಮಾರಲು ಎಲ್ಲಾ ವ್ಯವಸ್ಥೆ ಮಾಡಿದ ಸಂದರ್ಭದಲ್ಲಿ ಕೆಲವು ದಿನಗಳಿಂದ ಸಾಧಾರಣವಾಗಿ ಸುರಿಯುತ್ತಿರುವ ಮಳೆಯಿಂದ ಹೂವಿನ ಬೆಳೆಯಲ್ಲಿ ನೀರು ನಿಲ್ಲುತ್ತಿದ್ದು, ಹೂವು ಅರಳುವಷ್ಟರಲ್ಲಿ ಹೂವಿನ ದಳಗಳು ಕೊಳೆಯಲಾರಂಭಿಸುವ ಕಾರಣ ಬೆಳೆದಿರುವ ಹೂವು ಮಾರುಕಟ್ಟೆಗೆ ತೆಗೆದುಕೊಂಡು ಹೋಗಲು ಸಾಧ್ಯವಾಗುತ್ತಿಲ್ಲ. ಬೆಲೆಯಿದ್ದರೂ ಪ್ರಯೋಜನವಿಲ್ಲದಂತಾಗಿದೆ. ಆದರೂ ಗಿಡದಲ್ಲಿನ ಮಳೆಯ ಹನಿಗಳನ್ನು ಉದುರಿಸಿ ಚೆನ್ನಾಗಿರುವ ಹೂವುಗಳನ್ನು ಆರಿಸಿ ಮಾರುಕಟ್ಟೆಗೆ ಕೇವಲ ಅರ್ಧದಷ್ಟು ಮಾತ್ರ ತೆಗೆದುಕೊಂಡು ಹೋಗುವ ಸಂಭವ ಹೆಚ್ಚಾಗಿದೆ. ಕಾರಣ ತೋಟಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹೂವು ಬಂದಿಲ್ಲ, ತಡವಾಗಿ ಬಂದಿರುವ ಹೂವಿಗೆ ಬೇಡಿಕೆ ಹೆಚ್ಚಾಗಿದೆ ಎಂದು ರೈತರು ಹೇಳುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ದಿನೆ ದಿನೆ ಹೂವಿನ ಬೇಡಿಕೆ ಹೆಚ್ಚಾಗಿದೆ. ಕಾರಣ ಸರಿಯಾದ ದರ ಸಿಗದೆ ಕೆಲವು ರೈತರು ಹೂವಿನ ಗಿಡಗಳನ್ನು ಕಿತ್ತು ಬೇರೆ ಬೆಳೆ ಇಟ್ಟ ಕಾರಣ ಸಹ ಮಾರುಕಟ್ಟೆಗೆ ಸರಿಯಾದ ಹೂವು ಬರದ ಕಾರಣ ಈ ಹಿನ್ನೆಲೆಯಲ್ಲಿ ಹೂವುಗಳಿಗೆ ಬೇಡಿಕೆ ಹೆಚ್ಚಾಗಿದೆ. ರೈತರು ಹೂವಿನ ಬೆಳೆ ಬೆಳೆಯಲು ಸಾಲ ಮಾಡಿ ಹಾಕಿದ್ದ ಹಣದ ಜೊತೆಗೆ ಕೈತುಂಬಾ ಲಾಭಕಂಡು ಸಹ ಸ್ವಲ್ಪಮಟ್ಟಿಗೆ ರೈತ ನಿಟ್ಟುಸಿರು ಬಿಟ್ಟಂತಾಗಿದೆ.

ನೆಮ್ಮದಿಯ ಜೀವನಕ್ಕೆ ದಾರಿ

ಮಾರುಕಟ್ಟೆಯಲ್ಲಿ ಹೂವುಗಳ ಬೇಡಿಕೆ ಕುಸಿದಾಗ ವ್ಯಾಪಾರಿಗಳು ಕೇಳಿದ ಬೆಲೆಗೆ ನಾವು ಹೂವು ಮಾರಾಟ ಮಾಡಬೇಕಾದ ಸ್ಥಿತಿ ಇತ್ತು. ಈಗ ಹೂವಿನ ಬೇಡಿಕೆ ಹೆಚ್ಚಾಗಿರುವುದರಿಂದ ನಾವು ಕೇಳಿದ ಬೆಲೆಗೆ ವ್ಯಾಪಾರಿಗಳು ಹೂವು ಖರೀದಿಸುತ್ತಿದ್ದಾರೆ. ಇತ್ತೀಚಿಗೆ ಬೆಳೆದ ಎಲ್ಲಾ ತರಕಾರಿಗಳು ದರ ಸಿಗದೆ ಮಕ್ಕಳ ವಿದ್ಯಾಭ್ಯಾಸಕ್ಕೆ ಮಾಡಿದ ಸಾಲಕ್ಕೆ ಬಡ್ಡಿ ಕಟ್ಟಲಾಗದೆ ಮತ್ತು ಜೀವನ ಸಾಗಿಸಲು ತುಂಬಾ ತೊಂದರೆ ಅನುಭವಿಸುತ್ತಿದ್ದೆವು. ದಿಢೀರನೆ ಏರಿದ ಸೇವಂತಿ ಹೂವಿನ ಜೊತೆಗೆ ಮುಖ್ಯವಾಗಿ ವೈಟ್, ಮಿರಾಬೆಲ್ ಬೆಳೆದು ಬೆಳೆಗಳು



ಚೆನ್ನಾಗಿ ಬೆಳೆದು ಕೈತುಂಬಾ ಹಣ ಸಿಕ್ಕಿದಂತಾಗಿದೆ. ಬೆಲೆಗೆ ನಮ್ಮ ಸಾಲಗಳು ತೀರಿ ನಮ್ಮ ಕುಟುಂಬದ ಪೋಷಣೆಗೆ ಹಾಗೂ ನೆಮ್ಮದಿಯ ಜೀವನ ನಡೆಸಲು ದಾರಿಯಾಗಿದೆ ಎಂದು ರೈತ ನಾರಾಯಣಸ್ವಾಮಿ ಸಂತಸವ್ಯಕ್ತಪಡಿಸಿ ಹೇಳಿದರು.

ಇತ್ತೀಚಿಗೆ ಅಧಿಕ ಬಿಸಿಲು ಬಂದು ತೋಟಗಳಲ್ಲಿ ಮೊಗ್ಗಿನಲ್ಲಿ ಹೂವುಗಳು ಉದುರಿದೆ. ಆದರೆ ಇತ್ತೀಚಿಗೆ ಸುರಿದ ಮಳೆಯಿಂದ ಅಲ್ಪ ಸ್ವಲ್ಪ ಹೂವು ಮಾರುಕಟ್ಟೆಗೆ ಬರುತ್ತಿದೆ. ಇದರಿಂದ ಹೂವಿನ ಬೆಲೆ ಗಗನಕ್ಕೇರಿದ್ದು ಜನಸಾಮಾನ್ಯರಿಗೆ ಖರೀದಿಸಲು ಕಷ್ಟವಾಗುತ್ತಿದೆ. ಹೂವು ಬೆಳೆದ ರೈತರಿಗೆ ಲಾಭದಲ್ಲಿ ಬಂಪರ್ ಆದರೆ ಗ್ರಾಹಕರ ಜೇಬಿಗೆ ಕತ್ತರಿ ಬಿದ್ದಂತಾಗಿದೆ. ಆದರೆ ಹಬ್ಬಹರಿದಿನಗಳಲ್ಲಿ ದೇವರನ್ನು ಪೂಜಿಸಲು ಹೂವು ಪ್ರಮುಖ ಪಾತ್ರ ವಹಿಸಿದೆ ಹೂವು ಇಲ್ಲದ ಪೂಜೆ ಮಾಡಲು ಸಾಧ್ಯವಿಲ್ಲ, ಎಷ್ಟೇ ದರ ಏರಿಕೆಯಾದರೂ ಹೂವು ಖರೀದಿ ಮಾಡಿ ಹಬ್ಬ ಆಚರಿಸಬೇಕಾದ ಸಂದರ್ಭ ಬಂದಿದೆ.

■ ಭವಾನಿ, ಗೃಹಿಣಿ

ಮುಂದಿನ ವರ್ಷದ ಆರಂಭದಲ್ಲಿ ಭಾರತಕ್ಕೆ ಟ್ರಂಪ್

ಭಾರತ ಅಮೆರಿಕದ ಆಪ್ತ ಪಾಲುದಾರ



• **ನ್ಯೂಯಾರ್ಕ್:** ಭಾರತ-ಅಮೆರಿಕದ ಅತ್ಯಂತ ಆಪ್ತ ಪಾಲುದಾರ ಮತ್ತು ಮಿತ್ರ ರಾಷ್ಟ್ರವಾಗಿದೆ. ಪ್ರಧಾನಿ ಮೋದಿ ಮತ್ತು ಅಧ್ಯಕ್ಷ ಟ್ರಂಪ್ ನಡುವಿನ ಸಂಬಂಧ ಅತ್ಯುತ್ತಮವಾಗಿದೆ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ತಿಳಿಸಿದ್ದಾರೆ. ಮುಖ್ಯವಾಗಿ ಟ್ರಂಪ್ ಅವರು ಮುಂದಿನ ವರ್ಷದ ಆರಂಭದಲ್ಲಿ ಭಾರತಕ್ಕೆ ಭೇಟಿ ನೀಡುವ ಸಾಧ್ಯತೆ ಇದೆ ಎಂದು ಹೇಳಿದ್ದಾರೆ.

ಸುದ್ದಿ ಸಂಸ್ಥೆಯೊಂದರ ಜತೆಗೆ ಮಾತನಾಡಿರುವ ರುಬಿಯೋ, ಈ ಭೇಟಿ, ಅಧ್ಯಕ್ಷ ಟ್ರಂಪ್ ಮತ್ತು ಪ್ರಧಾನಿ ನರೇಂದ್ರ ಮೋದಿ ನಡುವಿನ ಬಲವಾದ ವೈಯಕ್ತಿಕ ಸಂಬಂಧವನ್ನು ಎತ್ತಿ ತೋರಿಸುತ್ತದೆ ಎಂದು ತಿಳಿಸಿದ್ದಾರೆ. ಅಧ್ಯಕ್ಷರ ಭೇಟಿಯು ಸಿದ್ಧತೆಗಳನ್ನು ಅಂತಿಮಗೊಳಿಸಲು ಈ ವರ್ಷದ ಅಂತ್ಯದೊಳಗೆ ತಾವು ಭಾರತಕ್ಕೆ ಪ್ರಯಾಣಿಸುವ ಸಾಧ್ಯತೆಯಿದೆ ಎಂದು ರುಬಿಯೋ ಸುಳಿವು ನೀಡಿದ್ದಾರೆ. ಈ ಪ್ರವಾಸ, ಫೆಬ್ರವರಿ 2020 ರ ನಂತರ ಟ್ರಂಪ್ ಅವರ ಮೊದಲ ಭಾರತ ಭೇಟಿಯಾಗಲಿದ್ದು, ಅವರು ಎರಡನೇ ಬಾರಿಗೆ ಶ್ವೇತಭವನಕ್ಕೆ ಮರಳಿದ ನಂತರದ ಮೊದಲ ಪ್ರವಾಸವಾಗಲಿದೆ.

ಉಭಯ ನಾಯಕರು ಕೊನೆಯದಾಗಿ ಫ್ರಾನ್ಸ್‌ನ ಇವಿಯಾನ್‌ನಲ್ಲಿ ನಡೆದ ಜಿ7 ಶೃಂಗಸಭೆಯ ಸಂದರ್ಭದಲ್ಲಿ ಭೇಟಿಯಾಗಿದ್ದರು. ಇದು 16 ತಿಂಗಳುಗಳಲ್ಲಿ ಅವರ ಮೊದಲ ದ್ವಿಪಕ್ಷೀಯ ಸಭೆಯಾಗಿತ್ತು. ಭಾರತ ಮತ್ತು ಅಮೆರಿಕ ಪ್ರಸ್ತುತ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಬಗ್ಗೆ ಮಾತುಕತೆ ನಡೆಸುತ್ತಿದ್ದು, ಇದು ಪೂರ್ಣಗೊಳ್ಳುವ ಹಂತದಲ್ಲಿದೆ ಎಂದು ರುಬಿಯೊ ಹೇಳಿದ್ದಾರೆ.

ಜತೆಗೆ, ಎರಡೂ ರಾಷ್ಟ್ರಗಳು ಕ್ವಾಡ್ ಒಕ್ಕೂಟದ ಮತ್ತೊಂದು ಸಭೆಯನ್ನು ಎದುರು ನೋಡುತ್ತಿವೆ. ಇಂಧನ ಪೂರೈಕೆಯನ್ನು ಹೆಚ್ಚಿಸಲು ನಿಕಟವಾಗಿ ಕಾರ್ಯನಿರ್ವಹಿಸುತ್ತಿವೆ ಎಂದೂ ವಿದೇಶಾಂಗ ಕಾರ್ಯದರ್ಶಿ ಹೇಳಿದ್ದಾರೆ.

ಪ್ರಧಾನಿಯನ್ನು ಕೊಂಡಾಡಿದ ರುಬಿಯೊ!

ವಿಶ್ವದ ಅತ್ಯಂತ ಹಳೆಯ ಮತ್ತು ದೊಡ್ಡ ಪ್ರಜಾಪ್ರಭುತ್ವ ದೇಶಗಳಾಗಿ ಅಮೆರಿಕ ಮತ್ತು ಭಾರತ ಸಮಾನ ಮೌಲ್ಯಗಳನ್ನು ಹಂಚಿಕೊಂಡಿವೆ. ಉಭಯ ರಾಷ್ಟ್ರಗಳು ವಿವಿಧ ಕ್ಷೇತ್ರಗಳಲ್ಲಿ ಕಾರ್ಯತಂತ್ರವನ್ನು ಬಲಪಡಿಸುತ್ತಿವೆ. ಇದಲ್ಲದೆ, ಭಾರತೀಯ ಅಮೆರಿಕದ ಸಮುದಾಯ ಅಮೆರಿಕವನ್ನು ಸಮೃದ್ಧಗೊಳಿಸುತ್ತಿದೆ ಮತ್ತು ಎರಡೂ ದೇಶಗಳ ನಡುವೆ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತಿದೆ. ಪ್ರಧಾನಿ ಮೋದಿ ನಾಯಕತ್ವದಲ್ಲಿ ಭಾರತ ಅದ್ಭುತ ಆರ್ಥಿಕ ಪ್ರಗತಿ ಸಾಧಿಸುತ್ತಿದೆ, ಪ್ರಭಾವಿ ಜಾಗತಿಕ ಶಕ್ತಿಯಾಗಿ ಹೊರಹೊಮ್ಮುತ್ತಿದೆ ಎಂದಿದ್ದಾರೆ.

ಭಾರತ ವಿಶ್ವ ಸಂಜೀವಿನಿ

ಜಾಗತಿಕ ಸಮಸ್ಯೆಗಳಿಗೆ ತಕ್ಷಣವೇ ಸಹಾಯಹಸ್ತ ಚಾಚುವ ದೇಶ

ಜಗತ್ತಿನಾದ್ಯಂತ ಯಾರೇ ಕಷ್ಟದಲ್ಲಿದ್ದರೂ ಭಾರತ ತನ್ನ ಸಹಾಯಹಸ್ತ ಚಾಚುತ್ತದೆ. ಪ್ರಾಕೃತಿಕ ವಿಕೋಪ, ಸಾಂಕ್ರಾಮಿಕ ರೋಗ ಮತ್ತು ಇತರ ಆಂತರಿಕ ಸಮಸ್ಯೆಗಳಿಂದ ದೇಶವು ತತ್ತರಿಸಿ ಹೋಗಿರುವಾಗ ಭಾರತ ತಕ್ಷಣವೇ ತನ್ನ ಕೈಲಾಗುವ ಸಹಾಯ ಮಾಡುತ್ತದೆ. ಇದಕ್ಕೆ ಹಲವು ಉದಾಹರಣೆಗಳು ಸಹ ಇವೆ. ಇತ್ತೀಚೆಗಷ್ಟೇ ನವವೆನೆಜುವೆಲಾದಲ್ಲಿ ಸಂಭವಿಸಿದ ಅವಳಿ ಭೂಕಂಪಗಳಿಂದಾಗಿ ಸುಮಾರು ಸಾವಿರಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದು, ಇನ್ನು ಅನೇಕರು ನಾಪತ್ತೆಯಾಗಿದ್ದಾರೆ. ಕೂಡಲೇ ಭಾರತ ಸರ್ಕಾರ 41 ಸದಸ್ಯರ ವೈದ್ಯಕೀಯ ತಂಡವನ್ನು ಅಲ್ಲಿಗೆ ನಿಯೋಜಿಸಿದೆ. '60 ಪ್ಯಾರಾಚೂಟ್ ಫೀಲ್ಡ್ ಆಂಬ್ಯುಲೆನ್ಸ್' ಪಡೆಗೆ ಸೇರಿದ ಈ ತಂಡ 'ಆಪರೇಷನ್ ಅಮಿಸ್ತಾಡ್' ಕಾರ್ಯಾಚರಣೆಯ ಭಾಗವಾಗಿ ಭಾರತೀಯ ವಾಯುಪಡೆಯ ಸಿ-17 ಯುದ್ಧ ವಿಮಾನದ ಮೂಲಕ ಪ್ರಯಾಣ ಬೆಳೆಸಿದೆ.



ಪ್ರಮುಖಾಂಶಗಳು

- ಆಪರೇಷನ್ ಅಮಿಸ್ತಾಡ್ ಅನ್ವಯದಲ್ಲಿ 41 ಸದಸ್ಯರ ತಂಡ ಕಳುಹಿಸಿದ ಭಾರತ
- ಫೀಲ್ಡ್ ಆಸ್ಪತ್ರೆ, 35 ಟನ್ ಸಹಾಯ ಸಾಮಗ್ರಿ ಹೊತ್ತ ಎರಡು ಸಿ-17 ವಿಮಾನಗಳು
- ನೇಪಾಳ, ಯೆಮೆನ್, ದಕ್ಷಿಣ ಸುಡಾನ್, ಮ್ಯಾನ್ಮಾರ್ ಶ್ರೀಲಂಕಾದಲ್ಲೂ ಮಾದರಿಯಾಗಿದ್ದ ಭಾರತ
- ಗಡಿ ರಕ್ಷಣೆಯನ್ನು ಮೀರಿ ವಿಸ್ತರಿಸಿರುವ ಸಶಸ್ತ್ರ ಪಡೆಗಳ ವ್ಯಾಪ್ತಿ

ಸುದ್ದಿ ಸಮಗ್ರ

ರಕ್ಷಣಾ ಕಾರ್ಯಾಚರಣೆ (ದಿ ಮಿಷನ್)

ಒಂದು ಫೀಲ್ಡ್ ಆಸ್ಪತ್ರೆ, 35 ಟನ್ ಪರಿಹಾರ ಸಾಮಗ್ರಿಗಳು ಮತ್ತು 41 ಸದಸ್ಯರ ರಕ್ಷಣಾ ತಂಡವನ್ನು ಹೊತ್ತ ಎರಡು ಸಿ-17 ವಿಮಾನಗಳನ್ನು ಕಳುಹಿಸಲಾಗಿದೆ. ತೈಲ ಸಂಪದ್ಭರಿತ ದಕ್ಷಿಣ ಅಮೆರಿಕ ದೇಶವಾದ ವೆನೆಜುವೆಲಾದಲ್ಲಿ ಸದ್ಯ ರಕ್ಷಣಾ ಕಾರ್ಯಗಳು ಬಿರುಸಿನಿಂದ ನಡೆಯುತ್ತಿದ್ದು, ನಾಪತ್ತೆಯಾದವರಿಗಾಗಿ ಅಧಿಕಾರಿಗಳು ಹುಡುಕಾಟ ನಡೆಸುತ್ತಿದ್ದಾರೆ. ಸಂತ್ರಸ್ತರಿಗೆ ನೆರವು ನೀಡುವುದು ಈ ನಿಯೋಜನೆಯ ಮುಖ್ಯ ಉದ್ದೇಶವಾಗಿದೆ.

ಜಾಗತಿಕ ಸ್ಪಂದನೆಯಲ್ಲಿ ಭಾರತವೇ ಮಾದರಿ

ಭಾರತದ ಸಶಸ್ತ್ರ ಪಡೆಗಳು ದೇಶದ ಗಡಿಗಳನ್ನು ದಾಟಿ ಒದಗಿಸುವ ಮಾನವೀಯ ನೆರವು ಮತ್ತು ವಿಪತ್ತು ಪರಿಹಾರ (ಹೆಚ್ಎಡಿಆರ್) ಕಾರ್ಯಾಚರಣೆಗಳ ಸುದೀರ್ಘ ಪಟ್ಟಿಗೆ 'ಆಪರೇಷನ್ ಅಮಿಸ್ತಾಡ್' ಇತ್ತೀಚಿನ ಸೇರ್ಪಡೆ. ಕಳೆದ ಒಂದು ದಶಕದಲ್ಲಿ ಸೇನೆ, ನೌಕಾಪಡೆ ಮತ್ತು ವಾಯುಪಡೆಗಳು ಪ್ರಕೃತಿ ವಿಕೋಪಗಳಿಗೆ ಸ್ಪಂದಿಸುವುದರಿಂದ ಹಿಡಿದು ಯುದ್ಧ ಪೀಡಿತ ಪ್ರದೇಶಗಳಿಂದ ಜನರನ್ನು ಸ್ಥಳಾಂತರಿಸುವವರೆಗೆ ವಿದೇಶಗಳಲ್ಲಿ ರಕ್ಷಣೆ ಮತ್ತು ಪರಿಹಾರ ಕಾರ್ಯಗಳನ್ನು ನಡೆಸುತ್ತಲೇ ಬಂದಿವೆ. ದೂರ ಅಥವಾ ಭೂಪ್ರದೇಶದ ಸವಾಲುಗಳನ್ನು ಲೆಕ್ಕಿಸದೆ, ತುರ್ತು ಸಂದರ್ಭಗಳಲ್ಲಿ ಅತ್ಯಂತ ವೇಗವಾಗಿ ಸ್ಪಂದಿಸುವ ಭಾರತದ ಸಾಮರ್ಥ್ಯವನ್ನು ಈ ಕಾರ್ಯಾಚರಣೆಗಳು ಪ್ರತಿಬಿಂಬಿಸಿವೆ.

ನೇಪಾಳ ಮತ್ತು ಯೆಮೆನ್ 2015

2015ರಲ್ಲಿ ನೇಪಾಳದಲ್ಲಿ ಸಂಭವಿಸಿದ ಭೀಕರ ಭೂಕಂಪದ ನಂತರ 'ಆಪರೇಷನ್ ಮೈತ್ರಿ' ಎಂಬ ಕಾರ್ಯಾಚರಣೆಯಲ್ಲಿ ನೆರವು ಕಳುಹಿಸಿದ ಮೊದಲ ದೇಶ ಭಾರತ. ಸೇನೆ ಮತ್ತು ವಾಯುಪಡೆಯು ಸಾವಿರಾರು ಜನರನ್ನು ರಕ್ಷಿಸಿ, ಫೀಲ್ಡ್ ಆಸ್ಪತ್ರೆಗಳನ್ನು ಸ್ಥಾಪಿಸಿತಲ್ಲದೆ ಭೂಕಂಪ ಪೀಡಿತ ಪ್ರದೇಶಗಳಿಗೆ ಅಗತ್ಯ ಪರಿಹಾರ ಸಾಮಗ್ರಿಗಳನ್ನು ತಲುಪಿಸಿತು. ಅದೇ ವರ್ಷ, ಯೆಮೆನ್ ಅಂತರ್ ಯುದ್ಧದ ವೇಳೆ, ಭಾರತೀಯ ನೌಕಾಪಡೆ ಮತ್ತು ವಾಯುಪಡೆಯು 'ಆಪರೇಷನ್ ರಾಹತ್' ನಡೆಸಿ ಏಡನ್ ಬಂದರು ನಗರದಿಂದ 4,700 ಕ್ಕೂ ಹೆಚ್ಚು ಭಾರತೀಯರನ್ನು ಮತ್ತು ಸುಮಾರು 1,000 ವಿದೇಶಿ ನಾಗರಿಕರನ್ನು ಸ್ಥಳಾಂತರಿಸಿತು. ಈ ಕಾರ್ಯಾಚರಣೆ 40ಕ್ಕೂ ಹೆಚ್ಚು ದೇಶಗಳ ನಾಗರಿಕರನ್ನು ರಕ್ಷಿಸಿದ್ದು, ಇದು ಇಂದಿಗೂ ಭಾರತದ ಅತಿದೊಡ್ಡ ಸ್ಥಳಾಂತರ ಕಾರ್ಯಾಚರಣೆಗಳಲ್ಲಿ ಒಂದೆನಿಸಿದೆ.

ಗಡಿ ರಕ್ಷಣೆ ಮೀರಿ

ಒಟ್ಟಾರೆಯಾಗಿ, ಈ ಕಾರ್ಯಾಚರಣೆಗಳು ಭಾರತೀಯ ಸಶಸ್ತ್ರ ಪಡೆಗಳ ಪಾತ್ರ ದೇಶದ ಗಡಿಗಳನ್ನು ಕಾಯುವುದನ್ನು ಮೀರಿ ವಿಸ್ತರಿಸಿದೆ ಎಂಬುದನ್ನು ತೋರಿಸುತ್ತದೆ. ಭಾರತೀಯ ವಾಯುಪಡೆ ಭಾರತದ ಒಳಗಡೆ ಮತ್ತು ವಿದೇಶಗಳಲ್ಲಿ ವಿಪತ್ತು ಪೀಡಿತ ಪ್ರದೇಶಗಳಿಗೆ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ಸಿಬ್ಬಂದಿಯನ್ನು ನಿಯಮಿತವಾಗಿ ವಿಮಾನಗಳ ಮೂಲಕ ತಲುಪಿಸುತ್ತಿದೆ. ಸ್ವದೇಶದಲ್ಲಾಗಲಿ ಅಥವಾ ಸಾವಿರಾರು ಕಿಲೋಮೀಟರ್ ದೂರದಲ್ಲಾಗಲಿ, ಮಾನವೀಯ ಬಿಕ್ಕಟ್ಟುಗಳು ಎದುರಾದಾಗ ತಕ್ಷಣವೇ ಸ್ಪಂದಿಸುವ ದೇಶದ ಸಾಮರ್ಥ್ಯವನ್ನು ಈ ದಾಖಲೆಗಳೇ ಸಾರಿ ಹೇಳುತ್ತವೆ ಎಂದು ಸೇನಾಪಡೆಯ ಅಧಿಕಾರಿಯೊಬ್ಬರು ಹೆಮ್ಮೆಯಿಂದ ಹೇಳುತ್ತಾರೆ

ದಕ್ಷಿಣ ಸುಡಾನ್, ಸಾಂಕ್ರಾಮಿಕ ರೋಗ

2016ರಲ್ಲಿ ದಕ್ಷಿಣ ಸುಡಾನ್‌ನ ಜುಬಾದಲ್ಲಿ ಹಿಂಸಾಚಾರ ಭುಗಿಲೆದ್ದಾಗ, ಭಾರತ 'ಆಪರೇಷನ್ ಸಂಕಟ್ ಮೋಚನ್' ನಡೆಸಿ, ನೆಲದ ಮೇಲಿನ ಕಠಿಣ ಮತ್ತು ಅಸ್ಥಿರ ಸುರಕ್ಷತಾ ಪರಿಸ್ಥಿತಿಯ ಹೊರತಾಗಿಯೂ ತನ್ನ 156 ನಾಗರಿಕರನ್ನು ವಿಮಾನದ ಮೂಲಕ ಸುರಕ್ಷಿತವಾಗಿ ಏರ್‌ಲಿಫ್ಟ್ ಮಾಡಿತು. 2020ರ ಕೋವಿಡ್ ಸಾಂಕ್ರಾಮಿಕ ಅವಧಿಯಲ್ಲಿ, ಭಾರತೀಯ ನೌಕಾಪಡೆ 'ಆಪರೇಷನ್ ಸಮುದ್ರ ಸೇತು' ಎಂಬ ಪ್ರಮುಖ ಸ್ವದೇಶ ವಾಪಸಾತಿ ಕಾರ್ಯಾಚರಣೆ ಪ್ರಾರಂಭಿಸಿತು. ಇದು ಗಲ್ಫ್ ದೇಶಗಳಿಂದ ಮತ್ತು ಪ್ರಪಂಚದ ಇತರ ಪ್ರದೇಶಗಳಲ್ಲಿ ಸಿಲುಕಿಕೊಂಡಿದ್ದ ಸಾವಿರಾರು ಭಾರತೀಯರನ್ನು ಸಮುದ್ರ ಮಾರ್ಗದ ಮೂಲಕ ಸುರಕ್ಷಿತವಾಗಿ ತಾಯ್ನಾಡಿಗೆ ಕರೆತಂದಿತು.



ಮ್ಯಾನ್ಮಾರ್ ಮತ್ತು ಶ್ರೀಲಂಕಾ 2025

2025ರಲ್ಲಿ ಮ್ಯಾನ್ಮಾರ್‌ನಲ್ಲಿ ಪ್ರಬಲ ಭೂಕಂಪ ಸಂಭವಿಸಿದಾಗ, ಭಾರತೀಯ ಸೇನೆ 'ಆಪರೇಷನ್ ಬ್ರಹ್ಮ' ಹೆಸರಲ್ಲಿ 60 ಹಾಸಿಗೆಗಳ ಫೀಲ್ಡ್ ಆಸ್ಪತ್ರೆಯನ್ನು ಸ್ಥಾಪಿಸಿತು. ಚೇತರಿಕೆ ಪ್ರಯತ್ನಗಳನ್ನು ಬೆಂಬಲಿಸಲು ನೌಕಾಪಡೆ ಮತ್ತು ವಾಯುಪಡೆಯು ನೂರಾರು ಟನ್ ಪರಿಹಾರ ಸಾಮಗ್ರಿಗಳನ್ನು ಆ ದೇಶಕ್ಕೆ ಸಾಗಿಸಿತು. ಅದೇ ವರ್ಷದ ಕೊನೆಯಲ್ಲಿ, ಶ್ರೀಲಂಕಾದಲ್ಲಿ 'ದಿತ್ವಾ' ಚಂಡಮಾರುತದ ನಂತರ, ಭಾರತ 'ಆಪರೇಷನ್ ಸಾಗರ್ ಬಂಧು' ಕಾರ್ಯಾಚರಣೆ ಪ್ರಾರಂಭಿಸಿತು. ಈ ಕಾರ್ಯಾಚರಣೆ, ಸಂಪರ್ಕ ಜಾಲಗಳನ್ನು ಮರುಸ್ಥಾಪಿಸಲು ಸಹಾಯ ಮಾಡಿತು, 2,500 ಕ್ಕೂ ಹೆಚ್ಚು ಜನರನ್ನು ಸ್ಥಳಾಂತರಿಸಿತು ಮತ್ತು ಪೀಡಿತ ಸಮುದಾಯಗಳಿಗೆ 1,000 ಟನ್‌ಗಿಂತಲೂ ಹೆಚ್ಚು ಪರಿಹಾರ ಸಾಮಗ್ರಿ ವಿತರಿಸಿತು.

ಮತಾಂತರವಾಗಿದ್ದರೆ ಹಿಂದುಳಿದ ಜಾತಿ ಮುಸ್ಲಿಂ ಸ್ಥಾನಮಾನ ನೀಡಲಾಗದು

• **ಚೆನ್ನೈ:** ಇಸ್ಲಾಂಗೆ ಮತಾಂತರಗೊಂಡ ವ್ಯಕ್ತಿಗಳಿಗೆ ಹಿಂದುಳಿದ ಜಾತಿಯ ಮುಸಲ್ಮಾನನೆಂಬ ಸ್ಥಾನಮಾನ ನೀಡಲಾಗದು ಎಂದು ಮದ್ರಾಸ್ ಹೈಕೋರ್ಟ್ ಮಹತ್ವದ ತೀರ್ಪಿತ್ತಿದೆ ಮತ್ತು ಈ ವಿಷಯದಲ್ಲಿ ತಮಿಳುನಾಡು ಸರಕಾರದ 2024ರ ಆದೇಶವನ್ನು ನ್ಯಾಯಾಲಯ ತಳ್ಳಿಹಾಕಿದೆ.

ಹಿಂದುಳಿದ ಜಾತಿ, ತೀರಾ ಹಿಂದುಳಿದ ಜಾತಿಗಳು, ಅನುಸೂಚಿತ ಸಮುದಾಯಗಳು ಮತ್ತು ಪರಿಶಿಷ್ಟ ಜಾತಿ ಸಹಿತ ಸುಮಾರು ಏಳು ಜಾತಿ ವರ್ಗಗಳ ಜನರು ಇಸ್ಲಾಂಗೆ ಮತಾಂತರಗೊಂಡ ಬಳಿಕ, ಮುಸ್ಲಿಂ ಸಮುದಾಯದ ಹಿಂದುಳಿದ ಜಾತಿ -ವರ್ಗ ಸ್ಥಾನಮಾನ ಹೊಂದಬಹುದೆಂಬ ತಮಿಳುನಾಡು ಸರಕಾರದ ಆದೇಶ ತೀರಾ ಅಸಾಂವಿಧಾನಿಕ ಎಂದು ಹೈಕೋರ್ಟ್ ಹೇಳಿದೆ. ಮತಾಂತರಗೊಂಡ ವ್ಯಕ್ತಿ ಮುಸ್ಲಿಂ ಸಮುದಾಯದ ಹಿಂದುಳಿದ ಜಾತಿ ಸ್ಥಾನಮಾನಕ್ಕೆ ಅರ್ಹನಾಗುವಂತಿಲ್ಲ. ಆತ ಮುಸಲ್ಮಾನ ಅಷ್ಟೆ ಎಂದು ನ್ಯಾಯಮೂರ್ತಿಗಳಾದ ಜಿ.ಆರ್. ಸ್ವಾಮಿನಾಥನ್ ಮತ್ತು ಪಿ.ಬಿ.ಬಾಲಾಜಿ ಅವರನ್ನು ಒಳಗೊಂಡ ನ್ಯಾಯಪೀಠ ತೀರ್ಪಿತ್ತಿದೆ.

ತಮಿಳುನಾಡಿನ ತೂತುಕುಡಿ ಜಿಲ್ಲೆ ಮೂಲದವನು, ಮೂಲತಃ ಹಿಂದುವಾಗಿದ್ದು ಇಸ್ಲಾಂಗೆ ಮತಾಂತರಗೊಂಡಿರುವ 33ರ ಯುವಕನೋರ್ವನ ಅರ್ಜಿ ವಿಚಾರಣೆ ಸಂದರ್ಭ ಉಚ್ಚ ನ್ಯಾಯಾಲಯ ಪ್ರಸ್ತುತ ಮಹತ್ವದ ತೀರ್ಪು ನೀಡಿದೆ. ಈ ಯುವಕ 2015ರಲ್ಲಿ ಇಸ್ಲಾಂಗೆ ಮತಾಂತರಗೊಂಡಿದ್ದು, ಬೆನ್ನಲ್ಲೇ ತನ್ನ ಹೆಸರು ಬದಲಿಸಿದ್ದ ಮತ್ತು ಇಸ್ಲಾಮಿಕ್ ಸಂಪ್ರದಾಯಗಳ ಪ್ರಕಾರ ವಿವಾಹವಾಗಿದ್ದ. ನಂತರ ತಮಿಳುನಾಡು ಸರಕಾರದ 2024ರ ಆದೇಶದಂತೆ, ತಮಿಳುನಾಡಿನಲ್ಲಿ ಹಿಂದುಳಿದ ಜಾತಿಗಳಿಗೆ ಸೇರಿದ ಮುಸಲ್ಮಾನರೆಂದು ಗುರುತಿಸಲಾಗುವ ಏಳು ಜಾತಿಗಳ ಪೈಕಿ ಒಂದಾಗಿರುವ, ಮುಸ್ಲಿಂ ಲೆಬ್ಬಾಯ್ ಜಾತಿಗೆ ಸೇರಿದವ ತಾನೆಂಬುದಾಗಿ ತನಗೆ ಮಾನ್ಯತೆ ಪ್ರಮಾಣಪತ್ರ ನೀಡಬೇಕೆಂದು ಈ ಯುವಕ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದ.

ಕಿರುಸುದ್ದಿ

ಕ್ರಿಕೆಟಿಗ ಅಖ್ತರ್ ಸೋದರನ ಅಂತ್ಯಕ್ರಿಯೆಯಲ್ಲಿ ಉಗ್ರರು!

• **ಇಸ್ಲಾಮಾಬಾದ್:** ಪಾಕಿಸ್ತಾನಿ ಕ್ರಿಕೆಟಿಗ ಶೋಯೆಬ್ ಅಖ್ತರ್ ಹಿರಿಯ ಸಹೋದರ ಶಾಹಿದ್ ಅಂತ್ಯಕ್ರಿಯೆಯಲ್ಲಿ ಲಷ್ಕರ್ ಉಗ್ರರು ಪಾಲ್ಗೊಂಡಿದ್ದು, ಭಾರತೀಯ ಮತ್ತು ಅಂತಾರಾಷ್ಟ್ರೀಯ ಭದ್ರತಾ ಸಂಸ್ಥೆಗಳ ಗಮನಸೆಳೆದಿದೆ. ಇತ್ತೀಚೆಗೆ ಇಸ್ಲಾಮಾಬಾದ್‌ನಲ್ಲಿ ಶೋಯೆಬ್ ಹಿರಿಯ ಸಹೋದರ ಶಾಹಿದ್ ಅಂತ್ಯಕ್ರಿಯೆಯಲ್ಲಿ ಲಷ್ಕರ್ ಎ ತೈಬಾ (ಎಲ್‌ಇಟಿ) ಉಗ್ರ ಮುಖ್ಯಸ್ಥ ಸೈಫುಲ್ಲಾ ಕಸೂರಿ ಭಾಗವಹಿಸಿದ್ದು, ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಯೋತ್ಪಾದಕ ರಾಷ್ಟ್ರದ ಬಣ್ಣ ಬಯಲಾಗಿದೆ. ಭಾರತದಲ್ಲಿ ಅತ್ಯಂತ ಭೀಕರ 26/11 ಮುಂಬೈ ಮತ್ತು ಪಹಲ್ಗಾಮ್ ದಾಳಿಗಳನ್ನು ಮಾಡಿದ ಲಷ್ಕರ್ ಉಗ್ರ ಸಂಘಟನೆಯ ಭಯೋತ್ಪಾದಕರು ಅಂತ್ಯಕ್ರಿಯೆಯಲ್ಲಿ ಹಾಜರಿದ್ದರು. ಕಸೂರಿ ಮಾತ್ರವಲ್ಲದೆ, ಎಲ್‌ಇಟಿ ನಿಯಂತ್ರಣದ ಪಾಕಿಸ್ತಾನ ಮರ್ಕಾಜಿ ಮುಸ್ಲಿಮ್ ಲೀಗ್ (ಪಿಎಂಎಂಎಲ್) ಮುಖ್ಯಸ್ಥ ಇನಾಮ್ ಉರ್ ರೆಹ್ಮಾನ್ ಸಹ ಸ್ಥಳದಲ್ಲಿದ್ದ.

ಕೆಂಪು ಕೋಟೆ: ಮೂವರ ವಿರುದ್ಧ ದೋಷಾರೋಪ

• **ಹೊಸದಿಲ್ಲಿ:** ಕಳೆದ ವರ್ಷ ದಿಲ್ಲಿಯ ಕೆಂಪುಕೋಟೆಯ ಬಳಿ ನಡೆದಿದ್ದ ಕಾರ್ ಬಾಂಬ್ ಸ್ಫೋಟ ಪ್ರಕರಣ ಸಂಬಂಧ ಭಯೋತ್ಪಾದಕರಾದ ಜಮ್ಮು-ಕಾಶ್ಮೀರದ ಜಮೀರ್ ಅಹ್ಮದ್ ಅಹಾಂಗರ್, ತುಫೈಲ್ ಅಹ್ಮದ್ ಭಟ್ ಮತ್ತು ಮುಜಾಫರ್ ಅಹ್ಮದ್ ವಿರುದ್ಧ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ದೋಷಾರೋಪಪಟ್ಟಿ ಸಲ್ಲಿಸಿದೆ. ಈ ಪ್ರಕರಣದಲ್ಲಿ ದೋಷಾರೋಪಣೆ ಪಟ್ಟಿಗೆ ಸೇರಿದವರ ಒಟ್ಟು ಸಂಖ್ಯೆ 13ಕ್ಕೆ ಏರಿಕೆಯಾಗಿದೆ. 2025 ನವೆಂಬರ್ 10ರಂದು ಕೆಂಪುಕೋಟೆಯ ಬಳಿ ಸಂಭವಿಸಿದ ಮತ್ತು 11 ಜನರನ್ನು ಬಲಿಪಡೆದ ವಾಹನ ಆಧಾರಿತ ಸುಧಾರಿತ ಸ್ಫೋಟಕ ಸಾಧನ (ವಿಬಿಐಇಡಿ) ಸ್ಫೋಟದ ಪ್ರಮುಖ ಸಂಚುಕೋರರಲ್ಲಿ ಮುಜಾಫರ್ ಅಹ್ಮದ್ ಒಬ್ಬ ಎಂದು ತನಿಖೆಯಿಂದ ತಿಳಿದುಬಂದಿದೆ.

ಅಫ್ಘಾನ್‌ನಲ್ಲಿ ಭೂಕಂಪನ ಭಾರತದಲ್ಲಿ ಕಂಪನಾನುಭವ

• **ಹೊಸದಿಲ್ಲಿ:** ಅಪಾನ್ಸ್ ಅಫ್ಘಾನಿಸ್ತಾನದ ಹಿಂದು ಕುಶ್ ಪ್ರದೇಶದಲ್ಲಿ ಸಂಭವಿಸಿದ 6.2ರಷ್ಟು ತೀವ್ರತೆ ಪ್ರಬಲ ಭೂಕಂಪನದಿಂದಾಗಿ ಭಾರತದ ರಾಜಧಾನಿ ದಿಲ್ಲಿ ಸೇರಿದಂತೆ ಇಡೀ ಉತ್ತರ ಭಾರತದಾದ್ಯಂತ ಕಂಪನದ ಅನುಭವವಾಗಿದೆ. ಘಟನೆಯಲ್ಲಿ ಯಾವುದೇ ಸಾವು-ನೋವುಗಳು ದಾಖಲಾಗಿಲ್ಲ. ದಿಲ್ಲಿ, ಎನ್‌ಸಿಆರ್ ವ್ಯಾಪ್ತಿ ಹಾಗೂ ಜಮ್ಮು-ಕಾಶ್ಮೀರದಲ್ಲಿ ಕೆಲವು ಸೆಕೆಂಡು ಭೂಮಿ ತೀವ್ರವಾಗಿ ಕಂಪಿಸಿದೆ. ರಾಷ್ಟ್ರೀಯ ಭೂಕಂಪನ ಶಾಸ್ತ್ರ ಕೇಂದ್ರದ ಮಾಹಿತಿ ಪ್ರಕಾರ, ಭೂಕಂಪನದ ಕೇಂದ್ರಬಿಂದು ಈಶಾನ್ಯ ಅಫ್ಘಾನಿಸ್ತಾನದ ಕಲಾಫ್ಗನ್‌ನಿಂದ ಸುಮಾರು 81 ಕಿಮೀ ದೂರದಲ್ಲಿದ್ದು, ಭೂಮಿಯ ಆಳದಲ್ಲಿ ಅಂದರೆ ಸುಮಾರು 215 ಕಿಮೀ ಆಳದಲ್ಲಿ ಸೃಷ್ಟಿಯಾಗಿದೆ.

ದಾಳಿ ಬೆದರಿಕೆ ಇ-ಮೇಲ್ ಹಲವೆಡೆ ತೀವ್ರ ಕಟ್ಟೆಚ್ಚರ

• **ಹೊಸದಿಲ್ಲಿ:** ಸಂಭಾವ್ಯ ಭಯೋತ್ಪಾದಕ ದಾಳಿಯ ಕುರಿತು ಬಂದಿರುವ ಬೆದರಿಕೆ ಇಮೇಲ್‌ಗಳ ಹಿನ್ನೆಲೆಯಲ್ಲಿ ದಿಲ್ಲಿ ಮತ್ತು ಉತ್ತರಾಖಂಡ್ ರಾಜ್ಯಗಳಾದ್ಯಂತ ಭದ್ರತೆಯನ್ನು ತೀವ್ರಗೊಳಿಸಲಾಗಿದೆ. ಖಲಿಸ್ತಾನಿ ಭಯೋತ್ಪಾದಕರಿಂದ ದಾಳಿ ನಡೆಯಬಹುದು ಎಂಬ ಮುನ್ನೆಚ್ಚರಿಕೆಯ ನಂತರ ದಿಲ್ಲಿ ಪೊಲೀಸ್, ಉತ್ತರಾಖಂಡ್ ಪೊಲೀಸ್ ಮತ್ತು ಕೇಂದ್ರ ಗುಪ್ತಚರ ಸಂಸ್ಥೆಗಳು ಜಂಟಿಯಾಗಿ ತನಿಖೆ ಆರಂಭಿಸಿವೆ.

ಗುಪ್ತಚರ ಇಲಾಖೆಯ ಮಾಹಿತಿಯ ಪ್ರಕಾರ, ಪ್ರಮುಖ ದೇವಾಲಯಗಳು, ಸರ್ಕಾರಿ ಕಚೇರಿಗಳು, ರಾಜಕೀಯ ನಾಯಕರು, ಸಾರ್ವಜನಿಕ ಮೂಲಸೌಕರ್ಯಗಳು, ರೈಲ್ವೆ ನಿಲ್ದಾಣಗಳು ಮತ್ತು ಪೊಲೀಸ್ ಸಿಬ್ಬಂದಿಯನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುವ ಸಾಧ್ಯತೆಯಿದೆ. ಈ ಕಾರಣದಿಂದಾಗಿ, ಪ್ರಮುಖ ಧಾರ್ಮಿಕ ಸ್ಥಳಗಳು ಮತ್ತು ಪ್ರಮುಖ ಸಂಸ್ಥೆಗಳಲ್ಲಿ ಕಣ್ಗಾವಲು ಹೆಚ್ಚಿಸಲಾಗಿದ್ದು, ಭದ್ರತಾ ವ್ಯವಸ್ಥೆಗಳನ್ನು ಬಲಪಡಿಸಲಾಗಿದೆ.

ಘಟನೆಯ ಹಿನ್ನೆಲೆ: ಚಮೋಲಿ ಜಿಲ್ಲೆಯಲ್ಲಿ ಸ್ಥಳೀಯ ನಿವಾಸಿಗಳ ಮೇಲೆ ದಾಳಿ ಮಾಡಿದ ಆರೋಪದಲ್ಲಿ ನಾಲ್ವರು ನಿಹಾಂಗ್ ಯಾತ್ರಿಕರನ್ನು ಬಂಧಿಸಿದ ವಿಷಯವಾಗಿ ಉತ್ತರಾಖಂಡ್ ಪೊಲೀಸ್ ಮತ್ತು ನಿಹಾಂಗ್ ಸಿಖ್ಖರ ನಡುವೆ ಇತ್ತೀಚೆಗೆ ನಡೆದ ಘರ್ಷಣೆಯ ಬೆನ್ನಲ್ಲೇ ಈ ಕಟ್ಟೆಚ್ಚರ ವಹಿಸಲಾಗಿದೆ. ಜೂನ್ 16 ರಂದು ಕರ್ಣಪ್ರಯಾಗದಲ್ಲಿ ನಡೆದ ಗಲಾಟೆಯಲ್ಲಿ ನಾಲ್ವರು ಯಾತ್ರಿಕರು ತಲವಾರುಗಳಿಂದ ನಾಲ್ವರು ಸ್ಥಳೀಯ ನಿವಾಸಿಗಳನ್ನು ಗಾಯಗೊಳಿಸಿದ್ದರು.

ದೇಸಿ ಗಸ್ತು ಹಡಗು ಅಕ್ಷಯ್ ಕರಾವಳಿ ಪಡೆಗೆ ಸೇರ್ಪಡೆ

• **ಪಣಜಿ:** ಗೋವಾ ಶಿಪ್‌ಯಾರ್ಡ್ ಲಿ. ನಿರ್ಮಾಣದ ಐಸಿಜಿಎಸ್ ಅಕ್ಷಯ್ ಎಂಬ ಹೊಸ ತಲೆಮಾರಿನ ವೇಗದ ಗಸ್ತು ಹಡಗನ್ನು ಭಾರತೀಯ ಕರಾವಳಿ ಪಡೆಯು ಶನಿವಾರ ನಿಯೋಜನೆ ಮಾಡಿದೆ. ಸಾಗರೋತ್ತರ ಭದ್ರತೆ, ಸಂಶೋಧನೆ, ರಕ್ಷಣಾ ಕಾರ್ಯಾಚರಣೆ ಹಾಗೂ ಕರಾವಳಿ ಕಣ್ಗಾವಲು ಬಲವರ್ಧನೆಯ ಉದ್ದೇಶದಿಂದ ವೇಗದ ಗಸ್ತು ಹಡಗನ್ನು ಕರಾವಳಿ ಪಡೆ ನಿಯೋಜಿಸಿದೆ. ವಾಸ್ಕೋದಲ್ಲಿನ ಗೋವಾ ಶಿಪ್‌ಯಾರ್ಡ್ ಲಿ.ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಹಿರಿಯ ಕರಾವಳಿ ಪಡೆ ಸಿಬ್ಬಂದಿ ಮತ್ತು ಸರ್ಕಾರಿ ಗಣ್ಯರ ಉಪಸ್ಥಿತಿಯಲ್ಲಿ ದೇಸಿ ಗಸ್ತು ಹಡಗನ್ನು ಕರಾವಳಿ ಪಡೆಯಲ್ಲಿ ನಿಯೋಜಿಸಲಾಗಿದೆ. ಕೇಂದ್ರ ಸರ್ಕಾರದ ಆತ್ಮನಿರ್ಭರ(ಸ್ವಾವಲಂಬಿ) ಭಾರತದ ಕನಸು ಮತ್ತು ಮೇಕ್ ಇನ್ ಇಂಡಿಯಾ ಯೋಜನೆಗಳ ಅನ್ವಯ ದೇಸಿ ಗಸ್ತು ಹಡಗನ್ನು ಗೋವಾ ಶಿಪ್‌ಯಾರ್ಡ್‌ನಲ್ಲೇ ವಿನ್ಯಾಸಗೊಳಿಸಿ ನಿರ್ಮಿಸಲಾಗಿದೆ. ಇದು ಭಾರತದ ದೇಸಿ ಹಡಗು ನಿರ್ಮಾಣದ ಸಾಮರ್ಥ್ಯವನ್ನು ಪ್ರದರ್ಶಿಸಿದೆ. ನಾಶವಿಲ್ಲದ ಅಥವಾ ಅವಿನಾಶಿ ಅರ್ಥವಿರುವ ಅಕ್ಷಯ ಎಂಬ ಹೆಸರಿಡಲಾಗಿದೆ. ಇದು ದೇಶದ ಸಾಗರ ಹಿತಾಸಕ್ತಿಯ ರಕ್ಷಣೆ ಮತ್ತು ಸುರಕ್ಷಿತ, ಸುಭದ್ರ ಮತ್ತು ಸ್ವಚ್ಛವಾಗಿಡುವ ಕರಾವಳಿ ಪಡೆಯ ಬದ್ಧತೆಯ ಪ್ರತೀಕವಾಗಿದೆ. ಈ ನೌಕೆ ಸಮುದ್ರ ಕಾನೂನು ಜಾರಿಯಲ್ಲಿ ನೆರವಾಗಲಿದ್ದು, ಸಂಕಷ್ಟದಲ್ಲಿ ಸಿಲುಕುವ ನಾವಿಕರಿಗೆ ನೆರವು ನೀಡುವುದು ಸೇರಿ ವಿವಿಧ ಕರ್ತವ್ಯಗಳನ್ನು ನಿರ್ವಹಿಸಲಿದೆ. ಈ ನೌಕೆಯ ನೇತೃತ್ವವನ್ನು ಕಮಾಂಡೆಂಟ್ (ಜೂ. ಗ್ರೇಡ್) ದೀಪಕ್ ಚೌಬೆ ವಹಿಸಲಿದ್ದಾರೆ.



ವಿದೇಶಾಂಗ ನೀತಿಗಿಂತ ಮತ ಬ್ಯಾಂಕ್ ಮುಖ್ಯವಾಯಿತೇ?

• **ಹೊಸದಿಲ್ಲಿ:** ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ಗಾಜಾ ವಿಚಾರದಲ್ಲಿ ಕೇಂದ್ರ ಸರ್ಕಾರ ಮೌನ ವಹಿಸಿದೆ ಎಂದು ಆರೋಪಿಸಿದ್ದಕ್ಕೆ ತೀಕ್ಷ್ಣ ಪ್ರತಿಕ್ರಿಯೆ ನೀಡಿರುವ ಬಿಜೆಪಿಯು, ಕಾಂಗ್ರೆಸ್ ನಾಯಕಿ ಭಾರತದ ವಿದೇಶಾಂಗ ನೀತಿಗಿಂತ ಜನರನ್ನು ದಾರಿತಪ್ಪಿಸಲು ಮತಬ್ಯಾಂಕ್ ರಾಜಕೀಯಕ್ಕೇ ಹೆಚ್ಚು ಆದ್ಯತೆ ನೀಡಿರುವುದು ವಿಪರ್ಯಾಸವೆಂದು ಬಿಜೆಪಿ ವಕ್ತಾರ ಶೆಹಜಾದ್ ಪೂನಾವಾಲಾ ಹೇಳಿದ್ದಾರೆ.

- ಬಿಜೆಪಿ ವಕ್ತಾರ ಶೆಹಜಾದ್ ಪೂನಾವಾಲಾ ಕಿಡಿ

ಭಾರತವು ಪ್ಯಾಲೆಸ್ತೀನ್ ಜನರ ಹಕ್ಕುಗಳ ಕುರಿತ ತನ್ನ ಐತಿಹಾಸಿಕ ನಿಲುವಿಗಿಂತ ಇಸ್ರೇಲ್‌ನೊಂದಿಗಿನ ಸಂಬಂಧಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿದೆ ಎಂದು ಸೋನಿಯಾ ಆರೋಪಿಸಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ ಬಿಜೆಪಿ, ಜನರನ್ನು ದಾರಿತಪ್ಪಿಸಲು ಮತಬ್ಯಾಂಕ್ ರಾಜಕಾರಣಕ್ಕೆ ಆದ್ಯತೆ ನೀಡಲು ಸೋನಿಯಾ ಗಾಂಧಿ ಪ್ರಯತ್ನಿಸುತ್ತಿದ್ದಾರೆ. ಆದರೆ ಭಾರತ ಗಾಜಾ ಮತ್ತು ಪ್ಯಾಲೆಸ್ತೀನ್ ವಿಷಯದಲ್ಲಿ ಹಲವು ಬಾರಿ ತನ್ನ ನಿಲುವನ್ನು ಸ್ಪಷ್ಟಪಡಿಸಿದ್ದು, ಪ್ಯಾಲೆಸ್ತೀನ್‌ಗೆ ಮಾನವೀಯ ನೆರವನ್ನು ನೀಡಿರುವುದನ್ನು ಪೂನಾವಾಲಾ ಎತ್ತಿತೋರಿದರು. 2023ರಲ್ಲಿ ಹಮಾಸ್ ಉಗ್ರರು ಇಸ್ರೇಲ್ ಗಡಿಯಲ್ಲಿ ನಡೆಸಿದ ಅಮಾನುಷ ದಾಳಿಯಲ್ಲಿ ಸಾವಿರಕ್ಕೂ ಅಧಿಕ ಮಕ್ಕಳು, ಮಹಿಳೆಯರು, ನಾಗರಿಕರು ಬಲಿಯಾದ ಬಳಿಕ ಇಸ್ರೇಲ್ ವ್ಯಾಪಕವಾಗಿ ಪ್ರತಿದಾಳಿ ನಡೆಸಿದ್ದನ್ನು ಇಲ್ಲಿ ಸ್ಮರಿಸಬಹುದು. ಪ್ಯಾಲೆಸ್ತೀನ್-ಇಸ್ರೇಲ್ ನಡುವಣ ಬಿಕ್ಕಟ್ಟಿಗೆ ಸಂಬಂಧಿಸಿದ ವಿಶ್ವಸಂಸ್ಥೆಯ ನಿರ್ಣಯಗಳ ಮೇಲೆ ಭಾರತ ಮತ ಚಲಾಯಿಸುವ ಮೂಲಕ ತನ್ನ ನಿಲುವು ಸ್ಪಷ್ಟಪಡಿಸಿದೆ.

ಪಾರದರ್ಶಕ ತನಿಖೆ ಖಚಿತಪಡಿಸಲು ಬದ್ಧ

• **ಅಯೋಧ್ಯೆ:** ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಮತ್ತು ಟ್ರಸ್ಟ್ ಸದಸ್ಯ ಅನಿಲ್ ಮಿಶ್ರಾ ಅವರ ರಾಜೀನಾಮೆ ಸಲ್ಲಿಸಿರುವುದನ್ನು ದೃಢೀಕರಿಸಿದ್ದು, ಶ್ರೀರಾಮ ಮಂದಿರ ದೇಣಿಗೆ ದುರುಪಯೋಗ ಆರೋಪಗಳ ಬಗ್ಗೆ ಪಾರದರ್ಶಕ ತನಿಖೆಯನ್ನು ಖಚಿತಪಡಿಸಲು ನಾವು ಬದ್ಧರಾಗಿದ್ದೇವೆ ಎಂದು ಭರವಸೆ ನೀಡಿದೆ. ಶ್ರೀರಾಮ ಮಂದಿರ ಟ್ರಸ್ಟ್‌ನ ಖಜಾಂಚಿ ಸ್ವಾಮಿ ಗೋವಿಂದ್ ದೇವ್ ಗಿರಿ ಮಹಾರಾಜ್ ಅವರು ಪ್ರಕಟಿಸಿದ ಹೇಳಿಕೆಯಲ್ಲಿ, ರಾಮ ಮಂದಿರ ವಿಚಾರದಲ್ಲಿ ಇತ್ತೀಚಿನ ಬೆಳವಣಿಗೆಗಳಿಂದ ಆಘಾತಕ್ಕೆ ಒಳಗಾಗಿದ್ದೇವೆ, ನೊಂದಿದ್ದೇವೆ. ಪಾರದರ್ಶಕ ತನಿಖೆ ನಡೆಸಲಾಗುವುದು. ಭಕ್ತರ ನಂಬಿಕೆಯನ್ನು ಪುನಸ್ಥಾಪಿಸುವ ಕುರಿತ ಖಚಿತಪಡಿಸಲು ಟ್ರಸ್ಟ್ ಬದ್ಧವಾಗಿದೆ. ಭಕ್ತರು ಶ್ರೀರಾಮನಿಗೆ ಸಲ್ಲಿಸಿದ ಬೆಳ್ಳಿ ಇಟ್ಟಿಗೆಗಳು, ಆಭರಣಗಳು ಸೇರಿದಂತೆ ಎಲ್ಲಾ ಬೆಲೆಬಾಳುವ ವಸ್ತುಗಳು ನಿಜವಾದ ಲೆಕ್ಕಪತ್ರದೊಂದಿಗೆ ಸುರಕ್ಷಿತವಾಗಿವೆ. ಭವಿಷ್ಯದಲ್ಲಿ ಇಂತಹ ಯಾವುದೇ ದುರದೃಷ್ಟಕರ ಪರಿಸ್ಥಿತಿ ಉದ್ಭವಿಸದಂತೆ ನಾವು ಅಗತ್ಯ ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಮಹಾರಾಜ್ ಭರವಸೆ ನೀಡಿದ್ದಾರೆ.

10 ಬೋಗಿಗಳ ರೈಲು ಜಿಂದ್-ಸೋನಿಪತ್ ಮಾರ್ಗದಲ್ಲಿ ಸಂಚಾರ

ಹೈಡ್ರೋಜನ್ ರೈಲು ಸಂಚಾರಕ್ಕೆ ಅನುಮತಿ

• **ಲಖನೌ:** ದೇಶದಲ್ಲಿ ಹಸಿರು ರೈಲು ಪ್ರಯಾಣ ಹಾಗೂ ಸ್ವಚ್ಛತೆಗೆ ಉತ್ತೇಜಿಸುವ ಉದ್ದೇಶದಿಂದ ದೇಶದ ಮೊದಲ ಸ್ವದೇಶಿ ಹೈಡ್ರೋಜನ್ ರೈಲಿಗೆ ಭಾರತೀಯ ರೈಲ್ವೆ ಕಾರ್ಯಾಚರಣಾ ಅನುಮತಿಯನ್ನು ನೀಡಿದೆ. ದೇಶದ ಮೊದಲ ಹೈಡ್ರೋಜನ್ ಇಂಧನ ಬ್ಯಾಟರಿ ಆಧಾರಿತ ರೈಲಾಗಿದ್ದು, ಜಿಂದ್-ಸೋನಿಪತ್ ಮಾರ್ಗದಲ್ಲಿ ಸಂಚರಿಸಲಿದೆ. ಹೈಡ್ರೋಜನ್ ರೈಲಿಂದರ ವೇಗದಲ್ಲಿ ಸಂಚರಿಸುವ ವಿದ್ಯುತ್ ಸ್ವಾವಲಂಬಿಯಂತೆ. ಈ 10 ಬೋಗಿಗಳ ರೈಲು ತಲಾ 1,200 ಕಿಲೋವ್ಯಾಟ್ ವಿದ್ಯುತ್ ಉತ್ಪಾದಿಸುವ ಎರಡು ಡ್ರೈವಿಂಗ್ ಕಾರುಗಳನ್ನು ಹೊಂದಿದೆ. ಅಂದರೆ ಇದು ಒಟ್ಟು 2,400 ಕಿಲೋವ್ಯಾಟ್ ವಿದ್ಯುತ್ ಉತ್ಪಾದಿಸುತ್ತದೆ. ಉಷ್ಣ ಮತ್ತು ನೀರಿನ ಆವಿಯನ್ನಷ್ಟೇ ಹೊರಸೂಸುವುದರಿಂದ ಇದು ಸಂಪೂರ್ಣ ಕಾರ್ಬನ್ ಮುಕ್ತವಾಗಿದೆ.



ಸುರಕ್ಷತೆ ಮತ್ತು ಶೇಖರಣೆ: ರೈಲಿನಲ್ಲಿ 54 ಹೈಡ್ರೋಜನ್ ಸಿಲಿಂಡರ್‌ಗಳು, ಅತ್ಯಾಧುನಿಕ ಸೋರಿಕೆ ಮತ್ತು ಬೆಂಕಿ ಪತ್ತೆಹಚ್ಚುವ ಉಪಕರಣಗಳು ಇರಲಿದ್ದು, ಜಿಂದ್‌ನಲ್ಲಿ ಇಂಧನ ಬಂಕ್ ನಿರ್ಮಿಸಲಾಗಿದೆ. ಇದು ಎಲ್ಲಾ ರೀತಿಯ ಸುರಕ್ಷತೆ ನೀಡಲಿದ್ದು, ಹೈಡ್ರೋಜನ್ ರೈಲಿನ ತಡೆರಹಿತ ಕಾರ್ಯಾಚರಣೆಯನ್ನು ಖಚಿತಪಡಿಸಲಿದೆ. ಈ ರೈಲಿನಲ್ಲಿ ಶಬ್ದ ಮಾಲಿನ್ಯ ಇರುವುದಿಲ್ಲ.

ಸ್ವದೇಶಿ ನಿರ್ಮಿತ (ಮೇಡ್ ಇನ್ ಇಂಡಿಯಾ): ಪ್ರಧಾನಿ ನರೇಂದ್ರ ಮೋದಿ ಅವರ ಆತ್ಮನಿರ್ಭರ(ಸ್ವಾವಲಂಬಿ) ಭಾರತ ಉಪಕ್ರಮದ ಅನ್ವಯ ಸಂಪೂರ್ಣ ದೇಶೀಯ ನಿರ್ಮಾಣ ಮತ್ತು ವಿನ್ಯಾಸವನ್ನು ಹೊಂದಿದೆ. ಇದು ಮುಂದಿನ ತಲೆಮಾರಿನ ಸುಸ್ಥಿರ ರೈಲ್ವೆ ತಂತ್ರಜ್ಞಾನದ ಸಾಮರ್ಥ್ಯವನ್ನು ಪ್ರದರ್ಶಿಸಲಿದೆ.

- ವೇಗ: ಪ್ರತಿ ಗಂಟೆಗೆ 120ರಿಂದ 140 ಕಿ.ಮೀ.
- ವಿದ್ಯುತ್ ಔಟ್‌ಪುಟ್: 2,400 ಕಿವ್ಯಾಟ್
- ಹಾರ್ಸ್ ಪವರ್: 3,200ರಿಂದ 3,220 ಎಚ್‌ಪಿ
- ಬೋಗಿಗಳು: 10
- ಕಾರ್ಬನ್ ಅಂಶ: ಸಂಪೂರ್ಣ ಕಾರ್ಬನ್ ಮುಕ್ತ
- ಸಂಚಾರ ಮಾರ್ಗ: ಜಿಂದ್ -ಸೋನಿಪತ್, ಹರ್ಯಾಣ
- ಇಂಧನ ಬಂಕ್: ಜಿಂದ್
- ಮೈಲೇಜ್: 250 ಕಿ.ಮೀ.
- ಹೈಡ್ರೋಜನ್: 54 ಸಿಲಿಂಡರ್‌ಗಳು

ರಾಮಮಂದಿರ ದೇಣಿಗೆ ದುರುಪಯೋಗ

ಲಪಟಾಯಿಸಿದ್ದ 79ಲಕ್ಷ ರೂ.ವಶ

• **ಅಯೋಧ್ಯೆ:** ಅಯೋಧ್ಯೆಯ ಶ್ರೀರಾಮಮಂದಿರದಲ್ಲಿ ದೇಣಿಗೆ ದುರುಪಯೋಗಪಡಿಸಿಕೊಂಡ ಆರೋಪದ ಮೇಲೆ ಬಂಧಿಸಲಾದ 8 ಆರೋಪಿಗಳನ್ನು ಜೂ.29 ರವರೆಗೆ ನ್ಯಾಯಾಲಯ ಪೊಲೀಸ್ ಕಸ್ಟಡಿಗೆ ನೀಡಿದೆ, ಈ ಅವಧಿಯಲ್ಲಿ ತನಿಖಾಧಿಕಾರಿಗಳು ಅವರನ್ನು ವಿಚಾರಣೆ ಮುಂದುವರಿಸಲಿದ್ದಾರೆ. ಬಂಧಿತರಿಂದ 79.85ಲಕ್ಷ ರೂ.ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪ್ರಾಸಿಕ್ಯೂಷನ್ ಅಧಿಕಾರಿ ಕೆ.ಸಿ.ವರ್ಮಾ ತಿಳಿಸಿದ್ದಾರೆ. ಆರೋಪಿಗಳು ಸಾರ್ವಜನಿಕ ಸೇವಕರಾಗಿದ್ದು, ಆರು ಮಂದಿ ಬ್ಯಾಂಕ್ ಉದ್ಯೋಗಿಗಳಾಗಿದ್ದಾರೆ. ಇವರನ್ನು ಬ್ಯಾಂಕ್ ದೇವಾಲಯದಲ್ಲಿ ಸ್ವೀಕರಿಸಿದ ನಗದು ದೇಣಿಗೆಗಳನ್ನು ಎಣಿಸಲು ನಿಯೋಜಿಸಿತ್ತು. ಅವರು ಬ್ಯಾಂಕಿನಿಂದ ವೇತನ ಪಡೆಯುತ್ತಿದ್ದರು. ಇನ್ನೊಬ್ಬ ಆರೋಪಿ ಟಿಲ್ಲು ಯಾದವ್ ಅವರು ಮಂದಿರ ಟ್ರಸ್ಟ್‌ನ ಕಾರ್ಯದರ್ಶಿಯಾಗಿದ್ದ ಚಂಪತ್ ರಾಯ್ ಅವರ ಖಾಸಗಿ ಕಾರು ಚಾಲಕನಾಗಿದ್ದ.

ಈ ಆರೋಪಿಗಳು ನಗದು ಎಣಿಕೆ ಪ್ರಕ್ರಿಯೆಯಲ್ಲಿ ಸೇರಿಯಾಗದಂತೆ ಒಟ್ಟು ಆಕ್ಷಲಾಗಿ ನಿಂತರೆ, ಇನ್ನೊಬ್ಬ ಹಿಂದಿನಿಂದ ಎಣಿಕೆಗೆ ತೆಗೆದ ಹಣವನ್ನು ಎಗರಿಸುತ್ತಿದ್ದ. ಮತ್ತೊಂದು ತಂಡ ಬಂಡಲ್‌ನೊಳಗೆ ಹೆಚ್ಚುವರಿ ನೋಟು ಸಿಕ್ಕಿಸಿ ಬ್ಯಾಂಕಿಗೆ ಜಮೆ ಮಾಡುವ ಮುನ್ನ ಅದನ್ನು ಲಪಟಾಯಿಸುತ್ತಿತ್ತಲ್ಲದೆ, ಕಡಿಮೆ ಲೆಕ್ಕ ತೋರಿಸುತ್ತಿತ್ತು. ಇನ್ನೊಂದು ತಂಡ ದೇಗುಲದ ಶೌಚಾಲಯದೊಳಗೆ ಅದನ್ನು ಬಚ್ಚಿಟ್ಟು ಬಳಿಕ ತಮ್ಮೊಳಗೆ ಹಂಚಿಕೊಳ್ಳುವ ಕೆಲಸ ಮಾಡುತ್ತಿತ್ತು.

ಗುಪ್ತ ಕ್ಯಾಮರಾ ಇಟ್ಟ ಆಡಳಿತ ಮಂಡಳಿ-ಬಯಲಾಯ್ತು ಅಕ್ರಮ !: ದೇವಸ್ಥಾನದಿಂದ ನಿಯಮಿತವಾಗಿ ಬ್ಯಾಂಕಿಗೆ ಜಮೆ ಮಾಡಲಾಗುತ್ತಿದ್ದ ಕಾಣಿಕೆ ಹಣದ ಕಡತಗಳ ಪರಿಶೀಲನೆಯ ವೇಳೆ, ಏರಿಳಿತ ವ್ಯತ್ಯಾಸವಾಗುತ್ತಿರುವ ಬಗ್ಗೆ ಸಂಶಯ ಬಂದಿದೆ. 6-7ಲಕ್ಷ ರೂ.ಗಳವರೆಗೆ ಸಂಗ್ರಹವಾಗಬಹುದಾದ ಮೊತ್ತದಲ್ಲಿ 500ರೂ. ಮುಖಬೆಲೆಯ ನೋಟುಗಳ ಸಂಖ್ಯೆ ಕಡಿಮೆಯಾಗುತ್ತಿರುವುದು ಕಂಡುಬಂದಿದೆ. ಇದರಿಂದ ತೀವ್ರ ಅನುಮಾನಗೊಂಡ ಆಡಳಿತ ಮಂಡಳಿ ಹಣದ ಎಣಿಕೆಯ ಪತ್ತೆಗಾಗಿ ಹಣ ಲೆಕ್ಕ ಮಾಡುತ್ತಿದ್ದ ಕೊಠಡಿಯೊಳಗೆ ರಹಸ್ಯ ಕ್ಯಾಮರಾಗಳನ್ನು ಅಳವಡಿಸಿತು.



ಪ್ರಶ್ನೋತ್ತರ ರತ್ನಮಾಲಿಕೆ

• ವಿದ್ವಾನ್ ನರಸಿಂಹ ಭಟ್

ಹಗಲಿರುಳೂ ಚಿಂತಿಸಬೇಕಾದುದು ಯಾವುದು?

▸ಭಗವಚ್ಚರಣವೇ ಹೊರತು ಸಂಸಾರವಲ್ಲ.

ಚಿಂತಿಸಲೇಬೇಕಾದದ್ದು ಯಾವುದು ಎಂದರೆ ಅದು ಭಗವಂತನ ಪಾದಾರವಿಂದ. ಯಾವುದನ್ನು ಚಿಂತಿಸಬೇಕಾಗಿದೆಯೋ ಅದನ್ನು ಚಿಂತಿಸದೆ, ಯಾವುದನ್ನು ಚಿಂತಿಸಿದರೆ ಸಮಯವೂ, ಆಯುಷ್ಯವೂ ವ್ಯರ್ಥವೋ ಅಂತಹ ವಿಷಯವನ್ನು ಚಿಂತಿಸುವ ಪ್ರವೃತ್ತಿಗೆ ಉತ್ತರರೂಪವಾಗಿ ಇಲ್ಲಿ ವಿಷಯವನ್ನು ನೀಡಲಾಗಿದೆ. ಸಂಸಾರದ ಬಗ್ಗೆ ನಾವು ಪ್ರತಿನಿತ್ಯ ಪ್ರತಿಕ್ಷಣವೂ ಯೋಚಿಸುತ್ತಿದ್ದೇವೆ. ಇದರ ಮಧ್ಯದಲ್ಲಿ ನಮಗೆ ಯಾವುದನ್ನು ಚಿಂತಿಸಬೇಕು ಎಂಬುದರ ಬಗ್ಗೆ ಸ್ವಲ್ಪವೂ ನಿಗಾ ಇಲ್ಲದಿರುವ ಪರಿಸ್ಥಿತಿ ಬಂದಿದೆ. ಅಷ್ಟರಮಟ್ಟಿಗೆ ನಮ್ಮ ಚಿಂತನೆಯ ದಿಕ್ಕು ಬದಲಾಗಿದೆ. ಆದರೆ ವಸ್ತುತಃ ನಾವು ಯಾವ ದಿಕ್ಕಿನ ಕಡೆ ನಿರಂತರವಾಗಿ ಚಿಂತಿಸಬೇಕಾಗಿದೆ ಎಂಬುದನ್ನು ಇಲ್ಲಿ ಹೇಳಲಾಗಿದೆ. ಹೀಗೊಂದು ಮಾತು ಬರುತ್ತದೆ- 'ಸಂಸಾರೇ ಕಿಂ ಸಾರಂ? ಕಂಸಾರೇಃ ಪದಕಮಲಂ ಸಾರಂ' ಎಂಬುದಾಗಿ. ಈ ಸಂಸಾರದಲ್ಲಿ ಒಂದು ಸಾರ ಎಂಬುದಾಗಿ ಬರಬೇಕಾದರೆ ಅದಕ್ಕೆ ಕಂಸಾರಿಯಾದ ಭಗವಾನ್ ಶ್ರೀ ಕೃಷ್ಣನ ಅನವರತ ಚಿಂತನೆಯೇ ಇದಕ್ಕೆ ಸಾರ ಎಂಬುದಾಗಿ ಈ ಮಾತು ತಿಳಿಸುತ್ತದೆ. ನಮ್ಮ ಚಿಂತನೆಯು ಕೇವಲ ಸಂಸಾರದಲ್ಲೇ ಇದೆ ಎಂದರ್ಥ.

ಸಂಸಾರ ಎಂದರೇನು? ಸಂಸಾರದ ಬಗ್ಗೆ ಚಿಂತಿಸುವುದು ತಪ್ಪೇ? ಇತ್ಯಾದಿ ಪ್ರಶ್ನೆಗಳು ಬರಬಹುದು. ಸಂಸಾರದಲ್ಲಿ ಇದ್ದು ಸಂಸಾರವನ್ನು ದಾಟುವ ಬಗ್ಗೆ ಚಿಂತಿಸುವ ವಿಷಯ ಇಲ್ಲಿದೆ. ಆದರೆ ನಾವಿಂದು ಸಂಸಾರವನ್ನು ಮಾತ್ರ ಚಿಂತಿಸುತ್ತಿದ್ದೇವೆ. ಸಂಸಾರದಲ್ಲಿ ಇದ್ದು ಸಂಸಾರವನ್ನು ದಾಟುವ, ಸಂಸಾರದ ಸಾರ್ಥಕತೆಯನ್ನು ಪಡೆಯುವ ಬಗ್ಗೆ ನಮ್ಮ ಚಿಂತನೆ ಇಲ್ಲದಾಗಿದೆ. ಮಡದಿ ಮಕ್ಕಳ ಚಿಂತೆ ಬಿಡು ಮನವೇ! ಕಡೆಗೆ ಸಖ್ಯನು ನೀನಲ್ಲವೇ? ಪುರಂದರ ವಿಠಲ ನಿನ್ನೊಳಿದು ನಂಬಿದರೆ, ಸಿರಿ ಸಂಪತ್ತುಗಳೆಲ್ಲವು ಬರುವವು, ಕರದ ಕೂಡಿಸಿ, ನಿತ್ಯ ಹರಿನಾಮದ ಪಾಡು, ನಿರ್ಮಲ ಮುಕ್ತಿಯು ದೊರೆಯುವುದು ಮನವೇ ಎಂಬ ಪುರಂದರ ದಾಸರ ಕೃತಿ ನಮಗೆ ಇದನ್ನು ಎಚ್ಚರಿಸುತ್ತದೆ. ಸಂಸಾರ ಎಂದರೆ ಗಂಡನಿಗೆ ಹೆಂಡತಿಯ ಚಿಂತೆ, ಹೆಂಡತಿಗೆ ಗಂಡನ ಚಿಂತೆ, ಗಂಡಹೆಂಡತಿಯರಿಗೆ ಮಕ್ಕಳ ಚಿಂತೆ. ಅಜ್ಜ ಅಜ್ಜಿಯರಿಗೆ ಮಕ್ಕಳು ಮೊಮ್ಮಕ್ಕಳ ಚಿಂತೆ. ಹೀಗೆ ಎಲ್ಲ ಕಡೆಗೆ ಚಿಂತೆಯೇ ಆವರಿಸಿದೆ. ಇವನ್ನು ಸೇರಿ ಸಂಸಾರ ಎಂಬುದಾಗಿ ಕರೆಯುವಂತಾಗಿದೆ. ತನ್ನ ಜೀವಿತದಲ್ಲಿ ಇವರ ಬಗ್ಗೆಯೇ ಯೋಚಿಸುತ್ತಾ, ತನ್ನ ಜೀವನವನ್ನು ಇವರಿಗಾಗಿಯೇ ಕಳೆದು, ಜೀವನವನ್ನು ಒಂದು ದಿನ ಮುಗಿಸುವ ಜನರೂ ಇದ್ದಾರೆ. ಅಂತಹವರಿಗಾಗಿ ಈ ಒಂದು ಸೂಚನೆ ಇಲ್ಲಿದೆ. ಪುರಂದರ ವಿಠಲನನ್ನು ನಂಬಿ, ವಿಶ್ವಾಸದಿಂದ ಅವನನ್ನು ಭಾವಿಸಿದರೆ ಅವನೇ ಎಲ್ಲವನ್ನು ಕೊಡುವನು, ಕೈಗೆತ್ತಿ ಹುತ್ತು ಹಾಕುವನು, ಹೀಗಿರುವಾಗ ನಾವೇ ಸಂಸಾರವನ್ನು ತೂಗಿಸುತ್ತೇವೆ; ಸಂಸಾರದ ಭಾರವನ್ನು ನಾವೇ ಹೊರುತ್ತೇವೆ ಎಂಬ ಅಹಂಕಾರ ಬೇಡ. ಹಾಗಾದಾಗ ಈ ಸಂಸಾರ ನಮಗೆ ಭಾರವಾಗುತ್ತದೆ. ಅದೇ ಹೊಣೆಗಾರಿಕೆಯನ್ನು ಅವನಿಗೆ ಒಪ್ಪಿಸಿದರೆ ಸಂಸಾರವು ನಮಗೆ ಸಾರವಾಗಿ, ಅಂದರೆ ನಮಗೆ ಅದು ಅತ್ಯಂತ ಅಪ್ಯಾಯಮಾನವಾಗಿ ಕಾಣುತ್ತದೆ ಎಂಬ ಅಭಿಪ್ರಾಯ ಇಲ್ಲಿದೆ.



ವ್ಯಾಸ ವೀಕ್ಷಿತ

• ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ

ಸಹದೇವನ ದಕ್ಷಿಣ ದಿಗ್ವಿಜಯ

ಕಿಷ್ಕಿಂಧೆಯಲ್ಲಿ ವಾನರರಾಜರಾದ ಮೈಂದ-ದ್ವಿವಿದರತ್ತ ರತ್ನಗಳನ್ನು ಸ್ವೀಕರಿಸಿದ ಸಹದೇವನು, ಮಾಹಿಷ್ಮತಿಯ ನೀಲನನ್ನು ಎದುರಿಸಿದನು. ಅಲ್ಲಿ ಅವರಿಬ್ಬರಿಗೆ ಭಯಂಕರವಾದ ಯುದ್ಧವೇ ಆಯಿತು. ನೋಡುತ್ತಿದ್ದಂತೆಯೇ ಅಲ್ಲಿ ಆಶ್ಚರ್ಯವೊಂದು ಘಟಿಸಿತು. ಸಹದೇವನ ಕಡೆಯ ರಥ-ಗಜ-ತುರಗಗಳೂ ಸೈನಿಕರೂ ಅವರ ಕವಚಗಳೂ ಇದ್ದಕ್ಕಿದ್ದಂತೆ ಬೆಂಕಿಯಿಂದ ಉರಿಯಲಾರಂಭಿಸಿದವು!

ಅದಕ್ಕೊಂದು ಹಿನ್ನೆಲೆಯಿದೆ. ಈ ನೀಲಮಹಾರಾಜನಿಂದ ಅಗ್ನಿದೇವನಿಗೆ ಹಿಂದೊಂದು ಉಪಕಾರವಾಗಿತ್ತು. ಆ ಕಾರಣ, ಅಗ್ನಿಯು ನೀಲನ ಸೈನ್ಯಕ್ಕೆ ಅಭಯ ಪ್ರದಾನವನ್ನು ಮಾಡಿದ್ದನು. ಇದ್ದಾಗಿದ್ದ ಯಾವುದೇ ಅರಸರೂ ನೀಲರಾಜನ ಮೇಲೆ ದಂಡೆತ್ತಿಹೋಗುತ್ತಿರಲಿಲ್ಲ, ತನ್ನ ಸೈನ್ಯವೆಲ್ಲಾ ಅಗ್ನಿಯಿಂದ ಸುಟ್ಟುಹೋಯಿಲ್ಲವಾಗುತ್ತಿರುವುದನ್ನು ಸಹದೇವನು ಕಂಡನು. ಆದರೆ ಅದರಿಂದಾಗಿ ಕಂಪಿತನಾಗಲಿಲ್ಲ, ಬದಲಾಗಿ ಆಚಮನವನ್ನು ಮಾಡಿ ಶುದ್ಧನಾಗಿ, ಅಗ್ನಿದೇವಸ್ತುತಿಯನ್ನು ಮಾಡಿದನು. ಜೊತೆಗೆ, ಹೀಗೆ ಬಿನ್ನವಿಸಿಕೊಂಡನು ಕೂಡ: "ಹವ್ಯವಾಹನನೆನಿಸಿದ ಅಗ್ನಿದೇವನೇ, ಯಜ್ಞಕ್ಕೆ ನೀನೇ ವಿಘ್ನವನ್ನುಂಟುಮಾಡುವುದು ತರವಲ್ಲ" ಎಂದು. ಅಷ್ಟೇ ಅಲ್ಲ, ನೆಲದ ಮೇಲೆ ದರ್ಭೆಯನ್ನು ವಿಧಿವತ್ತಾಗಿ ಹಾಸಿಕೊಂಡನು. ತನ್ನ ಸೈನ್ಯವೇ ಭಯೋದ್ವೇಗಗಳಿಗೆ ತುತ್ತಾಗಿದ್ದರೂ, ಅವನ ಎದುರೇ ಅದರ ಮೇಲೆ ಆಸೀನನಾದನು. ಸಹದೇವನ ಈ ವರ್ತನೆಯಿಂದ ಅಗ್ನಿಯು ಪ್ರಸನ್ನನಾದನು. ಶಾಂತನಾಗಿ ಸಾಂತ್ವನದ ಮಾತುಗಳನ್ನೇ ಆಡಿದನು: "ಏಳು ಸಹದೇವಾ, ನಿನ್ನ ಹಾಗೂ ಧರ್ಮರಾಜನ ಅಭಿಪ್ರಾಯಗಳು ನನಗೆ ವಿದಿತವಾಗಿವೆ. ಈ ಪುರಿಯನ್ನು ರಕ್ಷಿಸಬೇಕೆಂಬುದು ನನ್ನ ಸಂಕಲ್ಪವಾಗಿತ್ತು ಅಷ್ಟೆ" ಎಂದನು. ಅಗ್ನಿಯು ಹೀಗೆ ಶಾಂತನಾಗಿ ಹಿಂದಿರುಗಲು, ನೀಲರಾಜನೇ ಸಹದೇವನ ಬಳಿಗೆ ಬಂದನು. ಸಹದೇವನನ್ನು ಸತ್ಕರಿಸಿದನು. ಸಹದೇವನು ನೀಲರಾಜನೊಡನೆ ಮಾತನಾಡಿ, ಆತನೂ ಕರವನ್ನೊಪ್ಪಿಸುವಂತೆ ಮಾಡಿದನು. ತನ್ನ ದಿಗ್ವಿಜಯ ಪ್ರಯಾಣವನ್ನು ಮುಂದುವರಿಸಿದನು. ಆಮೇಲೆ ತ್ರಿಪುರಾಧಿಪತಿ, ಪೌರವರಾಜ್ಯಾಧಿಪತಿ, ಸುರಾಷ್ಟ್ರಾಧಿಪತಿ-ಇವರುಗಳನ್ನು ವಶಪಡಿಸಿಕೊಂಡನು. ಬಳಿಕ ಭೋಜಕಟ ರಾಜ್ಯಕ್ಕೆ ಒಡೆಯನಾದ ರುಕ್ಮಿ ಹಾಗೂ ಆತನ ತಂದೆಯಾದ ಭೀಷ್ಮಕರಲ್ಲಿಗೆ ತನ್ನ ರಾಯಭಾರಿಯನ್ನು ಕಳುಹಿಸಿಕೊಟ್ಟನು. ಅವರು ವಾಸುದೇವನ ನಿಕಟತೆಯನ್ನು ಸ್ಮರಿಸಿ, ತಮ್ಮ ಸಹಕಾರವನ್ನು ಸೂಚಿಸಿದರು. ಮತ್ತೂ ದಕ್ಷಿಣದ ದಂಡಕಾರಣ್ಯವನ್ನೂ ಸಹದೇವನು ವಶಕ್ಕೆ ತೆಗೆದುಕೊಂಡನು. ಆಮೇಲೆ ಸಮುದ್ರ ದ್ವೀಪವಾಸಿಗಳಾಗಿದ್ದ ಮ್ಲೇಚ್ಛರನ್ನು ಜಯಿಸಿದನು. ಹಾಗೆಯೇ ನಿಷಾದರು, ಪುರುಷಾದರು (ನರಮಾಂಸ-ಭಕ್ಷಕರು) ಹಾಗೂ ಕಾಲಮುಖ ಎಂಬ ಹೆಸರಿನ ನರರಾಕ್ಷಸರುಗಳನ್ನೂ, ಈ ತೆರನಾದ ಇನ್ನೂ ಅನೇಕರನ್ನೂ ಜಯಿಸಿದನು. ಕೇರಳ, ಕರ-ಹಾಟಕದೇಶಗಳಿಗೆ (ಕರ್ಣಾಟಕವೇ ಸರಿ) ತನ್ನ ದೂತರನ್ನು ಕಳುಹಿಸಿ, ಅದಷ್ಟರಿಂದಲೇ ಅವರನ್ನು ವಶವರ್ತಿಗಳನ್ನಾಗಿಸಿಕೊಂಡನು. ಹಾಗೆಯೇ ಪಾಂಡ್ಯರು, ದ್ರವಿಡರು, ಆಂಧ್ರರು, ಕಲಿಂಗರುಗಳನ್ನೂ ದೂತದ್ವಾರಾ ವಶಪಡಿಸಿಕೊಂಡನು. ಆಮೇಲೆ ಮಂತ್ರಿಗಳೊಂದಿಗೆ ಸಮಾಲೋಚನೆ ನಡೆಸಿ, ತನ್ನ ಭ್ರಾತೃವಿನ ಪುತ್ರನಾದ ಘಟೋತ್ಕಚನನ್ನು ಸ್ಮರಿಸಿಕೊಂಡನು. ಆತನೋ, ಚಿಂತಿತ-ಮಾತ್ರದಿಂದಲೇ ಪ್ರತ್ಯಕ್ಷನಾದನು! ಆತನನ್ನು ವಿಭೀಷಣನಲ್ಲಿಗೆ ದೂತನನ್ನಾಗಿ ಕಳುಹಿಸಿಕೊಟ್ಟನು. ಆತನ ಮಾತುಗಳನ್ನು ವಿಭೀಷಣನು ಸಂತೋಷಪೂರ್ವಕವಾಗಿಯೇ ಒಪ್ಪಿದನು ಹಾಗೂ ನಾನಾರತ್ನಗಳನ್ನೂ ದಿವ್ಯಾಭರಣಗಳನ್ನೂ ಬೆಲೆಬಾಳುವ ಮಣಿಗಳನ್ನೂ ವಿಶೇಷವಸ್ತ್ರಗಳನ್ನೂ ಕಾಣಿಕೆಯಾಗಿತ್ತನು.

ಇವೆಲ್ಲವನ್ನೂ ಸಂಗ್ರಹಿಸಿ ಹಿಂದಿರುಗಿದ ಸಹದೇವನು, ಯುಧಿಷ್ಠಿರನಿಗೆ ಸಮಸ್ತವನ್ನೂ ಸಮರ್ಪಿಸಿದನು. ಯುಧಿಷ್ಠಿರನೂ ಸಹದೇವನ ಸಾಧನೆಗೆ ಸಂತೋಷಿಸಿದನು.

ಸೀನುವಿನ ಗಾನಾರ್ಥಮಂಜರಿ (ಗಾನಾರ್ಥಮಂ ಜರಿ!)



ವಕ್ರದೃಷ್ಟಿ

• ಎನ್.ರಾಮನಾಥ್
anakuramanath@gmail.com

"ಹಾಡೊಂದ ಹಾಡುವೆ ನೀ ಕೇಳು ಮಗುವೇ..."

ಪಿ.ಬಿ. ಶ್ರೀನಿವಾಸರ ಮಧುರ ಕಂಠಕ್ಕೆ ಕಿವಿಯಾಗಿದ್ದೆ. ಸೀನು ಪಕ್ಕರಿಸಿ "ಮಗುವಿಗೆ ಯಾವ ಹಾಡು ಹಾಡಿದರೂ ನಡೆಯತ್ತೆ. ಪ್ರಾರ್ಥನೆಯ ಹಾಡನ್ನು ಆಯ್ಕೆ ಮಾಡುವುದೇ ಕಷ್ಟ" ಎಂದ.

"ಅದೇನ್ಹಾಕಷ್ಟವೋ? ಸ್ಕೂಲ್ ಫಂಕ್ಷನ್ ಆದರೆ ಸರಸ್ವತಿಯ ಪ್ರಾರ್ಥನೆ..." ಎನ್ನುತ್ತಿದ್ದಂತೆಯೇ,

"ಅದು ಅಷ್ಟು ಸಿಂಪಲ್ ಅಲ್ಲ, ಪ್ರೇಸೂ ಡಿಸೈಡ್ಸ್ ದ ಸಾಂಗೂ" ಎಂದ.

"ವಿವರಿಸು."

"ಕ್ಯಾಸೆಟ್‌ಗಳು ಸೆಟ್ ಲೆಕ್ಕದಲ್ಲಿ ವ್ಯಾಪಾರವಾಗುತ್ತಿದ್ದ ಕಾಲದಲ್ಲಿ ಆ ಅಂಗಡಿಗಳ ಉದ್ಘಾಟನೆಯ ಸಮಯದಲ್ಲಿ 'ಕಲ್ಯಾಣಿ ಗೀರ್ವಾಣಿ...' ಹಾಡನ್ನು ಹಾಡುತ್ತಿದ್ದರು."

"ಏಕೆ?"

"ತೆಲುವಾದ ಟೇಪಿನ ಮೇಲೆ ವಿಧವಿಧವಾದ ಗೀರುಗಳು ಮೂಡುವ ಮೂಲಕ ವಾಣಿಯ ಪ್ರಸಾರವಾಗುತ್ತಿದ್ದುದರಿಂದ ಆ ಸಮಯಕ್ಕೆ ಗೀರ್-ವಾಣಿ ಪ್ರಸ್ತುತವಾಗಿತ್ತು. 'ಲರ್ನ್ ಫ್ಲೆಂಟ್', '30 ದಿನಗಳಲ್ಲಿ ಇಂಗ್ಲಿಷ್' ಮೊದಲಾದ ಟ್ಯುಟೋರಿಯಲ್‌ಗಳಲ್ಲಿ 'ಸರಸ್ವತಿ ನಮಸ್ತುಭ್ಯಮ್ ವರದೇ ಕಾಮರೂಪಿಣಿ' ಸೂಕ್ತ."

"ಏಕೆ?"

"ಇಲ್ಲಿನ ಕ್ಯಾಚ್ ವರ್ಡ್ 'ಕಾಮರೂಪಿಣಿ'. ಭಾಷೆ ಬಳಸುವಾಗ ಎಲ್ಲಿ ಕಾಮಾ, ಫುಲ್ ಸ್ಟಾಪ್ ಮೊದಲಾದವನ್ನು ಹಾಕಬೇಕೆಂದು ತಿಳಿಸು ಎಂದು ದೇವಿಯನ್ನು ಪ್ರಾರ್ಥಿಸಲು ಇದು ಸರಿ."

"ಕಲಾ ಶಾಲೆಗೆ?"

"ಯಾ ಕುಂದೇಂದು ತುಷಾರ ಹಾರಧವಳಾ."

"ಕ್ಯಾಸ್ಟಾನಿನ ಬಣ್ಣ ಧವಳ ಅರುಫ್ ವೈಟ್ ಇರುವುದರಿಂದೇನು?"

"ಅದೂ ಒಂದು ಪಾಯಿಂಟೇ. ಇಂದು (ಚಂದ್ರ) ವಿನಲ್ಲಿನ ಕುಂದಿನಂತೆ ಇಲ್ಲಿ ಕುಂದು ಸಂಭವಿಸದಿರಲಿ ಎಂದು ಪ್ರಾರ್ಥಿಸಲು ಈ ಗೀತೆ."

"ಕಾಣದೇ ದಯೆ ತೋರದೆ ಎಂಬ ಹಾಡನ್ನು ಯಾವಾಗ ಹಾಡಬೇಕು?"

"ಸಿಇಟಿ ಪರೀಕ್ಷೆಯಲ್ಲಿ ಒಳ್ಳೆ ಸ್ಕೋರ್ ಬಂದು ಅನ್ನೋಂದ್ವಾಲೇಜಿನಲ್ಲಿ ಸೀಟ್ ಸಿಕ್ಕಾಗ ಅಪ್ಪನಿಗೆ ಕೊಡೋ ಪಾರ್ಟಿಯಲ್ಲಿ ಇದನ್ನ ಹಾಡಬೇಕು."

"ಪೊರೆಯೇ ಕಾರದೆ...?"

"ಕನ್ನಡ ಪೊರೆಯನ್ನು ಹೋಗಲಾಡಿಸುವ ಕ್ಯಾಟರಾಕ್ಟ್ ಸರ್ಜರಿಯಲ್ಲಿ ಎಕ್ಸ್‌ಪರ್ಟ್ ಆಗಬೇಕೆನ್ನುವವರು ಸುತಿಸಲೇಬೇಕಾದ ಹಾಡು."

"ಲಕ್ಷ್ಮಿಯ ಬಾಬ್ತು ಹೀಗೇ ಏನು?"

"ಡೆಪಾಸಿಟ್ಟು ಸರ್ಕಾರದ ಭಾಗ್ಯಗಳಿಗೆಲ್ಲ ಹಣ ಒದಗಿಬರಲೆಂದು ಸರ್ಕಾರವು ಪ್ರಾರ್ಥಿಸಲು 'ಭಾಗ್ಯದಲಕ್ಷ್ಮಿ ಬಾರಮ್ಮ'. ಅಕ್ರಮ ಸಕ್ರಮ ಯೋಜನೆಗಳಿಂದ ಹೆಚ್ಚು ಹಣ ತಲುಪಲೆಂದು ಪ್ರಾರ್ಥಿಸಲು 'ಬಾರೇ ಭಾಗ್ಯದ ನಿಧಿಯೇ.' ಎಟಿಎಂ ಉದ್ಘಾಟನೆಯ ಸಮಯದಲ್ಲಿ 'ಧನಲಕ್ಷ್ಮಿ ದಯೆ ತೋರು ಬಾಮ್ಮಾ...'"

"ಯಾಕೆ?"

"ಕಾರ್ಡ್, ನೋಟುಗಳು ಸಿಕ್ಕಿಹಾಕಿಕೊಳ್ಳದಿರಲಿ, ದುಡ್ಡು ಸರಾಗವಾಗಿ ಸುರಿದು ಬರಲಿ ಎಂದು."

"ವಾದಿರಾಜರು ರಚಿಸಿದ 'ಇಂತಪ್ಪ ಮನೆಗೆ ಮನಸೋತೆ' ಗೀತೆಯನ್ನು ಯಾರು ಹಾಡಿದರೆ ಸೂಕ್ತ?"

"ಹಣವಿದ್ದೂ, 80ಸಿಸಿ ಅಡಿಯಲ್ಲಿ ಟ್ಯಾಕ್ಸ್ ಬೆನಿಫಿಟ್ ಇದ್ದೂ, ದಾನ ಮಾಡದವನನ್ನು ಕಂಡು ಇತರರು ಹಾಡುವುದು ಸಮಂಜಸ."

ಹೀಗೆಯೇ ದೇವತೆಗಳ ವಿವಿಧ ನಾಮಗಳ ಒಳಾರ್ಥಗಳನ್ನು ಹಿಡಿದು ಸೀನುವು 'ಸಮಯಕ್ಕೆ ತಕ್ಕ ಹಾಡು' ಸೂಚಿಸುತ್ತಿರುವುದನ್ನು ಮುಂದುವರಿಸದ್ದಲ್ಲದೆ ಹಿಂದಿ ಚಿತ್ರಗೀತೆಗಳಲ್ಲಿಯೂ ದೇವರ ಸ್ತುತಿಯಿದೆಯೆಂದ.

"ಯಾವ್ಯಾವೋ?" ಎಂದೆ.

"ಬದನ್ ಪೆ ಸಿತಾರೆ ಲಪೇಟೆ ಹುಯೇ; ಓ ಜಾನೆ ತಮನ್ನ ಕಿಧರ್ ಜಾ ರಹೀ ಹೋ; ರುಖಾ ಪಾಸ್ ಆಯೋ ತೋ ಚೈನ್ ಆಜಾಯೇ" ಎಂದ.

"ಇದು ಪ್ರೇಮಗೀತೆಯಲ್ಲವೇನೋ?"

"ಗಮನಿಸು. 'ಸಿತಾರೆ ಲಪೇಟೆ ಹುಯೇ' ಎಂದರೆ ಥಳಥಳ ಹೊಳೆಯುವುದನ್ನು ಧರಿಸಿರುವವಳು ಎಂದರ್ಥ. ದೇವಿಯ ಮೈಮೇಲೆ ಹೊಳೆಯುವುದು ನಕ್ಷತ್ರವಲ್ಲ, ನಗ ಎನ್ನುವುದೇ ನಕ್ಷೆ. ಬಂಗಾರದ ಆಭರಣಗಳನ್ನು ಧರಿಸಿ ಎಲ್ಲಿಯೋ ಹೋಗುತ್ತಿರುವುದು ಯಲ್ಲ ಸ್ವಲ್ಪನನ್ನ ಕಡೆಯೂ ಕೃಪೆ ತೋರಿದರೆ ಕನಿಷ್ಠ ಕುತ್ತಿಗೆಗೊಂದು ಸರವಾದರೂ ಲಭ್ಯವಾದೀತು ಎನ್ನುವುದು ಈ ಲಕ್ಷ್ಮಿಯ ಭಕ್ತನ ಅಂಬುವು" ಎಂದ ಸೀನುವು "ಸಾಯಂಕಾಲ ಮುಸ್ಸಂಜೆಯ ಹೊತ್ತಿನಲ್ಲಿ ಲಕ್ಷ್ಮಿಯು ಮನೆಗೆ ಬರುತ್ತಾಳಲ್ಲವೆ. ಅದಕ್ಕಾ ಒಂದು ಹಾಡಿನ ಸಾಲಿದೆ" ಎಂದ.

"ಯಾವುದು?"

"'ಚಿತ್ ಚೋರ್ ಚಿತ್ರದ 'ಜಬ್ ದೀಪ್ ಜಲೇ ಆನಾ; ಜಬ್ ಶ್ಯಾಮ್ ಢಲೇ ಆನಾ' ಎಂಬ ಹಾಡು. ಸಂಜೆ ದೀಪ ಹೊತ್ತುವ ಹೊತ್ತಿಗೆ ಬಾ ಎನ್ನುವುದು ಸೋಲ್ಲೆಗಳಲ್ಲಿ ದೇವತೆಗೆ ಎಂದು ಅರಿಯುವಂಥವನಾಗು" ಎಂದುದ್ದರಿಸಿದ.

"ನಿನ್ನ ಹಿಂದಿ ಹೇರಿಕೆಗೆ ದಿಕ್ಕಾರ. ಕನ್ನಡದ ಚಿತ್ರಗೀತೆಗಳಲ್ಲಿ ಇಂತಹವು ಯಾವುವೂ ಇಲ್ಲವೇನು?"

"ಹಾಡಿನ ಒಂದೇ ಸಾಲಿನಲ್ಲಿ ಎರಡೆರಡು ಕ್ಷೇತ್ರಗಳವರು ಪ್ರಾರ್ಥಿಸುವ ವಿಧವಿದೆ" ಎಂದು ಬೀಗಿದ.

"ಯಾವ ಹಾಡಿನ ಯಾವ ಸಾಲು?"

"'ವಿಠಲ ವಿಠಲ ಪಾಂಡುರಂಗ ವಿಠಲ...' ಎನ್ನುತ್ತಾ ಭಾವಪರವಶನಾದ. (ಈ ಪದವೇ ವಿಚಿತ್ರ. ಭಾವನೆ ಪರವಶನಾಗುತ್ತದ್ದು ಅಕ್ಕ ಒಬ್ಬಳೆ ಅಲ್ಲವೆ? ಹೆಚ್ಚಿರುವ ಒಂದು ಮಟ್ಟದಲ್ಲಿ ಭಾವವು ವ್ಯಕ್ತಿಯ ಪರವಶನಾಗುತ್ತದೆ. ಮಿಕ್ಕಂತೆ ಯಾರ್ಯಾರೋ ಭಾವನೆಗೆ ಪರವಶರಾಗುವುದು ವಿಚಿತ್ರವೇ ಸೈ!)

"ಮಾರು ವಿಠಲ ಬಟ್ಟೆ ಇರುವುದೇ ಒಂದು ಪದ. ಇದರಲ್ಲಿ ನಿನಗೆ ಎರಡು ಕ್ಷೇತ್ರಗಳು ಎಲ್ಲಿ ಕಂಡವು?"

"ಪಾಂಡು ಎನ್ನುವುದು pond ಎನ್ನುವುದರ ಕನ್ನಡರೂಪ. ಕೆರೆ ಅಭಿವೃದ್ಧಿ ಪ್ರಾಧಿಕಾರದವರು ಮತ್ತು 'ರಂಗ' ಉರುಫ್ ನಾಟಕಕ್ಷೇತ್ರದವರು ಇಬ್ಬರೂ ಪ್ರಿಯವಾದ ಹಾಗೂ ಸೂಕ್ತವಾದ ಭಕ್ತಿಗೀತೆ ಇದು" ಎಂದು ವಿವರಿಸಿದನು.

ಪಂಢರಾಪುರದಲ್ಲಿ ಸ್ಥಿತನಾದ ಕಾರಣ ಪಾಂಡುರಂಗನಾದ ವಿಷ್ಣುವು ಭಾಷಾಪ್ರವೃತ್ತಿ ಸೀನುವಿನ ಬಾಯಿಗೆ ಸಿಲುಕಿ ಹೊಸ ಅರ್ಥಗಳಿಗೆ ಒಳಗಾಗಿದ್ದ.

"ವಿಠಲನಾದು ಸ್ಮರಣೆಯ ಹಾಡನ್ನು ಹಾಡಿದ್ದು ಗೋರ ಕುಂಬಾರ. ನೀನು ಘೋರ ಕುಂಬಾರ. ಅವನು ಕಟ್ಟಿದ ಅರ್ಥಗಳನ್ನು ನೀನು ನಿನ್ನ ಅನರ್ಥದಿಂದ ಒಡೆದುಹಾಕುತ್ತೀಯೆ. ಅವನದು ಭಕ್ತಿ. ನಿನ್ನದೂ..."

"ತಡೆ. ಭಕ್ತ ಎಂದರೆ 'ಕತ್ತರಿಸಿದ' ಎಂಬ ಅರ್ಥವಿದೆ. ಅವನ ಹಾಡು ಭಕ್ತನ ಗೀತೆ, ನನ್ನದು ಭಕ್ತ ಗೀತೆ; ಇಷ್ಟೇ ವ್ಯತ್ಯಾಸ. ಕೊಂಚ ವ್ಯತ್ಯಾಸವನ್ನು ಸಹಿಸದ ನೀನೆಂಥ ಕನ್ನಡಿಗನಯ್ಯ! ಹಾಡನ್ನು ಆಲಿಸಿಯೂ, ಅನ್ನವನ್ನು ಪಕ್ಕಕ್ಕಿಟ್ಟು, ನಿನ್ನಂಥ ಧನವನ್ನು ದಿನ ಎಂದೂ ಉಚ್ಚರಿಸದ ಸಕಲ ಹುಚ್ಚುಚ್ಚಾಗಳನ್ನು ಕ್ರಮಿಸಿ ಟಿವಿ ವೀಕ್ಷಿಸುವ ಶುದ್ಧ ಕನ್ನಡಿಗ ವ್ಯಕ್ತಿ ಇದ್ದೂ ನಿನಗೆ ಇಂತಹ ಆಸಹನೆ ತರವಲ್ಲ" ಎಂದು ಗುಡುಗಿದ ಸೀನು.

"ಬಿಡು. ಚಿತ್ರಗೀತೆಗಳನ್ನು. ಮರಳು ಪ್ರಾರ್ಥನಗೀತೆಗಳಿಗೆ. ಎಲ್ಲ ವ್ರತಗಳಲ್ಲಿಯೂ ಅಗ್ರಪೂಜೆ ಗಣಪತಿಯದೇ. ಗಣೇಶನ ಯಾವ ಯಾವ ಹಾಡುಗಳು ಎಲ್ಲೆಲ್ಲಿ ಸೂಕ್ತ?" ಎನ್ನುತ್ತಾ ಹೇಳುವುದರಲ್ಲಿ ನಿರತನಾದ ಸೀನುವು ಹೇಳೆ ತರಲು ಯತ್ನಿಸಿದೆ.

"ಹಾಡುಗಳನ್ನು ಗುನುಗುತ್ತಾ ಬಾ."

"ಶರಣು ಸಿದ್ಧಿ ವಿನಾಯಕ; ಶರಣು ವಿದ್ಯಾ ಪ್ರದಾಯಕ."

"ಶರಣು ಶರಣಾರ್ಥಿ ಎನ್ನುವವರು ನಡೆಸುವ ಕಾರ್ಯಕ್ರಮಗಳಲ್ಲಿ ಇದನ್ನು ಬಳಸುವುದು ಸೂಕ್ತ. ಶರಣುಸಿಗೆ ಶರಣುವೇ ಮ್ಯಾಚಿಂಗ್."

"ಶ್ರೀ ಗಣನಾಥ ಸಿಂಧೂರ ವರ್ಣ...?"

"ರೆಡ್ ಕ್ರಾಸ್ ಸಂಸ್ಥೆಯವರದು ಸಿಂಧೂರ ವರ್ಣಕ್ಕೆ ಸಮೀಪವಾದುದು. ಅಲ್ಲದೆ 'ಆಪರೇಷನ್ ಸಿಂಧೂರ'ಕ್ಕೆ ಸಂಬಂಧಿಸಿದ ಸಕಲ ಕಾರ್ಯಕ್ರಮಗಳಲ್ಲಿಯೂ ಇದನ್ನು ಪ್ರಾರ್ಥನೆಯಾಗಿ ಬಳಸಬಹುದು."

"ವಾತಾಪಿ ಗಣಪತಿಂ ಭಜೆ?"

"ಪಲ್ಯೂಷನ್ ಕಂಟ್ರೋಲ್ ಬೋರ್ಡ್ ಮತ್ತು ಸಕಲ ವಾಯುಮಾಲಿನ್ಯ ವಿರೋಧಿ ಜನಗಳು ಹಾಡಬೇಕಾದ ಹಾಡು."

"ಎತ್ತಣ ಸಂಬಂಧವಯ್ಯ ಹುಡುಕಿದುದೆ?"

"ಕಲುಷಿತವಾದರೂ ಭೂತಕಾಲ ಎಂಬ ಸಾಲು ಆ ಹಾಡಿನಲ್ಲಿದೆ. ಭೂತಕಾಲದ ಸಮಸ್ಯೆಯೆನಿಸುವ ಕಲುಷಿತಪನ್ನು ನಮ್ಮಿಂದ ದೂರಗೊಳಿಸಲು ಯಾವ ನಗರಪಾಲಿಕೆಯವರೂ ಸಾಧ್ಯವಿಲ್ಲ, ಆದು ದೇವರೊಬ್ಬನೇ ಸಾಧಿಸಬಲ್ಲ ಕಾರ್ಯ. ತತ್ಪರಿಣಾ ಈ ಗೀತೆ ಅಲ್ಲಿಯೇ ಹೆಚ್ಚು ಪ್ರಸ್ತುತ."

"ಮಹಾಗಣಪತಿಂ..."

"ಇದು ನನ್ನನ್ನು ವಿಸ್ಮಯಗೊಳಿಸಿರುವ ಗೀತೆ. 'ಮನಸಾ ಸ್ಮರಾಮಿ' ಎನ್ನುತ್ತಾ ಮೈಕ್ ಕಿತ್ತುಹೋಗುವಂತೆ ಹಾಡುವುದು ಸರಿಯೆ? ಈ ಹಾಡನ್ನು ನಿಜಭಕ್ತಿಯುಳ್ಳವರು ಧ್ಯಾನಸ್ಥರಾದಾಗ ಮನದಲ್ಲೇ ಹಾಡಿಕೊಳ್ಳುವುದು ಸರಿಯೆಂದು ನನ್ನ ಅಭಿಪ್ರಾಯ."

"ಗಣನಾಯಕಾಯ ಗಣದೈವತಾಯ..."

"ಪ್ರಾರ್ಥನೆಯೆಂದರೆ ಇದು! ಅನೇಕ ಜನರಿಗೆ ಸೂಕ್ತವಾಗುವ ಹಾಡಿದು!" ಸೀನು ಅತ್ಯುತ್ಸಾಹದಿಂದ ಉಲಿದ.

"ಯಾರ್ಯಾರಿಗೆ?"

"ಗಣಶರೀರಾಯ ಎಂದರೆ ಸ್ವಸ್ಥವಾದ ಶರೀರವುಳ್ಳವನಿಗೆ; ಯೋಗ ಕೇಂದ್ರಗಳು ಮತ್ತು ನರ್ಸಿಂಗ್ ಹೋಂಗಳು ಈ ಪದವನ್ನು ಪದೇ ಪದೇ ಉಚ್ಚರಿಸಬೇಕು. ಗುಣಮಂಡಿತಾಯ ಎನ್ನುವುದು ಕಾಂಗ್ರೆಸ್ ಜನರಲ್ಲಿ ವಿಶೇಷ ಅರ್ಥವನ್ನು ಕೊಡುತ್ತದೆ. ಮಂಡಿ ಸಹಿತ ಮಂಡಿ 'ಮಂಡಿ ಮಾರ್ಕೆಟ್' ಬಳಿ ಹೋಗಿಸಬಹುದಾದ ಮಂಡಿಯನ್ನು (ಚಪ್ಪನ್ನು) ಒದಗಿಸು ಎಂದು ಕೇಳುವುದರ ಶುದ್ಧ ಅಪಭ್ರಂಶ ರೂಪವೇ 'ಗಣ ಮಂಡಿ ತಾ yar' ಎನ್ನುವುದು. ಗುಣಶೀಲ ನಾಯ ಎನ್ನುವುದು ಫ್ಯಾಷನ್ ಇಂಡಸ್ಟ್ರಿಯವರು ಸ್ತುತಿಸಬೇಕಾದ ಪದ."

"ಏಕೆ? ಹೇಗೆ ಪ್ರಸ್ತುತವಿದು?"

"ಗುಣ ಎಂದರೆ ನೂಲು. ಗುಣಶೀಲರೆಂದರೆ ನೂಲಿನೊಡೆಯರು ಉರುಫ್ ಟೆಕ್ಸ್‌ಟೈಲ್ ಇಂಡಸ್ಟ್ರಿಯ ಮಾಲೀಕರು. ಟೆಕ್ಸ್‌ಟೈಲಿನ ವಿವಿಧ ಫ್ಯಾಶನ್‌ಗಳ ವಸ್ತ್ರಗಳನ್ನು ಮಾರುವುದರ ಮೂಲಕ ಆಯ(ಧನ) ಪಡೆಯಲು ಈ ಪದದ ಪ್ರಾರ್ಥನೆಯೇ ಸೂಕ್ತ" ಎಂದನವ.

"ನಿನ್ನ ಬುದ್ಧಿ ಹಾಳಾಗಿದೆ. ನೀನು ವಿದ್ಯಾಗಣಪತಿಯ ಪ್ರಾರ್ಥನೆ ಮಾಡುವುದು ಅತ್ಯವಶ್ಯ" ಎಂದೆ.

ಸೀನು ನನ್ನತ್ತ ವಿರೋಧಪಕ್ಷದವರು ಮುಖ್ಯಮಂತ್ರಿಗಳತ್ತ ಬೀರುವ ಕ್ರುದ್ಧದೃಷ್ಟಿಯನ್ನು ಬೀರುತ್ತಾ ಹೊರನಡೆದ.

ಚರಿತ್ರೆ ಮೆಚ್ಚಿದ ಸಂಯಮದ ಹಾದಿ

ಪ್ರತಿಯೊಂದು ಪ್ರಚೋದನೆಗೂ ಪ್ರತಿಕ್ರಿಯಿಸಲೇಬೇಕಾದ ಅಗತ್ಯವಿಲ್ಲ ಎಂಬುದನ್ನು ಶ್ರೇಷ್ಠ ನಾಯಕರು ಮತ್ತು ಕಾಲವನ್ನು ಗೆದ್ದು ನಿಂತ ಸಂಸ್ಥೆಗಳು ನಮಗೆ ನೆನಪಿಸಿವೆ.



▸ ಸಾತ್ವಿಕ್ ರಮೇಶ್

ಇತ್ತೀಚಿನ ವಾರಗಳಲ್ಲಿ ಸಂಘದ ವಿರುದ್ಧ ಹಳೆಯ ಆರೋಪಗಳನ್ನೇ ಮತ್ತೆ ಮುನ್ನೆಲೆಗೆ ತರುತ್ತಿರುವುದು ಕಂಡುಬರುತ್ತಿದೆ. ಸೂಕ್ಷ್ಮವಾಗಿ ಗಮನಿಸಿದ ಯಾರಿಗಾದರೂ, ಈ ಎಲ್ಲ ವಿಶ್ಲೇಷಣೆಗಳ ಹಿಂದಿರುವುದು ಸತ್ಯದ ಅನ್ವೇಷಣೆಯಲ್ಲ, ಬದಲಿಗೆ ಅನಗತ್ಯ ವಿವಾದ ಸೃಷ್ಟಿಸಿ ರಾಜಕೀಯ ಲಾಭ ಮಾಡಿಕೊಳ್ಳುವ ತಂತ್ರ ಎಂಬುದು ಸ್ಪಷ್ಟವಾಗುತ್ತದೆ. ಈ ಆರೋಪಗಳ ಕುರಿತು ಸಾರ್ವಜನಿಕ ವಲಯದಲ್ಲಿ ಈಗಾಗಲೇ ಸಾಕಷ್ಟು ಚರ್ಚೆಗಳು ನಡೆದಿವೆ; ಪ್ರಮುಖ ಕಾನೂನು ತಜ್ಞರು ಹಾಗೂ ಸಾರ್ವಜನಿಕ ಚಿಂತಕರು ಇವುಗಳಿಗೆ ಸೂಕ್ತ ಉತ್ತರವನ್ನೂ ನೀಡಿದ್ದಾರೆ. ಆದಾಗ್ಯೂ, ಆ ಎಲ್ಲ ಸ್ಪಷ್ಟೀಕರಣಗಳನ್ನು ಬದಿಗಿಟ್ಟು, ಇದೇ ವಿವಾದವನ್ನು ಹಠಕ್ಕೆ ಬಿದ್ದಂತೆ ಮತ್ತೆ ಮತ್ತೆ ಕೆದಕಲಾಗುತ್ತಿದೆ.

ಇಂತಹ ಸಂದಿಗ್ಧ ಸಂದರ್ಭಗಳಲ್ಲಿ ಚರಿತ್ರೆಯು ನಮಗೊಂದು ದಾರಿದೀಪವಾಗುತ್ತದೆ. ಪ್ರತಿಯೊಂದು ಪ್ರಚೋದನೆಗೂ ಪ್ರತಿಕ್ರಿಯಿಸಲೇಬೇಕಾದ ಅಗತ್ಯವಿಲ್ಲ ಎಂಬುದನ್ನು ಇತಿಹಾಸದ ಶ್ರೇಷ್ಠ ನಾಯಕರು ಮತ್ತು ಕಾಲವನ್ನು ಗೆದ್ದು ನಿಂತ ಸಂಸ್ಥೆಗಳು ನಮಗೆ ಪದೇ ಪದೇ ನೆನಪಿಸಿವೆ. ಅನೇಕ ಬಾರಿ, ಅತ್ಯಂತ ಕಠಿಣವಾದ ಮಾರ್ಗವೇ ಅತ್ಯಂತ ವಿವೇಕಯುತವಾದದ್ದಾಗಿರುತ್ತದೆ; ಅದೇ 'ಸಂಯಮದ ಮಾರ್ಗ'.

ಯಾವುದೇ ಒಂದು ಸಂಸ್ಥೆ, ಚಳವಳಿ ಅಥವಾ ನಾಯಕನಿಗೆ ಎದುರಾಳಿಗಳಿಂದ ವಿರೋಧ ವ್ಯಕ್ತವಾಗುವುದು ಸಹಜವೇ. ಆದರೆ ಆ ನೈಜ ಪರೀಕ್ಷೆ ಎದುರಾಗುವುದು ಶತ್ರುಗಳ ವಿರೋಧದಿಂದಲ್ಲ, ಬದಲಿಗೆ ತಮ್ಮವರಿಂದಲೇ ಮೂಡುವ ಸಂಶಯದಿಂದ. ವಿರೋಧಿಗಳ ಟೀಕೆಗಳನ್ನು ನಿರ್ಲಕ್ಷಿಸಬಹುದು, ಹಿತೈಷಿಗಳ ಪ್ರಶ್ನೆಗಳಿಗೆ ಉತ್ತರಿಸುವುದು ಕೊಂಚ ಕಷ್ಟವೇ. ಆದರೆ ನಾಯಕತ್ವದ ಅತ್ಯುನ್ನತ ಲಕ್ಷಣವೆಂದರೆ, ತಾತ್ಕಾಲಿಕ ಭಾವೋದ್ರೇಕಗಳಿಗೆ ಒಳಗಾಗದೆ, ದೂರದೃಷ್ಟಿಯಿಂದ ಯಾರ ಒತ್ತಾಯಕ್ಕೂ ಮಣಿಯದೆ ಅವರೇ ಭರವಸೆ ಕಳೆದುಕೊಳ್ಳಲು ತೊಡಗಿದಾಗಲೂ ತನ್ನ ದೃಷ್ಟಿಯನ್ನು ಕಳೆದುಕೊಳ್ಳದಿರುವುದು.

ನಮ್ಮ ಇತಿಹಾಸದಲ್ಲಿ ಇದಕ್ಕೆ ಅಪಾರ ಉದಾಹರಣೆಗಳಿವೆ.

ಚರಿತ್ರೆ ಕಲಿಸಿದ ಪಾಠ

ಛತ್ರಪತಿ ಶಿವಾಜಿ ಮಹಾರಾಜರ ವಿರುದ್ಧ ಅಫ್ಜಲ್ ಖಾನ್ ದಂಡೆತ್ತಿ ಬಂದಾಗ, ಅದು ಕೇವಲ ಒಂದು ಸೈನಿಕ ಆಕ್ರಮಣವಾಗಿರಲಿಲ್ಲ, ಅದೊಂದು ವ್ಯವಸ್ಥಿತ ಪ್ರಚೋದನೆಯಾಗಿತ್ತು. ಹಳ್ಳಿಗಳನ್ನು ಸುಟ್ಟು ಹಾಕಲಾಯಿತು, ಧಾರ್ಮಿಕ ಶ್ರದ್ಧಾಕೇಂದ್ರಗಳನ್ನು ಧ್ವಂಸಗೊಳಿಸಲಾಯಿತು, ಮನೆಗಳನ್ನು ಲೂಟಿ ಮಾಡಿ ಅಸಂಖ್ಯಾತ ಮುಗ್ಧ ಜನರನ್ನು ಹಿಂಸಿಸಲಾಯಿತು. ಈ ದಾಳಿಯ ಉದ್ದೇಶ ಕೇವಲ ವಿನಾಶ ಉಂಟುಮಾಡುವುದಷ್ಟೇ ಆಗಿರಲಿಲ್ಲ; ಜನರಲ್ಲಿ ತೀವ್ರ ಆಕ್ರೋಶವನ್ನು ಹುಟ್ಟುಹಾಕಿ, ಶಿವಾಜಿ ಮಹಾರಾಜರು ತಮ್ಮ ಯುದ್ಧತಂತ್ರವನ್ನು ಮರೆತು ಕೇವಲ ಭಾವಾವೇಶಕ್ಕೆ ಒಳಗಾಗಿ ತಕ್ಷಣವೇ ಪ್ರತಿಕ್ರಿಯಿಸುವಂತೆ ಮಾಡುವುದಾಗಿತ್ತು. ಸಾಮಾನ್ಯ ಜನರ ನಿರೀಕ್ಷೆಯೂ ಅದೇ ಆಗಿತ್ತು; ಶಿವಾಜಿ ಮಹಾರಾಜರು ತಕ್ಷಣವೇ ಕೋಟೆಯಿಂದ ಹೊರಬಂದು ಶತ್ರುವನ್ನು ಎದುರಿಸಬೇಕೆಂಬುದೇ ಅವರ ಹಂಬಲವಾಗಿತ್ತು.

ದಿನಗಳು ಉರುಳಿದಂತೆ ಸಾರ್ವಜನಿಕರಲ್ಲಿ ಪ್ರಶ್ನೆಗಳು ಎದ್ದವು. ಈ ವಿಳಂಬವು ಅವರ ದೌರ್ಬಲ್ಯವನ್ನು ತೋರಿಸುತ್ತಿದೆಯೇ ಎಂದು ಕೆಲವರು ಸಂದೇಹಪಟ್ಟರೆ, ಇನ್ನು ಕೆಲವರು ಅವರ ವಿವೇಚನೆಯನ್ನೇ ಪ್ರಶ್ನಿಸಿದರು. ಆದರೆ, ಶತ್ರುಗಳು ನಿರ್ದೇಶಿಸಿದ ನಿಯಮಗಳ ಪ್ರಕಾರ ಪ್ರತಿಕ್ರಿಯಿಸುವುದು ಕೇವಲ ಶತ್ರುವಿನ ಉದ್ದೇಶಕ್ಕೆ ಮಾತ್ರ ಲಾಭವಾಗುತ್ತದೆ ಎಂಬುದು ಶಿವಾಜಿ ಮಹಾರಾಜರಿಗೆ ಚೆನ್ನಾಗಿ ತಿಳಿದಿತ್ತು. ಅವರು ಆತುರದ ತೀರ್ಮಾನದ ಬದಲಾಗಿ ತಾಳ್ಮೆಯನ್ನೂ, ಭಾವನಾತ್ಮಕ ಪ್ರದರ್ಶನದ ಬದಲಾಗಿ ನಿಖರ ಸಿದ್ಧತೆಯನ್ನೂ ಆರಿಸಿಕೊಂಡರು. ಆಸ್ಪೋಟದವಲ್ಲಿ ಅವರಿಗೆ ಅಫ್ಜಲ್ ಖಾನನ ಪ್ರಚೋದನೆಗಳಿಂತಲೂ, ಮಹತ್ತರವಾದ ಗುರಿಯನ್ನು ನೆರವೇರಿಸುವ ಹಾದಿಯಲ್ಲಿ ಸ್ವಂತ ಜನರಿಂದ ಎದುರಾದ ಅಪನಂಬಿಕೆಯನ್ನು ಭರಿಸುವುದೇ ಅತ್ಯಂತ ಕಠಿಣವಾದ ಸವಾಲಾಗಿರಬಹುದು.

ಆ ನಂತರ ಇತಿಹಾಸದಲ್ಲಿ ವಿನಾಯಿತಿ ಎಂಬುದು ಜಗಜ್ಜಾಹೀರು. ಸಂಯಾದ ಸಮಯ ಬಂದಾಗ ಶಿವಾಜಿ ಮಹಾರಾಜರು ಅತ್ಯಂತ ನಿಶ್ಚಯಾತ್ಮಕವಾಗಿ ಮುನ್ನುಗ್ಗಿದರು ಮತ್ತು ಅಫ್ಜಲ್ ಖಾನನ ಅಧ್ಯಾಯವು ಅಂತ್ಯಕಂಡಿತು. ತಾಳ್ಮೆಯ ಅವರ ಸಂಕಲ್ಪವನ್ನು ದುರ್ಬಲಗೊಳಿಸಲಿಲ್ಲ; ಬದಲಿಗೆ ಅವರ ಸ್ಥಾನವನ್ನು ಮತ್ತಷ್ಟು ಗಟ್ಟಿಗೊಳಿಸಿತು.

ಮಹಾತ್ಮ ಗಾಂಧೀಜಿಯವರ ಹತ್ಯೆಯ ನಂತರದ ಅತ್ಯಂತ ಕಠಿಣ ಕಾಲಘಟ್ಟದಲ್ಲಿ ಸಂಘವು ಕೂಡ ಇಂತಹುದೇ ತತ್ವವನ್ನು ಅನುಸರಿಸಿತ್ತು. ನಿರಂತರ ನಿಂದನೆಗಳು, ನಿಷೇಧಗಳು, ಬಂಧನಗಳು ಹಾಗೂ ಸಾರ್ವಜನಿಕ ದ್ವೇಷವು ಅಸಂಖ್ಯಾತ ಸ್ವಯಂ ಸೇವಕರಲ್ಲಿ ತೀವ್ರ ತಲ್ಲಣವನ್ನು ಉಂಟುಮಾಡಿದ್ದವು. ಭಾವನೆಗಳು ಉಕ್ಕಿಹರಿಯುತ್ತಿದ್ದ ಆ ಹೊತ್ತಿನಲ್ಲಿ, ಆಕ್ರೋಶಭರಿತವಾಗಿ ಪ್ರತಿಕ್ರಿಯಿಸುವುದು ಯಾರಿಗಾದರೂ ಸಹಜವಾಗಿತ್ತು. ಆದರೆ ಅಂದಿನ ಸರಸಂಘಚಾಲಕರಾಗಿದ್ದ ಗುರುಜಿಯವರು ಸ್ವಯಂಸೇವಕರಲ್ಲಿ ಸಂಯಮ ಹಾಗೂ ಶಾಂತಿಯನ್ನು ಕಾಯ್ದುಕೊಳ್ಳಲು ಕರೆ ನೀಡಿದರು. ಸ್ವಯಂಸೇವಕರಿಗೆ ಅವರ ಸಂದೇಶ ಸರಳವಾಗಿತ್ತು: "Be calm at all cost" ಸಮಾಜವು ಎಷ್ಟೇ ಆಕ್ರೋಶಗೊಂಡಿದ್ದರೂ, ನಮ್ಮನ್ನು ತಪ್ಪಾಗಿ ಗ್ರಹಿಸಿದ್ದರೂ ಅದು ನಮ್ಮದೇ ಸಮಾಜ. ಅಕಸ್ಮಾತಾಗಿ ಹಲ್ಲು ನಾಲಿಗೆಯನ್ನು ಕಚ್ಚಿತೆಂದು ಯಾರೂ ಹಲ್ಲುಗಳನ್ನು ಮುರಿದುಕೊಳ್ಳುವುದಿಲ್ಲವಷ್ಟೆ? ಹಾಗೆಯೇ ನೋವಿನ ಕ್ಷಣಗಳಲ್ಲಿ ನಮ್ಮದೇ ಸಮಾಜದ ವಿರುದ್ಧ ನಾವು ತಿರುಗಿಬೀಳಲು ಸಾಧ್ಯವಿಲ್ಲ. ಮುಂದಿನ ವರ್ಷಗಳು ಅವರ ಆ ಆಳವಾದ ವಿಶ್ವಾಸಕ್ಕೆ ಸಾಕ್ಷಿಯಾದವು. ನಿಷೇಧಗಳು, ಪುನರಾವರ್ತಿತ ಆರೋಪಗಳು ಮತ್ತು ಪ್ರತಿಕೂಲ ಪರಿಸ್ಥಿತಿ ಗಳ ನಡುವೆಯೂ ಸಂಘವು ನಿರಂತರವಾಗಿ ಬೆಳೆಯಿತು. ಇಂದು ಸಂಘವು ತನ್ನ ಶತಮಾನೋತ್ಸವದ ವರ್ಷದಲ್ಲಿದ್ದು, ಎಂದಿಗಿಂತಲೂ ಹೆಚ್ಚು ಸದೃಢವಾಗಿ ಮತ್ತು ವ್ಯಾಪಕವಾಗಿ ದೇಶಾದ್ಯಂತ ಪಸರಿಸಿದೆ.

ಆವೇಶ ವರ್ಜಿತ ವಿವೇಚನೆ

ಅನೇಕ ನಾಯಕರು ಮತ್ತು ಸಂಸ್ಥೆಗಳು ತಾವು ಮಾಡಿದ ಕೆಲಸಗಳಿಂದ ಹೆಸರಾಗಿ, ತಾವು ಮಾಡದೇ ಇರಲು ನಿರ್ಧರಿಸಿದ (ಸಂಯಮ ವಹಿಸಿದ) ನಿರ್ಧಾರಗಳಿಂದ ಇತಿಹಾಸದಲ್ಲಿ ಚಿರಸ್ಥಾಯಿಯಾಗುತ್ತಾರೆ. ಪ್ರತಿಕ್ರಿಯಿಸುವ ಒತ್ತಡವಿದ್ದಾಗ ತಾಳ್ಮೆ ವಹಿಸುವುದು ಎಂದರೆ ಅದು ದುರ್ಬಲತೆಯಲ್ಲ. ಆದರೆ ಆ ತಾಳ್ಮೆಯ ಹಿಂದೆ ಸಂದೇಹ ಅಥವಾ ಆತಂಕವಲ್ಲ, ಸ್ಪಷ್ಟ ದೂರದೃಷ್ಟಿ ಇರಬೇಕು. ಕಾಯುವಿಕೆಯನ್ನು ಅನಿಶ್ಚಿತತೆಯೆಂದೂ ತಪ್ಪಾಗಿ ಅರ್ಥೈಸಲಾಗುತ್ತದೆ. ಆದರೆ ಇತಿಹಾಸವು ಆಯಾ ಕ್ಷಣದ ಕೋಲಾಹಲವನ್ನು ನೆನಪಿಟ್ಟುಕೊಳ್ಳುವುದಿಲ್ಲ, ಬದಲಿಗೆ ವಿವೇಕಯುತ ನಿರ್ಧಾರ ತಂದಿಟ್ಟ ಸುಸ್ಥಿರ ಫಲಿತಾಂಶವನ್ನು ಮಾತ್ರ ಗೌರವಿಸುತ್ತದೆ. ಸಮಾಜವು ಸದಾ ಪ್ರಶ್ನೆಗಳನ್ನು ಕೇಳುತ್ತಲೇ ಇರುತ್ತದೆ. ಎದುರಾಳಿಗಳು ಪ್ರಚೋದಿಸುತ್ತಲೇ ಇರುತ್ತಾರೆ. ಹಿತೈಷಿಗಳೂ ಸಹ ಕೆಲವೊಮ್ಮೆ ತಾಳ್ಮೆ ಕಳೆದುಕೊಳ್ಳಬಹುದು. ಇವೆಲ್ಲವೂ ತೀರಾ ಸ್ವಾಭಾವಿಕ ಪ್ರತಿಕ್ರಿಯೆಗಳು. ಆದರೆ, ನಾಯಕತ್ವವು ಇದಕ್ಕಿಂತಲೂ ಮಿಗಿಲಾದ ದೃಷ್ಟಿಯನ್ನು ಬೇಡುತ್ತದೆ. ಸದ್ಯದ ಪರಿಸ್ಥಿತಿಯನ್ನು ಮೀರಿ ನಿಂತು, ವಿಶಾಲವಾದ ದೈಯೋದ್ದೇಶಗಳತ್ತ ಬದ್ಧವಾಗಿರುವುದೇ ನೈಜ ನಾಯಕತ್ವ. ಭಾವನೆಗಳಿಂದ ಪ್ರೇರಿತ ಆತುರದ ಪ್ರತಿಕ್ರಿಯೆಗಿಂತ, ಆಳವಾದ ವಿವೇಕಯುತ ಪ್ರತಿಕ್ರಿಯೆಯೇ ದೀರ್ಘಕಾಲ ಉಳಿಯುತ್ತದೆ. ಆತುರದ ಆಕ್ರೋಶವು ಕ್ಷಣಿಕ ತೃಪ್ತಿಯನ್ನು ನೀಡಬಹುದು; ಆದರೆ ವಿವೇಚನೆಯು ಶಾಶ್ವತವಾದ ಯಶಸ್ಸನ್ನು ತಂದುಕೊಡುತ್ತದೆ. ಆಕ್ರೋಶವನ್ನು ಹೊರಹಾಕಲು ಕೇವಲ ಉದ್ವೇಗ ಸಾಕು; ಆದರೆ ಸಂಯಮವನ್ನು ಕಾಯ್ದುಕೊಳ್ಳಲು ಅಪಾರವಾದ ಆತ್ಮಬಲ ಬೇಕು.

ಮೆಸ್ಸಿ, ರೊನಾಲ್ಡೋ: ಯಾರು ಮೇಲೆಂಬ ಅನವಶ್ಯ ಚರ್ಚೆ!

▸ ದಿನೇಶ್ ನಾಯಕ್

ಅರ್ಜೆಂಟೀನಾದ ಫುಟ್ಬಾಲಿಗ ಲಿಯೋನೆಲ್ ಮೆಸ್ಸಿಗೆ ಈಗ 39 ವರ್ಷ. ಪೋರ್ಚುಗಲ್‌ನ ಕ್ರಿಸ್ಟಿಯಾನೋ ರೊನಾಲ್ಡೋಗೆ 41 ವರ್ಷ. ಅವರಿಬ್ಬರೊಳಗೆ ಯಾರು ಶ್ರೇಷ್ಠರು ಎಂಬ ಕುರಿತಂತೆ ಅವರ ಅಭಿಮಾನಿಗಳು ಮತ್ತು ಫುಟ್ಬಾಲ್ ಪಂಡಿತರು ಕೆಲವು ವರ್ಷಗಳಿಂದ ಚರ್ಚಿಸುತ್ತಲೇ ಇದ್ದಾರೆ. ಆದರೆ ಆ ಚರ್ಚೆ ಮುಗಿಯುವಂತೆ ಕಾಣುತ್ತಿಲ್ಲ, ಏಕೆಂದರೆ ಇಬ್ಬರೂ ತಮ್ಮ ನಿವೃತ್ತಿಯ ಹಾದಿಯಲ್ಲಿ ಕುಂದು ತೋರುತ್ತಿಲ್ಲ, ಹೊಸ ಹೊಸ ದಾಖಲೆಗಳನ್ನು ಬರೆಯುತ್ತಲೇ ಇದ್ದಾರೆ. ವಯಸ್ಸು ಅವರ ನಿರ್ವಹಣೆಯ ಮೇಲೆ ಪ್ರಭಾವ ಬೀರಿದಂತೆ ಕಂಡುಬರುತ್ತಿಲ್ಲ, ವಯಸ್ಸು ಮಾಗಿದಂತೆ ಅವರ ಗೋಲು ಗಳಿಕೆಯ ಸಾಮರ್ಥ್ಯವೂ ಹೆಚ್ಚುತ್ತಿದೆ.

ಈಬಾರಿಯ ವಿಶ್ವಕಪ್‌ನಲ್ಲಿ ಅತ್ಯಾಗಾಯದೊಂದಿಗೆ ನಡೆದ ಮೊದಲ ಪಂದ್ಯದಲ್ಲಿ ಮೆಸ್ಸಿ 3 ಗೋಲು ಬಾರಿಸುವ ಮೂಲಕ ವಿಶ್ವಕಪ್‌ನಲ್ಲಿ ತಮ್ಮ ಗೋಲುಗಳ ಸಂಖ್ಯೆಯನ್ನು 18ಕ್ಕೇರಿಸಿಕೊಂಡು, ವಿಶ್ವಕಪ್‌ಗಳಲ್ಲಿ ಅತ್ಯಧಿಕ ಗೋಲು ಬಾರಿಸಿದ ವಿಶಿಷ್ಟ ಸಾಧನೆಗೈದರು. ಅದಕ್ಕೆ ಮುನ್ನ ರೊನಾಲ್ಡೋ ಕಾಂಗೋ ವಿರುದ್ಧ ಗೋಲು ಗಳಿಸಲು ವಿಫಲರಾಗಿದ್ದುದರಿಂದ ಎಲ್ಲರೂ ಮೆಸ್ಸಿಯೇ ರೊನಾಲ್ಡೋಗಿಂತ ಶ್ರೇಷ್ಠ ಎಂಬುದಾಗಿ ಮಾತನಾಡತೊಡಗಿದರು. ಆದರೆ ಮೆಸ್ಸಿ ವಿಶ್ವದಾಖಲೆ ಮಾಡಿದ ರಾತ್ರಿಯೇ ರೊನಾಲ್ಡೋ ಉಜ್ಬೇಕಿಸ್ತಾನದ ವಿರುದ್ಧ 2 ಗೋಲು ಬಾರಿಸುವ ಮೂಲಕ ತಾವಾಡಿದ ಎಲ್ಲಾ ಆರು ವಿಶ್ವಕಪ್‌ಗಳಲ್ಲೂ (2006, 2010, 2014, 2018, 2022, 2026) ಗೋಲು ದಾಖಲಿಸಿದ ವಿಶೇಷ ಸಾಧನೆಗೆ ಪಾತ್ರರಾದರು. ಅಲ್ಲಿಂದ ಮೆಸ್ಸಿ ಮತ್ತು ರೊನಾಲ್ಡೋ ಇಬ್ಬರಲ್ಲಿ ಯಾರು ಶ್ರೇಷ್ಠರೆಂಬ ಚರ್ಚೆ ಮತ್ತೆ ಕಾವೇರಿತು. ಮೆಸ್ಸಿ ಕೂಡಾ ಈ ಆರು ವಿಶ್ವಕಪ್‌ಗಳಲ್ಲಿ ಆಡಿದ್ದಾರಾದರೂ 2010ರ ವಿಶ್ವಕಪ್‌ನಲ್ಲಿ ಗೋಲು ಗಳಿಸಲು ವಿಫಲರಾಗಿದ್ದರು.

ರೊನಾಲ್ಡೋ ತಮ್ಮ ವಿರುದ್ಧ ಟೀಕೆಗಳು ಕೇಳಿಬಂದಾಗಲೆಲ್ಲ ತಿರುಗಿಬಿದ್ದು ಟೀಕಾಕಾರರ ಬಾಯಿ ಮುಚ್ಚಿಸುವಂತೆ ಮಾಡುತ್ತಾರೆ. ಅವರು ಉಜ್ಬೇಕಿಸ್ತಾನದ ವಿರುದ್ಧ ಗೋಲು ಬಾರಿಸುವ ಮೂಲಕ ವಿಶ್ವಕಪ್‌ನ ನಿರಂತರ 11 ಪಂದ್ಯಗಳಲ್ಲಿ ಗೋಲು ಬಾರಿಸಲಾಗದ ನಿರಾಶೆಯೊಂದಿಗಿದ್ದರು. 2022ರ ವಿಶ್ವಕಪ್‌ನ ಮೊದಲ ಪಂದ್ಯದಲ್ಲಿ ಘಾನಾ ವಿರುದ್ಧ ಗೋಲು ಬಾರಿಸಿದ ಬಳಿಕ ಅವರು ಯಾವುದೇ ಗೋಲು ಬಾರಿಸಿರಲಿಲ್ಲ, ಆ ಬರವನ್ನವರ ನೀಗಿದ್ದಾರೆ.

41 ವರ್ಷ ದಾಟಿರುವ ರೊನಾಲ್ಡೋ ಈಗ ವಿಶ್ವಕಪ್‌ನ ಇತಿಹಾಸದಲ್ಲಿ ಗೋಲು ಬಾರಿಸಿದ ಎರಡನೇ ಅತ್ಯಂತ ಹಿರಿಯ ಆಟಗಾರರಾಗಿದ್ದಾರೆ. (ಕ್ಯಾಮರೂನ್‌ನ ರೋಜರ್ ಮಿಲಾ 42ನೇ ವಯಸ್ಸಿನಲ್ಲಿ ಗೋಲು ಬಾರಿಸಿದ್ದರು.)

ತಮ್ಮ ದೇಶದ ಪರವಾಗಿ ವಿಶ್ವಕಪ್‌ನಲ್ಲಿ ಗೋಲು ಬಾರಿಸಿದ



ಅತ್ಯಂತ ಕಿರಿಯ ಮತ್ತು ಅತ್ಯಂತ ಹಿರಿಯ ಆಟಗಾರನೆಂಬ ದಾಖಲೆಯೂ ಅವರದ್ದೇ. ವಿಶೇಷವೆಂದರೆ ಅರ್ಜೆಂಟೀನಾ ಪರವಾಗಿ ಮೆಸ್ಸಿ ಕೂಡಾ ಅತ್ಯಂತ ಕಿರಿಯ ಮತ್ತು ಅತ್ಯಂತ ಹಿರಿಯ ಆಟಗಾರನಾಗಿ ವಿಶ್ವಕಪ್‌ನಲ್ಲಿ ಗೋಲು ಬಾರಿಸಿದ ದಾಖಲೆ ಹೊಂದಿದ್ದಾರೆ.

ವಿಶೇಷವೆಂದರೆ ಇಬ್ಬರೂ ಆಟಗಾರರು ವಯಸ್ಸಾದಂತೆ ಹೆಚ್ಚೆಚ್ಚು ಗೋಲು ದಾಖಲಿಸುತ್ತಿರುವುದು. ಮೆಸ್ಸಿ 35 ವರ್ಷ ದಾಟಿದ ಬಳಿಕ ವಿಶ್ವಕಪ್‌ನಲ್ಲಿ 12 ಗೋಲು ದಾಖಲಿಸಿದ್ದಾರೆ. ಆದರೆ 18ರಿಂದ 34 ವರ್ಷದ ಅವಧಿಯಲ್ಲಿ ತಾವಾಡಿದ 19 ವಿಶ್ವಕಪ್ ಪಂದ್ಯಗಳಲ್ಲಿ ಮೆಸ್ಸಿ ಗೋಲು ಗಳಿಸಿದ್ದು 6 ಮಾತ್ರ. ಬಾರ್ಸಿಲೋನಾ ಕ್ಲಬ್ ತ್ಯಜಿಸಿದ ಬಳಿಕ ಮೆಸ್ಸಿ ತಮ್ಮ ದೇಶದ ಪರವಾಗಿ ಹೆಚ್ಚು ಗೋಲು ಗಳಿಸಿದ್ದಾರೆ ಎಂಬುದು ಗಮನಾರ್ಹ.

ರೊನಾಲ್ಡೋ 35ರ ಹರೆಯದ ಬಳಿಕ ವಿಶ್ವಕಪ್ ಮತ್ತು ಯುರೋಪಿಯನ್ ಚಾಂಪ್ಯನ್‌ಶಿಪ್‌ನಲ್ಲಿ 8 ಗೋಲು ಬಾರಿಸಿದ್ದಾರೆ. ರೊನಾಲ್ಡೋ ತಮ್ಮ ವೃತ್ತಿಜೀವನದಲ್ಲಿ ಒಟ್ಟು 975 ಗೋಲುಗಳನ್ನು ಬಾರಿಸಿದ್ದು, ಮುಂದಿನ ದಿನಗಳಲ್ಲಿ ಇನ್ನೂ 25 ಗೋಲು ದಾಖಲಿಸಿ ಸಾವಿರ ಗೋಲುಗಳ ಸರದಾರರಾಗುವ ಗುರಿ ಹೊಂದಿದ್ದಾರೆ.

ಮೆಸ್ಸಿ ಮತ್ತು ರೊನಾಲ್ಡೋ ನಡುವಿನ ತುಲನೆಗೆ ಸಂಬಂಧಪಟ್ಟಂತೆ ಯಾರೊಬ್ಬರನ್ನೂ ಪ್ರತ್ಯೇಕವಾಗಿ ತೂಗಿ ನೋಡಲಾಗುವುದಿಲ್ಲ. ಇಬ್ಬರೂ ಶ್ರೇಷ್ಠರೇ. ಆದರೆ ಅವರೊಳಗೆ ತುಲನೆ ಮಾಡುವುದೂ ಸಾಧುವಲ್ಲ. "ಇಬ್ಬರು ಆಟಗಾರರ ಕುರಿತೆ ಕೆಲವು ವರ್ಷಗಳಿಂದ ಜಾಗತಿಕ ಫುಟ್ಬಾಲ್‌ಗೆ ಗಮನಾರ್ಹ ಕೊಡುಗೆ ನೀಡಿದ್ದಾರೆ. ಇವರಿಬ್ಬರೊಳಗಿನ ಸ್ಪರ್ಧೆಯು ಅವರ ಆಟದ ಸುಧಾರಣೆಗೇ ಹೆಚ್ಚು ಪೂರಕವಾಗಿತ್ತು" ಎಂದು ಅರ್ಜೆಂಟೀನಾದ ಮಾಜಿ ಫುಟ್ಬಾಲಿಗ ಮಾರ್ಟಿನಸ್ ಹೇಳುತ್ತಾರೆ.

ಅವರಿಬ್ಬರೊಳಗೆ ಸ್ಪರ್ಧಾತ್ಮಕ ಪೈಪೋಟಿ ಇರುವುದು ಕೂಡಾ ನಿಜವೆ. ಒಬ್ಬರನ್ನೊಬ್ಬರು ಮೀರಿಸಲು ಸದಾಯತ್ನಿಸುತ್ತಾರೆ. ಮೆಸ್ಸಿ ದಾಖಲೆಯೊಂದನ್ನು ಸ್ಥಾಪಿಸಿದೊಡನೆ ರೊನಾಲ್ಡೋ ಅದನ್ನು ಪ್ರಶ್ನಿಸುವ ರೀತಿಯಲ್ಲಿ ಅವರು ಆ ಕುರಿತಂತೆ ಪ್ರತಿಕ್ರಿಯಿಸಿದೇ ನಿರಾಕರಿಸಿದ ಪ್ರಸಂಗ ನಡೆದಿದೆ. ಮೆಸ್ಸಿ ತಂಡದ ಹಿತಕ್ಕಾಗಿಯೇ ಹೆಚ್ಚಾಗಿ ಆಟವಾಡಿದರೆ, ರೊನಾಲ್ಡೋ ಸ್ವಾರ್ಥಿ ಆಟಗಾರ, ತಾನೇ ಗೋಲು ಹೊಡೆಯಲು ಹೆಚ್ಚು ಆದ್ಯತೆ ಕೊಡುತ್ತಾರೆ ಎಂದು ಕೆಲವರು ಟೀಕಿಸುತ್ತಾರೆ.

ಈ ವಿಶ್ವಕಪ್‌ನಲ್ಲಿ ಅವರಿಬ್ಬರು ಪರಸ್ಪರ ಮುಖಾಮುಖಿ ಯಾಗುವ ಸಂದರ್ಭ ಬರಬಹುದೆ ಎಂದು ಫುಟ್ಬಾಲ್ ಪ್ರೇಮಿಗಳು ನಿರೀಕ್ಷಿಸುತ್ತಿದ್ದಾರೆ. ಅರ್ಜೆಂಟೀನಾ ಮತ್ತು ಪೋರ್ಚುಗಲ್‌ಗಳು ತಮ್ಮ ತಮ್ಮ ಬಣಗಳಲ್ಲಿ ಮೇಲುಗೈ ಸಾಧಿಸಿ ಪಂದ್ಯಗಳನ್ನು ಗೆಲ್ಲುತ್ತಾ ಸಾಗಿದರೆ ಜುಲೈ 11ರಂದು ಕಾನ್ಸಾಸ್ ನಗರದಲ್ಲಿ ಅವರಿಬ್ಬರೊಳಗಿನ ಕ್ವಾರ್ಟರ್ ಫೈನಲ್ ಪಂದ್ಯವನ್ನು ವೀಕ್ಷಿಸಬಹುದಾಗಿದೆ. ಅದಕ್ಕಿಂತ ಮೊದಲು ಮೆಸ್ಸಿಗೆ ಮತ್ತು ರೊನಾಲ್ಡೋಗೆ ಜೂನ್ 28ರಂದು ತಮ್ಮ ನಿರ್ವಹಣೆ ತೋರುವ ಅವಕಾಶವಿದೆ. ಅರ್ಜೆಂಟೀನಾವು ಜೋರ್ಡಾನನ್ನು ಮತ್ತು ಪೋರ್ಚುಗಲ್ ಕೊಲಂಬಿಯಾವನ್ನು ಎದುರಿಸಲಿವೆ.

ಅವರಿಬ್ಬರ ವಿಶ್ವಕಪ್ ಇದೇ ಕೊನೆಯದು ಎಂಬುದಾಗಿ ಕೇಳಿರುವ ವಿಶ್ವಕಪ್‌ನಿಂದಲೇ ಕೇಳಿದ ಭಯ್ಯ ನುಡಿಯುತ್ತಾ ಬರುತ್ತಿದ್ದಾರೆ. ಆದರೆ ಮೆಸ್ಸಿ ಮತ್ತು ರೊನಾಲ್ಡೋ ನಿರ್ವಹಣೆ ಗಮನಿಸಿದರೆ 2030ರ ವಿಶ್ವಕಪ್‌ನಲ್ಲಿ ಕೂಡಾ ಅವರನ್ನು ಕಾಣುವಂತಾದರೆ ಅಚ್ಚರಿ ಪಡಬೇಕಾಗಿಲ್ಲ.

ಕಿರುಸುದ್ದಿ

ಕೆಂಪೇಗೌಡರದ್ದು ಜಾತ್ಯತೀತ ಮನೋಭಾವ: ವೆಂಕಟೇಶ್ ಗೌಡ



• **ಮಾಲೂರು:** ತಾಲೂಕಿನ ಚಿಕ್ಕತಿರುಪತಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ 517 ನೇ ಕೆಂಪೇಗೌಡ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಚಿಕ್ಕತಿರುಪತಿ ವ್ಯವಸ್ಥಾಪನಾ ಸಮಿತಿ ಮಾಜಿ ಅಧ್ಯಕ್ಷ ಟಿ ಆರ್ ವೆಂಕಟೇಶ್ ಗೌಡ ಅವರು ಮಾತನಾಡಿ, ಕೆಂಪೇಗೌಡರ ಜಾತ್ಯತೀತ ಮನೋಭಾವ ಎಲ್ಲರೂ ಸ್ಮರಿಸುವಂತದ್ದು, ಕೆಂಪೇಗೌಡರು ದೂರದೃಷ್ಟಿಯಿಂದ ಬೆಂಗಳೂರನ್ನು ಕಟ್ಟಿದರು. ಎಲ್ಲಾ ಸಮುದಾಯದವರು ಸಹಬಾಳ್ವೆಯಿಂದ ಜೀವನ ನಡೆಸುವಂತೆ ಮಾಡಿದ್ದಾರೆ ಎಂದರು. ಶಿಸ್ತುಬದ್ಧ ಆಡಳಿತ, ಯೋಜನೆ-ಯೋಚನೆಗಳ ಮೂಲಕ ಬಾಲ್ಯದಲ್ಲಿ ಕಂಡ ಜನರ ಕನಸನ್ನು ನನಸಾಗಿಸಲು ಕೆಂಪೇಗೌಡರ ತ್ಯಾಗ ಹಾಗೂ ಶ್ರಮವನ್ನು ನೆನಪು ಮಾಡಿಕೊಳ್ಳಬೇಕು. ಮೂಲಭೂತ ಸೌಕರ್ಯ, ನಗರಾಭಿವೃದ್ಧಿ, ಕೃಷಿ, ನೀರಾವರಿ, ಕೆರೆಗಳ ಅಭಿವೃದ್ಧಿ ಸೇರಿದಂತೆ ಹಲವು ಯೋಜನೆಗಳನ್ನು ಕೆಂಪೇಗೌಡರು ಜಾರಿಗೆ ತಂದಿದ್ದಾರೆ ಎಂದು ಅವರು ಹೇಳಿದರು. ಇದಕ್ಕೂ ಗ್ರಾಮದ ಬಸ್ ನಿಲ್ದಾಣದಲ್ಲಿ ಕೆಂಪೇಗೌಡ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು. ನಂತರ ಅನ್ನಸಂತರ್ಪಣೆ ನಡೆಯಿತು. ಈ ಸಂದರ್ಭದಲ್ಲಿ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕರಾದ ಶಂಕರನಾರಾಯಣ ಗೌಡ, ಸುರೇಶ್ ಸರ್ಕಾರಿ ನೌಕರರ ಸಂಘದ ನಿಕಟಪೂರ್ವ ಗೌರವಾಧ್ಯಕ್ಷ ಅಶ್ವತ್ಥ್ ನಾರಾಯಣ ಗೌಡ, ಟಿ.ಎಸ್.ಬಾಬು, ಹರೀಶ್, ನಂಜೇಗೌಡ, ತರಬಹಳ್ಳಿ ರಮೇಶ್, ಗೋಪಾಲ್, ಬಾಬು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಕೆಂಪೇಗೌಡ ಜಯಂತಿ ಆಚರಣೆ



• **ಕೆಜಿಎಫ್:** ಕೆಜಿಎಫ್ ವಿಧಾನಸಭಾ ಕ್ಷೇತ್ರದಲ್ಲಿ ಅತಿ ಹೆಚ್ಚು ಒಕ್ಕಲಿಗ ಸಮುದಾಯದವರು ವಾಸಿಸುವ ಗ್ರಾಮವೆಂದು ಹೆಸರುವಾಸಿಯಾಗಿರುವ ಮಾರಿಕುಪ್ಪ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಳ್ಳಿಕುಪ್ಪ ಗ್ರಾಮದಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ಸಮುದಾಯದ ಮುಖಂಡರು ಹಾಗೂ ಗ್ರಾಮಸ್ಥರು ಅರ್ಥಪೂರ್ಣವಾಗಿ ಆಚರಿಸಿದರು. ಈ ಸಂದರ್ಭದಲ್ಲಿ ಕೆಂಪೇಗೌಡರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಅವರ ಸಮಾಜಮುಖಿ ಕಾರ್ಯಗಳು ಹಾಗೂ ದೂರದೃಷ್ಟಿಯ ಆಡಳಿತವನ್ನು ಸ್ಮರಿಸಲಾಯಿತು. ಕಾರ್ಯಕ್ರಮದಲ್ಲಿ ಮಾತನಾಡಿದ ಒಕ್ಕಲಿಗ ಸಮುದಾಯದ ಮುಖಂಡ ನಾಗರಾಜ್, "ನಮ್ಮ ಕಳ್ಳಿಕುಪ್ಪ ಗ್ರಾಮವು ಸಣ್ಣ ಗ್ರಾಮವಾಗಿದ್ದರೂ ಒಕ್ಕಲಿಗ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿದ್ದಾರೆ. ನಾಡಪ್ರಭು ಕೆಂಪೇಗೌಡರು ನಮಗೆ ಆದರ್ಶ ಪುರುಷರಾಗಿದ್ದು, ಅವರ ಜಯಂತಿಯನ್ನು ಪ್ರತಿವರ್ಷ ವಿಶೇಷವಾಗಿ ಆಚರಿಸುತ್ತಾ ಬಂದಿದ್ದೇವೆ. ಬೆಂಗಳೂರು ನಗರವನ್ನು ಎಲ್ಲ ವರ್ಗದ ಜನರಿಗೆ ಆಶ್ರಯ ನೀಡುವ ಹಾಗೂ ದೇಶ-ವಿದೇಶಗಳಿಂದ ಬರುವ ಜನರಿಗೆ ಉದ್ಯೋಗ ಮತ್ತು ಜೀವನೋಪಾಯದ ಅವಕಾಶಗಳನ್ನು ಕಲ್ಪಿಸುವ ಮಹಾನಗರವನ್ನಾಗಿ ರೂಪಿಸುವಲ್ಲಿ ಕೆಂಪೇಗೌಡರ ಪಾತ್ರ ಅಪಾರವಾಗಿದೆ. ಅವರ ಸಾಧನೆ ಹಾಗೂ ದೂರದೃಷ್ಟಿಯ ಆಡಳಿತ ಇಂದಿನ ಪೀಳಿಗೆಗೆ ಮಾದರಿಯಾಗಿದೆ" ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಗ್ರಾಮದ ಹಿರಿಯರು, ಯುವಕರು ಹಾಗೂ ಒಕ್ಕಲಿಗ ಸಮುದಾಯದ ಮುಖಂಡರು ಭಾಗವಹಿಸಿ ಕೆಂಪೇಗೌಡರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ಸಂಕಲ್ಪ ಮಾಡಿದರು.

ಕೆಂಪೇಗೌಡರ ಸೇವಾಭಾವ ಅಳವಡಿಸಿಕೊಳ್ಳಿ: ಶಾಸಕ

• **ಯಲಹಂಕ:** ನಾಡಪ್ರಭು ಕೆಂಪೇಗೌಡರ ಆದರ್ಶಗಳು, ಮೌಲ್ಯಗಳು ಮತ್ತು ಸೇವಾ ಮನೋಭಾವನೆಯನ್ನು ಪ್ರತಿಯೊಬ್ಬರೂ ಅಳವಡಿಸಿ ಕೊಳ್ಳಬೇಕು ಎಂದು ಶಾಸಕ ಎಸ್.ಆರ್. ವಿಶ್ವನಾಥ್ ಕರೆ ನೀಡಿದರು. ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ ಪ್ರಯುಕ್ತ ಯಲಹಂಕ ಕ್ಷೇತ್ರ ಬಿಜೆಪಿ ಹಾಗೂ ವಿವಿಧ ಸಮುದಾಯಗಳ ಆಶ್ರಯದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬೆಂಗಳೂರು ನಗರ ನಿರ್ಮಾಣದಲ್ಲಿ ನಾಡಪ್ರಭು ಕೆಂಪೇಗೌಡರು ತೋರಿರುವ ದೂರದೃಷ್ಟಿ, ಸಮಾನತೆ ಎಂದೆಂದಿಗೂ ಆದರ್ಶಪ್ರಾಯವಾದದ್ದು, ಬೆಂಗಳೂರು ನಗರದಲ್ಲಿ ಅವರು ಕಟ್ಟಿರುವ ಕೆರೆಗಳು, ವಿವಿಧ ಕುಲಕಸುಬುಗಳ ಜನರಿಗಾಗಿ ನಿರ್ಮಿಸಿದ್ದ ಪೇಟೆಗಳು ಇಂದಿಗೂ ಸಹ ಜ್ವಲಂತವಾಗಿ ನಮ್ಮ ಕಣ್ಮುಂದೆ ಇವೆ. ಬೆಂಗಳೂರು ನಗರದಲ್ಲಿ ನೀರಿನ ಸಮಸ್ಯೆ ತಲೆ ದೋರಬಾರದು ಎಂಬ ನಿಟ್ಟಿನಲ್ಲಿ ಕೆರೆಗಳ ನಿರ್ಮಾಣಕ್ಕೆ ಅವರು ತೋರಿರುವ ಕಾಳಜಿ ನಿಜಕ್ಕೂ ಎಲ್ಲಾ ಕಾಲಕ್ಕೂ ಆದರ್ಶ ಪ್ರಾಯವಾಗಿದೆ ಎಂದರು.

ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ ಪ್ರಯುಕ್ತ ಬೆಳಗ್ಗೆ 6ಕ್ಕೆ ವೀರ ಸಾವರ್ಕರ್ ಮೇಲ್ಸೇತುವೆ ಬಳಿಯಿಂದ ನಾಲ್ಕು ಕಿಲೋಮೀಟರ್‌ಗಳ ವಾಕಥಾನ್, ಬೆಳಗ್ಗೆ 8.30 ಕ್ಕೆ ಯಲಹಂಕ ಹಳೇ ನಗರದಲ್ಲಿರುವ ನಾಡಪ್ರಭು ಕೆಂಪೇಗೌಡರ ಪ್ರತಿಮೆಗೆ ಮಾಲಾರ್ಪಣೆ, ಬಳಿಕ ವಿವಿಧ ಜಾನಪದ ಕಲಾತಂಡಗಳ ಕಲಾ ಪ್ರದರ್ಶನದ ನಡುವೆ ಯಲಹಂಕದ ರಾಜಬೀದಿಗಳಲ್ಲಿ ನಾಡಪ್ರಭು ಕೆಂಪೇಗೌಡರ ಭಾವಚಿತ್ರದ ಬೃಹತ್ ಮೆರವಣಿಗೆ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

ನಾಡಪ್ರಭು ಕೆಂಪೇಗೌಡರ 517ನೇ ಜಯಂತ್ಯುತ್ಸವ | ಸಚಿವ ಕೆ.ಎಚ್.ಮುನಿಯಪ್ಪ ಬಣ್ಣನೆ

ಕೆಂಪೇಗೌಡ ಜ್ಯೋತಿ ಜಿಲ್ಲೆಯ ಗರಿಮೆ



• **ದೇವನಹಳ್ಳಿ:** ನಾಡಪ್ರಭು ಕೆಂಪೇಗೌಡರ ಮೂಲ ಸ್ಥಳವಾದ ದೇವನಹಳ್ಳಿಯ ಆವತಿಯಿಂದ ರಾಜ್ಯಮಟ್ಟದ ಕಾರ್ಯಕ್ರಮಕ್ಕೆ ಪುರಜ್ಯೋತಿ ಹೋಗುತ್ತಿರುವುದು ಜಿಲ್ಲೆಯ ಹೆಮ್ಮೆಯ ಸಂಗತಿ ಎಂದು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವ ಕೆ.ಎಚ್ ಮುನಿಯಪ್ಪ ಅವರು ಬಣ್ಣಿಸಿದರು.

ಬೆಂಗಳೂರು ಗ್ರಾಮಾಂತರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ದೇವನಹಳ್ಳಿಯ ಆವತಿ ಗ್ರಾಮದಲ್ಲಿ ಆಯೋಜಿಸಿದ್ದ ಬೆಂಗಳೂರು ನಿರ್ಮಾತೃ ಕೆಂಪೇಗೌಡರ ಪುರಜ್ಯೋತಿ ರಥಯಾತ್ರೆಗೆ ಆವತಿ ಚನ್ನಕೇಶವ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು. ಕೆಂಪೇಗೌಡರು ಕರುನಾಡು ಕಂಡ ಅಪ್ರತಿಮ ದೂರದೃಷ್ಟಿವುಳ್ಳ ನಾಯಕರು. ಸುಮಾರು 500 ವರ್ಷಗಳ ಹಿಂದೆ ಬೆಂಗಳೂರು ನಿರ್ಮಾಣ ಅವರ ಬಹುದೊಡ್ಡ ಕೊಡುಗೆಯಾಗಿದೆ. ಇಂದಿನ ಬೆಂಗಳೂರು ಕೋಟ್ಯಂತರ ಉದ್ಯೋಗ ಸೃಷ್ಟಿಸುವ ಜತೆಗೆ ಎಲ್ಲ ವರ್ಗದ ಜನರು ಬದುಕು ಕಟ್ಟಿಕೊಳ್ಳಲು ಕೇಂದ್ರವಾಗಿ ಸಾಕಾರವಾಗಿದೆ ಎಂದು ಹೇಳಿದರು.

> ಆವತಿ ಕೆಂಪೇಗೌಡರ ವಂಶಸ್ಥರು ನೆಲೆಸಿದ ನಾಡು, ಇಲ್ಲಿಂದ ಜ್ಯೋತಿ ರಥಯಾತ್ರೆಯು ಬೆಂಗಳೂರಿನ ಕೆಂಗೇರಿ ಬಳಿಯ ಕೆಂಪೇಗೌಡ ಬಡಾವಣೆಯಲ್ಲಿ ನಡೆಯಲಿರುವ ರಾಜ್ಯಮಟ್ಟದ ಕಾರ್ಯಕ್ರಮದಲ್ಲಿ ಸೇರಲಿದೆ. ಜೊತೆಗೆ ರಾಜ್ಯದ ನಾನಾ ಭಾಗಗಳಿಂದ ಕೆಂಪೇಗೌಡ ಪುರಜ್ಯೋತಿಗಳು ಬರಲಿದ್ದು, ಇದು ರಾಜ್ಯದ ಭಾವೈಕ್ಯತೆ ಸಂಕೇತ.
> ■ ಕೆ.ಎಚ್.ಮುನಿಯಪ್ಪ, ಸಚಿವ

ಕಾರ್ಯಕ್ರಮದಲ್ಲಿ 5ನೇ ಹಣಕಾಸು ಆಯೋಗದ ಅಧ್ಯಕ್ಷ ಸಿ.ನಾರಾಯಣಸ್ವಾಮಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಬಿ.ರಾಜಣ್ಣ, ತಾಲೂಕು ಅಧ್ಯಕ್ಷ ಸಿ.ಜಗನ್ನಾಥ, ದೇವನಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಸಿ. ಮಂಜುನಾಥ್, ವಿಜಯಪುರ ಬ್ಲಾಕ್ ಕೆ.ವೆಂಕಟೇಶ್ ಉಪಸ್ಥಿತರಿದ್ದರು.

ಪ್ರೈಡ್ ವಿದ್ಯಾಸಂಸ್ಥೆ ಕಾರ್ಯದರ್ಶಿ ಜಯಭಾರತಿ ಅರವಿಂದ್ ಹೇಳಿಕೆ

ಕೆಂಪೇಗೌಡರಿಂದ ಜನಸ್ನೇಹಿ ಆಡಳಿತ



• **ದೊಡ್ಡಬಳ್ಳಾಪುರ:** ನಾಡಪ್ರಭು ಕೆಂಪೇಗೌಡರು ದೂರದೃಷ್ಟಿ ಮತ್ತು ಪ್ರಜಾಹಿತ ಚಿಂತನೆಯ ಮೂಲಕ ಜನಸ್ನೇಹಿ ಆಡಳಿತ ನೀಡಿದವರು ಎಂದು ಇಂಡಿಯನ್ ಪ್ರೈಡ್ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಜಯಭಾರತಿ ಅರವಿಂದ್ ತಿಳಿಸಿದರು.

ದೊಡ್ಡಬಳ್ಳಾಪುರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಇಂಡಿಯನ್ ಪ್ರೈಡ್ ವಿದ್ಯಾಸಂಸ್ಥೆಯಲ್ಲಿ ನಡೆದ ನಾಡಪ್ರಭು ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿ, ಕೆಂಪೇಗೌಡ ಅವರ ಆಡಳಿತ ವ್ಯವಸ್ಥೆ ಮತ್ತು ಅಭಿವೃದ್ಧಿ ಕಾರ್ಯಗಳು ಇತಿಹಾಸದಲ್ಲಿ ಸದಾ ಸ್ಮರಣೀಯವಾಗಿವೆ. ಸಮಾನತೆ ಮತ್ತು ಜನಸ್ನೇಹಿ ಆಡಳಿತ ಮಾದರಿಯು ಇಂದಿಗೂ ಆದರ್ಶವಾಗಿದೆ ಎಂದರು. ಕಸಾಪ ಕಸಬಾ ಹೋಬಳಿ ಘಟಕದ ಕೋಶಾಧ್ಯಕ್ಷ ಜಿ.ಸುರೇಶ್ ಮಾತನಾಡಿ, ಬೆಂಗಳೂರನ್ನು ಶತಮಾನಗಳ ಹಿಂದೆಯೇ ಮಾದರಿಯ ನಗರವನ್ನಾಗಿಸಲು ಯೋಜನೆಯನ್ನು ರೂಪಿಸಿದ ಕೆಂಪೇಗೌಡ, ಕೃಷಿ ಮತ್ತು ವ್ಯಾಪಾರ ವಲಯಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದರು. ಬೆಂಗಳೂರಿನಲ್ಲಿ ನಿರ್ಮಾಣವಾಗಿರುವ ಹಲವಾರು ಕೆರೆಗಳು, ಕೋಟೆಗಳು ಹಾಗೂ ವ್ಯಾಪಾರಕ್ಕೆ ಪ್ರತ್ಯೇಕ ಪೇಟೆಗಳು ಕೆಂಪೇಗೌಡ ಅವರ ಅಭಿವೃದ್ಧಿ ಕಾರ್ಯಗಳಿಗೆ ಸಾಕ್ಷಿಯಾಗಿವೆ. ಬೆಂಗಳೂರು ನಗರದ ಜಾಗತಿಕ ಮಟ್ಟದಲ್ಲಿ ಹೆಸರು ಪಡೆಯಲು ನಾಡಪ್ರಭು ಕೆಂಪೇಗೌಡರ ದೂರದೃಷ್ಟಿಯ ಯೋಜನೆಗಳು ಪ್ರಮುಖ ಕಾರಣವಾಗಿದೆ ಎಂದರು. ಕಸಾಪ ಸಾಸಲು ಹೋಬಳಿ ಘಟಕದ ಅಧ್ಯಕ್ಷ ಜಿ.ಎಂ.ನಾಗರಾಜು ಮಾತನಾಡಿ, ಕೆಂಪೇಗೌಡ ಅವರ ಆಡಳಿತದಲ್ಲಿದ್ದ ಜನಪರ ಕಾಳಜಿ, ಸಾಮಾಜಿಕ ನ್ಯಾಯ ಮತ್ತು ಪರಿಸರ ಪ್ರೀತಿ ಅನನ್ಯವಾದದ್ದು, ಅವರು ಹಂಪಿಯಂತಹ ನಾಡು ಕಟ್ಟಬೇಕೆಂದು ಕನಸು ಕಂಡವರು. ಬೆಂಗಳೂರನ್ನು ದಕ್ಷಿಣ ಭಾರತದ ವ್ಯಾಪಾರ ಕೇಂದ್ರ ಮಾಡಿದರು. ಕೆಂಪೇಗೌಡ ಅವರು ಸರ್ವಧರ್ಮ ಸಮನ್ವಯತೆ ಸಾಧಿಸಿದವರು ಎಂದು ಹೇಳಿದರು.

ಬಹುಮಾನ ವಿತರಣೆ

ಅದೇ ಸಂದರ್ಭದಲ್ಲಿ ಕೆಂಪೇಗೌಡರ ಕುರಿತು ಏರ್ಪಡಿಸಲಾಗಿದ್ದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ಎಸ್.ಸೃಜನ, ಗಾನವಿ, ಯಶಿಕ, ನಾಗಲಕ್ಷ್ಮಿ ಹಾಗೂ ಕೆಂಪೇಗೌಡರ ಛದ್ಮವೇಷ ಧರಿಸಿದ ಪ್ರಜ್ವಲ್ ಗೌಡ ವಿದ್ಯಾರ್ಥಿಗಳಿಗೆ ಬಹುಮಾನ ಮತ್ತು ಪ್ರಶಸ್ತಿಪತ್ರ ನೀಡಿ ಅಭಿನಂದಿಸಿದರು.

ಕಾರ್ಯಕ್ರಮದಲ್ಲಿ ದೊಡ್ಡಬಳ್ಳಾಪುರ ತಾಲೂಕು ಕಸಾಪ ಮಾಜಿ ಅಧ್ಯಕ್ಷ ಡಿ.ಶ್ರೀಕಾಂತ್, ಗೌರವ ಕಾರ್ಯದರ್ಶಿ ಎ.ಜಯರಾಮ್, ಭಾರತ್ ಸ್ಕೌಟ್ಸ್ ಮತ್ತು ಗೈಡ್ ಜಿಲ್ಲಾ ಸಹಾಯಕ ಆಯುಕ್ತ ವೆಂಕಟರಾಜು, ಕನ್ನಡ ಜಾಗೃತ ವೇದಿಕೆ ಅಧ್ಯಕ್ಷ ನಾಗರಾಜು, ನಿಲಯ ಮೇಲ್ವಿಚಾರಕ ಸಿ.ಅಣ್ಣಯ್ಯ, ಕಲಾವಿದರಾದ ದರ್ಗಾಜೋಗಿಹಳ್ಳಿ ಮಲ್ಲೇಶ್, ರಂಗಸ್ವಾಮಯ್ಯ, ಹಾಡೋನಹಳ್ಳಿ ಗೋವಿಂದ ರಾಜು ಮುಂತಾದವರು ಭಾಗವಹಿಸಿದ್ದರು.

ಕೆಂಪೇಗೌಡರ ಆದರ್ಶಗಳು ಎಲ್ಲರಿಗೂ ಸ್ಫೂರ್ತಿ: ಶಿವಣ್ಣ



• **ಆನೇಕಲ್:** ಕೆಂಪೇಗೌಡರ ಜೀವನ ಮೌಲ್ಯಗಳನ್ನು ಪ್ರತಿಯೊಬ್ಬರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವ ಮೂಲಕ ಸಮಾಜದ ಅಭಿವೃದ್ಧಿಗೆ ಕೈಜೋಡಿಸ ಬೇಕು. ಅವರ ಆದರ್ಶಗಳು ಎಲ್ಲರಿಗೂ ಸ್ಫೂರ್ತಿಯಾಗಿದ್ದು, ಸಮಾಜದಲ್ಲಿ ಸೌಹಾರ್ದತೆ, ಸೇವಾ ಮನೋಭಾವ ಮತ್ತು ರಾಷ್ಟ್ರಪ್ರೇಮವನ್ನು ಬೆಳೆಸುವ ಅಗತ್ಯವಿದೆ ಎಂದು ಶಾಸಕ ಬಿ.ಶಿವಣ್ಣ ಅಭಿಪ್ರಾಯಪಟ್ಟರು.

ತಹಶೀಲ್ದಾರ್ ಕಚೇರಿ ಆವರಣದಲ್ಲಿ ತಾಲೂಕು ಆಡಳಿತದ ವತಿಯಿಂದ ಆಯೋಜಿಸಿದ್ದ ನಾಡಪ್ರಭು ಕೆಂಪೇಗೌಡರ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ಬಿ.ಶಿವಣ್ಣ ಮತ್ತು ತಹಶೀಲ್ದಾರ್ ಶಶಿಧರ್ ಮಾಡ್ಯಾಳ್‌ರವರು ನಾಡಪ್ರಭು ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ನಂತರ ದೀಪ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಶುಭ ಹಾರೈಸಿದರು. ಇನ್ನು ಕಾರ್ಯಕ್ರಮದಲ್ಲಿ ಒಕ್ಕಲಿಗ ಸಮುದಾಯ ಮುಖಂಡರಾದ ಆನೇಕಲ್ ಪದ್ಮನಾಭ್, ಚಿಕ್ಕಹಾಗಡೆ ತಿಲಕ್ ಗೌಡ, ದೊಡ್ಡಹಾಗಡೆ ಹರೀಶ್ ಗೌಡ, ವೇಣು, ಕುಮಾರ್, ಬೈರೇಗೌಡ, ಬಿದರಗೆರೆ ಮೂರ್ತಿ ರಾಮಕೃಷ್ಣ, ಲೋಕೇಶ್ ಗೌಡ, ಸುರೇಶ್ ಗೌಡ, ಮೇಣಿಗನಹಳ್ಳಿ ರಘು, ರಾಮೇಗೌಡ, ಸಿಡಿಹೊಸಕೋಟೆ ಬಾಬು, ಕೂನಮುಡಿವಾಳ ಸೋಮಣ್ಣ, ಉಲ್ಲಾಸ್, ನಾಯನಹಳ್ಳಿ ನಾರಾಯಣಗೌಡ, ಮಲ್ಲೇಶ್, ಗೋಪಿ, ಬಾಬು ಮತ್ತು ಅಧಿಕಾರಿಗಳು ಹಾಗೂ ಒಕ್ಕಲಿಗ ಸಮುದಾಯ ಮುಖಂಡರು ಭಾಗವಹಿಸಿದ್ದರು.

ದೂರದೃಷ್ಟಿವುಳ್ಳ ಸಾಮಂತ ರಾಜ



• **ದೊಡ್ಡಬಳ್ಳಾಪುರ:** ನಾಡಪ್ರಭು ಕೆಂಪೇಗೌಡರು ದೂರದೃಷ್ಟಿ ವುಳ್ಳ ಸಾಮಂತ ರಾಜರಾಗಿದ್ದರು. ಅವರು ಎಲ್ಲಾ ಜಾತಿ ಜನಾಂಗದವರಿಗೂ ಸಮಾನ ಅವಕಾಶವನ್ನು ನೀಡಿದ್ದ ಮಹಾನ್ ನಾಯಕರಾಗಿದ್ದರು ಅವರ ಆಡಳಿತ ಮಾದರಿ ಆಡಳಿತವಾಗಿತ್ತು ಎಂದು ಲಾವಣ್ಯ ಪದವಿ ಮತ್ತು ಪದವಿ ಪೂರ್ವ ಕಾಲೇಜಿನ ಗೌರವ ಕಾರ್ಯದರ್ಶಿ ಹಾಗೂ ಟಿಎಪಿಎಂಸಿಎಸ್ ನಿರ್ದೇಶಕ ವಿಶ್ವಾಸ್ ಹನುಮಂತೇಗೌಡ ತಿಳಿಸಿದರು.

ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ ಕಾರ್ಯಕ್ರಮ ಲಾವಣ್ಯ ಪದವಿ ಮತ್ತು ಪದವಿ ಪೂರ್ವ ಕಾಲೇಜು ವತಿಯಿಂದ ನಾಡಪ್ರಭು ಕೆಂಪೇಗೌಡರವರ ಜಯಂತಿ ಕಾರ್ಯಕ್ರಮವನ್ನು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಆಚರಣೆ ಮಾಡಲಾಯಿತು. ಪ್ರಾಂಶುಪಾಲ ಎಂ.ಸಿ ಮಂಜುನಾಥ್ ಮಾತನಾಡಿ, 15ನೇ ಶತಮಾನದಲ್ಲಿ ಕೆಂಪೇಗೌಡರು ಕೈಗೊಂಡ ಧರ್ಮ ಕಾರ್ಯಗಳು ಜನರ ಬಗ್ಗೆ ಇದ್ದ ಅಪಾರ ಕಾಳಜಿ ಅವರ ವ್ಯಕ್ತಿತ್ವಕ್ಕೆ ಒಂದು ಸಾಕ್ಷಿಯಾಗಿತ್ತು. ಬೆಂಗಳೂರು ಜನರಿಗೆ ನೀರಿನ ಸಮಸ್ಯೆಯಾಗಬಾರದು ಎಂದು ಒಂದು ಸಾವಿರ ಕೆರೆ ಕುಂಟೆಗಳನ್ನು ನಿರ್ಮಾಣ ಮಾಡಿದ್ದರು ಹಾಗೂ ಬೆಂಗಳೂರು ಬೃಹದಾಕಾರವಾಗಿ ಬೆಳೆಯಬಾರದೆಂದು ನಾಲ್ಕು ದಿಕ್ಕುಗಳಿಗೂ ಗೋಪುರಗಳನ್ನು ನಿರ್ಮಾಣ ಮಾಡಿದ್ದರು ಎಂದು ಹೇಳಿದರು. ಬಿಎಡ್ ಕಾಲೇಜು ಪ್ರಾಂಶುಪಾಲ ಕೃಷ್ಣಮೂರ್ತಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಪಿಯು ಕಾಲೇಜು ಬಿಎಡ್ ಕಾಲೇಜು ಪ್ರಶಿಕ್ಷಣಾರ್ಥಿಗಳು ಎಲ್ಲಾ ಉಪನ್ಯಾಸಕರು ಭಾಗವಹಿಸಿದ್ದರು.

ಸಮಾಜಕ್ಕೆ ಕೊಡುಗೆ ನೀಡಿದ ನಾಡಪ್ರಭು



• **ಕೃಷ್ಣರಾಜಪೇಟೆ:** ನಾಡಪ್ರಭು ಕೆಂಪೇಗೌಡರ ವೈಭವಯುತ ದೂರದೃಷ್ಟಿ ಆಡಳಿತ ಜನಪರ ನಾಗರೀಕ ಸಮಾಜಕ್ಕೆ ದೊಡ್ಡ ಕೊಡುಗೆಯಾಗಿದೆ ಎಂದು ಬಸ್ ಡಿಪೋ ವ್ಯವಸ್ಥಾಪಕ ಉಮಾ ಮಹೇಶ್ವರ ಹೇಳಿದರು.

ನಾಡಪ್ರಭು ಕೆಂಪೇಗೌಡರ 517ನೇ ಜನ್ಮ ದಿನಾಚರಣೆಯನ್ನು ಕೃಷ್ಣರಾಜಪೇಟೆ ಪಟ್ಟಣದ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಡಿಪೋನಲ್ಲಿ ವೈಭವಯುತವಾಗಿ ಆಚರಣೆ ಮಾಡಲಾಯಿತು. ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿ ನಾಡಪ್ರಭು ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಅವರು, ದೂರದೃಷ್ಟಿಯ ಜನಪರ ಆಡಳಿತಗಾರರಾಗಿದ್ದ ಕೆಂಪೇಗೌಡರು ಶ್ರಮಿಕ ವರ್ಗಗಳು ಸೇರಿದಂತೆ ನಾಡಿನ ಅನ್ನದಾತರಾದ ರೈತರ ಹಿತವನ್ನು ಮುಖ್ಯ ಗುರಿಯನ್ನಾಗಿಸಿಕೊಂಡು ದಕ್ಷ ಪ್ರಾಮಾಣಿಕ ಆಡಳಿತ ನೀಡಿ ನೂರಾರು ಕೆರೆಕಟ್ಟೆಗಳನ್ನು ನಿರ್ಮಿಸಿ ಕುಡಿಯುವ ನೀರು ಹಾಗೂ ಬೇಸಾಯಕ್ಕೆ ಅನುಕೂಲ ಮಾಡಿಕೊಟ್ಟಿದ್ದ ಗೌಡರು, ವರ್ತಕರು ಹಾಗೂ ವ್ಯಾಪಾರಿಗಳು ವ್ಯಾಪಾರ ವ್ಯವಹಾರ ನಡೆಸಲು ಅನುಕೂಲವಾಗುವಂತೆ ಪೇಟೆಗಳನ್ನು ನಿರ್ಮಿಸಿ ಜನನಾಯಕರೆಂಬ ಹೆಗ್ಗಳಿಕೆಗೆ ಕೆಂಪೇಗೌಡರು ಭಾಜನರಾಗಿದ್ದಾರೆ. ಕೆಂಪೇಗೌಡರ ಜನಪರವಾದ ದೂರದೃಷ್ಟಿ ಆಡಳಿತವು ಇಂದಿನ ರಾಜಕಾರಣಿಗಳು ಹಾಗೂ ಜನಪ್ರತಿನಿಧಿಗಳಿಗೆ ಮಾದರಿಯಾಗಿದೆ ನಾಡನ್ನು ಸಮಗ್ರವಾಗಿ ಮುನ್ನಡೆಸಲು ಕೆಂಪೇಗೌಡರು ನೀಡಿದ ಪ್ರಾಮಾಣಿಕ ಆಡಳಿತವನ್ನು ಇಂದಿನ ಜನನಾಯಕರು ಅನುಸರಿಸಿದರೆ ಸಾಕು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ರಾಮರಾಜ್ಯದ ಕನಸು ಸಾಕಾರವಾಗುತ್ತದೆ. ಕೆಂಪೇಗೌಡರು ದಕ್ಷ ಆಡಳಿತಗಾರರು ಮಾತ್ರವಲ್ಲದೇ, ಮಾತೃ ಹೃದಯವನ್ನು ಹೊಂದಿದ್ದ ಮಾನವತೆಯ ಸಾಕಾರ ಮೂರ್ತಿಯಾಗಿ ಪ್ರಜೆಗಳ ಹಿತಕ್ಕಾಗಿ ಆಡಳಿತ ನಡೆಸಿ ಇತಿಹಾಸದ ಪುಟಗಳಲ್ಲಿ ತಮ್ಮ ಆಡಳಿತವನ್ನು ದಾಖಲು ಮಾಡಿದ್ದಾರೆ ಎಂದು ಹೇಳಿದರು.

ಧರ್ಮಪ್ರಭು ಕೆಂಪೇಗೌಡ ಜಯಂತಿಯ ಅಂಗವಾಗಿ ಘಟಕದ ಸಿಬ್ಬಂದಿಗಳಾದ ಕೃಷ್ಣೇಗೌಡ, ಹರ್ಷ ಶಶಿಕುಮಾರ್ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಅರುಣ್, ಕಾಂತರಾಜ್, ದೀಪಕ್, ಪುಟ್ಟಲಿಂಗು, ಮೇಲ್ವಿಚಾರಕ ರಾದ ಸತೀಶ್ ಕುಮಾರ್ ಹಾಗೂ ರಮೇಶ್ ಉಪಸ್ಥಿತರಿದ್ದರು. ನಾಡಪ್ರಭು ಕೆಂಪೇಗೌಡರ ಜಯಂತಿಯ ಅಂಗವಾಗಿ ಘಟಕದ ಸಿಬ್ಬಂದಿಗಳು ಹಾಗೂ ಸಾರ್ವಜನಿಕರಿಗೆ ಅನ್ನದಾಸೋಹವನ್ನು ಏರ್ಪಡಿಸಲಾಗಿತ್ತು.

ಕೆಂಪೇಗೌಡರು ಒಂದು ಜಾತಿಗೆ ಸೀಮಿತವಲ್ಲ: ಜಗದೀಶ್



• **ದಾಬಸ್‌ಪೇಟೆ:** ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ಅರ್ಥಪೂರ್ಣವಾಗಿ ಮಾಡಲಾಗಿದ್ದು, ಕೆಂಪೇಗೌಡರು ಕೇವಲ ಒಂದು ಜಾತಿಗೆ ಸೀಮಿತವಲ್ಲ ಇಡೀ ನಾಡಿಗೆ ಅವರು ನೀಡಿದಂತಹ ಸೇವೆ ಸದಾ ಸ್ಮರಣೀಯ ಎಂದು ಬಿಜೆಪಿ ತಾಲೂಕು ಅಧ್ಯಕ್ಷ ಜಗದೀಶ್ ಚೌಧರಿ ತಿಳಿಸಿದರು.

ಪಟ್ಟಣದ ಕೆಂಪೇಗೌಡ ಸರ್ಕಲ್‌ನಲ್ಲಿ ನಡೆದ ನಾಡಪ್ರಭು ಕೆಂಪೇಗೌಡರ 517ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಪುತ್ಥಳಿಗೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡಿ ಬಳಿಕ ಮಾತನಾಡಿದ ಅವರು, ಅವರ ರಾಜ್ಯಕ್ಕೆ ನೀಡಿದ ಕೊಡುಗೆ ಒಂದಲ್ಲ ಎರಡಲ್ಲ, ಹಾಗಾಗಿ ಅವರ ಜಯಂತಿಯನ್ನು ಇಡೀ ನಾಡೇ ಆಚರಣೆ ಮಾಡುತ್ತಿದೆ. ಕೇವಲ ಕೈಗೆಟುಕುವ ಅಂತರದಲ್ಲಿ ನಮ್ಮ ಬೆಂಗಳೂರು ಕಟ್ಟಿದಂತಹ ಮಹಾಪುರುಷರು ಹಾಗೂ ನಮ್ಮ ಶಿವಗಂಗೆ ದೇವಸ್ಥಾನಗಳ ಜೀರ್ಣೋದ್ಧಾರ ಮಾಡಿದ್ದಾರೆ. ಕೆರೆ-ಕಟ್ಟೆಗಳನ್ನು ಕಟ್ಟಿಸಿ, ಇಡೀ ದೇಶ ನೆನಪಿಸಿಕೊಳ್ಳುವಂತಹ ಕಾರ್ಯಗಳನ್ನು ಮಾಡಿದ್ದಾರೆ ಎಂದರು. ರಾಜ್ಯ ಒಕ್ಕಲಿಗರ ಜಾಗೃತಿ ಸಂಘದ ಸೋಂಪುರ ಶಾಖೆ ಅಧ್ಯಕ್ಷ ವಿ.ಎಚ್.ಗಂಗಮುದ್ದಯ್ಯ ಮಾತನಾಡಿ, ಪ್ರತಿ ವರ್ಷದಂತೆ ಈ ವರ್ಷವೂ ನಾಡಪ್ರಭು ಕೆಂಪೇಗೌಡರ 517ನೇ ಜನ್ಮ ವರ್ಧಂತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಜನಾಂಗದ ಮುಖಂಡರು ಭಾಗವಹಿಸಿ ಅದ್ದೂರಿಯಾಗಿ ಆಚರಣೆ ಮಾಡಲು ಸಹಕಾರ ನೀಡಿದ್ದಾರೆ. ಎಸ್‌ಎಲ್‌ಪಿ ಮೋಹನ್ ಕುಮಾರ್ ಮಾತನಾಡಿ, ನಾಡಪ್ರಭು ಕೆಂಪೇಗೌಡ ಹಾಗೂ ಬಾಲಗಂಗಾಧರನಾಥ ಸ್ವಾಮೀಜಿಯ ಪ್ರತಿಮೆಯನ್ನು ದಾಬಸ್‌ಪೇಟೆ ಕೆಂಪೇಗೌಡ ಸರ್ಕಲ್‌ನಲ್ಲಿ ಪ್ರತಿಷ್ಠಾಪನೆ ಮಾಡಬೇಕು. ಪ್ರತಿಮೆಯು ನಿರ್ಮಾಣ ಹಂತದಲ್ಲಿದೆ. ಸುಮಾರು ಒಂದು ಕೋಟಿ ಮೊತ್ತದಲ್ಲಿ ಪ್ರತಿಮೆ ನಿರ್ಮಾಣ ಮಾಡಲಾಗುತ್ತಿದೆ ಎಂದು ಹೇಳಿದರು. ಶಿವಗಂಗೆ ಸಿದ್ದರಾಜು ಮಾತನಾಡಿ, ನಾಡಪ್ರಭು ಕೆಂಪೇಗೌಡರು ಐಕ್ಯವಾದ ಸ್ಥಳದಲ್ಲಿ ಸುಮಾರು ನೂರಾರು ವರ್ಷವಾದರೂ, ಎಷ್ಟೇ ಸರಕಾರ ಬಂದರೂ, ಕೋಟಿಗಟ್ಟಲೆ ಹಣವನ್ನು ಬಿಡುಗಡೆ ಮಾಡಿದ್ದೇವೆ ಎಂದು ಸುಳ್ಳು ಭರವಸೆ ನೀಡುತ್ತಾರೆಯೇ ವಿನಾ ಅಭಿವೃದ್ಧಿ ಕಾರ್ಯವಾಗಿಲ್ಲ, ಕೆಂಪೇಗೌಡರ ಐಕ್ಯ ಸ್ಥಳ 500 ವರ್ಷದ ಹಿಂದೆ ಹೇಗಿತ್ತೋ ಈಗಲೂ ಕೂಡ ಹಾಗೆ ಇದೆ. ಈಗಲಾದರೂ ರಾಜ್ಯ ಸರ್ಕಾರ ಇದರ ಬಗ್ಗೆ ಗಮನ ಹರಿಸಿ ಪ್ರವಾಸಿ ಸ್ಥಳವನ್ನಾಗಿ ಮಾಡಬೇಕು ಎಂದು ಒತ್ತಾಯಿಸಿದರು.

ಎಸ್‌ಎಸ್‌ಎಸ್ ಮಾಜಿ ಅಧ್ಯಕ್ಷ ವೆಂಕಟೇಶ್, ಗ್ರಾಪಂ ಮಾಜಿ ಅಧ್ಯಕ್ಷ ಬೈರೇಶ್, ಮಾಜಿ ಸದಸ್ಯ ದೇವರಾಜ್, ತಾಪಂ ಮಾಜಿ ಅಧ್ಯಕ್ಷ ರಂಗಸ್ವಾಮಿ, ತ್ಯಾಮಗೊಂಡ್ಲು ಪಂಚಾಯಿತಿ ಮಾಜಿ ಸದಸ್ಯ ಪುಟ್ಟಗಂಗಯ್ಯ, ನಿಡವಂದ ಪರಮೇಶ್, ಕರವೇ ತಾಲೂಕು ಅಧ್ಯಕ್ಷ ರಾಘವೇಂದ್ರ ಮುಖಂಡರು ಭಾಗಿಯಾಗಿದ್ದರು.

ಜಯಂತಿ ಕಾರ್ಯಕ್ರಮದಲ್ಲಿ ಮಾಜಿ ಸಚಿವ ಎನ್.ನಾಗರಾಜ್ ಹೇಳಿಕೆ

ಬೆಂಗಳೂರನ್ನು ವಿಖ್ಯಾತಿಗೊಳಿಸಿದ ಕೆಂಪೇಗೌಡ



• **ಹೊಸಕೋಟೆ:** ಇಂದು ಬೆಂಗಳೂರು ವಿಶ್ವ ವಿಖ್ಯಾತಿ ಹೊಂದಿದೆ ಎಂದರೆ ಅದಕ್ಕೆ ಸಂಪೂರ್ಣ ಕಾರಣೀಕರ್ತರು ನಾಡಪ್ರಭು ಕೆಂಪೇಗೌಡರು ಎಂದು ಮಾಜಿ ಸಚಿವ ಎನ್.ನಾಗರಾಜ್ ತಿಳಿಸಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ ಕಾರ್ಯಕ್ರಮದಲ್ಲಿ ಕೆಂಪೇಗೌಡರ ಪುತ್ಥಳಿಗೆ ಪುಷ್ಪ ಸಮರ್ಪಿಸಿ ಗೌರವ ಸಲ್ಲಿಸಿ ಮಾತನಾಡಿದ ಅವರು, ಬೆಂಗಳೂರಿನ ನಿರ್ಮಾಣದ ಜೊತೆಗೆ ಕೃಷಿ ಅಭಿವೃದ್ಧಿ, ನೀರಾವರಿ ಯೋಜನೆಗಳ ಅನುಷ್ಠಾನಕ್ಕೆ ವಿಶೇಷ ಕಾಳಜಿ ಹೊಂದಿದ್ದ ವ್ಯಕ್ತಿಯಾಗಿದ್ದರು. ಕೆಂಪೇಗೌಡರ ಆದರ್ಶ ಹಾಗೂ ಅವರ ಮೌಲ್ಯಗಳನ್ನು ನಾಡಿನ ಜನತೆಗೆ ಪರಿಚಯಿಸುವ ದೃಷ್ಟಿಯಿಂದ ಸರ್ಕಾರ ಕೆಂಪೇಗೌಡರ ಜಯಂತಿಯನ್ನು ಸರ್ಕಾರಿ ಹಬ್ಬವನ್ನಾಗಿ ಆಚರಣೆ ಮಾಡುತ್ತಿದೆ. ಪ್ರತಿಯೊಬ್ಬರು ಸಂಭ್ರಮದಿಂದ ಭಾಗಿಯಾಗಬೇಕು ಎಂದರು.

ಬೆಂ.ಗ್ರಾ.ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ತ.ರಾ.ವೆಂಕಟೇಶ್ ಮಾತನಾಡಿ, ಕೆಂಪೇಗೌಡರು ಪಾಳೇಗಾರರಾಗಿ ಆಡಳಿತ ನಡೆಸಿದ ರೀತಿ ಅವರ ಆದರ್ಶಗಳ ಪಾಲನೆ, ಅವರು ಮಾಡಿದ ಕಾರ್ಯವೈಖರಿಗಳನ್ನು ಇಂದಿನ ಮಕ್ಕಳಿಗೆ ಪ್ರತಿಯೊಬ್ಬ ಪೋಷಕರು ತಿಳಿಸಿಕೊಡಬೇಕು. ಅವರ ಆದರ್ಶಗಳ ಪಾಲನೆಗೆ ಮುಂದಾಗಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ನಗರ ಬಿಜೆಪಿ ಅಧ್ಯಕ್ಷ ಎಸ್.ಬಾಲಚಂದ್ರನ್, ನಗರಸಭೆ ಸ್ಥಾಯಿ ಸಮಿತಿ ಮಾಜಿ ಸದಸ್ಯ ಕೆ.ದೇವರಾಜ್, ಮುಖಂಡರಾದ ಸುರೇಶ್, ರಮೇಶ್, ಮುನಿರಾಜ್, ಬೀರಪ್ಪ ಸೇರಿ ಹಲವಾರು ಕಾರ್ಯಕರ್ತರು ಹಾಜರಿದ್ದರು.

> ನಾನು ರಾಜಕೀಯದಿಂದ ದೂರಾಗಿಲ್ಲ ಆಗುವುದೂ ಇಲ್ಲ, ಆಡಳಿತದಲ್ಲಿದ್ದ ಪಾರದರ್ಶಕತೆ, ಪ್ರಾಮಾಣಿಕತೆ ಅಭಿವೃದ್ಧಿ ಕಾರ್ಯಗಳನ್ನು ಜನ ನೋಡಿದ್ದಾರೆ. ಈಗಿನ ಆಡಳಿತವನ್ನು ನೋಡಲಿ ಎಂದು ತೆರೆಮರೆಗೆ ಸರಿದಿದ್ದೆ, ಮತ್ತೆ ತಾಲೂಕಿಗೆ ಬಂದೇ ಬರುತ್ತೇನೆ, ಅಂದೂ ಸಹ ಗೆದ್ದು ಆಡಳಿತ ಮಾಡಿದ್ದೆ, ಮುಂದೆಯೂ ತಾಲೂಕಿಗೆ ಬಂದೇ ಬರುತ್ತೇನೆ ಹೊರತು ಪಲಾಯನ ಮಾಡುವುದಿಲ್ಲ.
> ■ ಎನ್ ನಾಗರಾಜ್, ಮಾಜಿ ಸಚಿವ

ಭಕ್ತಿಭಾವದಿಂದ ನಾಡಪ್ರಭು ಕೆಂಪೇಗೌಡ ಜಯಂತಿ ಆಚರಣೆ

ಅಭಿವೃದ್ಧಿಗೆ ಕೆಂಪೇಗೌಡರ ಆದರ್ಶ ಪ್ರೇರಣೆ



• **ತಾವರೆಕೆರೆ:** ಹೊಸಕೋಟೆ ತಾಲೂಕಿನ ನಂದಗುಡಿ ಹೋಬಳಿ ವ್ಯಾಪ್ತಿಯ ತಾವರೆಕೆರೆ ಗ್ರಾಮ ಪಂಚಾಯಿತಿಯಲ್ಲಿ ನಾಡಪ್ರಭು ಕೆಂಪೇಗೌಡ ಜಯಂತಿಯನ್ನು ಭಕ್ತಿಭಾವ ಹಾಗೂ ಗೌರವದಿಂದ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ನಾಡಪ್ರಭು ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ, ಅವರ ಜೀವನ, ಸಾಧನೆ ಹಾಗೂ ಸಮಾಜಮುಖಿ ಕಾರ್ಯಗಳನ್ನು ಸ್ಮರಿಸಲಾಯಿತು. ಈ ಸಂದರ್ಭದಲ್ಲಿ ಮಾತನಾಡಿದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮುನಿಗಂಗಯ್ಯ, ನಾಡಪ್ರಭು ಕೆಂಪೇಗೌಡರು ದೂರದೃಷ್ಟಿಯ ಆಡಳಿತಗಾರರಾಗಿದ್ದು, ಬೆಂಗಳೂರು ನಗರ ನಿರ್ಮಾಣದ ಮೂಲಕ ಉತ್ತಮ ಆಡಳಿತ, ಯೋಜಿತ ಅಭಿವೃದ್ಧಿ ಹಾಗೂ ಜನಪರ ಚಿಂತನೆಯ ಮಾದರಿಯನ್ನು ನೀಡಿದ ಮಹಾನ್ ನಾಯಕರು ಎಂದು ಹೇಳಿದರು. ಕೆಂಪೇಗೌಡರು ರೈತರು, ಸಾಮಾನ್ಯ ಜನರು ಹಾಗೂ ಸಮಾಜದ ಎಲ್ಲಾ ವರ್ಗಗಳ ಅಭಿವೃದ್ಧಿಗೆ ಆದ್ಯತೆ ನೀಡಿದವರಾಗಿದ್ದು, ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಗ್ರಾಮಗಳ ಸಮಗ್ರ ಅಭಿವೃದ್ಧಿ, ಪರಿಸರ ಸಂರಕ್ಷಣೆ, ಜನಸೇವೆಯ ಮನೋಭಾವ ಹಾಗೂ ಸಾಮಾಜಿಕ ಸಾಮರಸ್ಯದ ಮೌಲ್ಯಗಳನ್ನು ಮುಂದುವರಿಸುವುದು ಅವರಿಗೆ ಸಲ್ಲಿಸುವ ನಿಜವಾದ ಗೌರವವಾಗಿದೆ ಎಂದು ತಿಳಿಸಿದರು. ಇಂದಿನ ಯುವಜನತೆ ಕೆಂಪೇಗೌಡರ ದೇಶಾಭಿಮಾನ, ನಾಯಕತ್ವದ ಗುಣಗಳು ಹಾಗೂ ಸೇವಾ ಮನೋಭಾವವನ್ನು ಅಳವಡಿಸಿಕೊಂಡು ಸಮಾಜದ ಪ್ರಗತಿಗೆ ಕೈಜೋಡಿಸಬೇಕು. ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಜನರಿಗೆ ಪರಿಣಾಮಕಾರಿಯಾಗಿ ತಲುಪಿಸುವ ಮೂಲಕ ಉತ್ತಮ ಗ್ರಾಮ ನಿರ್ಮಾಣಕ್ಕೆ ಎಲ್ಲರೂ ಸಹಕರಿಸಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಗ್ರಾಪಂ ಮಾಜಿ ಅಧ್ಯಕ್ಷರಾದ ರವಿಕುಮಾರ್, ಬಸವ ಪ್ರಕಾಶ್, ಮಾಜಿ ಉಪಾಧ್ಯಕ್ಷ ಸುಧಾಕರ್, ಸದಸ್ಯ ನಾಗೇಶ್ ಹಾಗೂ ಕರವಸೂಲಿಗಾರ ರಾಜಣ್ಣ, ಪಂಚಾಯಿತಿ ಸಿಬ್ಬಂದಿ ಬಚ್ಚೇಗೌಡ, ಮಂಜುನಾಥ್ ಹಾಗೂ ಗ್ರಾಮಸ್ಥರು ಹಾಜರಿದ್ದರು.

ಕಿರುಸುದ್ದಿ

ಎಕ್ಸ್‌ಪ್ರೆಸ್ ರೈಲು ನಿಲುಗಡೆಗೆ ಅನುಮೋದನೆ

• **ಬೆಂಗಳೂರು:** ಪ್ರಯಾಣಿಕರ ಅನುಕೂಲಕ್ಕಾಗಿ ರೈಲು ಸಂಖ್ಯೆ 11014/11013 ಕೊಯಮತ್ತೂರು–ಲೋಕಮಾನ್ಯ ತಿಲಕ್ ಟರ್ಮಿನಲ್–ಕೊಯಮತ್ತೂರು ಎಕ್ಸ್‌ಪ್ರೆಸ್ ರೈಲಿಗೆ ಯಲಹಂಕ ರೈಲು ನಿಲ್ದಾಣದಲ್ಲಿ ಪ್ರಾಯೋಗಿಕ ನಿಲುಗಡೆ ನೀಡಲು ರೈಲ್ವೆ ಮಂಡಳಿಯು ಅನುಮೋದನೆ ನೀಡಿದೆ. ರೈಲು ಸಂಖ್ಯೆ 11014 ಕೊಯಮತ್ತೂರು–ಲೋಕಮಾನ್ಯ ತಿಲಕ್ ಎಕ್ಸ್‌ಪ್ರೆಸ್ ರೈಲು ಜೂ.29ರಿಂದ ಯಲಹಂಕ ರೈಲು ನಿಲ್ದಾಣಕ್ಕೆ ಸಂಜೆ 4:41 ಗಂಟೆಗೆ ಆಗಮಿಸಿ, ಸಂಜೆ 4:43 ಗಂಟೆಗೆ ನಿರ್ಗಮಿಸಲಿದೆ. ರೈಲು ಸಂಖ್ಯೆ 11013 ಲೋಕಮಾನ್ಯ ತಿಲಕ್–ಕೊಯಮತ್ತೂರು ಎಕ್ಸ್‌ಪ್ರೆಸ್ ರೈಲು ಜೂ.30ರಿಂದ ಯಲಹಂಕ ರೈಲು ನಿಲ್ದಾಣಕ್ಕೆ ಸಂಜೆ 7:28 ಗಂಟೆಗೆ ಆಗಮಿಸಿ, ಸಂಜೆ 7:30 ಗಂಟೆಗೆ ನಿರ್ಗಮಿಸಲಿದೆ.

ಸಿಎ ರನ್–2026 ಮ್ಯಾರಥಾನ್ ಇಂದು

• **ಬೆಂಗಳೂರು:** ಆರೋಗ್ಯಕರ ಜೀವನಶೈಲಿ ಮತ್ತು ದೈಹಿಕ ಕ್ಷಮತೆಯ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ದಿ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟೆಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ (ಐಸಿಎಐ) ವತಿಯಿಂದ ಜೂ.28ರಂದು ನಗರದ ವಸಂತನಗರದ ಐಸಿಎಐ ಭವನದಲ್ಲಿ ಸಿಎ ರನ್–2026 ಮ್ಯಾರಥಾನ್ ಆಯೋಜಿಸಲಾಗಿದೆ. ಭಾನುವಾರ ಬೆಳಗ್ಗೆ 6.30ಕ್ಕೆ ಆರಂಭವಾಗಲಿರುವ ಈ ಮ್ಯಾರಥಾನ್‌ನಲ್ಲಿ 5 ಕಿ.ಮೀ. ಹಾಗೂ 10 ಕಿ.ಮೀ. ವಿಭಾಗಗಳಲ್ಲಿ ಓಟ ನಡೆಯಲಿದೆ. ಚಾರ್ಟೆಡ್ ಅಕೌಂಟೆಂಟ್ಸ್, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಭಾಗವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಐಸಿಎಐ ಅಧ್ಯಕ್ಷ ಸಿಎ ಕವಿತಾ ಪರಮೇಶ್ ಹಾಗೂ ಕಾರ್ಯದರ್ಶಿ ಸಿಎ ಶ್ರೀನಿವಾಸ್ ಎಚ್. ನಾರಾಯಣ್ ಭಾಗವಹಿಸಲಿದ್ದಾರೆ. ಮ್ಯಾರಥಾನ್‌ನಲ್ಲಿ ಪಾಲ್ಗೊಳ್ಳುವ ಪ್ರತಿಯೊಬ್ಬ ಸ್ಪರ್ಧಿಗೂ ಸ್ಮರಣಾರ್ಥ ಪದಕ ಹಾಗೂ ಭಾಗವಹಿಸಿದ ಪ್ರಮಾಣಪತ್ರ ವಿತರಿಸಲಾಗುತ್ತದೆ. ಆರೋಗ್ಯಕರ ಬದುಕಿನ ಮಹತ್ವವನ್ನು ಸಮಾಜಕ್ಕೆ ಸಾರುವ ಉದ್ದೇಶದಿಂದ ಈ ಮ್ಯಾರಥಾನ್ ಆಯೋಜಿಸಲಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸುವಂತೆ ಐಸಿಎಐ ಮನವಿ ಮಾಡಿದೆ.

ಹತ್ಯೆಗೆ ಸಂಚು: ರೌಡಿಶೀಟರ್ ಸೇರಿ 7 ಮಂದಿ ಸೆರೆ

• **ಬೆಂಗಳೂರು:** ರೌಡಿಶೀಟರ್ ಸಹೋದರನ ಹತ್ಯೆಗೆ ಪ್ರತೀಕಾರವಾಗಿ ರಾಜ್ಯ ಯೂತ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಅಬ್ಬಾಸ್ ಹತ್ಯೆಗೆ ಸಂಚು ರೂಪಿಸಿದ ಇಬ್ಬರು ರೌಡಿಶೀಟರ್‌ಗಳು ಸೇರಿ 7 ಮಂದಿ ಆರೋಪಿಗಳನ್ನು ಕೇಂದ್ರ ಅಪರಾಧ ವಿಭಾಗ(ಸಿಸಿಬಿ) ಪೊಲೀಸರು ಬಂಧಿಸಿದ್ದಾರೆ. ಅಶೋಕನಗರ ಠಾಣೆ ರೌಡಿಶೀಟರ್ ಕೊಲೆಯಾದ ಹೈದರ್ ಅಲಿ ಸಹೋದರ ಶಬ್ಬೀರ್ ಅಲಿ, ಆರಿಫ್ ಸಾಜಿದ್, ಬೈಯಪ್ಪನಹಳ್ಳಿ ಠಾಣೆಯ ರೌಡಿಶೀಟರ್ ಸುಮನ್, ಹಲಸೂರು ಗೇಟ್ ಠಾಣೆ ರೌಡಿಶೀಟರ್ ಶಿವಪ್ರಸಾದ್ ಹಾಗೂ ಅವರ ಸಹಚರರಾದ ಶರವಣ್, ವಿನೋದ್, ಪ್ರೇಮ್ ಪೂಜಾರ್ ಬಂಧಿತರು. ಆರೋಪಿಗಳು ಶುಕ್ರವಾರ ಕಾಂಗ್ರೆಸ್ ಯೂತ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಅಬ್ಬಾಸ್ ಹತ್ಯೆಗೆ ಸಂಚು ರೂಪಿಸಿದ್ದರು. ಈ ಮಾಹಿತಿ ಮೇರೆಗೆ ಕ್ಷಿಪ್ರ ಕಾರ್ಯಾಚರಣೆ ನಡೆಸಿ ಆರೋಪಿಗಳ ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು. ಆರೋಪಿಗಳು ಬೈಕ್ ಹಾಗೂ ಕಾರುಗಳಲ್ಲಿ 30ಕ್ಕೂ ಹೆಚ್ಚು ಮಾರಕಾಸ್ತ್ರಗಳನ್ನು ಇಟ್ಟುಕೊಂಡು ನಗರದ ಕೆಲ ರಸ್ತೆಗಳಲ್ಲಿ ಓಡಾಡಿ, ಅಬ್ಬಾಸ್ ಹತ್ಯೆಗೆ ಸಂಚು ರೂಪಿಸಿದ್ದರು. ಈ ಮಾಹಿತಿ ಪಡೆದ ಕೂಡಲೇ ಸಿಸಿಬಿ ಸಂಘಟಿತ ಅಪರಾಧ ಪಶ್ಚಿಮ ವಿಭಾಗದ ಎಸಿಪಿ ಸದಾನಂದ ತಿಪ್ಪಣ್ಣನವರ್ ಮತ್ತು ತಂಡ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿದೆ.

ರೌಡಿಶೀಟರ್ ಹೈದರ್ ಅಲಿ ಕೊಲೆಗೆ ಪ್ರತೀಕಾರ: 2025ರಲ್ಲಿ ಅಶೋಕನಗರದ ನೀಲಸಂದ್ರದಲ್ಲಿ ರೌಡಿಶೀಟರ್ ಹೈದರ್ ಅಲಿ ಕೊಲೆಯಾಗಿತ್ತು. ಈ ಪ್ರಕರಣದಲ್ಲಿ ಅಬ್ಬಾಸ್ ಹೆಸರು ಕೇಳಿಬಂದಿತ್ತು. ಅಲ್ಲದೆ, ಹೈದರ್ ಅಲಿ ಕುಟುಂಬಸ್ಥರು ಕೂಡ ಅಬ್ಬಾಸ್ ವಿರುದ್ಧ ಆರೋಪ ಮಾಡಿದ್ದರು. ಆದರೆ, ಪ್ರಕರಣಕ್ಕೆ ಸಂಬಂಧಿಸಿದಂತೆ ಅಬ್ಬಾಸ್ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದ. ಹೀಗಾಗಿ ಹೈದರ್ ಅಲಿ ಸಹೋದರ ಶಬ್ಬೀರ್ ಅಲಿ ಮತ್ತು ಆರಿಫ್ ಸಾಜಿದ್, ಅಬ್ಬಾಸ್ ಹತ್ಯೆಗೆ ಇತರ ಆರೋಪಿಗಳ ಜತೆ ಸಂಚು ರೂಪಿಸಿದ್ದರು. ಅಬ್ಬಾಸ್ ಹತ್ಯೆ ಬಳಿಕ ತಮ್ಮ ಏರಿಯಾದಲ್ಲಿ ಪ್ರಾಬಲ್ಯ ಪಡೆಯಬಹುದು ಎಂಬುದು ಆರೋಪಿಯ ಉದ್ದೇಶವಾಗಿತ್ತು ಎಂದು ಸಿಸಿಬಿ ಪೊಲೀಸರು ಮಾಹಿತಿ ನೀಡಿದ್ದಾರೆ. ಎಸಿಪಿ ಸದಾನಂದ ತಿಪ್ಪಣ್ಣನವರ್ ಮತ್ತು ತಂಡ ಕಾರ್ಯಾಚರಣೆ ನಡೆಸಿದೆ.

ಪುಂಡಾನೆ ಸೆರೆ

• **ರಾಮನಗರ:** ಚನ್ನಪಟ್ಟಣ ತಾಲೂಕಿನ ಗ್ರಾಮೀಣ ಭಾಗದಲ್ಲಿ ರೈತರ ಬೆಳೆಗಳಿಗೆ ಹಾನಿ ಉಂಟುಮಾಡಿ ಆತಂಕ ಸೃಷ್ಟಿಸಿದ್ದ ಪುಂಡಾನೆಯನ್ನು ಸೆರೆಹಿಡಿಯುವಲ್ಲಿ ಅರಣ್ಯ ಇಲಾಖೆ ಮಹತ್ವದ ಯಶಸ್ಸು ಸಾಧಿಸಿದೆ. ಹಲವು ದಿನಗಳಿಂದ ನಡೆಯುತ್ತಿದ್ದ ಕಾರ್ಯಾಚರಣೆಗೆ ಫಲ ದೊರೆತಿದ್ದು, ಚಿಕ್ಕಮಣ್ಣುಗುಡ್ಡೆ ಅರಣ್ಯ ಪ್ರದೇಶದಲ್ಲಿ ಸಂಚರಿಸುತ್ತಿದ್ದ ಸುಮಾರು 25 ವರ್ಷದ ಟಸ್ಕರ್ ಅನ್ನು ಅರಣ್ಯ ಇಲಾಖೆ ಹಾಗೂ ಎಲಿಫೆಂಟ್ ಟಾಸ್ಕ್ ಫೋರ್ಸ್ (ಇಟಿಎಫ್) ಸಿಬ್ಬಂದಿ ಯಶಸ್ವಿಯಾಗಿ ಸೆರೆಹಿಡಿದಿದ್ದಾರೆ. ಕಾಡಾನೆಗಳ ಹಾವಳಿಯಿಂದ ಸಂಕಷ್ಟ ಅನುಭವಿಸುತ್ತಿದ್ದ ರೈತರಿಗೆ ಈ ಕಾರ್ಯಾಚರಣೆ ನೆಮ್ಮದಿ ಮೂಡಿಸಿದ್ದು, ಉಳಿದ ಆನೆಗಳನ್ನು ಸೆರೆಹಿಡಿಯುವ ಕಾರ್ಯಾಚರಣೆಯೂ ಮುಂದುವರಿಯಲಿದೆ ಎಂದು ಅರಣ್ಯ ಇಲಾಖೆ ತಿಳಿಸಿದೆ. ಅರಣ್ಯ ಇಲಾಖೆಯು ಡ್ರೋನ್ ಕ್ಯಾಮೆರಾಗಳು ಹಾಗೂ ವಾಚರ್‌ಗಳ ಸಹಾಯದಿಂದ ಚಿಕ್ಕಮಣ್ಣುಗುಡ್ಡೆ ಅರಣ್ಯ ಪ್ರದೇಶದಲ್ಲಿ ನಾಲ್ಕು ಕಾಡಾನೆಗಳ ಹಿಂಡು ಬೀಡುಬಿಟ್ಟಿರುವುದನ್ನು ಪತ್ತೆಹಚ್ಚಿತ್ತು. ಕಾರ್ಯಾಚರಣೆಯ ಮೊದಲ ಹಂತದಲ್ಲಿ ಸಿಬ್ಬಂದಿ ಅತ್ಯಂತ ಎಚ್ಚರಿಕೆಯಿಂದ ಟಸ್ಕರ್ ಅನ್ನು ಉಳಿದ ಆನೆಗಳ ಹಿಂಡಿನಿಂದ ಪ್ರತ್ಯೇಕಗೊಳಿಸುವಲ್ಲಿ ಯಶಸ್ವಿಯಾದರು. ಅದರ ನಂತರ ಪಶುವೈದ್ಯರ ತಂಡ ಸೂಕ್ತ ಅಂತರದಿಂದ ಅರಿವಳಿಕೆ ಮಿಶ್ರಿತ ಚುಚ್ಚುಮದ್ದು ಡಾರ್ಟ್ (ಸಿರಿಂಜ್) ಅನ್ನು ಟಸ್ಕರ್‌ಗೆ ಹಾರಿಸಿತು. ಕೆಲವೇ ನಿಮಿಷಗಳಲ್ಲಿ ಆನೆ ಪ್ರಜ್ಞೆ ಕಳೆದುಕೊಂಡ ಬಳಿಕ ಸಿಬ್ಬಂದಿ ಸೇಣಬಿನ ಹಗ್ಗಗಳಿಂದ ಅದನ್ನು ಸುರಕ್ಷಿತವಾಗಿ ನಿಯಂತ್ರಣಕ್ಕೆ ತೆಗೆದುಕೊಂಡರು. ಬಳಿಕ ಆನೆಯ ದೇಹದ ಉಷ್ಣತೆ ಕಡಿಮೆ ಮಾಡಲು ಅದರ ಮೇಲೆ ನೀರು ಸುರಿಯಲಾಯಿತು. ನಂತರ ಪಳಗಿದ ಕುಮ್ಕಿ ಆನೆಗಳ ನೆರವಿನಿಂದ ಪುಂಡಾನೆಯನ್ನು ಕಾಡಿನಿಂದ ಹೊರಗೆ ಕರೆತಂದು ವಿಶೇಷ ಲಾರಿಗೆ ಹತ್ತಿಸಿ ಸುರಕ್ಷಿತವಾಗಿ ಸ್ಥಳಾಂತರಿಸಲಾಯಿತು. ಅರಣ್ಯ ಉಪ ಸಂರಕ್ಷಣಾಧಿಕಾರಿ ರಾಮಕೃಷ್ಣಪ್ಪ ಹಾಗೂ ಚನ್ನಪಟ್ಟಣ ವಲಯ ಅರಣ್ಯಾಧಿಕಾರಿ ಮಲ್ಲೇಶ್ ಅವರ ನೇತೃತ್ವದಲ್ಲಿ ನಡೆದ ಈ ಕಾರ್ಯಾಚರಣೆಯಲ್ಲಿ ಪಶುವೈದ್ಯರಾದ ಡಾ. ಕಿರಣ್, ಡಾ. ರಮೇಶ್ ಹಾಗೂ ಸ್ಥಳೀಯ ಪಶುವೈದ್ಯ ಡಾ. ನಜೀರ್ ಅಹ್ಮದ್, ಮಾವುತರು, ಕಾವಾಡಿಗರು, ಅರಣ್ಯ ಇಲಾಖೆ ಸಿಬ್ಬಂದಿ ಸೇರಿದಂತೆ 80ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.

ಶಾಸಕ ಎನ್.ಶ್ರೀನಿವಾಸ್ ಭರವಸೆ | ಮುಖಂಡರು, ಉದ್ಯಮಿಗಳು, ರೈತರು, ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ

ಕೆಂಪೇಗೌಡ ಭವನಕ್ಕೆ 8 ಕೋಟಿ ಅನುದಾನ

• **ನೆಲಮಂಗಲ:** ಕೆಂಪೇಗೌಡ ಭವನಕ್ಕೆ ವಯಕ್ತಿಕವಾಗಿ 1ಕೋಟಿ, ಸರಕಾರದ ಅನುದಾನ 7ಕೋಟಿ ಅನುದಾನ ನೀಡಲು ಸಿದ್ದನಿದ್ದೇನೆ, ಮುಖಂಡರು ಬಳಕೆ ಮಾಡಿಕೊಂಡು 20ಕೋಟಿ ವೆಚ್ಚದಲ್ಲಿ ರಾಜ್ಯಕ್ಕೆ ಮಾದರಿ ಯಾಗುವ ಕೆಂಪೇಗೌಡ ಭವನ ನಿರ್ಮಾಣ ಮಾಡಿ ಎಂದು ಶಾಸಕ ಎನ್.ಶ್ರೀನಿವಾಸ್ ತಿಳಿಸಿದರು.

ನಗರದ ತಾಲೂಕು ಕಚೇರಿಯ ಆವರಣದಲ್ಲಿ ತಾಲೂಕು ಆಡಳಿತದಿಂದ ಶಾಸಕ ಎನ್.ಶ್ರೀನಿವಾಸ್ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿದ್ದ ನಾಡಪ್ರಭು ಕೆಂಪೇಗೌಡರ 517ನೇ ಜಯಂತಿಯನ್ನು ಉದ್ದೇಶಿಸಿ ಮಾತನಾಡಿದರು.

ಒಕ್ಕಲಿಗ ಸಮುದಾಯಕ್ಕೆ ಒಂದು ಇಂಚು ಜಾಗವಿಲ್ಲ ಎಂಬುದನ್ನು ಮನಗಂಡು ನಗರದಲ್ಲಿ 35,500 ಅಡಿ ಜಾಗ, ಯಲಚಗೆರೆ ಬಳಿ 1.5ಎಕರೆ ಜಾಗ ನೀಡಲು ಮುಂದಾದರೆ ಕೆಲವರು ಅರ್ಜಿ ಹಾಕಿ ಸಮಸ್ಯೆ ಮಾಡುತ್ತಿದ್ದಾರೆ. ನನ್ನ ಮೇಲೆ ರಾಜಕೀಯ ಮಾಡುವವರು ಚುನಾವಣೆ ಸಮಯದಲ್ಲಿ ಮಾಡಲಿ,ಆದರೆ ಸಮುದಾಯಕ್ಕೆ ಒಳ್ಳೆಯದನ್ನು ಮಾಡುವಾಗ ವಿರೋಧವೇಕೆ, ನಾನು ಹೇಳಿದ್ದನ್ನು ಮಾಡುವುದು ತಪ್ಪೇ, ಸ್ವಲ್ಪ ವ್ಯತ್ಯಾಸವಿದ್ದರೆ ಸರಕಾರವಿದೆ ಸರಿಪಡಿಸುವ ಕೆಲಸ ಮಾಡುತ್ತೇನೆ. ನಾನು ಸಮುದಾಯಕ್ಕೆ ಕೊಟ್ಟ ಮಾತು ಎಂದಿಗೂ ತಪ್ಪುವುದಿಲ್ಲ, ಸರಕಾರದಿಂದ, ನನ್ನ ವಯಕ್ತಿಕ ಸೇರಿ 8 ಕೋಟಿ ಅನುದಾನ ನೀಡಲು ಸಿದ್ದನಿದ್ದು, ಅದರ ಅನುಕೂಲ ಪಡೆಯುವ ಕೆಲಸ ಒಕ್ಕಲಿಗ ಮುಖಂಡರು ಮಾಡಬೇಕು ಎಂದರು.



ರಸ್ತೆಗೆ ಕೆಂಪೇಗೌಡರ ಹೆಸರು

ತಾಲೂಕು ಒಕ್ಕಲಿಗರ ಸಂಘಕ್ಕೆ ಜಾಗ ನೀಡಲು ತಹಸೀಲ್ದಾರ್‌ಗೆ ಸಂದೇಶ ನೀಡಲಾಗಿದೆ, ಒಕ್ಕಲಿಗರ ಮಹಿಳಾಸಮಾಜಕ್ಕೆ 1ಕೋಟಿ ಅನುದಾನ ಮಂಜೂರಾಗಿದ್ದು, ಮುಖಂಡರು ಸಹಕರಿಸಿದರೆ ಕೆಲಸ ಆರಂಭ ಮಾಡಲಾಗುತ್ತದೆ. ಮುಖಂಡರ ಬೇಡಿಕೆಯಂತೆ ಗ್ರಾಮಗೊಂದು, ಅಥವಾ ಸೊಂಡೆಕೊಪ್ಪ ರಸ್ತೆಗೆ ಚರ್ಚೆ ಮಾಡಿ ನಾಡಪ್ರಭು ಕೆಂಪೇಗೌಡ ಹೆಸರನ್ನು ನಾಮಕರಣ ಮಾಡಲಾಗುತ್ತದೆ ಎಂದರು.

ತಮಟೆ ಬಾರಿಸಿದ ಶಾಸಕರು

ಮೆರವಣಿಗೆಯಲ್ಲಿ ಕೆಲಮುಖಂಡರು ತಮಟೆ ಸದ್ದಿಗೆ ಕುಣಿಯುವಾಗ ಸ್ವತಹ ಶಾಸಕ ಎನ್. ಶ್ರೀನಿವಾಸ್ ತಮಟೆ ಬಾರಿಸಿದರು, ಶಾಸಕರು ತಮಟೆ ಬಾರಿಸುತ್ತಿದ್ದಂತೆ ಮೆರವಣಿಗೆಯಲ್ಲಿದ್ದ ನೂರಾರು ಜನರು ಕುಣಿದು ಕುಪ್ಪಳಿಸಿದರು. ಮೆರವಣಿಗೆಯಲ್ಲಿ ಸೇರಿದ್ದ ಮೂರ್‍ನಾಲ್ಕು ಸಾವಿರ ಜನರಿಗೆ ಎಂ.ಕೆ.ನಾಗರಾಜು ಊಟದ ವ್ಯವಸ್ಥೆ, ತಿಮ್ಮರಾಜು ಹಾಲು ವ್ಯವಸ್ಥೆ, ಶಾಸಕರು ಕಲಾತಂಡದ ವ್ಯವಸ್ಥೆ ಮಾಡಿಸಿದ್ದರು.

ಕೆಂಪೇಗೌಡರತ್ನ ಪ್ರಶಸ್ತಿ ವಿತರಣೆ

ತಾಲೂಕಿನಲ್ಲಿ ಸಾಧನೆ ಮಾಡಿ ಉದ್ಯಮಿಗಳಾದ ಹರ್ಷ ಸಂಸ್ಥೆ ಡಾ.ಎನ್.ಶಿವಕುಮಾರ್, ಕುಮುದ್ವತಿ ಚಿಕ್ಕಹನುಮೇಗೌಡ, ಹೊಯ್ಸಳ ಕಾಲೇಜು ಗೌರಿಶಂಕರ್, ಕುಮಾರ್, ರಾಮಕೃಷ್ಣ, ಪೃಥ್ವಿರಾಜ್.ವಿ, ಡಾ.ಮಂಜುನಾಥ್, ಡಾ.ಸುಧೀರ್, ಶಂಕರ್, ಹಾಲಕ್ಷ್ಮೀ, ಪ್ರಗತಿಪರ ರೈತರಾದ ರಂಗರಾಜು, ಎನ್.ಕೇಶವಮೂರ್ತಿ, ಹನುಮಂತಯ್ಯ, ರವಿಕುಮಾರ್, ಜನಾರ್ಧನ್, ಜಯರಾಮ್, ಪ್ರಕಾಶ್, ನಿತಿನ್, ಮುನಿರಾಜು, ವರುಣ್, ಮಾರೇಗೌಡ, ಸತೀಶ್ ಸೇರಿದಂತೆ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಕೆಂಪೇಗೌಡರತ್ನ ಪ್ರಶಸ್ತಿಯನ್ನು ನೀಡಿ ಅಭಿನಂದನೆ ಸಲ್ಲಿಸಿದರು. ತಾಲೂಕು ಕಚೇರಿ ಆವರಣದಲ್ಲಿ ಬೃಹತ್ ನಾಡಪ್ರಭು ಕೆಂಪೇಗೌಡರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಶಾಸಕ ಎನ್.ಶ್ರೀನಿವಾಸ್, ಮುಖಂಡರು, ಅಧಿಕಾರಿಗಳು, ಸಮುದಾಯದ ಜನರು ಪುಷ್ಪನಮನ ಸಲ್ಲಿಸುವ ಮೂಲಕ ಗೌಡರ ಸಾಧನೆಗಳನ್ನು ನೆನಪು ಮಾಡಿಕೊಂಡರು.

ಅದ್ಧೂರಿ ಮೆರವಣಿಗೆ

ನಗರದ ಟಿ.ಬಿ. ಬಸ್‌ನಿಲ್ದಾಣದಿಂದ ತಾಲೂಕು ಕಚೇರಿಯವರೆಗೂ ತಳಿರುತೋರಣದಿಂದ ಅಲಂಕಾರವಾಗಿದ್ದ ರಸ್ತೆಯಲ್ಲಿ 30ಕ್ಕೂ ಹೆಚ್ಚು ಕಲಾತಂಡಗಳು, ಪೂರ್ಣಕುಂಭದ ಮಹಿಳೆಯರು ಸೇರಿದಂತೆ ಕೆಂಪೇಗೌಡ ಪ್ರತಿಮೆಯನ್ನು ಬೆಳ್ಳಿರಥದಲ್ಲಿ ಅದ್ದೂರಿಯಾಗಿ ಮೆರವಣಿಗೆ ಮಾಡಲಾಯಿತು. ಕುದುರೆ ಮೇಲೆ ಕುಳಿತುಕೊಂಡ ಕೈಲಿ ಹಾಗೂ ಕೆಂಪೇಗೌಡ ವೇಷಧಾರಿಗಳು ಮೆರವಣಿಗೆಗೆ ಮೆರುಗು ತಂದರೆ, ಬಿಳಿ ಟವಲ್ ಧರಿಸಿದ್ದ ಒಕ್ಕಲಿಗ ಮುಖಂಡರು ಹಾಗೂ ವಿವಿಧ ಸಮುದಾಯದ ಸಂಘಟನೆಗಳ ಮುಖಂಡರು ಮೆರವಣಿಗೆಯ ವೈಭವಕ್ಕೆ ಕಾರಣವಾದರು. ಮೆರವಣಿಗೆಯಲ್ಲಿ ಕಲಾತಂಡಗಳು ವಿಶೇಷ ಆಕರ್ಷಣೆಯಾಗಿತ್ತು. ಸಂದರ್ಭದಲ್ಲಿ ಶಿವಾನಂದಾಶ್ರಮದ ಶ್ರೀ ರಮಣಾನಂದನಾಥ ಸ್ವಾಮೀಜಿ, ಕೆಂಪೇಗೌಡರ ಬಗ್ಗೆ ಮಾತನಾಡಿದ ಕೆಸಾಲಿ ಲಿಂಗೇಗೌಡ, ಎನ್‌ಪಿಎ ಮಾಜಿ ಅಧ್ಯಕ್ಷ ನಾರಾಯಣಗೌಡ, ಮಾಜಿ ಅಧ್ಯಕ್ಷ ಹೇಮಂತ್‌ಕುಮಾರ್, ನಗರಸಭೆ ಅಧ್ಯಕ್ಷ ಎನ್.ಗಣೇಶ್, ತಹಸೀಲ್ದಾರ್ ಮಲ್ಲೇಶ್ ಬೀರಪ್ಪ ಬಿರಪ್ಪ ಪೂಜಾರ್, ತಾಲೂಕು ಒಕ್ಕಲಿಗರ ಸಂಘ ಅಧ್ಯಕ್ಷ ತಿಮ್ಮರಾಜು, ಉಪಾಧ್ಯಕ್ಷ ರಾಮಕೃಷ್ಣಯ್ಯ, ಮಹಿಳಾ ಸಮಾಜದ ಚಂದ್ರಿಕಾ, ಒಕ್ಕಲಿಗ ಯುವ ವೇದಿಕೆ ಅಧ್ಯಕ್ಷ ಅಂಜನಮೂರ್ತಿ, ರಾಜ್ಯ ಒಕ್ಕಲಿಗ ಸಂಘದ ಗಂಗರೇವಣ್ಣ, ಟಿಪಿಸಿಎಂಎಸ್ ಅಧ್ಯಕ್ಷ ಹನುಮಂತರಾಜು ಸೇರಿದಂತೆ ಮತ್ತಿತರರಿದ್ದರು.

ಕ್ರೀಡಾ ನಗರಿಯಾಗಿ ತುಮಕೂರು ಅಭಿವೃದ್ಧಿ

• **ತುಮಕೂರು:** ಶೈಕ್ಷಣಿಕ ನಗರಿಯಾಗಿರುವ ತುಮಕೂರು ಜಿಲ್ಲೆಯನ್ನು ರಾಜ್ಯದ ಪ್ರಮುಖ ಕ್ರೀಡಾ ನಗರಿಯಾಗಿ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಸರ್ಕಾರ ವಿವಿಧ ಕ್ರೀಡಾ ಮೂಲಸೌಕರ್ಯಗಳನ್ನು ನಿರ್ಮಿಸುತ್ತಿದ್ದು, ಕ್ರೀಡಾಪಟುಗಳಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸುವ ಮೂಲಕ ಕ್ರೀಡೆಗೆ ಹೆಚ್ಚಿನ ಉತ್ತೇಜನ ನೀಡಲಾಗುವುದು ಎಂದು ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ ಹೇಳಿದರು.

ಒಲಂಪಿಕ್ ದಿನದ ಅಂಗವಾಗಿ ಕರ್ನಾಟಕ ಒಲಂಪಿಕ್ ಸಂಸ್ಥೆ ಹಾಗೂ ತುಮಕೂರು ಜಿಲ್ಲಾಡಳಿತದ ಸಹಯೋಗದಲ್ಲಿ ತುಮಕೂರಿನ ಟೌನ್‌ಹಾಲ್ ಮುಂಭಾಗದಲ್ಲಿ ಆಯೋಜಿಸಲಾಗಿದ್ದ ಒಲಂಪಿಕ್ ಓಟ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ವಿಶ್ವದಾದ್ಯಂತ ಮಾದಕ ದ್ರವ್ಯಗಳ ಹಾವಳಿ ಹೆಚ್ಚಾಗುತ್ತಿದ್ದು, ಅದರ ದುಷ್ಪರಿಣಾಮ ಯುವ ಸಮುದಾಯದ ಮೇಲೆ ಗಂಭೀರವಾಗಿ ಬೀಳುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದ ಅವರು, ಯುವಜನರನ್ನು ಗುರಿಯಾಗಿಸಿಕೊಂಡು ಮಾದಕ ವ್ಯಸನದ ಜಾಲಕ್ಕೆ ಸೆಳೆಯುವ ಪ್ರಯತ್ನಗಳು ನಡೆಯುತ್ತಿವೆ. ಇದು ಸಮಾಜಕ್ಕೆ ದೊಡ್ಡ ಸವಾಲಾಗಿ ಪರಿಣಮಿಸಿದ್ದು, ಯುವಕರು ಯಾವುದೇ ಕಾರಣಕ್ಕೂ ಮಾದಕ ದ್ರವ್ಯಗಳ ವ್ಯಸನಕ್ಕೆ ಬಲಿಯಾಗದೆ, ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು. ಶಾಂತಿ, ಸೌಹಾರ್ದತೆ ಹಾಗೂ ಸಹೋದರತ್ವದ ಸಂದೇಶವನ್ನು ಸಾರುವ ಉದ್ದೇಶದಿಂದ ಪ್ರತಿವರ್ಷ ಜೂನ್ 23ರಂದು ಅಂತಾರಾಷ್ಟ್ರೀಯ ಒಲಂಪಿಕ್ ದಿನವನ್ನು ಆಚರಿಸಲಾಗುತ್ತದೆ. ಈ ಬಾರಿ ಕರ್ನಾಟಕ ಒಲಂಪಿಕ್ ಸಂಸ್ಥೆ ತುಮಕೂರಿನಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಿರುವುದು ಸಂತಸದ ಸಂಗತಿ ಎಂದರು.



- ತುಮಕೂರಿನಲ್ಲಿ ಒಲಂಪಿಕ್ ಓಟಕ್ಕೆ ಡಿಸಿಎಂ ಚಾಲನೆ
- ಯುವಜನರನ್ನು ಮಾದಕ ವ್ಯಸನದ ಜಾಲಕ್ಕೆ ಸೆಳೆಯುವ ಪ್ರಯತ್ನಗಳು ನಡೆಯುತ್ತಿವೆ
- ಕ್ರೀಡಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಕರೆ

ಕಯಾಕಿಂಗ್ ಅಕಾಡೆಮಿ ಆರಂಭ

ಅಮಾನಿಕೆರೆಯಲ್ಲಿ ಕಯಾಕಿಂಗ್ ಅಕಾಡೆಮಿಯನ್ನು ಆರಂಭಿಸಲಾಗಿದ್ದು, ಅಲ್ಲಿನ ತರಬೇತಿಯಿಂದ ಜಿಲ್ಲೆಯ ಮಕ್ಕಳು ರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡುತ್ತಿದ್ದಾರೆ. ಜೂನ್ 17ರಂದು ನಡೆದ ರಾಷ್ಟ್ರೀಯ ಮಟ್ಟದ ಕಯಾಕಿಂಗ್ ಸ್ಪರ್ಧೆಯಲ್ಲಿ ಜಿಲ್ಲೆಯ ಕ್ರೀಡಾಪಟುಗಳು ಭಾಗವಹಿಸಿ ಬಹುಮಾನಗಳನ್ನು ಗೆದ್ದಿರುವುದು ತುಮಕೂರು ಜಿಲ್ಲೆಗೆ ಹೆಮ್ಮೆಯ ವಿಷಯವಾಗಿದೆ ಎಂದು ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ ಸಂತಸ ವ್ಯಕ್ತಪಡಿಸಿದರು.

ತುಮಕೂರಿನಲ್ಲಿ ಕ್ರೀಡಾ ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರ ಹಲವು ಮಹತ್ವದ ಯೋಜನೆಗಳನ್ನು ಕೈಗೊಂಡಿದೆ. ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣಕ್ಕಾಗಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ (ಕೆಎಸ್‌ಸಿಎ) 42 ಎಕರೆ ಭೂಮಿಯನ್ನು ನೀಡಲಾಗಿದ್ದು, ಈಗಾಗಲೇ ಶಂಕುಸ್ಥಾಪನೆ ನೆರವೇರಿಸಲಾಗಿದೆ ಎಂದರು.

ಇದಲ್ಲದೆ, ಜಿಲ್ಲೆಯ ಕ್ರೀಡಾಪಟುಗಳ ತರಬೇತಿಗಾಗಿ ರಾಷ್ಟ್ರೀಯ ಮಟ್ಟದ ಜಿಮ್ನೇಶಿಯಂ ನಿರ್ಮಿಸಲಾಗಿದೆ. ಮುಂದಿನ ದಿನಗಳಲ್ಲಿ ಅಂತಾರಾಷ್ಟ್ರೀಯ ಮಟ್ಟದ ಹಾಕಿ ಕ್ರೀಡಾಂಗಣ ಹಾಗೂ ಅತ್ಯಾಧುನಿಕ ಈಜುಕೊಳವನ್ನು ನಿರ್ಮಿಸಲಾಗುವುದು ಎಂದು ಹೇಳಿದರು.

ಕರ್ನಾಟಕ ಒಲಂಪಿಕ್ ಸಂಸ್ಥೆಯ ಅಧ್ಯಕ್ಷರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಡಾ. ಕೆ. ಗೋವಿಂದರಾಜ್, ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಟಿ.ಅನಂತರಾಜ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಶ್ವಿಜಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಶೋಕ್ ಸೇರಿದಂತೆ ಹಲವು ಗಣ್ಯರು ಹಾಗೂ ಕ್ರೀಡಾಪಟುಗಳು ಉಪಸ್ಥಿತರಿದ್ದರು.

ಕೆಂಪೇಗೌಡರ ಪ್ರತಿಮೆಗೆ ನಮಿಸಿದ ವಿಜಯೇಂದ್ರ



• **ಸಕಲೇಶಪುರ:** ಖಾಸಗಿ ಕಾರ್ಯಕ್ರಮ ನಿಮಿತ್ತ ಸಕಲೇಶಪುರಕ್ಕೆ ಆಗಮಿಸಿದ್ದ ಬಿಜೆಪಿ ರಾಜ್ಯಾಧ್ಯಕ್ಷರಾದ ವಿಜಯೇಂದ್ರ, ನಾಡಪ್ರಭು ಕೆಂಪೇಗೌಡರ ಪುತ್ಥಳಿಗೆ ಮಾಲಾರ್ಪಣೆಯನ್ನು ಅರ್ಪಿಸಿದರು .

ಈ ಸಂದರ್ಭದಲ್ಲಿ ಸಕಲೇಶಪುರ ಶಾಸಕ ಸಿಮೆಂಟ್ ಮಂಜುನಾಥ್ , ಬೆಳ್ತಂಗಡಿ ಶಾಸಕ ಹರೀಶ್ ಪೂಂಜಾ , ಜಿಲ್ಲಾಧ್ಯಕ್ಷರಾದ ಸಿದ್ದೇಶ್ ನಾಗೇಂದ್ರ , ಮಂಡಲ ಅಧ್ಯಕ್ಷರಾದ ವಲಹಳ್ಳಿ ಅಶ್ವಥ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಅಮಿತ್ ಶೆಟ್ಟಿ ಮತ್ತು ರಾಜಕುಮಾರ್ ಮಂಡಲ ಪ್ರಧಾನ ಕಾರ್ಯದರ್ಶಿಗಳು ಪಕ್ಷದ ಹಿರಿಯ ಮುಖಂಡರುಗಳು ಪದಾಧಿಕಾರಿಗಳು ಮೋರ್ಚಾ ಅಧ್ಯಕ್ಷರುಗಳು ಹಾಗೂ ಹಲವು ಮುಖಂಡರು ಭಾಗಿಯಾಗಿದ್ದರು.

ಬೀದಿಬದಿ ವ್ಯಾಪಾರಿಗಳಿಗೆ ಕೂಲ್ ಕಾರ್ಟ್

• **ಪಾಂಡವಪುರ:** ಪಟ್ಟಣದ ಹಳೇ ಬಸ್ ನಿಲ್ದಾಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರ ಮಾರ್ಗದರ್ಶನದಲ್ಲಿ ಪುಟ್ಟಣ್ಣಯ್ಯ ಫೌಂಡೇಶನ್ ಹಾಗೂ ಸೆಲ್ಕೋ ಫೌಂಡೇಶನ್ ಸಂಯುಕ್ತಾಶ್ರಯದ ಅತ್ಯಂತ ಮಹತ್ವಾಕಾಂಕ್ಷೆಯ 'ಹಸಿರು ಜೀವನ ಚಕ್ರ' ಯೋಜನೆಯಡಿ ಬೀದಿಬದಿ ವ್ಯಾಪಾರಿಗಳಿಗೆ 'ಕೂಲ್ ಕಾರ್ಟ್' ವಿತರಣಾ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ಜರುಗಿತು.

ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರು ಸಣ್ಣ ವ್ಯಾಪಾರಿಗಳಿಗೆ ಅತ್ಯಾಧುನಿಕ ಸೌಲಭ್ಯಗಳುಳ್ಳ 'ಕೂಲ್ ಕಾರ್ಟ್' (ವಿಶೇಷ ತಳ್ಳುಗಾಡಿ) ಗಳನ್ನು ವಿತರಿಸುವ ಮೂಲಕ ಈ ನೂತನ ಕ್ರಾಂತಿಕಾರಿ ಯೋಜನೆಗೆ ಅಧಿಕೃತವಾಗಿ ಚಾಲನೆ ನೀಡಿದರು.

ಏನಿದು 'ಕೂಲ್ ಕಾರ್ಟ್'? ಸಣ್ಣ ವ್ಯಾಪಾರಿಗಳಿಗೇನು ಲಾಭ?: ಬಿಸಿಲು ಮತ್ತು ಹವಾಮಾನ ವೈಪರೀತ್ಯದಿಂದಾಗಿ ಬೀದಿ ಬದಿ ವ್ಯಾಪಾರಿಗಳು ಎದುರಿಸುತ್ತಿದ್ದ ನಷ್ಟಕ್ಕೆ ಬ್ರೇಕ್ ಹಾಕಲು ಈ ವಿಶಿಷ್ಟ ತಂತ್ರಜ್ಞಾನದ ಗಾಡಿಗಳನ್ನು ವಿನ್ಯಾಸಗೊಳಿಸಲಾಗಿದೆ.

ತಾಜಾತನದ ರಕ್ಷಣೆ: ಸೊಪ್ಪು, ತರಕಾರಿ, ಹಣ್ಣು ಹಾಗೂ ಹೂವುಗಳು ಸೂರ್ಯನ ಬೇಗೆಗೆ ಬೇಗನೆ ಬಾಡಿಹೋಗದಂತೆ ಈ ಕಾರ್ಟ್‌ಗಳು ದೀರ್ಘಕಾಲ ತಾಜಾವಾಗಿಡುತ್ತವೆ.

ಹೆಚ್ಚಿನ ಲಾಭ, ಶೂನ್ಯ ವೇಸ್ಟೇಜ್: ಉತ್ಪನ್ನಗಳು ಕೆಡದಂತಿರುವುದರಿಂದ ದಿನದ ಕೊನೆಯಲ್ಲಿ ವ್ಯಾಪಾರಿಗಳು ನಷ್ಟ ಅನುಭವಿಸುವುದು ತಪ್ಪುತ್ತದೆ ಮತ್ತು ಸುಲಭವಾಗಿ ಲಾಭ ಗಳಿಸಬಹುದು.

ಪರಿಸರ ಸ್ನೇಹಿ ತಂತ್ರಜ್ಞಾನ: ಸೆಲ್ಕೋ ಫೌಂಡೇಶನ್‌ನ ಸೌರಶಕ್ತಿ ತಂತ್ರಜ್ಞಾನದ ನೆರವು ಈ ಗಾಡಿಗಳ ಬ್ಯಾಕ್–ಬೋನ್ ಆಗಿದೆ ಎಂದರು.



ತಂತ್ರಜ್ಞಾನದ ಲಾಭ ತಳಮಟ್ಟದ ವ್ಯಾಪಾರಿಗಳಿಗೂ ಸಿಗಬೇಕು

ಶಾಸಕ ದರ್ಶನ್ ಪುಟ್ಟಣ್ಣಯ್ಯ ಕಾರ್ಯಕ್ರಮವನ್ನು ಉದ್ಘಾಟಿಸಿ, ಫಲಾನುಭವಿಗಳಿಗೆ ಗಾಡಿಗಳನ್ನು ಹಸ್ತಾಂತರಿಸಿ ಮಾತನಾಡಿ, ಒಟ್ಟು 15 ಕೂಲ್ ಕಾರ್ಟ್ ವಾಹನಗಳನ್ನು ಪ್ರಾಯೋಗಿಕವಾಗಿ ವಿತರಿಸಲಾಗಿದೆ. ಮಾರಾಟ ಮಾಡಲು ಗಾಡಿಗಳಲ್ಲಿ ಇಟ್ಟುಕೊಂಡ ಹೂವು, ಹಣ್ಣು, ತರಕಾರಿಗಳು ದೀರ್ಘ ಬಾಳಿಕೆ ಬರುವಂತೆ ವ್ಯವಸ್ಥೆ ಮಾಡಲಾಗಿದೆ. ಈ ಗಾಡಿಗಳಲ್ಲಿ 5 ಡಿಗ್ರಿ ತಾಪಮಾನ ಕಡಿಮೆಯಾಗುತ್ತದೆ. ಒಂದೆರಡು ದಿನ ಬಾಳಿಕೆ ಬರುವ ವಸ್ತುಗಳು ನಾಲ್ಕೈದು ದಿನ ಬಾಳಿಕೆ ಬರುತ್ತವೆ. ಯಾವುದೇ ರೀತಿಯ ವಿದ್ಯುತ್ ಬೇಕಾಗಿಲ್ಲ. ಸೋಲಾರ್ ವ್ಯವಸ್ಥೆ, ಬ್ಯಾಟರಿ ಬ್ಯಾಕಪ್ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ ಎಂದರು.

ದೂರದೃಷ್ಟಿಯ ನಾಯಕ ಕೆಂಪೇಗೌಡ

• **ವಿಜಯಪುರ:** ದೇಶದಲ್ಲಿ ಬೆಂಗಳೂರು ಸಿಲಿಕಾನ್ ವ್ಯಾಲಿ ಆಫ್ ಇಂಡಿಯಾ, ಸ್ಟಾರ್ಟ್ ಅಪ್ ರಾಜಧಾನಿ, ಇಂತಹ ಬೆಂಗಳೂರನ್ನು 500 ವರ್ಷಗಳ ಹಿಂದೆಯೇ ಅವರ ದೂರದೃಷ್ಟಿಯಿಂದ ಎಲ್ಲರನ್ನೊಳಗೊಂಡ ವೃತ್ತಿಯಾಧಾರಿತ ಪೇಟೆಗಳನ್ನು ನಿರ್ಮಿಸಿದ ಕೀರ್ತಿ ಕೆಂಪೇಗೌಡರಿಗೆ ಸಲ್ಲುತ್ತದೆ ಎಂದು ಮುಖಂಡ ಚೇತನ್ ಗೌಡ ತಿಳಿಸಿದರು.

ಇವರು ಪಟ್ಟಣದ ಪುರಸಭಾ ಮುಂಭಾಗದಲ್ಲಿ ಒಕ್ಕಲಿಗರ ಸಂಘದ ವತಿಯಿಂದ ನಾಡಪ್ರಭು ಕೆಂಪೇಗೌಡ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಕೆಂಪೇಗೌಡರ ಪುತ್ಥಳಿಗೆ ಪುಷ್ಪನಮನ ಸಲ್ಲಿಸಿ ಮಾತನಾಡಿದರು. ಕೆಂಪೇಗೌಡರು ನಗರದ ವ್ಯವಸ್ಥೆಯ ಬಗ್ಗೆ ಸಂಪೂರ್ಣ ಜ್ಞಾನ ಹೊಂದಿದ್ದ ಕೆಂಪೇಗೌಡರು ಕೃಷಿಕರು, ಕುಶಲಕರ್ಮಿಗಳು, ವ್ಯಾಪಾರಸ್ಥರು, ಜನಸಾಮಾನ್ಯರ ಅಗತ್ಯಗಳನ್ನು ಅರಿತು ಎಲ್ಲರಿಗೂ ವಿಶೇಷವಾದ ಪ್ರಾತಿನಿಧ್ಯ ನೀಡಿದರು. ಇಂದಿಗೂ ಬೆಂಗಳೂರಿನಲ್ಲಿ 64 ವಿವಿಧ ಕುಶಲಕರ್ಮಿಗಳ ಹೆಸರಿನ ಪ್ರದೇಶಗಳಿವೆ. ಕೃಷಿ ಹಾಗೂ ಕುಡಿಯುವ ನೀರಿಗೆ ಮಾದರಿಯಾದ ಜಲ ವ್ಯವಸ್ಥೆ ರೂಪಿಸಿದ್ದಾರೆ ಎಂದರು.

ತಾಲೂಕು ಬಿಜೆಪಿ ಅಧ್ಯಕ್ಷ ಅಂಬರೀಶ್ ಗೌಡ ಮಾತನಾಡಿ, ನಾಡಪ್ರಭು ಕೆಂಪೇಗೌಡರ ದಕ್ಷ ಮತ್ತು ದೂರದೃಷ್ಟಿಯ ಆಡಳಿತದ ಫಲವಾಗಿ ನಿರ್ಮಾಣಗೊಂಡ ಬೆಂಗಳೂರು ನಗರವು ಇಂದು ಸಿಲಿಕಾನ್ ವ್ಯಾಲಿಯಾಗಿ, ಉದ್ಯಾನ ನಗರಿಯಾಗಿ ಹೆಸರುವಾಸಿಯಾಗಿದೆ ಎಂದರು.



ಕಾರ್ಯಕ್ರಮಕೆ ಜಾನಪದ ಮೆರುಗು

ಈ ಕಾರ್ಯಕ್ರಮದಲ್ಲಿ ಕೆಂಪೇಗೌಡರ ಪಲ್ಲಕ್ಕಿ ಉತ್ಸವದೊಂದಿಗೆ ಒಕ್ಕಲಿಗರ ಸಂಘದ ಕುಲಬಂಧುಗಳು ಜಾನಪದ ಕಲಾ ತಂಡಗಳೊಂದಿಗೆ ನೃತ್ಯ ವೈಭವದೊಂದಿಗೆ ಆಚರಿಸಲಾಯಿತು. ಪುರಸಭಾ ಆವರಣದ ಮುಖ್ಯರಸ್ತೆಯ ಕೆಂಪೇಗೌಡರ ಪುತ್ಥಳಿಗೆ ಹಾರ ಹಾಕಿ ನಮಿಸಲಾಯಿತು. ಬಳಿಕ ನಡೆದ ಮೆರವಣಿಗೆಗೆ ಡೊಳ್ಳು ಕುಣಿತ, ವೀರಗಾಸೆ ಸೇರಿ ವಿವಿಧ ಜಾನಪದ ಕಲಾ ಪ್ರಕಾರಗಳು ಮೆರುಗುನೊಂದಿಗೆ ಅದ್ದೂರಿಯಾಗಿ ಮಾಡಲಾಯಿತು.

ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ನಿವೃತ್ತ ನೌಕರರ ಸನ್ಮಾನ | ಕುಂಚಿಟಿಗರನ್ನು ಎಸ್‌ಟಿ ಪಟ್ಟಿಗೆ ಸೇರಿಸಿ

ಶಿಕ್ಷಣ ಜತೆ ಸಂಸ್ಕಾರವೂ ಮುಖ್ಯ: ಡಾ.ಹನುಮಂತನಾಥ ಸ್ವಾಮೀಜಿ

• **ದೊಡ್ಡಬಳ್ಳಾಪುರ:** ಸಾಮಾಜಿಕ, ರಾಜಕೀಯ ಹಾಗೂ ಶೈಕ್ಷಣಿಕ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿಯೂ ಕುಂಚಿಟಿಗ ಸಮುದಾಯ ಮುನ್ನಡೆಯಬೇಕು. ಸಮುದಾಯದ ನೆರವಿನಿಂದ ಸಾಧನೆ ಮಾಡುವ ವಿದ್ಯಾರ್ಥಿಗಳು ಭವಿಷ್ಯದಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸಿ ಸಮಾಜಕ್ಕೆ ಸೇವೆ ಸಲ್ಲಿಸಬೇಕು ಎಂದು ಎಲೆರಾಂಪುರದ ಕುಂಚಿಟಿಗ ಮಹಾಸಂಸ್ಥಾನ ಮಠದ ಡಾ. ಹನುಮಂತನಾಥ ಮಹಾಸ್ವಾಮೀಜಿ ಕರೆ ನೀಡಿದರು.

ನಗರದ ಬಸವೇಶ್ವರ ಸಮುದಾಯ ಭವನದಲ್ಲಿ ತಾಲೂಕು ಕುಂಚಿಟಿಗರ ಸಂಘ, ಕುಂಚಿಟಿಗ ನೌಕರರ ಸಂಘ ಹಾಗೂ ಕುಂಚಿಟಿಗ ತಾಲೂಕು ಯುವ ಘಟಕದ ವತಿಯಿಂದ ಆಯೋಜಿಸಿದ್ದ ಕುಂಚಿಟಿಗ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಹಾಗೂ ನಿವೃತ್ತ ನೌಕರರ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಕೇವಲ ಹೆಚ್ಚಿನ ಅಂಕ ಗಳಿಸುವುದಕ್ಕೆ ಸೀಮಿತವಾಗದೆ ಉತ್ತಮ ಸಂಸ್ಕಾರವನ್ನು ಬೆಳೆಸಿಕೊಳ್ಳಬೇಕು. ತಂದೆ–ತಾಯಿ ಹಾಗೂ ಪೋಷಕರನ್ನು ಗೌರವಿಸಿ, ಅವರ ಯೋಗಕ್ಷೇಮ ನೋಡಿಕೊಳ್ಳಬೇಕು. ಶಿಕ್ಷಣದ ಜೊತೆಗೆ ಸಂಸ್ಕಾರವೂ ಜೀವನದಲ್ಲಿ ಮುಖ್ಯವಾಗಿದೆ ಎಂದು ಹೇಳಿದರು. ಕುಂಚಿಟಿಗರನ್ನು ಹಿಂದುಳಿದ ವರ್ಗದ ಪಟ್ಟಿಗೆ ಸೇರ್ಪಡೆ ಮಾಡುವ ಕುರಿತು ಪ್ರಯತ್ನಗಳು ನಡೆಯುತ್ತಿದ್ದು, ಮೀಸಲಾತಿ ವರ್ಗೀಕರಣ ಪ್ರಕ್ರಿಯೆಯಿಂದ ವಿಳಂಬವಾಗುತ್ತಿದೆ. ಮುಂದಿನ ದಿನಗಳಲ್ಲಿ ಕುಂಚಿಟಿಗ ಸಮುದಾಯಕ್ಕೆ ಒಬಿಸಿ ಸ್ಥಾನಮಾನ ಸಿಗುವ ವಿಶ್ವಾಸವಿದೆ. ಮಹಿಳೆಯರು ಕೂಡ ಸಮುದಾಯದ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಿರುವುದು ಉತ್ತಮ ಬೆಳವಣಿಗೆಯಾಗಿದ್ದು, ಕುಂಚಿಟಿಗ ಮಹಿಳಾ ಸಂಘ ಸ್ಥಾಪನೆ ಮಾಡಿದರೆ ಅಗತ್ಯ ಸಹಕಾರ ನೀಡುವುದಾಗಿ ತಿಳಿಸಿದರು.



ಶಿಕ್ಷಣದಿಂದ ಮಾತ್ರ ಸಮುದಾಯದ ಪ್ರಗತಿ: ಟಿಎಪಿಎಂಸಿಎಸ್ ಅಧ್ಯಕ್ಷ ಡಿ.ಸಿದ್ದರಾಮಯ್ಯ ಮಾತನಾಡಿ, ಕುಂಚಿಟಿಗ ಸಮುದಾಯ ಶಿಕ್ಷಣ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಮುನ್ನಡೆಯುತ್ತಿರುವುದು ಸಂತಸದ ವಿಷಯ. ರಾಜಕೀಯ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಬೆಳೆಯಲು ಸಮುದಾಯಕ್ಕೆ ಉತ್ತಮ ಅವಕಾಶಗಳಿವೆ ಎಂದರು.

ತಾಲೂಕು ಕುಂಚಿಟಿಗರ ಸಂಘದ ಅಧ್ಯಕ್ಷ ಸಿ.ವಿ.ಲಕ್ಷ್ಮೀಪತಿ ಮಾತನಾಡಿ, ಯಾವುದೇ ಸಮುದಾಯದ ಅಭಿವೃದ್ಧಿಗೆ ಶಿಕ್ಷಣವೇ ಪ್ರಮುಖ ಸಾಧನ. ವಿದ್ಯಾರ್ಥಿಗಳನ್ನು ಉತ್ತೇಜಿಸುವ ಉದ್ದೇಶದಿಂದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕಾರ್ಯಕ್ರಮದಲ್ಲಿ ಸಹಕಾರ ರತ್ನ ಪುರಸ್ಕೃತ ಡಿ.ಸಿದ್ದರಾಮಯ್ಯ ಹಾಗೂ ನಿವೃತ್ತ ಶಿಕ್ಷಕ ಎಂ.ಆರ್. ಚಂದ್ರಶೇಖರ ಮೂರ್ತಿ ಅವರನ್ನು ಸನ್ಮಾನಿಸಲಾಯಿತು. ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಕುಂಚಿಟಿಗ ಸಮುದಾಯದ ಬಗ್ಗೆ ಹೆಮ್ಮೆ ಇರಲಿ

ರಾಜ್ಯದಲ್ಲಿ ಕುಂಚಿಟಿಗ ಸಮುದಾಯ 27 ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಹೊಂದಿದ್ದು, ದೊಡ್ಡಬಳ್ಳಾಪುರ ತಾಲೂಕಿನಲ್ಲಿ ಸುಮಾರು 23 ಸಾವಿರ ಮತದಾರರಿದ್ದಾರೆ. ಸಮುದಾಯ ರಾಜಕೀಯವಾಗಿಯೂ ಬೆಳೆಯಬೇಕು. ನಮ್ಮ ಮಕ್ಕಳಲ್ಲಿ ಕುಂಚಿಟಿಗ ಸಮುದಾಯದ ಬಗ್ಗೆ ಹೆಮ್ಮೆ ಮೂಡಿಸುವ ಕೆಲಸ ಆಗಬೇಕು ಎಂದು ಡಾ. ಹನುಮಂತನಾಥ ಮಹಾಸ್ವಾಮೀಜಿ ಹೇಳಿದರು.

ಆರ್.ಜಿ. ವೆಂಕಟಾಚಲಯ್ಯಗೆ ಸಂತಾಪ: ಇತ್ತೀಚೆಗೆ ನಿಧನರಾದ ಮಾಜಿ ಶಾಸಕ ಆರ್.ಜಿ.ವೆಂಕಟಾಚಲಯ್ಯ ಅವರಿಗೆ ಕಾರ್ಯಕ್ರಮದಲ್ಲಿ ಸಂತಾಪ ಸೂಚಿಸಲಾಯಿತು. ಕಾರ್ಯಕ್ರಮದಲ್ಲಿ ಮಹಿಳಾ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಮುತ್ತುರಾಜು, ಸಂಘದ ಪದಾಧಿಕಾರಿಗಳು ಭಾಗವಹಿಸಿದ್ದರು.

ಕೆಂಪೇಗೌಡರ ಜಯಂತಿ ಕಾರ್ಯಕ್ರಮದಲ್ಲಿ ಸಂಸದ ಸುಧಾಕರ್ ಅಭಿಮತ

ಕೆಂಪೇಗೌಡರ ಸಮಾಜದ ಕನಸು ಇಂದಿಗೂ ಪ್ರಸ್ತುತ

• **ಚಿಕ್ಕಬಳ್ಳಾಪುರ:** ನಾಡಪ್ರಭು ಶ್ರೀ ಕೆಂಪೇಗೌಡರು ಕೇವಲ ಬೆಂಗಳೂರು ನಗರ ನಿರ್ಮಾಪಕರಷ್ಟೇ ಅಲ್ಲ, ಸಮ ಸಮಾಜ, ಸಾಮಾಜಿಕ ನ್ಯಾಯ ಹಾಗೂ ಜನರ ಆಡಳಿತದ ಪರಿಕಲ್ಪನೆಯನ್ನು ಕಾರ್ಯರೂಪಕ್ಕೆ ತಂದ ಮಹಾನ್ ಆಡಳಿತಗಾರರಾಗಿದ್ದರು ಎಂದು ಚಿಕ್ಕಬಳ್ಳಾಪುರ ಸಂಸದ ಡಾ. ಕೆ ಸುಧಾಕರ್ ಬಣ್ಣಿಸಿದರು.

ನಗರದ ಕನ್ನಡ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಒಕ್ಕಲಿಗರ ಸಂಘದ ಸಹಯೋಗದಲ್ಲಿ ಶನಿವಾರ ಆಯೋಜಿಸಿದ್ದ ನಾಡಪ್ರಭು ಶ್ರೀ ಕೆಂಪೇಗೌಡರ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕೆಂಪೇಗೌಡರು ಎಲ್ಲ ವರ್ಗದ ಜನರ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಜಾತಿ, ಧರ್ಮದ ಭೇದವಿಲ್ಲದೆ ಸಮಾನ ಅವಕಾಶಗಳನ್ನು ಕಲ್ಪಿಸುವ ಆಡಳಿತ ವ್ಯವಸ್ಥೆಯನ್ನು ರೂಪಿಸಿದ್ದರು. ವ್ಯಾಪಾರ ಮತ್ತು ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ವಿವಿಧ ಪೇಟೆಗಳನ್ನು ನಿರ್ಮಿಸಿ, ಬೆಂಗಳೂರು ನಗರವನ್ನು ವಾಣಿಜ್ಯ ಕೇಂದ್ರವಾಗಿ ಬೆಳೆಸಿದರು. ನೀರಿನ ಮಹತ್ವವನ್ನು ಅರಿತು ಅನೇಕ ಕೆರೆಗಳು ಹಾಗೂ ಕಾಲುವೆಗಳನ್ನು ನಿರ್ಮಿಸುವ ಮೂಲಕ ಮಳೆನೀರಿನ ಸಂರಕ್ಷಣೆ, ಕೃಷಿ ಅಭಿವೃದ್ಧಿ ಮತ್ತು ಜನರ ಕುಡಿಯುವ ನೀರಿನ ಅಗತ್ಯವನ್ನು ಪೂರೈಸುವ ಶಾಶ್ವತ ವ್ಯವಸ್ಥೆಯನ್ನು ರೂಪಿಸಿದರು. ಪರಿಸರ ಸಂರಕ್ಷಣೆ, ಸುಸ್ಥಿರ ಅಭಿವೃದ್ಧಿ ಹಾಗೂ ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಅವರು ಹಾಕಿದ ಅಡಿಪಾಯ ಇಂದಿಗೂ ಮಾದರಿಯಾಗಿದೆ. ಯೋಜನಾಬದ್ಧ ನಗರ ನಿರ್ಮಾಣ, ಉತ್ತಮ ರಸ್ತೆ ಜಾಲ, ಜಲಸಂಪನ್ಮೂಲಗಳ ಸಂರಕ್ಷಣೆ ಹಾಗೂ ಸಾರ್ವಜನಿಕ ಸೌಲಭ್ಯಗಳ ಅಭಿವೃದ್ಧಿಗೆ ಅವರು ನೀಡಿದ ಆದ್ಯತೆ ಆಧುನಿಕ ನಗರಾಭಿವೃದ್ಧಿಗೆ ದಿಕ್ಸೂಚಿಯಾಗಿದೆ. ಇಂದು ಬೆಂಗಳೂರು ಜಾಗತಿಕ ಮಟ್ಟದಲ್ಲಿ ಮಾಹಿತಿ ತಂತ್ರಜ್ಞಾನ, ಶಿಕ್ಷಣ, ಸಂಶೋಧನೆ ಮತ್ತು ಹೂಡಿಕೆಗಳ ಪ್ರಮುಖ ಕೇಂದ್ರವಾಗಿ ಗುರುತಿಸಿಕೊಂಡಿರುವುದು ಕೆಂಪೇಗೌಡರ ದೂರದೃಷ್ಟಿಯ ಫಲವಾಗಿದೆ. ಅವರ ಚಿಂತನೆಗಳು ಮತ್ತು ಜನಪರ ಆಡಳಿತದ ಮೌಲ್ಯಗಳು ಇಂದಿನ ಸಮಾಜಕ್ಕೆ ಪ್ರೇರಣೆಯಾಗಿದ್ದು, ಅವರ ಆದರ್ಶಗಳನ್ನು ಅಳವಡಿಸಿಕೊಂಡಾಗ ಮಾತ್ರ ಸಮಾನತೆ ಮತ್ತು ಸುಸ್ಥಿರ ಅಭಿವೃದ್ಧಿಯ ಕನಸು ನನಸಾಗಲಿದೆ ಎಂದು ತಿಳಿಸಿದರು.

ಡಿಸಿ ಜಿ.ಪ್ರಭು ಅವರು ಮಾತನಾಡಿ, ಕೆಂಪೇಗೌಡರು ದೂರದೃಷ್ಟಿಯ ಆಡಳಿತಗಾರರಾಗಿದ್ದು, 16ನೇ ಶತಮಾನದಲ್ಲೇ ಸುಸ್ಥಿರ ಬೆಂಗಳೂರು ನಗರವನ್ನು ನಿರ್ಮಿಸುವ ಮೂಲಕ ಜಗತ್ತಿಗೆ ಮಾದರಿಯಾದ ನಗರಾಭಿವೃದ್ಧಿಯ ಪರಿಕಲ್ಪನೆಯನ್ನು ಸಾಕಾರಗೊಳಿಸಿದ್ದರು. ಜನಪರ ಆಡಳಿತ ನೀಡಿದ್ದು, ಕೆರೆಗಳು, ಕೋಟೆಗಳು, ಪೇಟೆಗಳು ಹಾಗೂ ದೇವಾಲಯಗಳನ್ನು ನಿರ್ಮಿಸುವ ಮೂಲಕ ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದರು ಎಂದರು.



ಸನ್ಮಾನ ಕಾರ್ಯಕ್ರಮ

ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಪ್ರಗತಿಪರ ರೈತರನ್ನು ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಜಾನಪದ ಮೆರುಗು

ಕಾರ್ಯಕ್ರಮಕ್ಕೂ ಮುನ್ನ ನಗರದ ಬಿ.ಬಿ. ರಸ್ತೆಯ ವಾಪಸಂದ್ರದ ರಂಗನಾಥಸ್ವಾಮಿ ದೇವಾಲಯದ ಮುಂಭಾಗದಿಂದ ಕೆಂಪೇಗೌಡರ ಪಲ್ಲಕ್ಕಿ ಹಾಗೂ ಜಾನಪದ ಕಲಾತಂಡಗಳ ಭವ್ಯ ಮೆರವಣಿಗೆಗೆ ಜಿಲ್ಲಾಧಿಕಾರಿ ಜಿ. ಪ್ರಭು ಹಾಗೂ ಗಣ್ಯರು ಚಾಲನೆ ನೀಡಿದರು. ಡೊಳ್ಳು ಕುಣಿತ, ಸೋಮನ ಕುಣಿತ, ವೀರಗಾಸೆ, ಮಹಿಳೆಯರ ಪೂರ್ಣಕುಂಭ ಸ್ವಾಗತ, ಆರತಿ ಹಾಗೂ ವಿವಿಧ ಜಾನಪದ ಪ್ರದರ್ಶನಗಳೊಂದಿಗೆ ಮೆರವಣಿಗೆ ಕನ್ನಡ ಭವನದವರೆಗೆ ಅದ್ದೂರಿಯಾಗಿ ಸಾಗಿದ್ದು ಸಾರ್ವಜನಿಕರ ಗಮನ ಸೆಳೆಯಿತು.

4 ಪಾಲಿಕೆಗಳಲ್ಲಿ ನಾಡಪ್ರಭು ಆಚರಣೆ

• **ಬೆಂಗಳೂರು:** ನಾಡಪ್ರಭು ಕೆಂಪೇಗೌಡರ ಜಯಂತಿ ಪ್ರಯುಕ್ತ ಜಿಬಿಎ ನಾಲ್ಕು ಪಾಲಿಕೆ ವತಿಯಿಂದ ಶನಿವಾರ ವಿಜೃಂಭಣೆಯಿಂದ ಆಚರಿಸಲಾಯಿತು.

ನಾಡಿನ ನಿರ್ಮಾತೃ ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ ಆಚರಣೆ ಅಂಗವಾಗಿ ಬೆಂಗಳೂರು ಉತ್ತರ ಪಾಲಿಕೆಯಿಂದ ಆವತಿ ಗ್ರಾಮದ ಚನ್ನಕೇಶವ ದೇವಾಲಯದಿಂದ ಪುರಜ್ಯೋತಿಯನ್ನು ಸ್ವೀಕರಿಸಿ, ಮೆರವಣಿಗೆ ಮೂಲಕ ಕಾರ್ಯಕ್ರಮದ ಸ್ಥಳಕ್ಕೆ ತರಲಾಯಿತು. ಈ ಸಂದರ್ಭದಲ್ಲಿ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವ ಕೆ.ಎಚ್.ಮುನಿಯಪ್ಪ, ಶಾಸಕ ರಂಗನಾಥ್, ಬೆಂಗಳೂರು ಉತ್ತರ ನಗರ ಪಾಲಿಕೆಯ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್, ಹೆಚ್ಚುವರಿ ಆಯುಕ್ತ ಪಲ್ಲವಿ, ಜಂಟಿ ಆಯುಕ್ತ ಮೊಹಮ್ಮದ್ ನಯೀಮ್ ಮೊಮಿನ್, ಉಪ ಆಯುಕ್ತ ಸೋಮಶೇಖರ್ ಉಪಸ್ಥಿತರಿದ್ದರು.

ಬೆಂಗಳೂರು ಕೇಂದ್ರ ಪಾಲಿಕೆ: ನಾಡಪ್ರಭು ಕೆಂಪೇಗೌಡರ ಜಯಂತಿ ಪ್ರಯುಕ್ತ ಬೆಂಗಳೂರು ಕೇಂದ್ರ ಪಾಲಿಕೆ ವತಿಯಿಂದ ಹಮ್ಮಿಕೊಳ್ಳಲಾದ ಲಾಲ್‌ಬಾಗ್ ಗಡಿಗೋಪುರದಿಂದ ಪುರಜ್ಯೋತಿ ಮೆರವಣಿಗೆಗೆ ಕಾರ್ಯಕ್ರಮಕ್ಕೆ ಶಾಸಕರಾದ ಉದಯ್ ಬಿ ಗರುಡಾಚಾರ್ ಹಾಗೂ ಸಿ.ಕೆ.ರಾಮಮೂರ್ತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಾಡಪ್ರಭು ಕೆಂಪೇಗೌಡರ ಪ್ರತಿಮೆಗೆ ಪುಷ್ಪಾರ್ಚನೆ ಸಲ್ಲಿಸಿ, ವಿವಿಧ ಕಲಾತಂಡಗಳೊಂದಿಗೆ ಪುರಜ್ಯೋತಿಯ ಮೆರವಣಿಗೆ ನಡೆಯಿತು. ಈ ಸಂದರ್ಭದಲ್ಲಿ ಕೇಂದ್ರ ನಗರ ಪಾಲಿಕೆ ಆಯುಕ್ತ ಜಗದೀಶ್.ಜಿ, ಜಿಬಿಎ ವಿಶೇಷ ಆಯುಕ್ತ ಸುಜಾತಾ ಗೊಡಚೋಳಿ, ಜಂಟಿ ಆಯುಕ್ತ ಹೇಮಂತ್ ಶರಣ್ ಉಪಸ್ಥಿತರಿದ್ದರು.

ಬೆಂಗಳೂರು ಪಶ್ಚಿಮ ನಗರ ಪಾಲಿಕೆ: ನಾಡಪ್ರಭು ಕೆಂಪೇಗೌಡರ ಜಯಂತಿ ಪ್ರಯುಕ್ತ ಮೇಖ್ರಿ ವೃತ್ತ ಗಡಿಗೋಪುರದಿಂದ ಪುರಜ್ಯೋತಿ ಮೆರವಣಿಗೆಗೆ ಕಾರ್ಯಕ್ರಮಕ್ಕೆ ಸಾರಿಗೆ ಸಚಿವ ಸುರೇಶ್ ಬಿ.ಎಸ್. ಹಾಗೂ ಶಾಸಕ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಚಾಲನೆ ನೀಡಿದರು. ನಾಡಪ್ರಭು ಕೆಂಪೇಗೌಡರ ಪ್ರತಿಮೆಗೆ ಪುಷ್ಪಾರ್ಚನೆ ಸಲ್ಲಿಸಿ, ವಿವಿಧ ಕಲಾತಂಡಗಳೊಂದಿಗೆ ಪುರಜ್ಯೋತಿಯ ಮೆರವಣಿಗೆ ನಡೆಯಿತು. ಈ ಸಂದರ್ಭದಲ್ಲಿ ಪಶ್ಚಿಮ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಕೆ.ವಿ., ಜಂಟಿ ಆಯುಕ್ತ ಸಂಗಪ್ಪ, ಕಂದಾಯ ಅಧಿಕಾರಿ ಶ್ರೀನಿವಾಸ್ ಉಪಸ್ಥಿತರಿದ್ದರು.

ಬೆಂಗಳೂರು ದಕ್ಷಿಣ ನಗರ ಪಾಲಿಕೆ : ನಾಡಪ್ರಭು ಕೆಂಪೇಗೌಡರ 517ನೇ ಜಯಂತ್ಯೋತ್ಸವದ ಅಂಗವಾಗಿ ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ಆಯುಕ್ತ ಕೆ.ಎನ್.ರಮೇಶ್ ರವರು ಪಾಲಿಕೆ ಆವರಣದಲ್ಲಿ ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಕೋರಮಂಗಲದಲ್ಲಿರುವ ಕೆಂಪೇಗೌಡರ ಸೊಸೆ ತ್ಯಾಗಿ ಲಕ್ಷ್ಮಿ ದೇವಿರವರ ಸಮಾಧಿಗೆ ಗೌರವ ನಮನ ಸಲ್ಲಿಸಿದರು. ಈ ವೇಳೆ ಪಾಲಿಕೆಯ ಮುಖ್ಯ ಅಭಿಯಂತರ ಬಸವರಾಜ್ ಕಬಾಡೆ, ಜಂಟಿ ಆಯುಕ್ತ ಡಾ.ಎನ್.ಎನ್. ಮಧು ಉಪಸ್ಥಿತರಿದ್ದರು.



ಶಕ್ತಿಯ ಆಧಾರದ ಮೇಲೆ ದೇಶದ ಮೌಲ್ಯಮಾಪನ

• **ಬೆಂಗಳೂರು:** ಒಂದು ದೇಶವು ತನ್ನ ಆರ್ಥಿಕ, ರಾಜಕಾಂತ್ರಿಕ ಮತ್ತು ಸಾಮಾಜಿಕ ಶಕ್ತಿಯನ್ನು ಎಷ್ಟು ಜವಾಬ್ದಾರಿಯುತವಾಗಿ ಬಳಸುತ್ತದೆ ಎಂಬುದನ್ನು ಆಧರಿಸಿ ಜವಾಬ್ದಾರಿಯುತ ರಾಷ್ಟ್ರಗಳ ಸೂಚ್ಯಂಕ (ಆರ್‌ಎನ್‌ಐ) ಶ್ರೇಯಾಂಕ ನೀಡುತ್ತದೆ ಎಂದು ವರ್ಲ್ಡ್ ಇಂಟೆಲೆಕ್ಚುವಲ್ ಫೌಂಡೇಶನ್ ಕಾರ್ಯದರ್ಶಿ ಸುಧಾಂಶು ಮಿತ್ತಲ್ ಹೇಳಿದರು.

ಐಐಎಂ ಮುಂಬೈ, ಜೆಎನ್‌ಯು ಹಾಗೂ ಕಾರದಾ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಸಿದ್ಧಪಡಿಸಲಾದ ಆರ್‌ಎನ್‌ಐ ವರದಿಯನ್ನು ಪಿಇಎಸ್ ವಿಶ್ವವಿದ್ಯಾಲಯದಲ್ಲಿ ಶನಿವಾರ ಬಿಡುಗಡೆ ಮಾಡಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಾಗತಿಕ ದಕ್ಷಿಣದ ರಾಷ್ಟ್ರವೊಂದರಿಂದ ರೂಪಿಸಲಾದ ಮೊದಲ ಜಾಗತಿಕ ಶ್ರೇಯಾಂಕ ಇದಾಗಿದೆ. ಸಾಂಪ್ರದಾಯಿಕವಾಗಿ ದೇಶಗಳನ್ನು ಅವುಗಳ ಶಕ್ತಿಯ ಆಧಾರದ ಮೇಲೆ ಮೌಲ್ಯಮಾಪನ ಮಾಡಲಾಗುತ್ತಿತ್ತು. ಆದರೆ ಆರ್‌ಎನ್‌ಐ ದೇಶಗಳು ತಮ್ಮ ಶಕ್ತಿಯನ್ನು ಎಷ್ಟು ಜವಾಬ್ದಾರಿಯುತವಾಗಿ ಬಳಸುತ್ತವೆ ಎಂಬುದನ್ನು ಆಧರಿಸಿ ಶ್ರೇಯಾಂಕ ನೀಡುತ್ತದೆ. ಪ್ರತಿ ವರ್ಷದ ಮಾರ್ಚ್ ತಿಂಗಳ ಮೊದಲ ಶುಕ್ರವಾರ ಈ ವರದಿಯನ್ನು ಪ್ರಕಟಿಸಲಾಗುತ್ತದೆ. ಈ ಬಾರಿ 58 ಮಾನದಂಡಗಳ ಆಧಾರದಲ್ಲಿ 154 ದೇಶಗಳನ್ನು ಮೌಲ್ಯಮಾಪನ ಮಾಡಲಾಗಿದೆ, ಎಂದು ತಿಳಿಸಿದರು.

ಶ್ರೇಯಾಂಕಗಳು ಕೇವಲ ಅಂಕಿ-ಅಂಶಗಳಲ್ಲ, ಅವು ಹೂಡಿಕೆ, ರಾಜಕಾಂತ್ರಿಕತೆ, ಸಾರ್ವಜನಿಕ ನೀತಿ ಮತ್ತು ರಾಷ್ಟ್ರೀಯ ಅಭಿವೃದ್ಧಿಯ ದಿಕ್ಕನ್ನು ನಿರ್ಧರಿಸುವ ಪ್ರಮುಖ ಸಾಧನಗಳಾಗಿವೆ. 20ನೇ ಶತಮಾನದಲ್ಲಿ ಶಕ್ತಿಶಾಲಿ ರಾಷ್ಟ್ರಗಳು ಮುನ್ನಡೆ ಸಾಧಿಸಿದ್ದರೆ, 21ನೇ ಶತಮಾನದಲ್ಲಿ ವಿಶ್ವಾಸಾರ್ಹ ಮತ್ತು ಜವಾಬ್ದಾರಿಯುತ ರಾಷ್ಟ್ರಗಳೇ ಹೆಚ್ಚಿನ ಪ್ರಾಮುಖ್ಯತೆ ಪಡೆಯಲಿವೆ ಎಂದು ಅಭಿಪ್ರಾಯಪಟ್ಟರು. ಡಬ್ಲ್ಯುಐಎಫ್ ಕಾರ್ಯದರ್ಶಿ ಆರ್.ಕೆ.ಮಿಶ್ರಾ ಮಾತನಾಡಿ, ದೇಶಗಳು ತಮ್ಮ ಶಕ್ತಿಯನ್ನು ಜನರ ಕಲ್ಯಾಣಕ್ಕಾಗಿ ಹೇಗೆ ಬಳಸಿವೆ, ಇತರ ರಾಷ್ಟ್ರಗಳೊಂದಿಗೆ ಎಷ್ಟು ಜವಾಬ್ದಾರಿಯುತವಾಗಿ ನಡೆದುಕೊಂಡಿವೆ ಹಾಗೂ ಪರಿಸರ ಸಂರಕ್ಷಣೆಯಲ್ಲಿ ಎಷ್ಟು ಹೊಣೆಗಾರಿಕೆ ಪ್ರದರ್ಶಿಸಿವೆ ಎಂಬ ಮಾನದಂಡಗಳ ಆಧಾರದ ಮೇಲೆ ಆರ್‌ಎನ್‌ಐ ಶ್ರೇಯಾಂಕ ರೂಪಿಸಲಾಗಿದೆ ಎಂದು ಹೇಳಿದರು.

ಅರಿಯನ್ ಕ್ಯಾಪಿಟಲ್ ಪಾರ್ಟ್ನರ್ಸ್ ಮುಖ್ಯಸ್ಥ ಟಿ.ವಿ.ಮೋಹನ್ ದಾಸ್ ಪೈ, ಪಿಇಎಸ್ ವಿಶ್ವವಿದ್ಯಾಲಯದ ಚಾನ್ಸಲರ್ ಪ್ರೊ. ಜವಾಹರ್ ದೊರೆಸ್ವಾಮಿ, ಡಬ್ಲ್ಯುಐಎಫ್ ಅಧ್ಯಕ್ಷ ಜಗದೀಶ್ ಮುಖಿ ಹಾಗೂ ಯೋಜನಾ ಮುಖ್ಯಸ್ಥೆ ಹೇಮಾಂಗಿ ಸಿನ್ಹಾ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಸುತ್ತೋಲೆ: ಕಾನೂನು ಸಮಸ್ಯೆಗಳಿಗೆ ಕಾರಣ

• **ಬೆಂಗಳೂರು:** ಸಿಬಿಎಸ್‌ಇ ಇತ್ತೀಚೆಗೆ ಹೊರಡಿಸಿರುವ ಕಡ್ಡಾಯ ಮೂರನೇ ಭಾಷೆ ಕುರಿತ ಸುತ್ತೋಲೆಯು ಕರ್ನಾಟಕದ ಸಿಬಿಎಸ್‌ಇ ಶಾಲೆಗಳಲ್ಲಿ ಆಡಳಿತಾತ್ಮಕ ಗೊಂದಲ ಮತ್ತು ಕಾನೂನು ಸಂಬಂಧಿತ ಸಮಸ್ಯೆಗಳಿಗೆ ಕಾರಣವಾಗಲಿದೆ ಎಂದು ಅಸೋಸಿಯೇಟೆಡ್ ಮ್ಯಾನೇಜ್‌ಮೆಂಟ್ ಆಫ್ ಪ್ರೈಮರಿ ಅಂಡ್ ಸೆಕೆಂಡರಿ ಸ್ಕೂಲ್ಸ್ ಇನ್ ಕರ್ನಾಟಕ (ಕಾಮ್ಸ್) ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.

ರಾಜ್ಯದ ಶಿಕ್ಷಣ ಸಂಸ್ಥೆಗಳಿಗೆ ಸ್ಪಷ್ಟ ಮಾರ್ಗಸೂಚಿ ನೀಡುವವರೆಗೆ ಈ ಆದೇಶದ ಅನುಷ್ಠಾನವನ್ನು ತಾತ್ಕಾಲಿಕವಾಗಿ ತಡೆಹಿಡಿಯಬೇಕು ಎಂದು ಕಾಮ್ಸ್ ಸಿಬಿಎಸ್‌ಇಗೆ ಮನವಿ ಸಲ್ಲಿಸಿದೆ.

ಕಾಮ್ಸ್ ಪ್ರಧಾನ ಕಾರ್ಯದರ್ಶಿ ಡಿ.ಶಶಿ ಕುಮಾರ್ ಅವರು, ಸಿಬಿಎಸ್‌ಇಗೆ ಬರೆದಿರುವ ಪತ್ರದಲ್ಲಿ, ಕರ್ನಾಟಕದಲ್ಲಿ ಈಗಾಗಲೇ ಕರ್ನಾಟಕ ಕನ್ನಡ ಭಾಷಾ ಕಲಿಕಾ ಕಾಯ್ದೆ-2015 ಹಾಗೂ 2017ರ ನಿಯಮಾವಳಿ ಜಾರಿಯಲ್ಲಿದ್ದು, ಅದರ ಪ್ರಕಾರ ರಾಜ್ಯದ ಎಲ್ಲ ಶಾಲೆಗಳಲ್ಲಿ ಕನ್ನಡವನ್ನು ಮೊದಲ ಅಥವಾ ಎರಡನೇ ಭಾಷೆಯಾಗಿ ಬೋಧಿಸುವುದು ಕಡ್ಡಾಯವಾಗಿದೆ. ಇಂತಹ ಸಂದರ್ಭದಲ್ಲಿ ಸಿಬಿಎಸ್‌ಇಯ ಹೊಸ ಮೂರನೇ ಭಾಷೆ ಕುರಿತ ಆದೇಶವು ರಾಜ್ಯದ ಕಾಯ್ದೆಯೊಂದಿಗೆ ಸಂಘರ್ಷ ಉಂಟುಮಾಡುವ ಸಾಧ್ಯತೆ ಇದೆ. ಇದರಿಂದ ಶಾಲಾ ಆಡಳಿತ ಮಂಡಳಿಗಳು ಯಾವ ನಿಯಮವನ್ನು ಅನುಸರಿಸಬೇಕು ಎಂಬ ಗೊಂದಲಕ್ಕೆ ಸಿಲುಕಿವೆ ಎಂದು ತಿಳಿಸಿದ್ದಾರೆ. ಪ್ರಸಕ್ತ ಶೈಕ್ಷಣಿಕ ವರ್ಷ ಈಗಾಗಲೇ ಆರಂಭಗೊಂಡಿದ್ದು, ವಿದ್ಯಾರ್ಥಿಗಳು ಮತ್ತು ಪೋಷಕರು ತಮ್ಮ ಆಯ್ಕೆಯ ಭಾಷಾ ಸಂಯೋಜನೆಗಳನ್ನು ಆಧರಿಸಿ ಪ್ರವೇಶ ಪಡೆದಿದ್ದಾರೆ. ಶೈಕ್ಷಣಿಕ ವರ್ಷದ ಮಧ್ಯದಲ್ಲಿ ಹೊಸ ಭಾಷಾ ನಿಯಮವನ್ನು ಜಾರಿಗೊಳಿಸುವುದು ವಿದ್ಯಾರ್ಥಿಗಳ ಕಲಿಕೆಗೆ ಅಡ್ಡಿಯಾಗುವುದರ ಜತೆಗೆ ಪೋಷಕರಿಗೂ ಅನಗತ್ಯ ತೊಂದರೆ ಉಂಟುಮಾಡಲಿದೆ ಎಂದು ಕಾಮ್ಸ್ ಅಭಿಪ್ರಾಯಪಟ್ಟಿದೆ. ಹೊಸ ಭಾಷಾ ನೀತಿಯ ಅನುಷ್ಠಾನಕ್ಕೆ ಅಗತ್ಯವಾದ ಪಠ್ಯಪುಸ್ತಕಗಳ ಲಭ್ಯತೆ, ಅರ್ಹ ಶಿಕ್ಷಕರ ನೇಮಕಾತಿ, ಪರೀಕ್ಷಾ ವಿಧಾನ, ಮೌಲ್ಯಮಾಪನ ವ್ಯವಸ್ಥೆ ಸೇರಿದಂತೆ ಹಲವು ಪ್ರಮುಖ ಅಂಶಗಳ ಬಗ್ಗೆ ಸಿಬಿಎಸ್‌ಇ ಯಾವುದೇ ಸ್ಪಷ್ಟ ಮಾರ್ಗಸೂಚಿ ನೀಡಿಲ್ಲ. ಈ ಪರಿಸ್ಥಿತಿಯಲ್ಲಿ ನಿಯಮವನ್ನು ಜಾರಿಗೆ ತರುವುದು ಶಿಕ್ಷಣದ ಗುಣಮಟ್ಟದ ಮೇಲೂ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ಇದೇ ವೇಳೆ, ಇತರ ರಾಜ್ಯಗಳಿಂದ ಕರ್ನಾಟಕಕ್ಕೆ ಬರುವ ವಿದ್ಯಾರ್ಥಿಗಳ ಭಾಷಾ ಆಯ್ಕೆ ಹಾಗೂ ಅವರ ಶೈಕ್ಷಣಿಕ ಮುಂದುವರಿಕೆಗೆ ಸಂಬಂಧಿಸಿದ ಪ್ರಶ್ನೆಗಳಿಗೂ ಸಿಬಿಎಸ್‌ಇ ಸ್ಪಷ್ಟನೆ ನೀಡಿಲ್ಲ. ಇದರಿಂದ ಅಂತಹ ವಿದ್ಯಾರ್ಥಿಗಳು ಹೆಚ್ಚುವರಿ ಸಮಸ್ಯೆಗಳನ್ನು ಎದುರಿಸಬೇಕಾಗಬಹುದು ಎಂದು ಕಾಮ್ಸ್ ಆತಂಕ ವ್ಯಕ್ತಪಡಿಸಿದೆ.

[illegible]

BEFORE THE MOTOR ACCIDENT CLAIMS TRIBUNAL SCCH-05 AT BANGALORE
M.V.C 9516/2024

BETWEEN
Boringaiah. ....Petitioner
AND
B.T.
Lakshman B.T & Others. ....Respondents

Notice to Respondent No-1(A)
Thimmashetty, No.888/G, 2nd Main road, Ranganathapura, Kamakshipalya, Bangalore-560079. Ph-7337777036.

Notice-Pape Publication
WHEREAS, take notice that the above named petitioner has filed the above case claiming compensation at **Rs.10,00,000/-. (Rupees Ten Lakhs) with costs and interest against you for the injuries sustained by him in road accident which occurred on 06-09-2024 at about 5-30 PM at Channamarayyanapalya - Naganahalli Road, Tavarekere Hobli, Bangalore south Taluk, Bangalore involving your son's Auto Bearing No. KA-02-AF-9756** as such you are hereby summoned to appear before this Hon'ble court in person or by pleader on **29-07-2026 at 11.00 AM** to answer the same failing which the above case will be disposed of placing you ex-parte.
Given under my hand and the seal of the court this the **20-06-2026**

By Order of the Court
Assistant Registrar
Court of Small Causes
Bangalore -
Advocate Name & Address:
Krishnamurthy S G
Advocates, Office At No. 145, 1st Floor, 2nd Cross, 2nd Main, Opp ASB Developers, Sunkadakatte, Bangalore - 560 091. M: 9964096376

[illegible]

[illegible]

IN THE COURT OF THE HON'BLE SENIOR CIVIL JUDGE AND J.M.F.C AT MALUR
O.S NO. 62/2025

Plaintiffs: Sri. **Chandaramma** And others
Defendants: Smt. **Gowramma** And others

SUMMONS TO THE DEFENDANTS No 5.
P. Chandra Kiran Reddy, S/o Chandra Mohan Reddy, Aged about 49 yers, R/at Siddanahalli Village & Post, Lakkur Hobli Malur Taluk.

Whereas the plaintiffs have filed the above aforesaid suit against the defendants for Partition and separate possession and such other reliefs with respect to below mentioned schedule properties. Further in spite of proper steps taken by the plaintiffs, the summons issued by this Hon'ble court were returned as un served. Hence you are hereby directed to appear before this Hon'ble court on: 01.08.2026 at 11-00 am, in person or through an advocate to answer the queries. If you fail to appear on the said date, the case will be determined in your absence and further order will be passed. This is given under my hand and seal of the court on the.

SCHEDULE
The land bearing Sy.No. 84 new Sy no 84/3 measuring 39 Guntas situated at Chowdadenahalli Village Lakkur Hobli Malur Taluk bounded on East by: land by Ragurama Reedy, West by: Land of Muniyappa, North by: Land of Remaining portion belongs to late Sri. Muniyappa and his Children South by: Land of Gangappa
Given under my hand and seal of court his day of 24.06.2026

By Order of the Court: Shirasthedar
Senior civil judge and JMFC court at malur
From: **K.Narayanappa Associates,** T.D.S Building, Near new court complex Malur Town, Malur.

[illegible]

[illegible]

PUBLIC NOTICE

The General Public is hereby notified that my client, **MR. RAVIKALYAN GUNTAKA @ Ravi Kalyan Guntaka**, Son of Late Mr. Rama Rao Guntaka, is the absolute owner of the Schedule Property described infra.

The original Sale deed dated 18-11-1988, executed by the Aircraft Employees Co-Operative Society Limited (AECS) in favour of Sri. F Johnson Pereira, in respect of Site No.1393, registered as document No. 10175/1988-89, in Book-I, Volume No.3001, at pages 177 to 178, in the office of the Sub Registrar, Bengaluru, and Sale Deed dated 02-11-1995, executed by Sri. F Johnsen Pereira, in favour of Sri. V Manjunatha, in respect of Site No.1393, which is registered as document No.7848/1995-96, in Book-I, Volume No. 1219, at pages 112 to 117, in the office of the Sub Registrar, Krishnarajapura. In this connection, a police complaint has been lodged on 26.06.2026, vide Report No.2275655/2026, with the Police Station, Bangalore.

Any person finds the document may handover the same to the undersigned within 7 days from this day. If the said document is misused by anybody, it shall not be binding on my client, and they shall be doing so at their own costs and risks.

SCHEDULE PROPERTY
All that piece and parcel of the property bearing No. 1393 (bearing BBMP A-Khata No. 1370/1393 dated 27/10/2016), measuring East to West: 40 Feet North to South: 30 Feet, together with the residential house constructed thereon, old PID No. 1249, layout formed in Sy. Nos. 115/1, 118 to 121, 122/1, 122/2, 124/1, 124/3, 125, 131/1, 131/3 of Kundalahalli, Sy. Nos. 39 to 43 of Chinnappanahalli, K.R. Puram Hobli and Sy. Nos. 8 and 73 of Tubarahalli, Varthur Hobli, Bengaluru South Taluk, Bengaluru District, formed by the Aircraft Employees Cooperative Society Ltd., approved by the BDA, Bengaluru, situated in AECS Layout, Bengaluru and bounded on the: East by: Road, West by : Site No. 1386, North by : Site No. 1392, South by : Site No. 1394

S.M. BIRADAR, Advocate
No.83, 2nd floor, Sunkalpet Main Road, Cubbonpet, Bengaluru-560002.
Mobile No. 9980943477

IN THE COURT OF THE DEPUTY DIRECTOR OF LAND RECORDS AT KOLAR.
R. A. No.315/2025

Appellant: Smt. Sarojamma & others
V/S
Respondents: The Assistant Director of Land Records
And others

SUMMONS TO THE Respondents NO. 5(a) and 10
1. Sri. **Venkateshappa** S/o Sonappa, Aged about 65 years, Nagadenahalli Village, Masti Hobli, Malur Taluk
2. Sri. **M. R. Shivanandhan** S/o B K Ramashetty Aged About 75 years, R/at No:300, Dinahalli road, Masthi Village and Hobli, Malur Taluk.

Whereas the Appellant have instituted a suit against you and others Respondents for the relief of set-aside the podi on dated 15/05/2024 in 11 E application No. 19091222818237, podi on dated 21/04/2025 in application no. 19090125568098, and in spite of notice of proper steps taken, the summons sent by this Hon'ble court were returned as unserved. Hence you are hereby directed to appear before this Hon'ble court on 23/07/2026 at 03-00 pm, in person or through an advocate to answer the queries. If you fail to appear on the said date, will be passed. This is given under my hand and seal of court on the 24.06.2026

SCHEDULE
All the piece and parcel of the Agricultural Land bearing podi on dated 15/05/2024 in 11E application No. 19091222818237, podi on dated 21/04/2025 in application no.19090125568098, in respect of old Sy.No.52/1 after podi New Sy. No. 52/1, 52/3, 52/4, 52/5 and 52/6 Measuring 40 acres 23 guntes, including 5 acer 'A' Karab 11 guntas 'B' karab of Krushnapura Village, Masti Hobli, Malur Taluk, Kolar District.

By order of the Court: Deputy Director (Land records) Kolar District.
Advocate for Appellant: S.V. Ashwath Kumar Advocate S.T.Narayanappa Building, Behind Spoorthy Hospital, Maruthi Extension, Malur- 563130

BEFORE THE MOTOR ACCIDENT CLAIMS TRIBUNAL AT BENGALURU
E.C.A. No. 4 of 2026

BETWEEN : Mrs. Bhagya M and others : **Petitioners**
AND : Mr. Nagendra Babu K S and another : **Respondents**

Notice to Respondent No.1
Mr. Nagendra Babu K S., S/o Siddaraju, R/at No.24, Dr Darabendre Road, Neelagiri, Thopu Sunkadakatte, Bengaluru-560091 (Owner of the Auto bearing Reg. No.KA-02-AD-7660)

Whereas the petitioner above named have filed a petition against you seeking compensation of Rs.24,00,000/- for the death of Mrs. Siddaraju., in Road Traffic Accident on 02-12-2025 at about 09-30 a.m. under Thalaghattapura Metro Station, Thalaghattapura to Banashakari Kanakapura road, Bangalore City, Bengaluru, involving your Auto bearing No. KA-02-AD-7660, owned by you. You are hereby summoned to appear before this court in person or by a pleader on **20/07/26 at 11.00 A.M.** to answer the same, failing which the petition will be disposed off ex-parte.
Given under my hand and seal of this court this 19th day of June 2026.

By Order of the Court
Sd/-Assistant Registrar
Court of Small Causes, Bangalore
Advocate for Petitioner Shankar A.C.
SMM Law Associates
No.40, "S" 2nd Main, 1st Stage, 2nd Phase, Chandra Layout, Bangalore -560 040

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ ಅವರಲ್ಲಿ ಪ್ರತಿಪಾದಿಸಲಾದ ವಸ್ತು, ವಿಷಯ ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತದೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

PUBLIC NOTICE

This is to inform the general public that our Client **Mrs. FARZANA DURRANI**, is intending to Jointly Develop the property as mentioned in the Schedule hereunder along with his Developer Mr. SIRAJAHMED.
If anybody having any objections, claim, interest, dispute for the above joint development, he/she may contact the undersigned with the documentary proof substantiating his/her/their objections/claims/details of disputes within Seven (7) days from the date of this publication, failing which, my client will proceed with the Joint Development project with the above Developers as if there are no third party claims/ objections/ disputes in respect of the Schedule Property and thereafter no claims/ objections/ disputes will be entertained.

SCHEDULE PROPERTY
All that piece and parcel of the property bearing new municipal No.13, (Old No. 13 and 13/1), vide bearing BBMP PID No 3534275546, situated at 4th Main, Dinnur, Bengaluru-560032 presently under the jurisdiction of Bangalore North City Corporation, WARD No.33 measuring East to West-55 feet and North to South- 34 Feet, totally measuring 1870 Sq. Feet (121.3 Sq. Mtrs) and bounded on the
East By : Road.
West By : Site No. 38.
North By : Private Property.
South By : 4th Main Road.

Adv. N. Praveen Kumar,
#12, Block I, Diamond District Apartments, Old Airport Road, Kodihalli, Bangalore - 560008.
Ph No. 9964609678.
Praveen91671@gmail.com

CHANGE OF NAME

I, Omkara Murthy A.B. S/o. Late Basavalingappa aged about 67 years, Residing at Vidhya Nagara, South Extension C.N.Halli Town, Tumkur District Karnataka State have changed my Daughter's name from
SUSMA to SUSHMITHA.A.O
vide affidavit dated 27/06/2026, sworn before Sr. Civil Judge and JMFC C.N. Halli

IN THE COURT OF THE FIFTH ADDITIONAL DISTRICT AND SESSIONS JUDGE AT TIPTUR.
P & S.C.No:10027/2026.

Petitioner: Sunitha w/o Siddaramaiah, aged about 45 years, R/O Bandihalli, Kasaba Hobli, Tiptur Taluk, Tumkur District.
V/S
Respondents: Nil

PAPER PUBLICATION
Whereas, the above named petitioners have filed a petition Under section 276 of Indian Succession Act before the Hon'ble Fifth Additional District and Sessions Judge, Tiptur seeking for grant of Probate in respect of the Notarised Will dated 27-03-2026 executed by the deceased S.G.Siddalinga Murthy in favour of the petitioner in respect of the schedule properties. In this regard, it is hereby notified that whoever is interested in this matter may come and join the case as respondents and appear in person or through an Advocate duly instructed, before the Hon'ble 5th Additional District & Sessions Judge Court, Tiptur on 30.07.2026, at 11:00 a.m. and in default, the matter will be heard and disposed off as Exparte.

SCHEDULE:-
1. All part and parcel of the dry cum garden land bearing Sy.no. 34/8 measuring 3 acres and 30 guntas, situated at Soralamavu village, Handanakere Hobli, Chikkanayakanahalli Taluk, Tumkur District, bounded by- East: Properties of S.N.Shivanna, S.N.Shankaraiah and Siddaiah. West- Property of S.M.Kumaraswamy. North- Property of S.M.Kumaraswamy. South- Property of Sanjeevaiah & Shivanna.
2. All part and parcel of the Land bearing Sy.no. 164/24 measuring 08 guntas, situated at Soralamavu village, Handanakere Hobli, Chikkanayakanahalli Taluk, Tumkur District, bounded by -East: Property of S.N.Shivanna. West: Property of S.M.Kumaraswamy. North: Property of Siddalinga Murthy. South: Property of Sanjeevaiah & Lakkamma.
Given under my hand and the seal of the Court this 17th day of June - 2026.

BY ORDER OF THE COURT.
Sherastedar Additional District and Sessions Court at TIPTUR
B.SATISH, Advocate For Petitioner.

IN THE COURT OF THE FIFTH ADDITIONAL DISTRICT AND SESSIONS JUDGE AT TIPTUR.
P & S.C.No:10028/2026.

Petitioners: 1. Chandrappa.B.G s/o Late Gurupadappa, aged about 58 years. **2. B.G.Ramesh** s/o Late Gurupadappa, aged about 51 years. (Both are R/O Bairapura, Kuppalu post, Kibbanahalli Hobli, Tiptur Taluk, Tumkur District.)
V/S
Respondents: Nil

PAPER PUBLICATION
Whereas, the above named petitioners have filed a petition Under section 276 of Indian Succession Act before the Hon'ble Fifth Additional District and Sessions Judge, Tiptur seeking for grant of Probate in respect of the Registered Will dated 10-04-2006 executed by the deceased Gurupadappa in favour of the petitioners in respect of the schedule properties. In this regard, it is hereby notified that whoever is interested in this matter may come and join the case as respondents and appear in person or through an Advocate duly instructed, before the Hon'ble 5th Additional District & Sessions Judge Court, Tiptur on 30.07.2026 at 11:00 a.m. and in default, the matter will be heard and disposed off as Exparte.

A-SCHEDULE:-
1. All part and parcel of Land bearing Sy.no.22 measuring 0-24 guntas out of 38 guntas, situated at Bairapura village, Kibbanahalli Hobli, Tiptur Taluk, bounded by: East-Shankarappa's property. West-Chandrappa's Property. North-Shyamachari's Property. South-Revanasiddaiah's property.

B-SCHEDULE:-
2. All part and parcel of Land bearing Sy.no.22 measuring 0-14 guntas out of 38 guntas, situated at Bairapura village, Kibbanahalli Hobli, Tiptur Taluk, bounded by East- Shankarappa's property. West-Ramesh's Property. North- Revanasiddaiah's property. South- Basavalingappa's property.
Given under my hand and the seal of the Court this 17th day of June - 2026.

BY ORDER OF THE COURT.
Sherastedar Additional District and Sessions Court at TIPTUR
B.SATISH, Advocate For Petitioner.

BEFORE THE MOTOR ACCIDENT CLAIMS TRIBUNAL AT BENGALURU (SCCH-16)
M.V.C. No. 8028 of 2025

BETWEEN : Mr. Nayana and another : **Petitioners**
AND : Sri. Vishnu Enterprises and another : **Respondents**

Notice to Respondent No.1
Sri. Vishnu Enterprises, R/at No. 324/2, Gangon danahalli, Laxmipura Post, Dasanapura Hobli, Bengaluru 562 162 (Owner of the Lorry bearing Reg. No.KA-52-B-4333)

Whereas the petitioner above named have filed a petition against you seeking compensation of Rs.31,00,000/- for the death of Mr. Arun Kumar D S., in Road Traffic Accident on 26-09-2025 at about 10-00 p.m. near Chikkabidarakallu, jindal, under pass, Bengaluru, involving your Canter bearing Reg. No. KA-52-B-4333, owned by you. You are hereby summoned to appear before this court in person or by a pleader on **23/07/2026 at 11.00 A.M.** to answer the same, failing which the petition will be disposed off ex-parte.
Given under my hand and seal of this court this 19th day of June 2026.

By Order of the Court
Sd/-Assistant Registrar
Court of Small Causes, Bangalore
Advocate for Petitioner Shankar A. C.
SMM Law Associates
No.40, "S" 2nd Main, 1st Stage, 2nd Phase, Chandra Layout, Bangalore -560 040

BEFORE THE MOTOR ACCIDENT CLAIMS TRIBUNAL AT BENGALURU (SCCH-07)
M. V. C. No. 7169 of 2025

BETWEEN : Smt. Jayamma : **Petitioners**
AND : Mr. Sharath K C and another : **Respondents**

Notice to Respondent No.1
Mr. Sharath K C S/o Chaluvaraju R/at, # Kojagalu, Kanakapura, Kanakapura -562 117 (Owner of the two wheeler bearing No. KA-05-LN-5136)

Whereas the petitioner above named have filed a petition against you seeking compensation of Rs.15,00,000/- for the injuries suffered by her in Road Traffic Accident on 22-06-2025 at about 03-30 P.M. on Near Chiluru to jakkasandra Village road, infront of Nagaraju house Chiluru Village, Ramanagara involving your two wheeler bearing No.KA-05-LN-5136, owned by you. You are hereby summoned to appear before this court in person or by a pleader on **29/07/2026 at 11.00 A.M.** to answer the same, failing which the petition will be disposed off exparte.
Given under my hand and seal of this court this 18th day of June 2026.

By Order of the Court
Sd/-Assistant Registrar
Court of Small Causes, Bangalore
Advocate for Petitioner Shankar A. C.
SMM Law Associates
No.40, "S" 2nd Main, 1st Stage, 2nd Phase, Chandra Layout, Bangalore -560 040

IN THE COURT OF THE PRINCIPAL CIVIL JUDGE AND J.M.F.C. AT CHIKKABALLAPUR
MISC. NO. 26 /2017 IN F.D.P. NO.13 OF 2011

BETWEEN: SMT.POORNIMA, D/o. Late. Ramaswamappa, Aged about 25 Years, Residing at:- Marakubagilu, Devanahalli Town, Bangalore Rural District ..... **PETITIONER**
AND: SRI. MUNIBALAPPA & OTHERS, (Since dead by his Lr's) ..... **RESPONDANTS**

SUMMONS TO RESPONDENT NO.1(A).
To, **SMT. KRISHNAMMA,** D/o. Late. Munibalappa, W/o. Jayachandra, Aged about 25 years, Residing at: Yalavahalli Village, DoddaMarali Post, Nandi Hobli, Chikkaballapur Taluk & District.

Whereas the petitioner has preferred the above a miscellaneous petition against you for the relief of set aside the order passed by the principal civil judge and J.M.F.C. at Chikkaballapur of dismissal for default in F.D.P No.13/2011 dated 21-07-2017 and restore the above said F.D.P proceedings. But you are the respondent No. 1(A) to evading to receive the notice issued by this Hon'ble court, You are hereby summoned to appear in the court in person or by a pleader duly instructed and able to material questions relating to the petition on **14-07-2026** at 11:00 A.M. to answer the same, failing which the above petition will be as determined ex-parte in your absence.
Given under my hand and seal of the Court on 25-06-2026 at Chikkaballapur.
By order of the court, Chief Ministerial Officer, PRL Civil Judge and JMFC Court, Chikkaballapura.

M. RAJANNA, Advocate
No. 1528,13th "B" Cross, Kalyana Nagar, T.Dasarahalli, Bangalore 560057.
Mob: 9845799737

IN THE COURT OF ADDL. DISTRICT AND SESSION JUDGE-FTCS-III BANGALORE RURAL DISTRICT AT BANGALORE
R.A. No. 107/2024

BETWEEN : SRI. HANUMANTHARAJU ...APPELLANT
AND : SRI. NAGARAJU AND OTHERS ...RESPONDENTS

NOTICE TO RESPONDENT NO.5 AND LRS OF RESPONDENT NO.4 (A) AND (B) THROUGH PAPER PUBLICATION
R-4(a) SMT. ANJALI @ ANJU, W/o. Late. Ravikumar, Aged about 35 years.
R-4(b) MASTER. VARUN, S/o. Late. Ravikumar, Aged about 13 years, Respondent No. R-4(b) since minor Rep. by his mother Smt. Anjali @ Anju, Both are resident at: Jakkasandra Village, Kasaba Hobli, Nelamangala Taluk, Bangalore Rural District-562123.
R.5 SMT. GEETHA, D/o. Late. Mallaiah and Akkayamma, Aged about 25 years, Residing at: Jakkasandra Village, Kasaba Hobli, Nelamangala Taluk, Bangalore Rural Dist-562123.

Whereas the appellant has instituted the above appeal against you to set aside the judgment and decree passed in O.S. 147/2016 dated 30.03.2024 by IInd Addl. Senior Civil Judge and JMFC at Nelamangala. You are hereby summoned to appear in this court in person or by a pleader duly instructed **on the 1st day July 2026 at 11.00 a.m.** to answer the same, failing which the appeal will be disposed of Ex-Parte.
Given under my hand and the seal of the Court, on this 20th day June 2026.

By Order of the Court, Chief Administrative Officer, District & Sessions Court, Bangalore Rural Dist., Bangalore.
Advocate for Appellant :
K. GUNDE GOWDA, Advocate
98/1A, Bathilingappa Complex, Moodalapaya Circle, Nagarabhavi Main Road, Bangalore - 560 072.

PUBLIC NOTICE

BE IT KNOWN TO ALL that our client(s) intend(s) to purchase the below-mentioned Schedule Property from - **(1) Smt. Venkatamma, (2) Sri. Ravi, (3) Sri. Krishnamurthy,** and **(4) Sri. Anand,** being the wife and sons of **Late Sri. Gangappa** respectively, who claim to be the absolute owners of the same, having derived title thereto from **Smt. Bhagyalaxmi Late D/o. Sri. Gangappa under a Release Deed dated 05-07-2017** which was registered as **Document No.TVR-1-01301-2017-18 of Book-I and stored in CD No.TVRD237** in the **Office of the Sub-Registrar, Jayanagar (Tavarekere), Bangalore.**

Any person(s) / institution(s) objecting to the proposed sale or asserting any manner of lawful / tenable right, title, interest or share over the said property or part thereof, is / are required to lodge their objections/claims preferably with photo-copies of documents based on which they object to the said sale or stake their claim, only by registered post with acknowledgement due, so as to reach at the below-mentioned address within **15 (fifteen)** days from the date of this publication, failing which our client(s) shall proceed to purchase the said properties as if there are no claims of any nature thereon, and all claims even if existing, shall be deemed to have been waived off / abandoned. Any objections/claims received after the said period, or personal representation(s) or communication by any other mode shall not be entertained / considered under any circumstances, and shall not be binding on our client(s).

SCHEDULE PROPERTY
ALL THAT PIECE AND PARCEL of the lands to the extent of **2 Acres & 15 Guntas** in **Sy. No.8 of Kolur Village, Tavarakere Hobli, Bangalore South Taluk** which is bounded on the:
EAST by : Property belonging to Sri. Ramaiah;
WEST by : Government Road;
NORTH by : Property belonging to Smt. Gangamma;
SOUTH by : Property belonging to Sri. Marappa.

ABHAY KUMAR P. JAIN & V. RAMKUMAR, Advocates
LexJuris, No.202, PANCHARATHNA RACE-VIEW APARTMENTS No.15/1, 6th Cross, Gandhinagar, BANGALORE- 560 009.

ಧಾರ್ಮಿಕ ಕಾರ್ಯಕ್ರಮಗಳ ಆಗರ ಕಾರ್ನರ್ ಫೆಸ್ಟ್

• **ಬೆಂಗಳೂರು:** ನಗರದ ಕತ್ರಿಗುಪ್ಪೆ ರಸ್ತೆಯ ವಿದ್ಯಾಪೀಠ ವೃತ್ತದ ಬಳಿಯ ಗಜೇಂದ್ರ ವಿಲಾಸ್ ಹೋಟೆಲ್‌ನಲ್ಲಿ ಶನಿವಾರ ಆರಂಭವಾದ ವಿದ್ಯಾಪೀಠ ಕಾರ್ನರ್ ಫೆಸ್ಟ್-2026 ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳ ಸಂಯೋಜನೆಯಾಗಿ ಸಾರ್ವಜನಿಕರ ಗಮನ ಸೆಳೆಯಿತು. ಎರಡು ದಿನಗಳ ಉತ್ಸವದ ಮೊದಲ ದಿನ ವಿವಿಧ ಕಾರ್ಯಕ್ರಮಗಳಿಗೆ ನೂರಾರು ಜನ ಭಾಗವಹಿಸಿ ಯಶಸ್ವಿಗೊಳಿಸಿದರು.

ಉತ್ಸವವನ್ನು ಬಸವನಗುಡಿ ಶಾಸಕ ಎಲ್.ಎ.ರವಿಸುಬ್ರಹ್ಮಣ್ಯ ಉದ್ಘಾಟಿಸಿದರು. ಬಳಿಕ ಸಾಮೂಹಿಕ ಲಲಿತಾ ಸಹಸ್ರನಾಮ ಪಾರಾಯಣ, ಭಗವದ್ಗೀತೆ ಪಾರಾಯಣ, ಶ್ರೀನಿವಾಸ ಕಲ್ಯಾಣ, ಭಜನಾ ಕಾರ್ಯಕ್ರಮ ಸೇರಿದಂತೆ ಹಲವು ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ವಧು-ವರರ ಪರಿಚಯ ಸಮ್ಮೇಳನವೂ ಆಯೋಜನೆಯಾಗಿದ್ದು, ಹಿರಿಯ ಚಲನಚಿತ್ರ ನಟ ಶಂಕರ್ ಭಟ್ ಉದ್ಘಾಟಿಸಿದರು.

ಉತ್ಸವದಲ್ಲಿ ಮಹಿಳಾ ಉದ್ಯಮಿಗಳು ತಮ್ಮ ಕೈಯಿಂದ ತಯಾರಿಸಿದ ಹಾಗೂ ಗೃಹ ನಿರ್ಮಿತ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮಳಿಗೆಗಳನ್ನು ಸ್ಥಾಪಿಸಿದ್ದು, ಸಾರ್ವಜನಿಕರಿಂದ ಉತ್ತಮ ಸ್ಪಂದನೆ ದೊರೆಯಿತು. ನಗರದ ಮಿಷನ್ ರಸ್ತೆಯ ಎನ್‌ಯು ಆಸ್ಪತ್ರೆಯ ಸಹಯೋಗದಲ್ಲಿ ಉಚಿತ ಮೂಲ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿತ್ತು. ಶಿಬಿರವನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಹಿರಿಯ ಉಪಾಧ್ಯಕ್ಷ ಕೆ.ಎನ್. ಛಾಯಾಪತಿ ಉದ್ಘಾಟಿಸಿದರು. ಶಿಬಿರದಲ್ಲಿ ಹೆಚ್ಚಿನ ಸಂಖ್ಯೆಯ ನಾಗರಿಕರು ಆರೋಗ್ಯ ತಪಾಸಣೆ ಮಾಡಿಸಿಕೊಂಡರು.



- ಉತ್ಸವ ಉದ್ಘಾಟಿಸಿದ ಶಾಸಕ ರವಿ ಸುಬ್ರಹ್ಮಣ್ಯ
- ಗೃಹ ಉಪಯೋಗಿ ಉತ್ಪನ್ನಗಳ ಪ್ರದರ್ಶನ, ಮಾರಾಟ ಮೇಳ

ಸಂಗೀತ ಕಾರ್ಯಕ್ರಮ ಇಂದು

ಈ ಉತ್ಸವವನ್ನು ಕರ್ನಾಟಕ ರಾಜ್ಯ ಡಿಜಿಟಲ್ ನ್ಯೂಸ್ ಮೀಡಿಯಾ ಅಸೋಸಿಯೇಷನ್ ಅಧ್ಯಕ್ಷ ಹನುಮೇಶ್ ಕೆ. ಯಾವಗಲ್ ಅವರ ನೇತೃತ್ವದಲ್ಲಿ ಆಯೋಜಿಸಲಾಗಿದೆ. ಉತ್ಸವದ ಮೊದಲ ದಿನ ಧಾರ್ಮಿಕ, ಆರೋಗ್ಯ ಹಾಗೂ ಸಾಮಾಜಿಕ ಚಟುವಟಿಕೆಗಳು ಜನರನ್ನು ಆಕರ್ಷಿಸಿದ್ದು, ಜೂ.28 ರಂದು ಸಂಗೀತ ಕಾರ್ಯಕ್ರಮ ಸೇರಿದಂತೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ. ಸಂಜೆ 6 ಗಂಟೆಗೆ ಶ್ರುತಿ ಎಸ್. ಮತ್ತು ಶ್ವೇತ ಎಸ್. ಅವರಿಂದ ದೇವರನಾಮ ಗಾಯನದ ಮೂಲಕ ಸಮಾರೋಪ ಸಮಾರಂಭ ನಡೆಯಲಿದೆ.

ಕಥಾಸಂಕಲನ ಬಿಡುಗಡೆ



ಕಥೆಗಾರ್ತಿ ಸಿರಿ ಮೂರ್ತಿ ಕಾಸರವಳ್ಳಿ ಅವರ ಮಂಟಪ ಮತ್ತು ಕಾಶಿ ಗಿಂಡಿ ಕಥಾಸಂಕಲನವನ್ನು ಹಿರಿಯ ಪತ್ರಕರ್ತ ದು.ಗು.ಲಕ್ಷ್ಮಣ ಅವರು ಶನಿವಾರ ಬಿಡುಗಡೆ ಮಾಡಿದರು. ಈ ವೇಳೆ ಕಾದಂಬರಿಕಾರ ಗಜಾನನ ಶರ್ಮಾ, ಕೊರಗಿ ಶಂಕರನಾರಾಯಣ ಉಪಾಧ್ಯಾಯ, ಸಾಹಿತಿಗಳಾದ ಪ್ರೇಮಾ ಭಟ್, ಗಣೇಶಯ್ಯ, ಪ್ರಭಾಕರ ಕಾರಂತ, ಹಿರಿಯ ಪತ್ರಕರ್ತ ಜಯರಾಮ ಅಡಿಗ, ಲೇಖಕಿ ನೇಮಿಚಂದ್ರ ಇದ್ದರು.

ಕಿರುಸುದ್ದಿ

ಬಿಲ್ ಕಲೆಕ್ಟರ್‌ಗಳ ಪದೋನ್ನತಿ ಪರಿಗಣನೆಯಲ್ಲಿ ತಾರತಮ್ಯ

• **ಬೆಂಗಳೂರು:** ಬಿಲ್ ಕಲೆಕ್ಟರ್‌ಗಳು ಸರ್ಕಾರದ ಆಧಾರಸ್ತಂಭ, ಆದರೆ ಸರ್ಕಾರದ ಕೆಲ ಆದೇಶಗಳು ಅವರುಗಳಿಗೆ ಮಾರಕವಾಗಿವೆ. ಜೇಷ್ಠತೆ ಮತ್ತು ಪದೋನ್ನತಿಯ ಪರಿಗಣನೆಯಲ್ಲಿ ಸಾಕಷ್ಟು ತಾರತಮ್ಯವನ್ನು ಎದುರಿಸುತ್ತಿದ್ದಾರೆ ಎಂದು ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ಬಿಲ್ ಕಲೆಕ್ಟರ್ ನೌಕರರ ಸಂಘದ ಅಧ್ಯಕ್ಷ ನಾರಾಯಣ್ ಬೇಸರ ವ್ಯಕ್ತಪಡಿಸಿದರು. ಸಚಿವಾಲಯ ಕ್ಲಬ್ ಸಭಾಂಗಣದಲ್ಲಿ ಗ್ರಾಮ ಪಂಚಾಯಿತಿ ಬಿಲ್ ಕಲೆಕ್ಟರ್‌ಗಳ ಸಮಾಲೋಚನಾ ಸಭೆಯ ನಂತರ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ನಮಗೆ ವೇತನ ಶ್ರೇಣಿಯ ಸಾಯಿಯಾದ ವ್ಯವಸ್ಥೆ ಈವರೆಗೆ ನಿಗದಿಯಾಗಿಲ್ಲ, ಸರ್ಕಾರದ ಅಂಗ ಸಂಸ್ಥೆಯ ಅಡಿಯಲ್ಲಿ ಪೂರ್ಣಾವಧಿ ನೌಕರರಾಗಿ ಕೆಲಸ ನಿರ್ವಹಿಸುತ್ತಿದ್ದರೂ ಸಹ ಕಾರ್ಮಿಕ ಇಲಾಖೆಯ ವೇತನ ಶ್ರೇಣಿಯ ಅನ್ವಯ ವೇತನವನ್ನು ಪಾವತಿ ಮಾಡಲಾಗುತ್ತಿದೆ. ಈ ತಾರತಮ್ಯವನ್ನು ಒಪ್ಪಲು ಸಾಧ್ಯವಿಲ್ಲ ಎಂದು ತಿಳಿಸಿದರು. ಪ್ರಧಾನ ಕಾರ್ಯದರ್ಶಿ ಮಧು ದೇಶಿ ಮಾತನಾಡಿ, ಸರ್ಕಾರ ನಮ್ಮೆಲ್ಲರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಬೇಕೆಂಬ ನಿಟ್ಟಿನಲ್ಲಿ ನಿರಂತರ ಹೋರಾಟವನ್ನು ನಡೆಸುತ್ತಿದ್ದು, ಅದಕ್ಕೆ ಸಭೆಯಲ್ಲಿ ಸಂಪೂರ್ಣ ಬೆಂಬಲ ಸೂಚಿಸಲಾಗಿದೆ. ಎಂದು ಹೇಳಿದರು. ಈ ವೇಳೆ ಬಿಲ್ ಕಲೆಕ್ಟರ್‌ಗಳ ಸಂಘದ ಗೌರವಾಧ್ಯಕ್ಷ ಗೋವಿಂದಪ್ಪ, ಉಪಾಧ್ಯಕ್ಷ ರವಿಕುಮಾರ್ ಕೆ., ರಂಗಸ್ವಾಮಿ, ಖಜಾಂಚಿ ಬಸವರಾಜೇಗೌಡ, ಸಹ ಕಾರ್ಯದರ್ಶಿ ಮಲ್ಲೇಶ್ ಪೂಜಾರ್, ಪಿಡಿಒ ಶ್ರೇಯಾಭಿವೃದ್ಧಿ ಸಂಘದ ಅಧ್ಯಕ್ಷ ದಿಲೀಪ್ ಸೇರಿದಂತೆ ಹಲವು ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸಾಮರ ಶಾಲೆ ವಿರುದ್ಧ ಕಠಿಣ ಕ್ರಮ

• **ಬೆಂಗಳೂರು:** 400ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ವರ್ಗಾವಣೆ ಪತ್ರ (ಟಿಸಿ) ನೀಡದೆ, ಹೈಕೋರ್ಟ್ ಹಾಗೂ ಸರ್ಕಾರದ ಆದೇಶಗಳನ್ನು ಉಲ್ಲಂಘಿಸಿರುವ ಧಣಿಸಂದ್ರದ ಸಾಮರ ಇಂಟರ್‌ನ್ಯಾಷನಲ್ ಇಸ್ಲಾಮಿಕ್ ಸ್ಕೂಲ್ ವಿರುದ್ಧ, ಶಾಲಾ ಶಿಕ್ಷಣ ಇಲಾಖೆ ಕಠಿಣ ಕ್ರಮ ಕೈಗೊಂಡಿದೆ. ಈ ಸಂಬಂಧ ಬೆಂಗಳೂರು ದಕ್ಷಿಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ರಾಘವೇಂದ್ರ ಸ್ವಾಮಿ ಅವರು ಕೊತ್ತನೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಶಾಲೆಯ ಮುಖ್ಯ ಆಡಳಿತಾಧಿಕಾರಿ ಖಾಲಿದ್ ಮುಷ್ತಾಕ್ ಅವರು ಇಲಾಖೆಯ ಆದೇಶಗಳನ್ನು ಪಾಲಿಸದೇ ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯಕ್ಕೆ ಧಕ್ಕೆ ಉಂಟುಮಾಡಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಶಾಲೆಯ ಮಾನ್ಯತೆ ರದ್ದುಗೊಂಡ ಹಿನ್ನೆಲೆಯಲ್ಲಿ 350 ವಿದ್ಯಾರ್ಥಿಗಳಿಗೆ ಮಾತ್ರ ಟಿಸಿ ವಿತರಿಸಲಾಗಿದ್ದು, ಉಳಿದ 400ಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಇನ್ನೂ ವರ್ಗಾವಣೆ ಪತ್ರ ನೀಡಲಾಗಿಲ್ಲ ಎಂದು ತಿಳಿಸಲಾಗಿದೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ನಿರ್ದೇಶಕರು ಏ.10 ಹಾಗೂ ಮೇ.15 ಮತ್ತು 30 ರಂದು ಪೋಷಕರ ಸಭೆ ನಡೆಸಿ, ಶಾಲೆಯ ಮಾನ್ಯತೆ ಮತ್ತು ನೋಂದಣಿ ರದ್ದುಗೊಂಡಿರುವ ಬಗ್ಗೆ ಮಾಹಿತಿ ನೀಡಿದ್ದರು. ಜತೆಗೆ, ಎಲ್ಲಾ ಶೈಕ್ಷಣಿಕ ದಾಖಲೆಗಳನ್ನು ಸರ್ಕಾರಿ ಶಾಲೆಗೆ ಹಸ್ತಾಂತರಿಸುವಂತೆ ಸೂಚನೆ ನೀಡಿದ್ದರೂ, ಆಡಳಿತ ಮಂಡಳಿ ಅದನ್ನು ಪಾಲಿಸಿಲ್ಲ ಎಂದು ತಿಳಿದುಬಂದಿದೆ. ಇದರ ನಡುವೆಯೇ, ನಕಲಿ ಶಿಕ್ಷಣ ಸಂಸ್ಥೆಯ ಹೆಸರಿನಲ್ಲಿ 2026-27ನೇ ಶೈಕ್ಷಣಿಕ ಸಾಲಿಗೆ ಜಾಮೀಯ ಮಹಮ್ಮದೀಯ ಮಂಸೂರ್ ಹೆಸರಿನಲ್ಲಿ ರಾಜ್ಯ ಪಠ್ಯಕ್ರಮದ ಶಾಲೆಯಾಗಿ ಜಾಹೀರಾತು ನೀಡಿ ದಾಖಲಾತಿ ಪ್ರಕ್ರಿಯೆ ಆರಂಭಿಸಿರುವುದು ಬೆಳಕಿಗೆ ಬಂದಿದೆ. ಶಾಲಾ ಆಡಳಿತ ಮಂಡಳಿಯವರು ಸಂಪರ್ಕಕ್ಕೆ ಸಿಗದೇ ಇರುವುದರಿಂದ ಇಲಾಖಾ ಆದೇಶಗಳ ಅನುಷ್ಠಾನಕ್ಕೆ ಅಡಚಣೆ ಉಂಟಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೆಂಪೇಗೌಡರ ದಿನಾಚರಣೆಯ ಪ್ರಯುಕ್ತ ದೇಸಿ ಜಾತಿಯ ಸಸಿ ನೆಡುವ ಕಾರ್ಯಕ್ರಮ

15 ಲಕ್ಷ ಸಸಿ ನೆಟ್ಟು ಜಿಬಿಎ ದಾಖಲೆ

• **ಬೆಂಗಳೂರು:** ನಾಡಪ್ರಭು ಕೆಂಪೇಗೌಡರ ದಿನಾಚರಣೆಯ ಪ್ರಯುಕ್ತ ಶನಿವಾರ ನಗರದ ವಿವಿಧೆಡೆ ಒಂದೇ ದಿನದಲ್ಲಿ ಸುಮಾರು 15 ಲಕ್ಷ ದೇಸಿ ಜಾತಿಯ ಸಸಿಗಳನ್ನು ನೆಡುವ ಮೂಲಕ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ಬಿಡಿಎ) ಇತಿಹಾಸ ನಿರ್ಮಿಸಿದೆ. ಇದರೊಂದಿಗೆ ಭಾರತದ ಅತಿದೊಡ್ಡ ಹಸಿರು ಅಭಿಯಾನಗಳಲ್ಲಿ ಒಂದಾಗಿ ಕರ್ನಾಟಕದ ಸುಸ್ಥಿರ ಭವಿಷ್ಯದ ಬದ್ಧತೆಯನ್ನು ಮತ್ತೊಮ್ಮೆ ಸಾಬೀತುಪಡಿಸಿದ ಮಹತ್ವದ ಹೆಜ್ಜೆಯಾಗಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಐದು ನಗರ ಪಾಲಿಕೆ, ವಿವಿಧ ಸರ್ಕಾರಿ ಇಲಾಖೆ ಹಾಗೂ ಸಾರ್ವಜನಿಕ ಸಂಘ-ಸಂಸ್ಥೆಗಳ ಸಹಭಾಗಿತ್ವದಲ್ಲಿ ಬೆಂಗಳೂರು ನಗರ ಪುನಶ್ಚೇತನ ಮಿಷನ್ 2026-30ರ ಅಂಗವಾಗಿ, ನಾಡಪ್ರಭು ಕೆಂಪೇಗೌಡರ ದಿನಾಚರಣೆಯ ಪ್ರಯುಕ್ತ 2026 ಶನಿವಾರ ನಗರದ ವಿವಿಧ ಭಾಗಗಳಲ್ಲಿ 15 ಲಕ್ಷ ಸ್ಥಳೀಯ ತಳಿ ಸಸಿಗಳನ್ನು ಸುಮಾರು 65 ಸಾವಿರಕ್ಕೂ ಹೆಚ್ಚಿನ ಮಂದಿ ನೆಡುವ ಮೂಲಕ ಗಿನ್ನಿಸ್ ದಾಖಲೆ ಬರೆದಿದ್ದಾರೆ.

ಈ ಕಾರ್ಯಕ್ರಮದ ಅಂಗವಾಗಿ ಬಿಡಿಎ ವತಿಯಿಂದ ಹಮ್ಮಿಕೊಳ್ಳಲಾದ ಕೆಂಪೇಗೌಡ ರನ್-2026 ಸಹ ಯಶಸ್ವಿಯಾಗಿ ನಡೆಯಿತು. 5 ಕಿ.ಮೀ. ಮತ್ತು 10 ಕಿ.ಮೀ. ಓಟಗಳಲ್ಲಿ ಸಾವಿರಾರು ಓಟಗಾರರು ಉತ್ಸಾಹದಿಂದ ಭಾಗವಹಿಸಿದರು. ಓಟವು ನಗರದ ಎಸ್.ಎಂ.ಕೃಷ್ಣ ರಸ್ತೆ, ಚಲ್ಲಘಟ್ಟ ಮೆಟ್ರೋ ನಿಲ್ದಾಣದಿಂದ ಆರಂಭಗೊಂಡು, ಅದೇ ಸ್ಥಳದಲ್ಲಿ ಸಮಾಪ್ತಿಗೊಂಡಿತು.

ಈ ಬೃಹತ್ ಸಸಿ ನೆಡುವ ಅಭಿಯಾನದಲ್ಲಿ ಸಾವಿರಾರು ನಾಗರಿಕರು, ವಿದ್ಯಾರ್ಥಿಗಳು, ಸರ್ಕಾರಿ ಅಧಿಕಾರಿಗಳು, ನಿವಾಸಿಗಳ ಕಲ್ಯಾಣ ಸಂಘಗಳು, ಸ್ವಯಂಸೇವಾ ಸಂಸ್ಥೆಗಳು, ಕಾರ್ಪೋರೇಟ್ ಸ್ವಯಂಸೇವಕರು ಹಾಗೂ ಪರಿಸರ ಸಂಘಟನೆಗಳು ಉತ್ಸಾಹದಿಂದ ಪಾಲ್ಗೊಂಡು ಹಸಿರು ಹಾಗೂ ಸುಸ್ಥಿರ ಬೆಂಗಳೂರಿನ ನಿರ್ಮಾಣಕ್ಕೆ ಕೈಜೋಡಿಸಿದರು. ಈ ಕಾರ್ಯಕ್ರಮವನ್ನು ಬೆಂಗಳೂರಿನ ನಾಡಪ್ರಭು ಕೆಂಪೇಗೌಡ ಬಡಾವಣೆ, ಬನಶಂಕರಿ 6ನೇ ಹಂತ, ಶಿವರಾಮ ಕಾರಂತ ಬಡಾವಣೆ, ಆಕ್ಸಿಜನ್ ಟ್ರೀ ಪಾರ್ಕ್‌ಗಳು, ಮೀಸಲು ಅರಣ್ಯಗಳು ಸೇರಿದಂತೆ ಬಿಡಿಎ ಅಭಿವೃದ್ಧಿಪಡಿಸಿರುವ ವಿವಿಧ ಹಸಿರು ಪ್ರದೇಶಗಳಲ್ಲಿ ಕೈಗೊಳ್ಳಲಾಯಿತು. ಈ ಮಹತ್ವಾಕಾಂಕ್ಷಿ ಕಾರ್ಯಕ್ರಮವು ಬೆಂಗಳೂರಿನ ಹಸಿರು ಆವರಣವನ್ನು ಗಣನೀಯವಾಗಿ ವಿಸ್ತರಿಸುವುದು, ವಾಯು ಗುಣಮಟ್ಟವನ್ನು ಸುಧಾರಿಸುವುದು, ಜೀವ ವೈವಿಧ್ಯತೆಯನ್ನು ಸಂರಕ್ಷಿಸುವುದು, ಹವಾಮಾನ ಬದಲಾವಣೆಯ ದುಷ್ಪರಿಣಾಮಗಳನ್ನು ತಗ್ಗಿಸುವುದು ಹಾಗೂ ಮುಂದಿನ ಪೀಳಿಗೆಗೆ ಆರೋಗ್ಯಕರ ಸಾರ್ವಜನಿಕ ಪರಿಸರವನ್ನು ನಿರ್ಮಿಸುವ ಉದ್ದೇಶ ಹೊಂದಿದೆ.

ಈ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಇವತ್ತು 15 ಲಕ್ಷ ದೇಸಿ ಸಸಿಗಳ ನೆಡುವ ಕಾರ್ಯಕ್ರಮವು ಕರ್ನಾಟಕದ ಸುಸ್ಥಿರ ಅಭಿವೃದ್ಧಿಯ ಪಯಣದಲ್ಲಿ ಐತಿಹಾಸಿಕ ಮೈಲಿಗಲ್ಲಾಗಿದೆ. ಬೆಂಗಳೂರು ಬೆಳೆಯುತ್ತಿರುವಂತೆ ಅದರ ಹಸಿರು ಆವರಣವನ್ನು ಸಂರಕ್ಷಿಸುವುದು ಮತ್ತು ವಿಸ್ತರಿಸುವುದು ನಮ್ಮ ಸರ್ಕಾರದ ಪ್ರಮುಖ ಆದ್ಯತೆಯಾಗಿದೆ. ನಗರಾಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಯ ನಡುವೆ ಸಮತೋಲನ ಸಾಧಿಸುವ ಸರ್ಕಾರದ ಬದ್ಧತೆಯನ್ನು ಈ ಕಾರ್ಯಕ್ರಮ ಪ್ರತಿಬಿಂಬಿಸುತ್ತದೆ. ಇಂದು ನೆಡಲಾದ ಪ್ರತಿಯೊಂದು ಸಸಿಯೂ ಶುದ್ಧ ಗಾಳಿ, ಉತ್ತಮ ಪರಿಸರ ಸಮತೋಲನ ಹಾಗೂ ಮುಂದಿನ ಪೀಳಿಗೆಗೆ ಆರೋಗ್ಯಕರ ಭವಿಷ್ಯಕ್ಕಾಗಿ ಮಾಡಿದ ಅಮೂಲ್ಯ ಹೂಡಿಕೆಯಾಗಿದೆ ಎಂದು ಹೇಳಿದರು.



ಮಾದರಿ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಬೇಕು

ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಗರಡಿಯಲ್ಲಿ ಬೆಳೆದಿರುವ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ಬೆಂಗಳೂರು ನಗರವನ್ನು ಅಭಿವೃದ್ಧಿಪಡಿಸಬೇಕು ಎಂಬ ಆಶಯದೊಂದಿಗೆ ನಾಡಪ್ರಭು ಕೆಂಪೇಗೌಡ ಮತ್ತು ಎಸ್.ಎಂ.ಕೃಷ್ಣ ಅವರು ಆದರ್ಶಗಳನ್ನು ಮೈಗೂಡಿಸಿಕೊಂಡು ರಾಜ್ಯದ ಹಿತ ಕಾಪಾಡುವ ಮೂಲಕ ಮಾದರಿ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಬೇಕು ಎಂದು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಡಾ.ಶ್ರೀನಿರ್ಮಲಾನಂದನಾಥ ಸ್ವಾಮೀಜಿ ಆಶಿಸಿದರು.

ಆರೋಗ್ಯಕರ ಪರಿಸರ ನಿರ್ಮಿಸಲು ದೃಢಸಂಕಲ್ಪ

15 ಲಕ್ಷ ವಿವಿಧ ಸಸಿಗಳನ್ನು ನೆಡುವ ಮೂಲಕ ಬೆಂಗಳೂರು ನಗರವನ್ನು ಗ್ರೀನ್ ಸಿಟಿಯಾಗಿ ಪರಿವರ್ತಿಸುವ ಮೂಲಕ ನಗರದ ಜನತೆಗೆ ಉತ್ತಮ ವಾತಾವರಣ ನಿರ್ಮಾಣ ಮಾಡುವ ಮೂಲಕ ಉತ್ತಮ ಆರೋಗ್ಯಕರ ಪರಿಸರ ನಿರ್ಮಿಸಲು ನಾವೆಲ್ಲರೂ ದೃಢಸಂಕಲ್ಪ ಮಾಡಬೇಕಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಕೆಂಪೇಗೌಡರ ಕಾರ್ಯ ಶಾಶ್ವತ: ಎಂ.ರುದ್ರೇಶ್



• **ಬೆಂಗಳೂರು:** ಅತ್ಯಾಧುನಿಕ ಮೂಲ ಸೌಕರ್ಯಗಳ ನಗರ ಎಂದು ಖ್ಯಾತಿ ಪಡೆದಿರುವ, ವಿಶ್ವವೇ ಬೆಂಗಳೂರು ಕಡೆ ಮುಖ ಮಾಡುವಂತೆ ನಗರವನ್ನು ಕಟ್ಟಿಬೆಳೆಸಿದ ನಾಡಪ್ರಭು ಕೆಂಪೇಗೌಡರು ಈ ಭೂಮಿ ಇರುವ ತನಕ ಶಾಶ್ವತ ಎಂದು ಕೆ.ಆರ್.ಐ.ಡಿ.ಎಲ್. ಮಾಜಿ ಅಧ್ಯಕ್ಷ ಎಂ.ರುದ್ರೇಶ್ ಅಭಿಪ್ರಾಯಪಟ್ಟರು.

ನಾಗದೇವನಹಳ್ಳಿಯ ಜೆ. ತಿಮ್ಮಯ್ಯ ಬಡಾವಣೆಯ ಶಂಕರ್ ನಾಗ್ ಗೆಳೆಯರ ಬಳಗದ ವತಿಯಿಂದ ಹಮ್ಮಿಕೊಂಡಿದ್ದ ಕೆಂಪೇಗೌಡರ 517 ಜಯಂತೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾಡಪ್ರಭು ಕೆಂಪೇಗೌಡರು ಮಾರೇಗೌಡನಕೆರೆ, ಕುಂಟೆ, ಪೇಟೆಗಳ ನಿರ್ಮಾಣ, ದೊಡ್ಡ ಗಣೇಶ ದೇವಸ್ಥಾನ, ಗವಿ ಗಂಗಾಧರೇಶ್ವರ, ಸೋಮೇಶ್ವರ ಹೀಗೆ ಹಲವಾರು ದೇವಸ್ಥಾನ ನಿರ್ಮಾಣ ಮಾಡಿ ಸರ್ವಧರ್ಮೀಯರು ಬದುಕು ಕಟ್ಟಿಕೊಳ್ಳಲು ಮುಂದಾಗಿದ್ದರು ಎಂದು ಬಣ್ಣಿಸಿದರು.

ಬೆಂಗಳೂರಿನಲ್ಲಿ ಯಾವುದೇ ನದಿಯ ಸಂಪರ್ಕ ಇಲ್ಲದಿದ್ದರೂ ಕೆರೆ, ಕುಂಟೆ ನಿರ್ಮಿಸಿ ಐತಿಹಾಸಿಕ ನಗರ ನಿರ್ಮಿಸಿದ ನಾಡಪ್ರಭು ಕೆಂಪೇಗೌಡರು ಎಲ್ಲ ಜಾತಿ, ಧರ್ಮದವರಿಗೂ ಅನ್ನದಾತ, ಉದ್ಯೋಗ, ಶಿಕ್ಷಣ ನೀಡಿದ ಒಬ್ಬ ಅಪಾರ ಪುರುಷ ಎಂದು ಪುರಸಭೆ ಮಾಜಿ ಉಪಾಧ್ಯಕ್ಷ ಜಿ. ಮುನಿರಾಜು ಅವರು ಬಣ್ಣಿಸಿದರು.

ಮಧ್ಯಸ್ಥಿಕೆ ಪ್ರಕ್ರಿಯೆ ಪರಿಣಾಮಕಾರಿ ವ್ಯವಸ್ಥೆ

• **ಬೆಂಗಳೂರು:** ಮಧ್ಯಸ್ಥಿಕೆ ಪ್ರಕ್ರಿಯೆಯು ಯಾವುದೇ ಪಕ್ಷಕ್ಕೂ ಬೇಸರ ಉಂಟುಮಾಡದೆ ನ್ಯಾಯ ಒದಗಿಸುವ ಪರಿಣಾಮಕಾರಿ ವ್ಯವಸ್ಥೆಯಾಗಿದ್ದು, ನ್ಯಾಯಾಂಗದಲ್ಲಿ ಇದರ ಬಳಕೆ ಇನ್ನಷ್ಟು ಹೆಚ್ಚಾಗಬೇಕು ಎಂದು ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅಭಿಪ್ರಾಯಪಟ್ಟರು.

ಬೆಂಗಳೂರು ಇಂಟರ್‌ನ್ಯಾಷನಲ್ ಮೀಡಿಯೇಷನ್, ಆರ್ಬಿಟ್ರೇಷನ್ ಮತ್ತು ಕಾನ್ಸಿಲಿಯೇಷನ್ ಸೆಂಟರ್ ಹಾಗೂ ಜೈನ್ (ಡೀಮ್ಡ್-ಟು-ಬಿ ಯೂನಿವರ್ಸಿಟಿ) ಸಹಯೋಗದಲ್ಲಿ, ಮಧ್ಯಸ್ಥಿಕೆ ಚಳವಳಿಯ ಎರಡು ದಶಕಗಳ ಸ್ಮರಣಾರ್ಥ ಆಯೋಜಿಸಿದ್ದ ರಾಷ್ಟ್ರೀಯ ಕಾನೂನು ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದ ಅವರು, ಮಧ್ಯಸ್ಥಿಕೆ ಪ್ರಕ್ರಿಯೆಯಲ್ಲಿ ಸಮರ್ಪಣೆ, ವಿಶ್ವಾಸಾರ್ಹತೆ ಹಾಗೂ ಉತ್ಕೃಷ್ಟತೆ ಅಡಕವಾಗಿದ್ದು, ಕಾನೂನು ಜಾರಿಯ ಜತೆಗೆ ಸಮಾಜದಲ್ಲಿ ಸಂವಾದ, ಸಮಾಧಾನ ಮತ್ತು ಸಾಮರಸ್ಯವನ್ನು ಬೆಳೆಸುವಲ್ಲಿ ಇದು ಪ್ರಮುಖ ಪಾತ್ರ ವಹಿಸುತ್ತದೆ ಎಂದು ಹೇಳಿದರು. ಎಲ್ಲರೂ ಒಟ್ಟಾಗಿ ಸಾಗಬೇಕು ಮತ್ತು ಒಂದೇ ಮನೋಭಾವದಿಂದ ಆಲೋಚಿಸಬೇಕು ಎಂಬ ಭಾರತೀಯ ಸಂಸ್ಕೃತಿ ಹಾಗೂ ಮೌಲ್ಯಗಳಿಗೆ ಮಧ್ಯಸ್ಥಿಕೆ ವ್ಯವಸ್ಥೆ ಪೂರಕವಾಗಿದೆ.



ನಮ್ಮ ಪ್ರಾಚೀನ ಪಂಚಾಯತ್ ವ್ಯವಸ್ಥೆಯಲ್ಲಿಯೂ ಮಧ್ಯಸ್ಥಿಕೆಗೆ ಮಹತ್ವದ ಸ್ಥಾನವಿತ್ತು. ವಿವಾದಗಳನ್ನು ಬಗೆಹರಿಸುವುದರ ಜತೆಗೆ ಪರಸ್ಪರ ಸಂಬಂಧಗಳನ್ನು ಉಳಿಸಿಕೊಳ್ಳುವ ಶಕ್ತಿಯೂ ಮಧ್ಯಸ್ಥಿಕೆಯಲ್ಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಅರವಿಂದ ಕುಮಾರ್, ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ, ಮುಂಬೈ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಮಂಜುಳಾ ಚೆಲ್ಲೂರ್, ಜೈನ್ ವಿವಿ ಕುಲಾಧಿಪತಿ ಡಾ. ಚೆನ್ರಾಜ್ ಜೈನ್ ಸೇರಿದಂತೆ ಇತರರಿದ್ದರು.



ಗೋವಿಂದರಾಜ ನಗರದ ಸಂಪಿಗೆ ಬಡಾವಣೆಯ ಬಾಳಯ್ಯ ನರ್ಸರಿ ಉದ್ಯಾನವನದಲ್ಲಿ ನಾಡಪ್ರಭು ಕೆಂಪೇಗೌಡ ಉದ್ಯಾನವನದ ನಡಿಗೆದಾರರ ಬಳಗದಿಂದ ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ಆಚರಿಸಲಾಯಿತು.

ಗ್ರಾಹಕರ ಸೆಳೆದ ಸಂತೆ

• **ಬೆಂಗಳೂರು:** ಕೃಷಿ ವಿಶ್ವವಿದ್ಯಾನಿಲಯದ ಜಿಕೆವಿಕೆ ಆವರಣದ ಗಣಪತಿ ದೇವಸ್ಥಾನದ ಹತ್ತಿರ ಈ ಬಾರಿ ವಿಭಿನ್ನ ಹಾಗೂ ವಿಶೇಷವಾದ ರೈತ ಸಂತೆಯನ್ನು ಹಮ್ಮಿಕೊಳ್ಳಲಾಗಿತ್ತು. ಆರೋಗ್ಯ, ಪೌಷ್ಟಿಕತೆ, ಮೌಲ್ಯವರ್ಧನೆ ಹಾಗೂ ಕೃಷಿ ಯಾಂತ್ರೀಕರಣಕ್ಕೆ ಹೆಚ್ಚಿನ ಒತ್ತು ನೀಡಿದ್ದ ಈ ಸಂತೆಯು ಗ್ರಾಹಕರನ್ನು ದೊಡ್ಡ ಮಟ್ಟದಲ್ಲಿ ಸೆಳೆಯುವಲ್ಲಿ ಯಶಸ್ವಿಯಾಗಿದೆ.

ರೈತ ಸಂತೆಯಲ್ಲಿ ನೈಸರ್ಗಿಕ ಬೆಲ್ಲದಿಂದ ತಯಾರಿಸಲಾಗಿದ್ದ ತಾಜಾ ಗೋಧಿ ಪಾಯಸಕ್ಕೆ ಗ್ರಾಹಕರಿಂದ ಅಭೂತಪೂರ್ವ ಬೇಡಿಕೆ ವ್ಯಕ್ತವಾಯಿತು.



ಕೆಂಪೇಗೌಡ ಜಯಂತಿ ಅಂಗವಾಗಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ವಿಧಾನಸೌಧದ ಮುಂಭಾಗದಲ್ಲಿರುವ ಕೆಂಪೇಗೌಡರ ಪ್ರತಿಮೆಗೆ ಪುಷ್ಪಾರ್ಚನೆ ಸಲ್ಲಿಸಿದರು. ಈ ವೇಳೆ ಸಚಿವ ಕೆ.ಎಚ್ ಮುನಿಯಪ್ಪ, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಸೇರಿದಂತೆ ಇನ್ನಿತರರಿದ್ದರು.

ಕೆಂಪೇಗೌಡರ ಹಾದಿಯಲ್ಲೇ ನಡೆಯೋಣ: ಡಿ.ಕೆ. ಶಿವಕುಮಾರ್

ವಿಶ್ವಮಾನವರಾಗಿ ಬೆಳೆದ ಕೆಂಪೇಗೌಡ

• **ಬೆಂಗಳೂರು:** ಕೆಂಪೇಗೌಡರು ಹುಟ್ಟಿದ್ದು ಒಕ್ಕಲಿಗನಾಗಿ ಬೆಳೆದಿದ್ದು ವಿಶ್ವಮಾನವನಾಗಿ. ಇದನ್ನು ಯಾರೂ ಸಹ ಮರೆಯಬಾರದು. ಈ ಹಾದಿಯಲ್ಲಿಯೇ ನಾವೆಲ್ಲರೂ ನಡೆಯಬೇಕು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕರೆ ನೀಡಿದರು. ಯಲಹಂಕದಲ್ಲಿ ಬೆಂಗಳೂರು ಉತ್ತರ ತಾಲ್ಲೂಕು ಒಕ್ಕಲಿಗರ ಸಮಿತಿ ಶನಿವಾರ ಆಯೋಜಿಸಿದ್ದ ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ಕೆಂಪೇಗೌಡರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಡಿ.ಕೆ.ಶಿವಕುಮಾರ್ ಅವರು ಮಾತನಾಡಿದರು. ಇಡೀ ವಿಶ್ವ ಬೆಂಗಳೂರನ್ನು ನೋಡುತ್ತಿದೆ. ಈ ನಗರ ನಿರ್ಮಾಣ ಮಾಡುವಾಗ ಇದು ಇಷ್ಟು ದೊಡ್ಡಮಟ್ಟಕ್ಕೆ ಬೆಳೆಯುತ್ತದೆ ಎನ್ನುವುದು ಅವರಿಗೆ ಗೊತ್ತಿರಲಿಲ್ಲ, ಆದರೆ ಅವರ ದೂರದೃಷ್ಟಿ ಇಲ್ಲಿ ಕೆಲಸ ಮಾಡಿದೆ ಎಂದರು.



ನಗರವು ವರ್ಟಿಕಲ್ ಬೆಳವಣಿಗೆಗೆ ಚಿಂತನೆ

ಈ ನಗರಕ್ಕೆ ಬರುವವರನ್ನು ನಾವು ತಡೆಯಲು ಸಾಧ್ಯವಿಲ್ಲ. ಅದಕ್ಕೆ ವರ್ಟಿಕಲ್ ಬೆಳವಣಿಗೆ ಬಗ್ಗೆ ನಾನು ಆಲೋಚನೆ ಮಾಡುತ್ತಿದ್ದೇನೆ. ನಗರದ ಆಸ್ತಿ ಮಾಲೀಕರ ದಾಖಲೆಗಳನ್ನು ಡಿಜಿಟಲೀಕರಣ ಮಾಡಲಾಗಿದೆ. ಇ-ಖಾತ ಮೂಲಕ ಭೂ ಗ್ಯಾರಂಟಿ ನೀಡಲಾಗಿದೆ. ಈ ನಗರಕ್ಕೆ ಬಂದು ಕಷ್ಟ ಪಟ್ಟು ಆಸ್ತಿ ಸಂಪಾದಿಸಿದ್ದಾರೆ ಅವರ ಪರವಾಗಿ ನಮ್ಮ ಸರ್ಕಾರ ನಿಂತಿದೆ. ಬಿ ಖಾತೆಯಿಂದ ಎ ಖಾತೆ ಮಾಡಿಕೊಡಲಾಗುತ್ತಿದೆ. ಕಷ್ಟಪಟ್ಟು ಆಸ್ತಿ ಸಂಪಾದಿಸಿದವರ ಪರವಾಗಿ ನಮ್ಮ ಸರ್ಕಾರವಿದೆ ಎಂದರು.

ನಗರದ ಅಭಿವೃದ್ಧಿಗೆ 1.25 ಲಕ್ಷ ಕೋಟಿ ರೂ.ಯೋಜನೆ

ನಗರದ ಅಭಿವೃದ್ಧಿಗೆ 1.25 ಲಕ್ಷ ಕೋಟಿ ರೂ.ಗಳ ಕಾರ್ಯಕ್ರಮ ರೂಪಿಸಿದ್ದೇನೆ. ಕೃಷ್ಣ ಬೈರೇಗೌಡರು ವಿಮಾನ ನಿಲ್ದಾಣ ರಸ್ತೆಯಲ್ಲೇ ಬೆಂಗಳೂರು ಉತ್ತರದ ಕಚೇರಿಯನ್ನು ಬಹಳ ವಿಭಿನ್ನವಾಗಿ ಕಟ್ಟಬೇಕು ಎಂದು ಜಾಗವನ್ನು ನಿಗದಿ ಮಾಡಿದ್ದಾರೆ. ಅದನ್ನೂ ಆದಷ್ಟು ಬೇಗನೇ ಕೈಗೊಳ್ಳಲಾಗುವುದು ಎಂದರು.

ಒಕ್ಕಲಿಗರ ಸಂಘಕ್ಕೆ ರಿಯಾಯಿತಿ ದರದಲ್ಲಿ ಕೆಎಚ್‌ಬಿ ನಿವೇಶನ

ಕೆಎಚ್‌ಬಿಯಿಂದ ಬೆಂಗಳೂರು ಉತ್ತರ ತಾಲ್ಲೂಕು ಒಕ್ಕಲಿಗರ ಸಂಘಕ್ಕೆ ನೀಡಿರುವ ನಿವೇಶನಕ್ಕೆ 3.5 ಕೋಟಿ ಕಟ್ಟಬೇಕು ಎಂದು ಹೇಳಲಾಗಿತ್ತು. ಇದರ ಬಗ್ಗೆ ಸಂಸದ ಸುಧಾಕರ್ ಅವರು, ಮಾಜಿ ಶಾಸಕರಾದ ಗಂಟೆಹಳ್ಳಿ ಕೃಷ್ಣಪ್ಪ ಅವರು ದರ ಕಡಿಮೆಗೆ ಮನವಿ ಮಾಡಿದ್ದಾರೆ. ಎಲ್ಲರ ಮನವಿಯಂತೆ ಈ ಜಾಗಕ್ಕೆ ಶೇ. 10 ರಷ್ಟು ದರ ನಿಗದಿ ಮಾಡಲಾಗುವುದು ಎಂದು ವೇದಿಕೆಯಲ್ಲೇ ಸಿಎಂ ಅವರು ರಿಯಾಯಿತಿ ಘೋಷಣೆ ಮಾಡಿದರು.



ಬರಗಾಲ ಎದುರಿಸೋಣ

ಕಳೆದ ಮೂರು ವರ್ಷಗಳಿಂದ ಉತ್ತಮವಾಗಿ ಮಳೆ ಬಂದಿತ್ತು. ಆದರೆ ಈ ವರ್ಷ ಇಡೀ ದೇಶದಲ್ಲಿ ಬರಗಾಲದ ಲಕ್ಷಣವಿದೆ. ನಾವೆಲ್ಲರೂ ಸೇರಿ ಬರಗಾಲ ಎದುರಿಸಬೇಕು. ರೈತರನ್ನು ಉಳಿಸಬೇಕು ಎಂದು ತಿಳಿಸಿದರು. ತುಂಗಭದ್ರಾ ಅಣೆಕಟ್ಟು ಉಳಿಸಲು ಮೂರು ರಾಜ್ಯದ ಮುಖ್ಯಮಂತ್ರಿಗಳು ಸೇರಿ ಕೇಂದ್ರ ಜಲಶಕ್ತಿ ಸಚಿವರ ಸಮ್ಮುಖದಲ್ಲಿ ತೀರ್ಮಾನ ಮಾಡಿದ್ದೇವೆ ಎಂದರು. ಈ ಹಿಂದೆ ಇಂದಿರಾಗಾಂಧಿ ಅವರ ನೇತೃತ್ವದಲ್ಲಿ ಕಾವೇರಿ ಕುಡಿಯುವ ನೀರಿನ ಬಗ್ಗೆ ತೀರ್ಮಾನ ಮಾಡಲಾಗಿತ್ತು. ಅದೇ ರೀತಿ ಕೇಂದ್ರ ಜಲಶಕ್ತಿ ಸಚಿವರ ನೇತೃತ್ವದಲ್ಲಿ ನಾನು, ಚಂದ್ರಬಾಬು ನಾಯ್ಡು ಹಾಗೂ ರೇವಂತ್ ರೆಡ್ಡಿ ಮೂವರು ಸೇರಿ ಒಂದು ಒಪ್ಪಂದಕ್ಕೆ ಬಂದಿದ್ದೇವೆ. ಈ ನೆಲ ಜಲಕ್ಕಾಗಿ ನಾವುಗಳೇ ಸಂಘರ್ಷ ಮಾಡಿಕೊಳ್ಳಬಾರದು ಎಂದು ತೀರ್ಮಾನಿಸಿದ್ದೇವೆ ಎಂದು ಸಿಎಂ ಡಿ.ಕೆ.ಶಿವಕುಮಾರ ತಿಳಿಸಿದರು.

ಇಂದು ನಗರದಲ್ಲಿ...

- ರಾಷ್ಟ್ರೀಯ ಪಲ್ಸ್ ಪೋಲಿಯೊ ಲಸಿಕಾ ಅಭಿಯಾನಕ್ಕೆ ಸಿಎಂ ಚಾಲನೆ
- ಸ್ಥಳ: ಮುಖ್ಯಮಂತ್ರಿಗಳ ನಿವಾಸ, ಸದಾಶಿವನಗರ
- ಬೆಳಗ್ಗೆ 8

- ಹೆಬ್ಬಾಳ ಮೇಲ್ಸೇತುವೆಯ ಪಕ್ಕದಿಂದ 3ವಳಿಯ ಜೋಡಿ ಸುರಂಗ ಮಾರ್ಗ ಕಾಮಗಾರಿಗೆ ಶಂಕುಸ್ಥಾಪನೆ
- ಸ್ಥಳ: ಮಿಲಿಟರಿ ಫಾರ್ಮ್ ಪಕ್ಕದ ಹೆಬ್ಬಾಳ ಕೆರೆ ಕೋಡಿ ಹತ್ತಿರ
- ಬೆಳಗ್ಗೆ 9

- ರಾಜ್ಯಮಟ್ಟದ ಜಾನಪದ ಸಮ್ಮೇಳನ
- ಸ್ಥಳ: ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಭಾಂಗಣ, ಶೇಷಾದ್ರಿಪುರಂ
- ಬೆಳಗ್ಗೆ 9.30

- ಸಶಸ್ತ್ರಮುಕ್ತ ಭಾರತ ಕಾರ್ಯಕ್ರಮ
- ಸ್ಥಳ: ಕಂಠೀರವ ಒಳಾಂಗಣ ಕ್ರೀಡಾಂಗಣ
- ಬೆಳಗ್ಗೆ 11

ಭಾನುವಾರದ ಪಂದ್ಯ

ಕೊಲಂಬಿಯಾ-ಪೋರ್ಚುಗಲ್ (ಬೆಳಗ್ಗೆ 5:00)
ಡಿಆರ್ ಕಾಂಗೋ-ಉಜ್ಬೇಕಿಸ್ತಾನ (ಬೆಳಗ್ಗೆ 5:00)
ಅಲ್ಜೀರಿಯಾ-ಆಸ್ಟ್ರಿಯಾ (ಬೆಳಗ್ಗೆ 7:30)
ಜೋರ್ಡಾನ್-ಅರ್ಜೆಂಟೀನಾ (ಬೆಳಗ್ಗೆ 7:30)
ದ.ಆಫ್ರಿಕಾ-ಕೆನಡಾ (ನಾಕೌಟ್) (ಮಧ್ಯರಾತ್ರಿ 12:30)

ಕಿರುಸುದ್ದಿ

ಕಿರಿಯರ ಏಷ್ಯನ್ ಕುಸ್ತಿ: ಭಾರತಕ್ಕೆ 5 ಪದಕ

ಹೊಸದಿಲ್ಲಿ: 15 ವರ್ಷದೊಳಗಿನವರ ಏಷ್ಯನ್ ಕುಸ್ತಿ ಚಾಂಪಿಯನ್‌ಶಿಪ್‌ನ ಮೊದಲ ದಿನದಂದು ಭಾರತದ ಗ್ರೀಕೋ-ರೋಮನ್ ತಂಡ ಐದು ಪದಕಗಳನ್ನು ಗೆದ್ದುಕೊಂಡಿತು. ಭಾರತೀಯ ಕುಸ್ತಿಪಟು ದರ್ಶನ್ ದಾಬು ಚೌಧರಿ ಚಿನ್ನದ ಪದಕ ಗೆದ್ದರು. 62 ಕೆಜಿ ತೂಕ ವಿಭಾಗದಲ್ಲಿ ಸ್ಪರ್ಧಿಸಿದ ದರ್ಶನ್ ಚೌಧರಿ ಫೈನಲ್‌ನಲ್ಲಿ ತಜಕಿಸ್ತಾನದ ಅಮ್ರಿದಿನ್ ಕುರ್ಬೋನೊವ್ ವಿರುದ್ಧ 5-0 ಅಂತರದ ಸುಲಭ ಜಯ ಸಾಧಿಸಿ ಭಾರತಕ್ಕೆ ದಿನದ ಏಕೈಕ ಚಿನ್ನ ತಂದುಕೊಟ್ಟರು. ಭಾರತ ಮೂರು ಬೆಳ್ಳಿ ಮತ್ತು ಒಂದು ಕಂಚಿನ ಪದಕವನ್ನು ಗೆದ್ದಿತು. 75 ಕೆಜಿ ವಿಭಾಗದಲ್ಲಿ, ಗೌರವ್ ಗುಂಡಾಜಿ ಪಾಟೀಲ್ ಅಗ್ರ ಬಹುಮಾನವನ್ನು ತಪ್ಪಿಸಿಕೊಂಡರು. ಯಶ್ (48 ಕೆಜಿ) ಮತ್ತು ಜತಿನ್ (85 ಕೆಜಿ) ಕಝಖಸ್ತಾನದ ರೋಲನ್ ಕಿಮ್ ಮತ್ತು ಯೆರಾಲಿ ಮುರಾಟೋವ್ ವಿರುದ್ಧ 0-8 ಅಂತರದಿಂದ ಸೋತ ನಂತರ ಬೆಳ್ಳಿ ಪದಕಗಳಿಗೆ ತೃಪ್ತಿಪಟ್ಟರು.

ಅಂಜು ದಾಖಲೆ ಮುರಿದ ಆನ್ಸಿ

ಭುವನೇಶ್ವರ್: ಭುವನೇಶ್ವರದ ಕಳಿಂಗ ಕ್ರೀಡಾಂಗಣದಲ್ಲಿ ನಡೆದ 65ನೇ ರಾಷ್ಟ್ರೀಯ ಅಂತರ-ರಾಜ್ಯ ಸೀನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಅಂಜು ಬಾಬಿ ಜಾರ್ಜ್ ಅವರ ಮಹಿಳಾ ಲಾಂಗ್ ಜಂಪ್ ರಾಷ್ಟ್ರೀಯ ದಾಖಲೆಯನ್ನು ಕೇರಳದ ಆನ್ಸಿ ಸೋಜನ್ ಮುರಿದರು. 25 ವರ್ಷದ ಆನ್ಸಿ ಸೋಜನ್ 2004ರ ಅಥೆನ್ಸ್ ಒಲಿಂಪಿಕ್ಸ್‌ನಲ್ಲಿ ಸ್ಥಾಪಿಸಲಾದ ಅಂಜು ಅವರ 6.83 ಮೀಟರ್ ದೂರವನ್ನು +0.7 ಮೀ/ಸೆಕೆಂಡ್‌ನೊಂದಿಗೆ 6.88 ಮೀಟರ್ ಜಿಗಿದು ಉತ್ತಮ ಸಾಧನೆ ಮಾಡಿದರು. ಈ ದಾಖಲೆ ಸುಮಾರು 22 ವರ್ಷಗಳ ಕಾಲ ಹಾಗೆಯೇ ಇತ್ತು.

ಭಾರತಕ್ಕೆ ಭರ್ಜರಿ ಮುನ್ನಡೆ

ಗಾಲೆ: ಶ್ರೀಲಂಕಾ ತಂಡವನ್ನು 330 ರನ್‌ಗಳಿಗೆ ಆಲೌಟ್ ಮಾಡಿರುವ ಭಾರತ ಎ ತಂಡವು ದೊಡ್ಡ ಮುನ್ನಡೆ ಸಾಧಿಸಿದ್ದು, ಅನಧಿಕೃತ ಟೆಸ್ಟ್ ಪಂದ್ಯದಲ್ಲಿ ಗೆಲುವಿನತ್ತ ಸಾಗಿದೆ. ಬ್ಯಾಟಿಂಗ್ ಆಯ್ದುಕೊಂಡಿದ್ದ ಭಾರತ ಮೊದಲ ಇನ್ನಿಂಗ್ಸ್‌ನಲ್ಲಿ 452 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ಬಳಿಕ ಶ್ರೀಲಂಕಾ ತಂಡವನ್ನು 330 ರನ್‌ಗಳಿಗೆ ಆಲೌಟ್ ಮಾಡಿ ಮೊದಲ ಇನ್ನಿಂಗ್ಸ್‌ನಲ್ಲೇ 122 ರನ್ ಮುನ್ನಡೆ ಸಾಧಿಸಿತು. ಎರಡನೇ ಇನ್ನಿಂಗ್ಸ್ ಬ್ಯಾಟಿಂಗ್ ಆರಂಭಿಸಿರುವ ಭಾರತ ಯಾವುದೇ ವಿಕೆಟ್ ಕಳೆದುಕೊಳ್ಳದೆ 48 ರನ್ ಗಳಿಸಿದೆ. ಶ್ರೀಲಂಕಾ ಎ ತಂಡವನ್ನು ಕಟ್ಟಿಹಾಕುವಲ್ಲಿ ವೇಗಿ ಆಕಿಬ್ ನಬಿ ಮಹತ್ವದ ಪಾತ್ರ ವಹಿಸಿದರು. 58 ರನ್ ನೀಡಿ 4 ವಿಕೆಟ್ ಕಿತ್ತರು. ಯಶ್, ಹರ್ಷ 2 ವಿಕೆಟ್ ಕಿತ್ತರು.

ನೆದರ್ಲೆಂಡ್ಸ್‌ಗೆ ಸೋಲು

ಬ್ರಿಸ್ಟಲ್: ಗುಲ್ ಫಿರೋಜಾ ಅವರ 62 ರನ್‌ಗಳ ಬ್ಯಾಟಿಂಗ್ ಮತ್ತು ಫಾತಿಮಾ ಸನಾ, ಆಯೇಶಾ ಅವರ ಪ್ರಬಲ ಬೌಲಿಂಗ್ ದಾಳಿಯಿಂದಾಗಿ ಪಾಕಿಸ್ತಾನ ನೆದರ್ಲೆಂಡ್ಸ್ ಮಹಿಳೆಯರ ತಂಡದೊಂದಿಗೆ 37 ರನ್‌ಗಳ ಗೆಲುವು ಸಾಧಿಸಿದೆ. ಪಂದ್ಯಾವಳಿಯಿಂದ ಬಹುತೇಕ ಹೊರಬಿದ್ದಿರುವ ಪಾಕಿಸ್ತಾನ ಈ ಗೆಲುವಿನೊಂದಿಗೆ ಅಭಿಯಾನ ಮುಗಿಸಿದೆ. ಪಂದ್ಯದಲ್ಲಿ ಬ್ಯಾಟಿಂಗ್‌ಗಿಳಿದ ಪಾಕ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 126 ರನ್ ಗಳಿಸಿತು. ಗುಲ್ 52 ಬಾಲ್‌ಗಳಲ್ಲಿ ಔಟಾಗದೆ 62 ರನ್ ಗಳಿಸಿದರು. ನೆದರ್ಲೆಂಡ್ಸ್ ಪರ ಇರಿಸ್ 19 ರನ್‌ಗೆ 2 ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ನೆದರ್ಲೆಂಡ್ಸ್ 86 ರನ್‌ಗಳಿಗೆ ಆಲೌಟ್ ಆಯಿತು. ಲೀಡ್ 30 ರನ್ ಗಳಿಸಿದರು. ಪಾಕ್ ಪರ ಫಾತಿಮಾ ಮತ್ತು ಆಯೇಶಾ ತಲಾ 2 ವಿಕೆಟ್ ಕಿತ್ತರು.

ಶ್ರೀಲಂಕಾಗೆ ಗೆಲುವು

ಬ್ರಿಸ್ಟಲ್: ಸಾಂಘಿಕ ಬ್ಯಾಟಿಂಗ್ ಮತ್ತು ಕರಾರುವಾಕ್ ಬೌಲಿಂಗ್ ದಾಳಿ ಸಂಘಟಿಸಿದ ಶ್ರೀಲಂಕಾ ಮಹಿಳೆಯರ ತಂಡವು ಟಿ20 ವಿಶ್ವಕಪ್‌ನಲ್ಲಿ ಸ್ಕಾಟ್ಲೆಂಡ್ ವಿರುದ್ಧ ಗೆಲುವು ಸಾಧಿಸಿ ಸೆಮಿ ಆಸೆ ಜೀವಂತವಾಗಿರಿಸಿದೆ. ಶುಕ್ರವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಸ್ಕಾಟ್ಲೆಂಡ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 151 ರನ್ ಗಳಿಸಿತು. ಬ್ರೈಸ್ 47 ರನ್ ಗಳಿಸಿದರು. ಲಂಕಾ ಪರ ವಿಥ್ಮಾ 2, ಸುಗಂಧಿಕಾ ಮತ್ತು ಕವೀಶಾ ತಲಾ 1 ವಿಕೆಟ್ ಕಿತ್ತರು. ಗುರಿ ಬೆನ್ನತ್ತಿದ ಶ್ರೀಲಂಕಾ 19.5 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 157 ರನ್ ಗಳಿಸಿತು. ಚಮಾರಿ 33, ಹರ್ಷಿತಾ 27 ರನ್ ಗಳಿಸಿದರು. ಮೂರು ಆಟಗಾರ್ತಿಯರು 20ಕ್ಕೂ ಅಧಿಕ ಸ್ಕೋರ್ ಮಾಡಿದ್ದರಿಂದ ಶ್ರೀಲಂಕಾ ಗೆಲುವು ಸಾಧಿಸಿದೆ.

ಮೊದಲ ವಿಶ್ವಕಪ್‌ನಲ್ಲೇ ನಾಕೌಟ್‌ಗೆ | ಅಜೇಯ ತಂಡವಾಗಿ ದಾಖಲೆ

ಕೇಪ್ ವರ್ಡೆ ಕಮಾಲ್!

ಹ್ಯೂಸ್ಟನ್: ಫುಟ್‌ಬಾಲ್ ಲೋಕದಲ್ಲಿ ಮಿಂಚಿ ಹವಾ ಎಬ್ಬಿಸಿರುವ ದ್ವೀಪ ಕೇಪ್ ವರ್ಡೆ ವಿಶ್ವವೇ ಎಂದೆಂದಿಗೂ ನೆನಪಿಡುವ ಸಾಧನೆಯೊಂದನ್ನು ಮಾಡಿದೆ. ಫಿಫಾ ವಿಶ್ವಕಪ್‌ನಲ್ಲಿ ಚೊಚ್ಚಲ ಬಾರಿಗೆ ಆಡುತ್ತಿರುವ ಕೇಪ್ ವರ್ಡೆ, ಮತ್ತೊಮ್ಮೆ ಅಚ್ಚರಿ ಮೂಡಿಸಿ ನಾಕೌಟ್ ಹಂತಕ್ಕೇರಿದೆ. ಶುಕ್ರವಾರ ನಡೆದ ತನ್ನ ಕೊನೆಯ ಗುಂಪು ಹಂತದ ಪಂದ್ಯದಲ್ಲಿ ಸೌದಿ ಅರೇಬಿಯಾದ ವಿರುದ್ಧ 0-0 ಗೋಲುರಹಿತ ಡ್ರಾ ಸಾಧಿಸಿದ ಕೇಪ್ ವರ್ಡೆ, ಮೂರು ಪಂದ್ಯಗಳಲ್ಲೂ ಅಜೇಯವಾಗಿ ಗುಂಪು ಹಂತವನ್ನು ಮುಗಿಸಿತು. ಆ ಮೂಲಕ ಜಗತ್ತಿನ ಕೆಲವೇ ರಾಷ್ಟ್ರಗಳು ಮಾಡಿರುವ ದಾಖಲೆಯೊಂದನ್ನು ಮಾಡಿತು.

ಸ್ಪೇನ್ ವಿರುದ್ಧ 0-0 ಡ್ರಾ ಮತ್ತು ಉರುಗ್ವೆ ವಿರುದ್ಧ 2-2 ಸಮಬಲ ಸಾಧಿಸಿದ್ದ ಕೇಪ್ ವರ್ಡೆ, ಸೌದಿ ಅರೇಬಿಯಾದ ವಿರುದ್ಧವೂ ಸೋಲದೆ ಒಂದು ಅಂಕ ಗಳಿಸಿ ಒಟ್ಟು ಮೂರು ಅಂಕಗಳೊಂದಿಗೆ ಗುಂಪಿನಲ್ಲಿ ದ್ವಿತೀಯ ಸ್ಥಾನ ಪಡೆದು ರೌಂಡ್ ಆಫ್ 32ಕ್ಕೆ ಪ್ರವೇಶಿಸಿತು.

ಮೊದಲ ವಿಶ್ವಕಪ್‌ನಲ್ಲಿ ಸಾಧನೆ: ಸುಮಾರು ಐದು ಲಕ್ಷ ಜನಸಂಖ್ಯೆಯ ಪುಟ್ಟ ದ್ವೀಪ ರಾಷ್ಟ್ರವಾಗಿರುವ ಕೇಪ್ ವರ್ಡೆ, ತನ್ನ ಮೊದಲ ವಿಶ್ವಕಪ್‌ನಲ್ಲೇ ಈ ಸಾಧನೆ ಮಾಡಿದ್ದು ಫುಟ್‌ಬಾಲ್ ಇತಿಹಾಸದಲ್ಲಿ ಹೊಸ ಅಧ್ಯಾಯ ಬರೆದಿದೆ. ಈಗ ನಾಕೌಟ್ ಸುತ್ತಿನಲ್ಲಿ ಹಾಲಿ ಚಾಂಪಿಯನ್ ಅರ್ಜೆಂಟೀನಾ ವಿರುದ್ಧ ಜುಲೈ 3ರಂದು ಮೈಯಾಮಿಯಲ್ಲಿ ಸೆಣಸಲಿದೆ.

ವೋಜಿನ್ಹಾ ಅಮೋಘ ಗೋಲ್‌ಕೀಪಿಂಗ್: ಕೇಪ್ ವರ್ಡೆಯ ಯಶಸ್ಸಿನ ಹಿಂದಿನ ಪ್ರಮುಖ ಶಕ್ತಿ ಅನುಭವಿ ಗೋಲ್‌ಕೀಪರ್ ವೋಜಿನ್ಹಾ. 40 ವರ್ಷದ ಗೋಲ್‌ಕೀಪರ್ ಮೊದಲಾರ್ಧದ ಇಂಜುರಿ ಸಮಯದಲ್ಲಿ ಮೊಹಮ್ಮದ್ ಕನ್ನೋ ಅವರ ಹೆಡರ್ ಅನ್ನು ಅದ್ಭುತವಾಗಿ ತಡೆದರು. ಬಳಿಕ 66ನೇ ನಿಮಿಷದಲ್ಲಿ ಮೊಹಮ್ಮದ್ ಅಬು ಅಲ್-ಶಾಮತ್ ಅವರ ಬಲಿಷ್ಠ ಪ್ರಯತ್ನವನ್ನೂ, 92ನೇ ನಿಮಿಷದಲ್ಲಿ ಅಬ್ದುಲ್ಲಾ ಅಲ್-ಹಮ್ದಾನ್ ಅವರ ಶಾಟ್‌ನನ್ನೂ ತಡೆದು ತಂಡಕ್ಕೆ ಅಮೂಲ್ಯ ಡ್ರಾ ತಂದುಕೊಟ್ಟರು.

ಮುಂದಿನ ಪಂದ್ಯ: ಜುಲೈ 3ರಂದು ಕೇಪ್ ವರ್ಡೆ, ಹಾಲಿ ವಿಶ್ವಚಾಂಪಿಯನ್ ಅರ್ಜೆಂಟೀನಾ ವಿರುದ್ಧ ರೌಂಡ್ ಆಫ್ 32ರಲ್ಲಿ ಸೆಣಸಲಿದೆ.





ಇರಾಕ್ ಮೇಲೆ ಹರಿಹಾಯ್ದ ಸೆನೆಗಲ್

ಇರಾಕ್ ಮೇಲೆ ಹರಿಹಾಯ್ದಿರುವ ಸೆನೆಗಲ್ ತಂಡವು 5-0 ಅಂತರದ ಭರ್ಜರಿ ಗೆಲುವು ದಾಖಲಿಸಿದೆ. ಪಂದ್ಯದ ಪ್ರತಿ ಕ್ಷಣವೂ ಇರಾಕ್ ಮೇಲೆ ಒತ್ತಡ ಹೇರಿದ ಸೆನೆಗಲ್ ಹಬೀಬ್ ದಿಯಾರಾ ಅವರ ನಾಲ್ಕನೇ ನಿಮಿಷದ ಗೋಲಿನಿಂದಲೇ ಆರಂಭ ಪಡೆಯಿತು. 13ನೇ ನಿಮಿಷದಲ್ಲಿ ಅತ್ಯುತ್ತಮ ಗೋಲು ಗಳಿಸಿದ ಲೀಬನ್ ಇರಾಕ್‌ಗೆ ಮತ್ತಷ್ಟು ಹಿನ್ನಡೆ ತಂದರು. ಅಸ್ಸೇನ 56ನೇ ನಿಮಿಷಕ್ಕೆ ಮತ್ತೊಂದು ಗೋಲು ಗಳಿಸಿ ಮುನ್ನಡೆ ತಂದರು. 71ನೇ ನಿಮಿಷಕ್ಕೆ ಜೇನ್, 83ನೇ ನಿಮಿಷಕ್ಕೆ ಇಬ್ರಿಮಾ ಗೋಲು ಗಳಿಸಿದರು.

ಡೆಂಬೆಲೆ ಹ್ಯಾಟ್ರಿಕ್ ಮ್ಯಾಜಿಕ್

ನಾರ್ವೆ ವಿರುದ್ಧ ಫ್ರಾನ್ಸ್‌ಗೆ 4-1 ಭರ್ಜರಿ ಜಯ

ಫಾಕ್ಸ್‌ಬೊರೊ (ಅಮೆರಿಕ): ಒಸ್ಮಾನ್ ಡೆಂಬೆಲೆ ಮೊದಲಾರ್ಧದಲ್ಲೇ ಹ್ಯಾಟ್ರಿಕ್ ಸಿಡಿಸಿ ಮಿಂಚಿದರೆ, ಕೈಲಿಯನ್ ಎಂಬಾಪ್ಪೆ ಮತ್ತೊಮ್ಮೆ ತನ್ನ ಸೃಜನಾತ್ಮಕ ಆಟದ ಮೂಲಕ ಮೆರಗು ನೀಡಿದರು. ಇವರ ಅಮೋಘ ಪ್ರದರ್ಶನದ ನೆರವಿನಿಂದ ಫ್ರಾನ್ಸ್ 4-1 ಅಂತರದಲ್ಲಿ ನಾರ್ವೆಯನ್ನು ಮಣಿಸಿ ವಿಶ್ವಕಪ್‌ನ ಗುಂಪು ಹಂತವನ್ನು ಅಗ್ರಸ್ಥಾನಿಯಾಗಿ ಮುಗಿಸಿತು.

ಬ್ಯಾಲನ್ ಡಿಓರ್ ವಿಜೇತ ಡೆಂಬೆಲೆ 7ನೇ, 20ನೇ ಹಾಗೂ 32ನೇ ನಿಮಿಷಗಳಲ್ಲಿ ಗೋಲು ಬಾರಿಸಿ ಮೊದಲಾರ್ಧದಲ್ಲೇ ಹ್ಯಾಟ್ರಿಕ್ ಪೂರ್ಣಗೊಳಿಸಿದರು. 1994ರ ವಿಶ್ವಕಪ್‌ನಲ್ಲಿ ರಷ್ಯಾದ ಒಲೆಗ್ ಸಲೆಂಕೊ ಬಳಿಕ ವಿಶ್ವಕಪ್‌ನಲ್ಲಿ ಮೊದಲಾರ್ಧದಲ್ಲೇ ಹ್ಯಾಟ್ರಿಕ್ ದಾಖಲಿಸಿದ ಮೊದಲ ಆಟಗಾರ ಎಂಬ ಹೆಗ್ಗಳಿಕೆಗೆ ಡೆಂಬೆಲೆ ಪಾತ್ರರಾದರು. ದ್ವಿತೀಯಾರ್ಧದ ಇಂಜುರಿ ಸಮಯದಲ್ಲಿ ಡಿಸೈರ್ ಡೌಯೆ ನಾಲ್ಕನೇ ಗೋಲು ದಾಖಲಿಸಿ ಫ್ರಾನ್ಸ್ ಜಯ ಖಚಿತಪಡಿಸಿದರು.

ಎಂಬಾಪ್ಪೆ-ಡೆಂಬೆಲೆ ಜೋಡಿ ಮಿಂಚು: ಫ್ರಾನ್ಸ್ ಆರಂಭದಿಂದಲೇ ದಾಳಿಯ ಆಟ ಪ್ರದರ್ಶಿಸಿತು. ಪಂದ್ಯ ಆರಂಭವಾಗಿ ಕೇವಲ 21 ಸೆಕೆಂಡ್‌ಗಳಲ್ಲಿ ಎಂಬಾಪ್ಪೆಯ ಶಾಟ್ ಕ್ರಾಸ್‌ಬಾರ್‌ಗೆ ತಾಗಿದರೂ, ಏಳನೇ ನಿಮಿಷದಲ್ಲಿ ಅವರೇ ನೀಡಿದ ಪಾಸ್ ಅನ್ನು ಡೆಂಬೆಲೆ ಗೋಲಾಗಿ ಪರಿವರ್ತಿಸಿ ಮುನ್ನಡೆ ತಂದರು. 20ನೇ ನಿಮಿಷದಲ್ಲಿ ಮೂವರು ರಕ್ಷಣಾ ಆಟಗಾರರನ್ನು ಮೀರಿಸಿ ಡೆಂಬೆಲೆ ಎರಡನೇ ಗೋಲು ಗಳಿಸಿದರು. ನಾರ್ವೆಯ ಥೆಲೊ ಆಸ್ಗಾರ್ಡ್ 21ನೇ ನಿಮಿಷದಲ್ಲಿ ಗೋಲು ಬಾರಿಸಿ ಅಂತರ ಕಡಿಮೆ ಮಾಡಿದರೂ, 32ನೇ ನಿಮಿಷದಲ್ಲಿ ಡೆಂಬೆಲೆ ತನ್ನ ಮೂರನೇ ಗೋಲು ದಾಖಲಿಸಿ ಫ್ರಾನ್ಸ್‌ಗೆ 3-1 ಮುನ್ನಡೆ ನೀಡಿದರು.



ಬೆಲ್ಜಿಯಂಗೆ ಗೆಲುವು

ವ್ಯಾಂಕೂವರ್/ಸಿಯಾಟಲ್: ಲಿಯಾಂಡ್ರೊ ಟ್ರೊಸಾರ್ಡ್ ಅವರ ದ್ವಿಗೋಲು ಹಾಗೂ ಕೆವಿನ್ ಡಿ ಬ್ರುಯ್ನೆ, ರೊಮೆಲು ಲುಕಾಕು ಮತ್ತು ಅಲೆಕ್ಸಿಸ್ ಸಲೆಮೇಕರ್ಸ್ ಅವರ ಗೋಲುಗಳ ನೆರವಿನಿಂದ ಬೆಲ್ಜಿಯಂ, ನ್ಯೂಜಿಲೆಂಡ್ ವಿರುದ್ಧ 5-1 ಅಂತರದ ಭರ್ಜರಿ ಜಯ ಸಾಧಿಸಿ ಜಿ ಗುಂಪಿನಲ್ಲಿ ಅಗ್ರಸ್ಥಾನ ಪಡೆದು ವಿಶ್ವಕಪ್‌ನ ನಾಕೌಟ್ ಹಂತ ಪ್ರವೇಶಿಸಿತು. ಇದೇ ವೇಳೆ ಸಿಯಾಟಲ್‌ನಲ್ಲಿ ನಡೆದ ಇನ್ನೊಂದು ಪಂದ್ಯದಲ್ಲಿ ಈಜಿಪ್ಟ್ ಮತ್ತು ಇರಾನ್ 1-1ರಿಂದ ಸಮಬಲ ಸಾಧಿಸಿದ್ದು, ಈಜಿಪ್ಟ್ ತನ್ನ ಇತಿಹಾಸದಲ್ಲೇ ಮೊದಲ ಬಾರಿಗೆ ವಿಶ್ವಕಪ್‌ನ ಗುಂಪು ಹಂತ ದಾಟಿತು.

ಬೆಲ್ಜಿಯಂ ಭರ್ಜರಿ ಪುನರಾಗಮನ: ಮೊದಲ ಎರಡು ಪಂದ್ಯಗಳಲ್ಲಿ ಈಜಿಪ್ಟ್ ವಿರುದ್ಧ 1-1 ಹಾಗೂ ಇರಾನ್ ವಿರುದ್ಧ ಗೋಲುರಹಿತ ಡ್ರಾ ಸಾಧಿಸಿದ್ದ ಬೆಲ್ಜಿಯಂ, ನಿರ್ಣಾಯಕ ಪಂದ್ಯದಲ್ಲಿ ತನ್ನ ನೈಜ ಸಾಮರ್ಥ್ಯ ಪ್ರದರ್ಶಿಸಿತು. ಲಿಯಾಂಡ್ರೊ ಟ್ರೊಸಾರ್ಡ್ ಎರಡು ಗೋಲುಗಳ ಮೂಲಕ ಗೆಲುವಿನ ಅಡಿಪಾಯ ಹಾಕಿದರೆ, ಕೆವಿನ್ ಡಿ ಬ್ರುಯ್ನೆ, ರೊಮೆಲು ಲುಕಾಕು ಮತ್ತು ಅಲೆಕ್ಸಿಸ್ ಸಲೆಮೇಕರ್ಸ್ ತಲಾ ಒಂದು ಗೋಲು ದಾಖಲಿಸಿದರು. ನ್ಯೂಜಿಲೆಂಡ್ ಪರ ಎಲಿಜಾ ಜಸ್ಟ್ ಏಕೈಕ ಸಮಾಧಾನದ ಗೋಲು ಗಳಿಸಿದರು. ಈ ಸೋಲಿನೊಂದಿಗೆ ನ್ಯೂಜಿಲೆಂಡ್ ವಿಶ್ವಕಪ್ ಇತಿಹಾಸದಲ್ಲೇ ಮೊದಲ ಗೆಲುವಿನ ಕನಸನ್ನು ನನಸಾಗಿಸಿಕೊಳ್ಳದೆ ಟೂರ್ನಿಯಿಂದ ನಿರ್ಗಮಿಸಿತು.

ಈಜಿಪ್ಟ್ ಐತಿಹಾಸಿಕ ಸಾಧನೆ

ಸಿಯಾಟಲ್‌ನಲ್ಲಿ ನಡೆದ ಪಂದ್ಯದಲ್ಲಿ ಐದನೇ ನಿಮಿಷದಲ್ಲೇ ಮಹ್ಮೂದ್ ಸಾಬರ್ ಗೋಲು ಬಾರಿಸಿ ಈಜಿಪ್ಟ್‌ಗೆ ಮುನ್ನಡೆ ತಂದುಕೊಟ್ಟರು. ಮೊಹಮದ್ ಸಲಾಹ್ ಅವರ ಚತುರ ಆಟದಿಂದ ರೂಪುಗೊಂಡ ಅವಕಾಶವನ್ನು ಸಾಬರ್ ಯಶಸ್ವಿಯಾಗಿ ಗೋಲಾಗಿ ಪರಿವರ್ತಿಸಿದರು. ಆದರೆ ಇರಾನ್ ಕೇವಲ ಒಂಬತ್ತು ನಿಮಿಷಗಳಲ್ಲೇ ರಮೀನ್ ರೆಜಾಯಿಯನ್ ಗೋಲಿನ ಮೂಲಕ ಸಮಬಲ ಸಾಧಿಸಿತು.

ವಿಎಆರ್‌ನಿಂದ ಇರಾನ್‌ಗೆ ನಿರಾಶೆ: ಇಂಜುರಿ ಸಮಯದ 93ನೇ ನಿಮಿಷದಲ್ಲಿ ಕೋಜಾ ಏಲೀಲ್‌ಜಾದೆಹ್ ಗೋಲು ಬಾರಿಸಿ ಇರಾನ್‌ಗೆ ಗೆಲುವು ತಂದುಕೊಟ್ಟಂತೆ ಕಂಡಿತು. ಆದರೆ ವಿಡಿಯೊ ಪರಿಶೀಲನೆ ಬಳಿಕ ಆ ಗೋಲನ್ನು ಆಫ್‌ಸೈಡ್ ಎಂದು ತಿರಸ್ಕರಿಸಲಾಯಿತು. ಆ ಗೋಲು ಮಾನ್ಯವಾಗಿದ್ದರೆ ಇರಾನ್ ನೇರವಾಗಿ ನಾಕೌಟ್ ಹಂತಕ್ಕೇರುತ್ತಿತ್ತು. ಈಗ ಇರಾನ್‌ನ ಭವಿಷ್ಯ ಇತರ ಗುಂಪುಗಳ ಫಲಿತಾಂಶಗಳ ಮೇಲೆ ಅವಲಂಬಿತವಾಗಿದೆ.

ಸ್ಪೇನ್ ವಿನ್, ಮನೆಗೆ ಉರುಗ್ವೆ

ಗ್ವಾಡಲಜಾರಾ (ಮೆಕ್ಸಿಕೊ): ಅನುಭವಿ ಗೋಲ್‌ಕೀಪರ್ ಫರ್ನಾಂಡೊ ಮುಸ್ಲೆರಾ ಅವರ ಮತ್ತೊಂದು ದುಬಾರಿ ತಪ್ಪಿನ ಲಾಭ ಪಡೆದ ಸ್ಪೇನ್, ಉರುಗ್ವೆಯನ್ನು 1-0 ಗೋಲುಗಳಿಂದ ಮಣಿಸಿ ವಿಶ್ವಕಪ್‌ನ ನಾಕೌಟ್ ಹಂತಕ್ಕೆ ಭರ್ಜರಿಯಾಗಿ ಪ್ರವೇಶಿಸಿತು. ಈ ಸೋಲಿನೊಂದಿಗೆ ಎರಡು ಬಾರಿ ವಿಶ್ವಚಾಂಪಿಯನ್ ಉರುಗ್ವೆ ಗುಂಪು ಹಂತದಲ್ಲೇ ಟೂರ್ನಿಯಿಂದ ಹೊರಬಿದ್ದಿತು. ಯುರೋಪಿಯನ್ ಚಾಂಪಿಯನ್ ಸ್ಪೇನ್ ಮೂರು ಪಂದ್ಯಗಳಿಂದ ಏಳು ಅಂಕ ಗಳಿಸಿ ಗುಂಪು ಎಚ್‌ನಲ್ಲಿ ಅಗ್ರಸ್ಥಾನ ಪಡೆದುಕೊಂಡಿತು. ರೌಂಡ್ ಆಫ್ 32ರಲ್ಲಿ ಸ್ಪೇನ್, ಜೆ ಗುಂಪಿನ ದ್ವಿತೀಯ ಸ್ಥಾನಿ ಆಸ್ಟ್ರಿಯಾ ಅಥವಾ ಅಲ್ಜೀರಿಯಾ ವಿರುದ್ಧ ಸೆಣಸಲಿದೆ.

ಮುಸ್ಲೆರಾ ತಪ್ಪು ದುಬಾರಿ: 42ನೇ ನಿಮಿಷದಲ್ಲಿ ಅಲೆಕ್ಸ್ ಬಯೆನಾ ಹೊಡೆದ ಶಾಟ್ ಅನ್ನು 40 ವರ್ಷದ ಗೋಲ್‌ಕೀಪರ್ ಫರ್ನಾಂಡೊ ಮುಸ್ಲೆರಾ ಸುಲಭವಾಗಿ ತಡೆಯಲು ವಿಫಲರಾದರು. ಚೆಂಡು ಅವರ ಕೈಯಿಂದ ಜಾರಿಗೋಲಿನೊಳಗೆ ಸೇರಿತು. ಇದೇ ಗೋಲು ಪಂದ್ಯದ ನಿರ್ಣಾಯಕ ಕ್ಷಣವಾಯಿತು.

ಭಾರತಕ್ಕೆ ನಿರ್ಣಾಯಕ ಪಂದ್ಯ

ಲಾರ್ಡ್ಸ್: ಸೆಮಿ ಫೈಟ್ ನಡೆಸುವ ಭಾರತ ಮಹಿಳಾ ತಂಡವು ಗೆಲ್ಲಲೇಬೇಕಾದ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿದೆ. ಹಿಂದಿನ ಪಂದ್ಯದಲ್ಲಿ ಬಾಂಗ್ಲಾ ವಿರುದ್ಧ ಗೆದ್ದರೂ ದ.ಆಫ್ರಿಕಾ ವಿರುದ್ಧದ ಸೋಲು ಭಾರತಕ್ಕೆ ದೊಡ್ಡ ಹೊಡೆತ ನೀಡಿದಂತಿದೆ.

ಪಂದ್ಯದ ವಿವರ

ಎಲ್ಲಿ: ಲಾರ್ಡ್ಸ್, ಯಾವಾಗ: ಭಾನುವಾರ
ಸಮಯ: ಸಂಜೆ 7:00

ಮಹಿಳೆಯರ ಟಿ20 ವಿಶ್ವಕಪ್‌ನಲ್ಲಿ ಎರಡು ಗುಂಪುಗಳಿವೆ. ಮೊದಲನೇ ಗುಂಪಿನಿಂದ ವಿಂಡೀಸ್ ಹಾಗೂ ಇಂಗ್ಲೆಂಡ್ ತಂಡಗಳು ಸಮರ್ಥ ಪ್ರದರ್ಶನ ನೀಡಿವೆ. ಇತ್ತ ಇನ್ನೊಂದು ಗುಂಪಿನಲ್ಲಿ ಆಸ್ಟ್ರೇಲಿಯಾ ಈಗಾಗಲೇ ಸೆಮಿಫೈನಲ್‌ಗೇರಿದೆ. ಇನ್ನೊಂದು ತಂಡ ಯಾವುದೆಂಬ ಪ್ರಶ್ನೆಗೆ ಭಾನುವಾರದ ಪಂದ್ಯ ಉತ್ತರ ಕೊಡಲಿದೆ. ಶನಿವಾರ ತಡರಾತ್ರಿಯೇ ದ.ಆಫ್ರಿಕಾ ಮತ್ತು ಬಾಂಗ್ಲಾದೇಶ ತಂಡಗಳು ಎದುರಾಗಲಿವೆ. ಇಲ್ಲಿ ದ.ಆಫ್ರಿಕಾ ಸೋತು ಬಿಟ್ಟರೆ ಭಾರತ ಸೆಮಿಗೆ ಲೀಲಾಜಾಲವಾಗಿ ಲಗ್ಗೆ ಹಾಕಲಿದೆ. ಆದರೆ, ದ.ಆಫ್ರಿಕಾ ದೊಡ್ಡ ಮೊತ್ತದಿಂದ ಗೆದ್ದು ಭಾರತಕ್ಕಿಂತ ಹೆಚ್ಚು ರನ್‌ರೇಟ್ ಏನಾದರೂ ಪಡೆದುಕೊಂಡರೆ, ಆಸ್ಟ್ರೇಲಿಯಾ ವಿರುದ್ಧದ ಪಂದ್ಯದಲ್ಲಿ ಭಾರತ ಗೆಲ್ಲಲೇಬೇಕಾದ ಒತ್ತಡಕ್ಕೆ ಸಿಲುಕಿಕೊಳ್ಳುತ್ತೆ. ಸದ್ಯ ಎರಡನೇ ಸ್ಥಾನದಲ್ಲಿರುವ ಭಾರತ ಉತ್ತಮ ರನ್‌ರೇಟ್ ಹೊಂದಿದೆ. ಆದರೆ 4 ಪಂದ್ಯಗಳಲ್ಲಿ 6 ಅಂಕಗಳನ್ನು ಗಳಿಸಿದೆ. ಈ ನಡುವೆ ಸೆಮಿಗೇರಲು ಹೆಚ್ಚುವರಿ ಅಂಕವೇನಾದರೂ ಬೇಕಿದ್ದರೆ ಭಾರತ ಈ ಪಂದ್ಯದಲ್ಲಿ ಗೆಲ್ಲಲೇಬೇಕು.

ವಿಶ್ವಾಸದಲ್ಲಿ ಭಾರತ: ಮೂರು ಪಂದ್ಯಗಳಲ್ಲಿ ಮಂಧಾನ ಉತ್ತಮ ಪ್ರದರ್ಶನ ನೀಡಿದ್ದಾರೆ. ಆದರೆ ಕಳೆದೆರಡು ಪಂದ್ಯಗಳಲ್ಲಿ ಅವರೂ ಹಿನ್ನಡೆ ಅನುಭವಿಸಿದ್ದರು. ಅತ್ತ ಸ್ಫೋಟಕ ಬ್ಯಾಟರ್ ಶೆಫಾಲಿ ವರ್ಮಾ ಬೌಲಿಂಗ್ ಮತ್ತು ಬ್ಯಾಟಿಂಗ್ ಎರಡರಲ್ಲೂ ಮಿಂಚುತ್ತಿರುವುದು ತಂಡಕ್ಕೆ ವಿಶ್ವಾಸ ತಂದಿದೆ. ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡುವ ರಾಡ್ರಿಗ್ಸ್ ಕೂಡ ಲಯಕ್ಕೆ ಮರಳಿರುವುದು ತಂಡಕ್ಕೆ ಬಲ ತಂದಿದೆ. ಇತ್ತ ಹರ್ಮನ್ ಪ್ರೀತ್ ಕೌರ್ ಸ್ಫೋಟಕ ಬ್ಯಾಟಿಂಗ್ ಮಾಡಬೇಕಿದೆ. ಸ್ಕೋರ್ ಹಿಗ್ಗಿಸುವ ರಿಚಾ ಘೋಷ್ ರನ್ ಮಿಂಚಿದರೆ ಭಾರತಕ್ಕೆ ಕಟ್ಟಿಹಾಕುವವರೆ ಯಾರಿಲ್ಲ. ಅತ್ತ ಬೌಲಿಂಗ್ ನಲ್ಲೂ ಬಲಾಢ್ಯ ಪಡೆಯನ್ನು ಹೊಂದಿರುವ ಭಾರತ ದಾಖಲೆ ಮಾಡಿರುವ ಶ್ರೀ ಚರಣಿ, ಆಲ್‌ರೌಂಡರ್ ದೀಪ್ತಿ ಮಿಂಚುತ್ತಿದ್ದಾರೆ.

ಸರಣಿ ಉಳಿಸಲು ಭಾರತ ಕಾದಾಟ

ಬೆಲ್‌ಫಾಸ್ಟ್: ಮೊದಲ ಪಂದ್ಯದಲ್ಲಿ ಅಚ್ಚರಿಯ ಸೋಲನುಭವಿಸಿರುವ ಭಾರತ ಪುರುಷರ ತಂಡ ಇಂದು ಐರ್ಲೆಂಡ್ ಸರಣಿಯ ಕೊನೆಯ ಮತ್ತು ಎರಡನೇ ಪಂದ್ಯದಲ್ಲಿ ಪಂಟಿಕ್ಕೆ ಎದುರಿಸಲಿದೆ.

ಶ್ರೇಯಸ್ ಅಯ್ಯರ್ ನಾಯಕತ್ವದಲ್ಲಿ ಪ್ರವಾಸ ಮಾಡಿರುವ ಭಾರತ ತಂಡ ಇಂಗ್ಲೆಂಡ್ ಸರಣಿಗೂ ಮುನ್ನ ಭಾನುವಾರ ಐರ್ಲೆಂಡ್ ವಿರುದ್ಧ ಮತ್ತೊಂದು ಪಂದ್ಯದಲ್ಲಿ ಎದುರಾಗಬೇಕಿದೆ. ಶುಕ್ರವಾರ ನಡೆದ ಪಂದ್ಯದಲ್ಲಿ ಅಚ್ಚರಿಯ ಸೋಲನುಭವಿಸಿದ್ದ ಶ್ರೇಯಸ್ ಪಡೆ ಈ ಪಂದ್ಯದಲ್ಲಿ ಸೋತರೆ ಐತಿಹಾಸಿಕ ಹಿನ್ನಡೆ ಅನುಭವಿಸಲಿದೆ. ಶುಕ್ರವಾರದ ಪಂದ್ಯಕ್ಕೂ ಮುನ್ನ ಭಾರತ ಐರ್ಲೆಂಡ್ ವಿರುದ್ಧದ ಪಂದ್ಯದಲ್ಲಿ ಗೆಲ್ಲಲೇಬೇಕಾದ ಒತ್ತಡ ಎದುರಿಸಬೇಕಿದೆ. ತೀವ್ರ ಬ್ಯಾಟಿಂಗ್ ವೈಫಲ್ಯ ಎದುರಿಸಿದ್ದ ಭಾರತ 34 ರನ್‌ಗಳ ಸೋಲನುಭವಿಸಿದೆ. ಅಭಿಷೇಕ್ ಶರ್ಮಾ ಅವರನ್ನು ಬಿಟ್ಟರೆ ಇನ್ನುಳಿದ ಯಾವುದೇ ಬ್ಯಾಟರ್ ಕೂಡ ನಿಲ್ಲಲೂ ಇಲ್ಲ. ಶಿವಂ ದುಬೆ ಹೋರಾಟಕ್ಕೂ ಸರಳವಾಗಿ ತಡೆಯೊಡ್ಡಿತು. ಈ ನಡುವೆ ಐರ್ಲೆಂಡ್ ವಿರುದ್ಧದ ಎರಡನೇ ಪಂದ್ಯದಲ್ಲಿ ಭಾರತ ಬ್ಯಾಟಿಂಗ್ ಬಲ ಹೆಚ್ಚಿಸಿಕೊಂಡೇ ಹೋಗಬೇಕಿದೆ. ಅಭಿಷೇಕ್ ಶರ್ಮಾ ಅವರು ಲಯದಲ್ಲೇ ಇದ್ದಾರೆ. ಇನ್ನೋರ್ವ ಆರಂಭಿಕ ಸಂಜು ಸ್ಯಾಮ್ಸನ್ ಬ್ಯಾಟ್‌ನಿಂದ ರನ್ ಬರಬೇಕಿದೆ. ಈ ನಡುವೆ ಇಶಾನ್ ಕಿಶನ್ ಕೂಡ ವಿಫಲರಾಗಿದ್ದರು. ಮಧ್ಯಮ ಕ್ರಮಾಂಕದಲ್ಲಿ ವಾಷಿಂಗ್ಟನ್ ಸುಂದರ್, ಅಕ್ಷರ್ ಪಟೇಲ್ ಅವರನ್ನು ಆಡಿಸಲಾಗಿದೆ. ತಿಲಕ್ ವರ್ಮಾ ಸ್ಫೋಟಕ ಬ್ಯಾಟಿಂಗ್‌ಗೆ ಮುಂದಾಗಬೇಕಿದೆ. ಫಿನಿಶಿಂಗ್‌ನಲ್ಲಿ ಅಲ್ಪ ಪ್ರಯತ್ನ ಪಟ್ಟಿರುವ ಶಿವಂ ದುಬೆ ಮಿಂಚಬೇಕಿದೆ. ಬೌಲಿಂಗ್ ವಿಭಾಗದಲ್ಲಿ ಹರ್ಷಿತ್ ರಾಣಾ ಕಂಬ್ಯಾಕ್ ಮಾಡಿದ್ದರೂ ಪ್ರಸಿದ್ಧ ಕೃಷ್ಣ ಸೇರಿದಂತೆ ವಿವಿಧ ಆಟಗಾರರು ದುಬಾರಿಯಾಗಿದ್ದಾರೆ.

ಪಂದ್ಯದ ವಿವರ

ಯಾವಾಗ: ಭಾನುವಾರ, ಎಲ್ಲಿ: ಬೆಲ್‌ಫಾಸ್ಟ್, ಸಮಯ: ಸಂಜೆ 6:30

ಬೆಂಗಳೂರು ಬ್ಲಾಸ್ಟರ್ಸ್‌ಗೆ ಭರ್ಜರಿ ಜಯ

ವಿಜಯಕುಮಾರ ಬೆಳ್ಳೇರಿಮಠ

ಹುಬ್ಬಳ್ಳಿ: ಬೆಂಗಳೂರು ತಂಡದ ರೋಹನ ಪಾಟೀಲ ಅವರ ಅರ್ಧ ಶತಕ (62, 46ಎ, 4ಬೌ5, 6ಸಿ2) ಹಾಗೂ ಆಲ್‌ರೌಂಡರ್ ಪ್ರವೀಣ್ ದುಬೆ (39,15,4ಬೌ3,6ಸಿ3) ಆಕರ್ಷಕ ಬ್ಯಾಟಿಂಗ್‌ಗೆ ಶಿವಮೊಗ್ಗ ಯೋಧಾಸ್ ತತ್ತರಿಸಿದ್ದು, ಇಲ್ಲಿಯ ಸ್ವರ್ಣಮಂಗ ಬೆಟ್ಟದ ತಪ್ಪಲಿನಲ್ಲಿರುವ ರಾಜನಗರ ಕೆಎಸ್‌ಸಿಎ ಮೈದಾನದಲ್ಲಿ ನಡೆಯುತ್ತಿರುವ ಮಹಾರಾಜ ಟ್ರೋಫಿ ಪಂದ್ಯದಲ್ಲಿ ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ ತಂಡ 7 ವಿಕೆಟ್ ಅಂತರದಿಂದ ಅಧಿಕಾರಯುತ ಗೆಲುವು ದಾಖಲಿಸಿತು.

ಶಿವಮೊಗ್ಗ ಯೋಧಾಸ್ ನೀಡಿದ 174 ರನ್ ಗುರಿ ಬೆನ್ನಟ್ಟಿದ ಬೆಂಗಳೂರು ಬ್ಲಾಸ್ಟರ್ಸ್ 19 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು ಜಯಿಸಿ ಗೆದ್ದಿತು.

ದುಬೆ, ರೋಹನ್ ಅಬ್ಬರ: ಗುರಿ ಬೆನ್ನತ್ತುವಾಗ ಭುವನ್ ರಾಜ್ ಹಾಗೂ ರೋಹನ ಪಾಟೀಲ ಜೊತೆಯಾಗಿ 65 ರನ್ ಗಳಿಸಿ ಉತ್ತಮ ಅಡಿಪಾಯ ಹಾಕಿದರು. ಭುವನ್ ರಾಜ್ ನಿರ್ಗಮನದ ನಂತರ ಇನ್ನೊಂದೆಡೆ ರೋಹನ ಪಾಟೀಲ ಕೂಡ ಮಿಂಚಿ 32 ಎಸೆತದಲ್ಲಿ ಅರ್ಧ ಶತಕ ಪೂರೈಸಿದರು. ಬ್ಯಾಟಿಂಗ್ ಮುಂದುವರಿಸಿ ಕ್ರಿಷೆನ್ ಅವರೊಂದಿಗೆ ಜೊತೆ ಸೇರಿ 54ರನ್ ರನ್‌ಗಳ ಜೊತೆಯಾಟ ನಿರ್ಮಿಸಿದರು. ಅವರಿಬ್ಬರೂ ವಿಕೆಟ್ ಒಪ್ಪಿಸಿದ ನಂತರ ಆಲ್‌ರೌಂಡರ್ ಪ್ರವೀಣ ದುಬೆ ಬಿರುಸಿನ ಆಟವಾಡಿದರು. ಬೌಲಿಂಗ್‌ನಲ್ಲಿ ಪ್ರಮುಖ ಒಂದು ವಿಕೆಟ್ ಪಡೆದು ಮಿಂಚಿದ್ದ ಪ್ರವೀಣ ಕೇವಲ 15 ಬೌಲ್‌ಗೆ 39 ರನ್ ಗಳಿಸಿ ಪಂದ್ಯ ಗೆಲ್ಲಿಸಿದರು.

ಇದಕ್ಕೂ ಮೊದಲು ಬ್ಯಾಟ್ ಮಾಡಿದ ಶಿವಮೊಗ್ಗ ತಂಡ ಆರಂಭಿಕ ಲವ್ನೀತ್ ಸಿಸೋಡಿಯಾ (51, 32ಎ, 4ಬೌ6, 6ಸಿ2) ಅವರನ್ನು ಬಿಟ್ಟರೆ ಉಳಿದ ಆಟಗಾರರಿಂದ ಹೆಚ್ಚು ರನ್ ಮೂಡಿ ಬರಲಿಲ್ಲ.



ಚಿತ್ರ: ಮಂಜುನಾಥ ಜರತಾರಘರ

ಸಂಕ್ಷಿಪ್ತ ಸ್ಕೋರ್

ಶಿವಮೊಗ್ಗ ಯೋಧಾಸ್ 20 ಓವರ್‌ಗಳಲ್ಲಿ 173/6: ಲವನೀತ 51, ಸ್ವರೂಪ ಆರ್.36★; ರೋಹನ 21/3.
ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್ 19 ಓವರ್‌ಗಳಲ್ಲಿ 177/3: ರೋಹನ 62, ಪ್ರವೀಣ 39★; ಕ್ರಿಷ 34/1

ಗ್ಲೋಬಲ್ ಚೆಸ್ ಲೀಗ್‌ಗೆ ಸಕಲ ಸಿದ್ಧತೆ

ಬೆಂಗಳೂರು: ಗ್ಲೋಬಲ್ ಚೆಸ್ ಲೀಗ್‌ನ ನಾಲ್ಕನೇ ಆವೃತ್ತಿಗೆ ವೇದಿಕೆ ಸಜ್ಜಾಗಿದ್ದು, ಸೋಮವಾರದಂದು ಮುಂಬೈನಲ್ಲಿ ಆಟಗಾರರ ಡ್ರಾಫ್ಟ್ ನಡೆಯಲಿದೆ. ಸೆಪ್ಟೆಂಬರ್ 30ರಿಂದ 13ರವರೆಗೆ ಬೆಂಗಳೂರಿನಲ್ಲಿ ನಡೆಯಲಿರುವ ಟೂರ್ನಿಗಾಗಿ ಆರು ಫ್ರಾಂಚೈಸಿಗಳು ತಮ್ಮ ತಂಡಗಳನ್ನು ಇದೇ ಡ್ರಾಫ್ಟ್ ಮೂಲಕ ಅಂತಿಮ ಮಾಡಲಿವೆ. ಒಂದು ಅತ್ಯಂತ ವಿಶಾಲವಾದ ಬಳಿಕ ವಿಶ್ವ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ಮತ್ತೆ ಲೀಗ್‌ಗೆ ಮರಳುತ್ತಿದ್ದು, ಪ್ರತೀತ ಮಹಿಳಾ ವಿಶ್ವಕಪ್ ಚಾಂಪಿಯನ್ ದಿವ್ಯಾ ದೇಶಮುಖ್ ಮೊದಲ ಬಾರಿಗೆ ಗ್ಲೋಬಲ್ ಚೆಸ್ ಲೀಗ್‌ನಲ್ಲಿ ಆಡಲಿದ್ದಾರೆ. ಈ ಬಾರಿ ಒಟ್ಟು 36 ಗ್ರ್ಯಾಂಡ್‌ಮಾಸ್ಟರ್‌ಗಳು ಆಟಗಾರರ ಪಟ್ಟಿಯಲ್ಲಿದ್ದಾರೆ. ವಿಶ್ವ ಚಾಂಪಿಯನ್‌ಗಳು, ವಿಶ್ವಕಪ್ ವಿಜೇತರು, ಒಲಿಂಪಿಯಾಡ್ ಪದಕ ವಿಜೇತರು ಹಾಗೂ ಉದಯೋನ್ಮುಖ ಪ್ರತಿಭೆಗಳು ಡ್ರಾಫ್ಟ್‌ನಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಪ್ರತಿ ತಂಡವು ಒಬ್ಬ ಐಕಾನ್, ಒಬ್ಬರು ಸೂಪರ್‌ಸ್ಟಾರ್ ಪುರುಷರು, ಒಬ್ಬರು ಸೂಪರ್ ಸ್ಟಾರ್ ಮಹಿಳೆಯರು ಮತ್ತು ಒಬ್ಬ ಪ್ರಾಡಿಜಿ ಸೇರಿ ಆರು ಸದಸ್ಯರ ತಂಡವನ್ನು ರಚಿಸಲಿದೆ. ಕೂಟದಲ್ಲಿ ಒಟ್ಟು 6 ಫ್ರಾಂಚೈಸಿಗಳು ಇರಲಿವೆ. ಡ್ರಾಫ್ಟ್‌ನ ಪ್ರಮುಖ ಆಕರ್ಷಣೆಯಲ್ಲಿ ವಿಶ್ವನಾಥನ್ ಆನಂದ್, ಇಯಾನ್ ನೆಪೊಮ್ನಿಯಾಚ್ಚಿ, ಲೆವೊನ್ ಅರೋನಿಯನ್, ಕೊನೆರು ಹಂಪಿ, ಅಲಿರೇಜಾ ಫಿರೋಜ್ಜಾ, ಮ್ಯಾಕ್ಸಿಮ್ ವಾಷಿಯರ್ ಲಾಗ್ರೇವ್, ಜಾವೋಖಿರ್ ಸಿಂದರೋವ್, ಭಾರತದ ಅರ್ಜುನ್ ಇರಿಗೈಸಿ ಇದ್ದಾರೆ.

ವಿಂಬಲ್ಡನ್‌ಗೆ ವೇದಿಕೆ ಸಿದ್ಧ

ಲಂಡನ್: ವಿವಿಧ ಕಾರಣಗಳಿಂದ ಹೊತ್ತು ಇಂಗ್ಲೆಂಡ್‌ಗೆ ಬಂದಿರುವ ವಿಶ್ವದ ಮೂಲೆ ಮೂಲೆಯ ಟೆನಿಸ್ ಆಟಗಾರರು ಸೋಮವಾರದಿಂದ ಆರಂಭವಾಗಲಿರುವ ವಿಂಬಲ್ಡನ್ ಪಂದ್ಯಾವಳಿಗೆ ಸಜ್ಜಾಗಿದ್ದಾರೆ.

ಫ್ರೆಂಚ್ ಓಪನ್ ನಂತರ ಹಾಗೂ ಯುಎಸ್ ಓಪನ್ ಮೊದಲು ನಡೆಯುವ ಗ್ರ್ಯಾಂಡ್‌ಸ್ಲಾಮ್ ಟೂರ್ನಿಯಾದ ವಿಂಬಲ್ಡನ್ ಪಂದ್ಯಾವಳಿಗೆ ಭರ್ಜರಿ ಸಿದ್ಧತೆಗಳು ನಡೆದಿದ್ದು ಪಂದ್ಯಗಳು ಸೋಮವಾರ ಶುರುವಾಗಲಿವೆ. ಅರ್ಹತಾ ಸುತ್ತಿನ ಪಂದ್ಯಗಳು ಈಗಾಗಲೇ ನಡೆಯುತ್ತಿದ್ದು, ಪ್ರಮುಖ ಆಟಗಾರರು ಪಂದ್ಯಾವಳಿಯ ಮುಖ್ಯ ಡ್ರಾಗೆ ಮುನ್ನಡೆಯುತ್ತಿದ್ದಾರೆ. 2023, 2024ರ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಇರುವುದಿಲ್ಲ, ಗಾಯದಿಂದ ಇನ್ನೂ ಚೇತರಿಸಿಕೊಳ್ಳದ ಅವರು ಪಂದ್ಯಾವಳಿಯಿಂದ ದೂರ ಉಳಿಯುವುದಾಗಿ ಈಗಾಗಲೇ ಹೇಳಿದ್ದಾರೆ.

ಫೈನಲ್‌ನಲ್ಲೇ ದೊಡ್ಡ ಫೈಟ್, ಇದು ಟೂರ್ನಿಯ ವಿಶೇಷ: ಸಾಮಾನ್ಯವಾಗಿ ಈ ಟೂರ್ನಿಯಲ್ಲಿ ಮೊದಲಿಗೆ ದೊಡ್ಡ ದೊಡ್ಡ ಆಟಗಾರರು ಮುಖಾಮುಖಿಯಾಗುವುದಿಲ್ಲ. ಆರು ಸುತ್ತುಗಳಲ್ಲಿ ಮೂರು ಸುತ್ತುಗಳನ್ನು ಬೀಜ ಉಳ್ಳ ಆಟಗಾರರನ್ನು ಫೈಟ್ ಎಂದು ಕರೆಯಲಾಗುತ್ತದೆ. ಮುಖ್ಯವಾಗಿ 32 ಆಟಗಾರರ ಪಟ್ಟಿಯೊಂದನ್ನು ಮಾಡಲಾಗುತ್ತದೆ. ಅದರಲ್ಲಿರುವ ಆಟಗಾರರು ಒಬ್ಬರನ್ನೊಬ್ಬರು ಫೈನಲ್‌ನಲ್ಲೇ ಮುಖಾಮುಖಿಯಾಗುತ್ತಾರೆ.

128 ಪಟುಗಳ ಮುಖ್ಯ ಡ್ರಾ: ಟೆನಿಸ್ ವೇಳಾಪಟ್ಟಿ ಮತ್ತು ಪಂದ್ಯಾಟಗಳನ್ನು ವಿಭಿನ್ನ ರೀತಿಯಲ್ಲಿ ಆಯೋಜಿಸಲಾಗುತ್ತದೆ. ಮುಖ್ಯವಾಗಿ ರ್‍ಯಾಂಕಿಂಗ್ ಆಧಾರಿತ ಆಟಗಾರರು ನೇರ ಅರ್ಹತೆ ಪಡೆದಿರುತ್ತಾರೆ. ಉಳಿದ ಆಟಗಾರರನ್ನು ಅರ್ಹತಾ ಸುತ್ತಿನ ಮೂಲಕ ಆಯ್ಕೆ ಮಾಡಿಕೊಂಡು 128 ಜನರ ಡ್ರಾ ಅನ್ನು ಮಾಡಲಾಗುತ್ತದೆ.

ಮೊದಲ ದಿನವೇ ಬಿಗ್ ಫೈಟ್: ಸೋಮವಾರ ಆರಂಭದ ದಿನದಂದೇ ವಿವಿಧ ಟೆನಿಸ್ ದಿಗ್ಗಜರು ಸೆಣಸಾಟ ನಡೆಸಲಿದ್ದಾರೆ. ಹಾಲಿ ಚಾಂಪಿಯನ್ ಎನ್ನಿಸಿರುವ ಯಾನಿಕ್ ಸಿನ್ನರ್, ಮಿಯೋಮಿರ್ ಅವರನ್ನು ಎದುರಿಸಲಿದ್ದಾರೆ. ನೊವಾಕ್ ಜೊಕೊವಿಚ್ ವೈ.ಪಿ.ವು ಅವರನ್ನು ಎದುರಿಸಲಿದ್ದಾರೆ. ಮಹಿಳೆಯರ ಸಿಂಗಲ್ಸ್ ವಿಭಾಗದ ವಿಶ್ವ ನಂ.1 ಆಟಗಾರ್ತಿ ಆರ್ಯನಾ ಸಬಲೆಂಕಾ ಅವರು ಕೊಸ್ಟ್ಯುಕ್ ಅವರನ್ನು ಎದುರಿಸಲಿದ್ದಾರೆ.



ವಿಲಿಯಮ್ಸ್ ಸಂಚಲನ

ವಿಂಬಲ್ಡನ್ ಪಂದ್ಯಾವಳಿಯ ವಿಶೇಷವೆಂದರೆ ಈ ಬಾರಿ ಅಮೆರಿಕದ ದಿಗ್ಗಜ ಆಟಗಾರ್ತಿ ಸೆರೆನಾ ವಿಲಿಯಮ್ಸ್ ಕಂಬ್ಯಾಕ್ ಮಾಡಿದ್ದಾರೆ. ಕಳೆದ ಕೆಲವು ಪಂದ್ಯಾವಳಿಗಳಿಂದ ದೂರ ಉಳಿದಿದ್ದ ಅವರು, ಸಂಪೂರ್ಣ ಫಿಟ್ ಆಗಿದ್ದು 44ನೇ ವಯಸ್ಸಿನಲ್ಲಿ ಕಂಬ್ಯಾಕ್ ಮಾಡಲಿದ್ದಾರೆ. ಈ ಬಗ್ಗೆ ಟೆನಿಸ್ ಜಗತ್ತೇ ಮಿಶ್ರ ಅಭಿಪ್ರಾಯ ವ್ಯಕ್ತಪಡಿಸಿದ್ದು, ಜೊಕೊವಿಚ್, ಸಬಲೆಂಕಾ ಸೇರಿದಂತೆ ಟೆನಿಸ್ ದಿಗ್ಗಜರು ಸ್ವಾಗತಿಸಿದ್ದಾರೆ. ವಿಲಿಯಮ್ಸ್ ಮೊದಲನೇ ಸುತ್ತಿನಲ್ಲಿ ವಿಕ್ ಚಾಯಿಂಗ್ ಅವರನ್ನು ಎದುರಿಸಲಿದ್ದಾರೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



6028

ಎಡದಿಂದ ಬಲಕ್ಕೆ
1.ಕೋಲಿನಂತೆ ದೇಹ ಚಾಚಿ ನಮಸ್ಕರಿಸುವುದು (5)
3.ಉದಾತ್ತ ಗುಣವುಳ್ಳ ದೊಡ್ಡ ಮನುಷ್ಯ (3)
4.ಮಂಕಿನ ನಡುವೆ ಇರುವ ಇಲಿ (3)
5.ಇದು ಶಾಸನಾರ್ಥ-ಪಾರ್ಲಿಮೆಂಟು (3)
9.ತಪ್ಪಿಸಿಕೊಳ್ಳಲಾಗದ ಕಾಲನ ಹಗ್ಗ (4)
11.ಕರ್ನಾಟಕ ಸಂಗೀತವನ್ನು ಹೀಗೂ ಕರೆಯುತ್ತಾರೆ (4)
13.ಈ ಶ್ರೀಗಂಧದ ಮರ ಒಂದು ವಾಹಿನಿಯ ಹೆಸರಾಗಿದೆ (3)
15.ಎರಡನೆಯ ತೀರ್ಥಂಕರರ ಹೆಸರು (3)
16.ಕೇಳದೆ ಉಪಯೋಗಿಸಿಕೊಳ್ಳುವುದು (3)
17.ಕಾವಲಿನಲ್ಲಿ ನಿದ್ದೆಯಲ್ಲಿ ಮಾತನಾಡುವಿಕೆಯಿದೆ (5)

ಮೇಲಿನಿಂದ ಕೆಳಕ್ಕೆ
1.ಹಲ್ಲಿನ ಮೂಲಸ್ಥಳದಿಂದ ಹುಟ್ಟುವ ವರ್ಣ (5)
2.ಉಲ್ಕಾ ಮೂಡಿದ ಉತ್ಪಾತ-ಅಧಿಕವಾದ ಸಂತೋಷ (3)
3.ಮತ್ತು ಇದರ ನಡುವೆ ಶ್ರೀಪಾದವಿದೆ (3)
6.ಅಂತಃಕರಣ-ಸಹಾನುಭೂತಿಯುಳ್ಳವನು (4)
7.ಗಣಿತದಲ್ಲಿ ಭಿನ್ನರಾಶಿಯಲ್ಲಿ ಭಾಗಗಳು (4)
8.ಬಲ್ಲಿಗೆ ಹೂವಿನ ದಳ ಕರಿಯಲ್ಲಿ ನೀರ್ಭಾಗವಾಗಿದೆ (2)
10.ಚಿಮ್ಮಿದ ಮೇಲಿನ ಕಮ್ಮಟ್ಟದ ಗುರುತು (2)
12.ದಾರಿ ಕಾಣದಂತೆ ಮಾಡುವಿಕೆ (5)
13.ಜುಟ್ಟು-ಶಿಖೆಯ ಸಮಾನಪದ (3)
14.ಪಾಪಿಗಳನ್ನು ಶಿಕ್ಷಿಸುವ ಲೋಕ (3)

6027 ಉತ್ತರ

ಎಡದಿಂದ ಬಲಕ್ಕೆ:
1.ಪದವೀಧರ 5.ನಾಟಿ
6.ಅವೀಚ 7.ಸುಲಕ್ಷಣ
8.ನಿರ್ವಹ 10.ತಿಲಕ
12.ಗಣಸ್ಥಾನ
14.ಸಂಗಮ 16.ಚಾಳಿ
17.ರಕ್ತಸಂಬಂಧ

ಮೇಲಿನಿಂದ ಕೆಳಕ್ಕೆ:
1.ಪದವಿಪೂರ್ವ
2.ಲಕ್ಷ್ಮೀಸು 3.ರಸಾತಲ
4.ಪ್ರವೇಶ 6.ಅಗ್ರತಿ
9.ನಿಗಮ 11.ಕಮಲಾಕರ
13.ಗೃಹಬಾರ
14.ಸಂದೇಹ
15.ಸಂಗೀತ

ಕೆಜಿಎಫ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಿವಾಂಶು ರಜಪೂತ್ ಹೇಳಿಕೆ

ಶಿಕ್ಷಕರಿಂದ ವ್ಯಸನ ತಡೆ



• **ಕೆಜಿಎಫ್:** ಸಮಾಜದಲ್ಲಿ ಮಕ್ಕಳು ಹಾಗೂ ಯುವಜನತೆ ಮಾದಕ ದ್ರವ್ಯ ವ್ಯಸನಕ್ಕೆ ತುತ್ತಾಗದಂತೆ ತಡೆಯುವಲ್ಲಿ ಶಾಲಾ-ಕಾಲೇಜುಗಳ ಶಿಕ್ಷಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದು ಕೆಜಿಎಫ್ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಿವಾಂಶು ರಜಪೂತ್ ಹೇಳಿದರು.

ಕೆಜಿಎಫ್ ಜಿಲ್ಲಾ ಪೊಲೀಸ್, ಜಿಲ್ಲಾಡಳಿತ, ಶಿಕ್ಷಣ ಇಲಾಖೆ ಹಾಗೂ ಬಿಜಿಎಂಎಲ್ ಸಂಯುಕ್ತ ಆಶ್ರಯದಲ್ಲಿ ಜಿಮ್‌ಖಾನ ಮೈದಾನದಲ್ಲಿ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಾದಕ ದ್ರವ್ಯ ವಿರೋಧಿ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹದಿಹರೆಯದ ವಿದ್ಯಾರ್ಥಿಗಳು ಮಾನಸಿಕ ಹಾಗೂ ದೈಹಿಕ ಬದಲಾವಣೆಗಳನ್ನು ಎದುರಿಸುವ ಸಂದರ್ಭದಲ್ಲಿ ಶಿಕ್ಷಕರು ಮತ್ತು ಪೋಷಕರು ಸೂಕ್ತ ಮಾರ್ಗದರ್ಶನ ನೀಡಬೇಕು. ಜೀವನದಲ್ಲಿ ಸೋಲು ಮತ್ತು ವೈಫಲ್ಯ ಎದುರಾದಾಗ ವಿದ್ಯಾರ್ಥಿಗಳ ಮೇಲಿನ ಒತ್ತಡ ನಿವಾರಿಸಿ, ಸಕಾರಾತ್ಮಕ ದಾರಿಯಲ್ಲಿ ಮುನ್ನಡೆಸುವ ಜವಾಬ್ದಾರಿ ಶಿಕ್ಷಣ ಸಂಸ್ಥೆಗಳ ಮೇಲಿದೆ ಎಂದು ಹೇಳಿದರು. ಮಾದಕ ವ್ಯಸನ ನಿರ್ಮೂಲನೆ ಕೇವಲ ಪೊಲೀಸ್ ಇಲಾಖೆಯ ಜವಾಬ್ದಾರಿಯಲ್ಲ, ಇದು ಸಮಾಜದ ಪ್ರತಿಯೊಬ್ಬರ ಸಾಮಾಜಿಕ ಹೊಣೆಗಾರಿಕೆಯಾಗಿದೆ. ಶಾಲಾ-ಕಾಲೇಜುಗಳ ಸುಮಾರು 2 ಸಾವಿರ ವಿದ್ಯಾರ್ಥಿಗಳು ಫುಟ್‌ಬಾಲ್ ಪಂದ್ಯಾವಳಿಯಲ್ಲಿ ಭಾಗವಹಿಸುವ ಮೂಲಕ ಡ್ರಗ್ಸ್ ವಿರುದ್ಧ ಸಮರ ಸಾರಿರುವುದು ಶ್ಲಾಘನೀಯ ಬೆಳವಣಿಗೆಯಾಗಿದೆ ಎಂದು ತಿಳಿಸಿದರು.

ಸಂಸದ ಮಲ್ಲೇಶ್ ಬಾಬು ಮಾತನಾಡಿ, 140 ವರ್ಷಗಳ ಇತಿಹಾಸ ಹೊಂದಿರುವ ಜಿಮ್‌ಖಾನ ಫುಟ್‌ಬಾಲ್ ಮೈದಾನವನ್ನು ಸಜ್ಜುಗೊಳಿಸಿ ಯುವಜನರಲ್ಲಿ ಕ್ರೀಡಾ ಮನೋಭಾವ ಬೆಳೆಸುವ ಹಾಗೂ ಡ್ರಗ್ಸ್ ವಿರೋಧಿ ಜಾಗೃತಿ ಮೂಡಿಸುವ ಉದ್ದೇಶದಿಂದ ಜಿಲ್ಲಾ ಪೊಲೀಸ್ ಇಲಾಖೆ ವಿನೂತನ ಕಾರ್ಯಕ್ರಮ ಹಮ್ಮಿಕೊಂಡಿರುವುದು ಸಂತಸ ತಂದಿದೆ ಎಂದರು.

ಡ್ರಗ್ಸ್ ಮುಕ್ತ ಕರ್ನಾಟಕ ಹಾಗೂ ಡ್ರಗ್ಸ್ ಮುಕ್ತ ಕೆಜಿಎಫ್ ಪೊಲೀಸ್ ಜಿಲ್ಲೆ ನಿರ್ಮಾಣದ ಗುರಿಯೊಂದಿಗೆ ಎರಡು ದಿನಗಳ ಕಾಲ ಫುಟ್‌ಬಾಲ್ ಪಂದ್ಯಾವಳಿಗಳನ್ನು ಆಯೋಜಿಸಲಾಗಿದ್ದು, ಒಟ್ಟು 14 ತಂಡಗಳು ಭಾಗವಹಿಸುತ್ತಿವೆ ಎಂದು ಹೇಳಿದರು.

ಕೆಜಿಎಫ್‌ನ ಕ್ರೀಡಾ ಪರಂಪರೆ; 2001ರಲ್ಲಿ ಚಿನ್ನದ ಗಣಿ ಕಾರ್ಯಾಚರಣೆ ಸ್ಥಗಿತಗೊಂಡ ಬಳಿಕ ಜಿಮ್‌ಖಾನ ಫುಟ್‌ಬಾಲ್ ಮೈದಾನ ಬಳಕೆಗೆ ಬಂದಿರಲಿಲ್ಲ. 1885ರಲ್ಲಿ ಬ್ರಿಟಿಷರು ನಿರ್ಮಿಸಿದ್ದ ಈ ಮೈದಾನ ರಾಷ್ಟ್ರ ಹಾಗೂ ರಾಜ್ಯಮಟ್ಟದ ಅನೇಕ ಫುಟ್‌ಬಾಲ್ ಪಂದ್ಯಾವಳಿಗಳಿಗೆ ಸಾಕ್ಷಿಯಾಗಿದ್ದು, ಅಂತಾರಾಷ್ಟ್ರೀಯ ಮಟ್ಟದ ಹಲವು ಆಟಗಾರರನ್ನು ನೀಡಿದ ಹೆಗ್ಗಳಿಕೆಯನ್ನು ಹೊಂದಿದೆ ಎಂದು ಸಂಸದರು ತಿಳಿಸಿದರು.

ಜನರ ಒತ್ತಾಯ ಹಾಗೂ ಕ್ರೀಡಾಭಿಮಾನಿಗಳ ಆಶಯದ ಮೇರೆಗೆ ಕೇಂದ್ರ ಸರ್ಕಾರದ ಖೇಲೋ ಇಂಡಿಯಾ ಯೋಜನೆಯಡಿ ಮೈದಾನವನ್ನು ಪುನಶ್ಚೇತನಗೊಳಿಸಿ ಪಂದ್ಯಾವಳಿಗಳನ್ನು ಆಯೋಜಿಸಲಾಗಿದೆ ಎಂದರು.

ಖೇಲೋ ಇಂಡಿಯಾದಿಂದ ಕ್ರೀಡಾ ಅಭಿವೃದ್ಧಿಗೆ ಉತ್ತೇಜನ

ಕಾರ್ಯಕ್ರಮದಲ್ಲಿ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ನರಸಿಂಹಮೂರ್ತಿ, ಡಿವೈಎಸ್ಪಿ ಲಕ್ಷ್ಮಯ್ಯ, ಡಾ. ರಾಜೇಂದ್ರಕುಮಾರ್, ಡಾ. ಸುರೇಶ್ ಕುಮಾರ್, ಅಮು ಲಕ್ಷ್ಮೀನಾರಾಯಣ್ ಹಾಗೂ ಫುಟ್‌ಬಾಲ್ ಆಟಗಾರರು ಉಪಸ್ಥಿತರಿದ್ದರು.

ದೂರದೃಷ್ಟಿಯ ಮುತ್ಸದ್ದಿ ನಾಯಕ: ರವಿಕುಮಾರ್


• **ಶಿಡ್ಲಘಟ್ಟ:** ಕೆಂಪೇಗೌಡರು ಎಲ್ಲರನ್ನೊಳಗೊಂಡ ಸಮಾಜ ನಿರ್ಮಾಣದ ದೂರದೃಷ್ಟಿಯ ಮುತ್ಸದ್ದಿ ನಾಯಕರು ಎಂದು ಶಾಸಕ ಬಿ.ಎನ್.ರವಿಕುಮಾರ್ ಬಣ್ಣಿಸಿದ್ದಾರೆ. ತಾಲ್ಲೂಕು ಪಂಚಾಯಿತಿ ಮುಂಭಾಗ ನಾಡ ಹಬ್ಬಗಳ ಆಚರಣಾ ಸಮಿತಿ ಹಾಗೂ ಒಕ್ಕಲಿಗರ ಸಂಘದ ವತಿಯಿಂದ ಆಯೋಜಿಸಲಾಗಿದ್ದ ನಾಡಪ್ರಭು ಕೆಂಪೇಗೌಡರ 517ನೇ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಇಂದು ಸರ್ಕಾರದ ವತಿಯಿಂದ ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ಆಚರಿಸಲಾಗುತ್ತಿದ್ದು, ನಾಡಿನ ಎಲ್ಲರಿಗೂ ನಾಡಪ್ರಭು ಕೆಂಪೇಗೌಡರ 517ನೇ ಜಯಂತಿಯ ಶುಭಾಶಯಗಳು. 2017ರಲ್ಲಿ ಸರ್ಕಾರ ಪ್ರತಿ ವರ್ಷ ಜೂನ್ 27 ರಂದು ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ಆಚರಿಸುವ ತೀರ್ಮಾನವನ್ನು ಕೈಗೊಂಡಿತು. ನಾಡಪ್ರಭು ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರವನ್ನು ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಪ್ರಾರಂಭಿಸಲಾಯಿತು. ವೃತ್ತಿಯಾಧಾರಿತ ಪೇಟೆಗಳನ್ನು ನಿರ್ಮಿಸಿದ ಕೀರ್ತಿ ಕೆಂಪೇಗೌಡರದ್ದು. ಬೆಂಗಳೂರು ನಗರ ಅಂತಾರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆಯಲು ಕೆಂಪೇಗೌಡರೇ ಮೂಲ ಕಾರಣ. ವಿಶ್ವಮಟ್ಟದಲ್ಲಿ ಬೆಂಗಳೂರು ಅತಿವೇಗದಲ್ಲಿ ಬೆಳೆಯುತ್ತಿರುವ ನಗರ. ಎಲ್ಲ ಜನರನ್ನೊಳಗೊಂಡ ಅಭಿವೃದ್ಧಿಗೊಳಿಸುವ, ಎಲ್ಲ ಸಮುದಾಯಗಳಿಗೂ ನ್ಯಾಯ ಒದಗಿಸುವ ಪ್ರಾಮಾಣಿಕ ಪ್ರಯತ್ನವನ್ನು ಅವರು ಕೈಗೊಂಡಿದ್ದರು. ಎಲ್ಲರನ್ನೊಳಗೊಂಡ ಸಮಾಜ ನಿರ್ಮಾಣವೇ ನಮ್ಮ ಸಂವಿಧಾನದ ಆಶಯ. 500 ವರ್ಷಗಳ ಹಿಂದೆಯೇ ನಾಡಪ್ರಭು ಕೆಂಪೇಗೌಡರು ಎಲ್ಲರನ್ನೊಳಗೊಂಡ ಸಮಾಜ ನಿರ್ಮಿಸುವ ದೂರದೃಷ್ಟಿಯ ಮುತ್ಸದ್ದಿ ನಾಯಕರಾಗಿದ್ದರು ಎಂದರು.

ಮಾರ್ನಿಂಗ್ ಶೋ

666 ಆಪರೇಷನ್ ಡ್ರೀಮ್ ಥಿಯೇಟರ್; ಜುಲೈ 3ಕ್ಕೆ ಟೀಸರ್

ಅದ್ದೂರಿ ತಾರಾಗಣ ಹಾಗೂ ವಿಭಿನ್ನ ಪೋಸ್ಟರ್‌ಗಳ ಮೂಲಕ ದೊಡ್ಡಮಟ್ಟದ ಕುತೂಹಲ ಹುಟ್ಟು ಹಾಕಿರುವ ಚಿತ್ರ 666 ಆಪರೇಷನ್ ಡ್ರೀಮ್ ಥಿಯೇಟರ್. ಹೇಮಂತ್ ಎಂ.ರಾವ್ ನಿರ್ದೇಶನದ ಈ ಚಿತ್ರದಲ್ಲಿ ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್, ಡಾಲಿ ಧನಂಜಯ್, ಬಹುಭಾಷಾ ತಾರೆ ಪ್ರಿಯಾಂಕಾಮೋಹನ್, ಅದಿತಿ ಬಾಲನ್ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ, ಚಿತ್ರತಂಡದಿಂದ ಇದೀಗ ಹೊಸ ಅಪ್‌ಡೇಟ್‌ವೊಂದು ಸಿಕ್ಕಿದೆ. ಜುಲೈ 3ರಂದು ಈ ಚಿತ್ರದ ಹೊಸ ಟೀಸರ್‌ನ್ನು ಚಿತ್ರತಂಡ ಬಿಡುಗಡೆ ಮಾಡಲಿದೆ,

ಸಪ್ತಸಾಗರದಾಚೆ ಎಲ್ಲೋ ಚಿತ್ರದ ಯಶಸ್ಸಿನ ನಂತರ ಹೇಮಂತ್ ಎಂ.ರಾವ್ ಕಥೆ ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿರುವ 666 ಆಪರೇಷನ್ ಡ್ರೀಮ್ ಥಿಯೇಟರ್ ಚಿತ್ರವು ತನ್ನ ಮೇಕಿಂಗ್‌ನಿಂದಲೇ ಸಾಕಷ್ಟು ಕುತೂಹಲ, ನಿರೀಕ್ಷೆಗಳನ್ನು ಹುಟ್ಟು ಹಾಕಿದೆ. ಈಗಾಗಲೇ ಚಿತ್ರದ ವಿಭಿನ್ನ ಶೈಲಿಯ ಸೆಟ್‌ಗಳು ಚಿತ್ರರಂಗದಲ್ಲಿ ದೊಡ್ಡ ಮಟ್ಟದ ಸುದ್ದಿ ಮಾಡಿದ್ದು, ಭಾರೀ ಪ್ರಶಂಸೆಗೆ ಕಾರಣವಾಗಿದೆ. ದೊಡ್ಡ ಪ್ರಮಾಣದಲ್ಲಿ ನಿರ್ಮಿಸಲಾಗುತ್ತಿರುವ ಈ ಚಿತ್ರಕ್ಕೆ ನಿರ್ಮಾಪಕ ಡಾ.ವೈಶಾಕ್ ಜೆ. ಗೌಡ, ಅವರು ಬಹುಕೋಟಿ ಬಂಡವಾಳ ಹೂಡಿದ್ದಾರೆ, ವೈಶಾಕ್ ಜೆ. ಫಿಲಂಸ್ ಅಡಿ ನಿರ್ಮಾಣವಾಗುತ್ತಿರುವ ಈ ಚಿತ್ರ, 70 ದಶಕದ ರೆಟ್ರೋ ಶೈಲಿಯ ಕಥಾಹಂದರ ಒಳಗೊಂಡಿದೆ. ಚಿತ್ರದ ಕುರಿತು ಮಾತನಾಡಿರುವ ಅವರು ನಾನು ಡಾ.ರಾಜ್‌ಕುಮಾರ್ ಅವರ ಬಾಂಡ್ ಸರಣಿಯ ಚಿತ್ರಗಳ ಅಭಿಮಾನಿ. ಹಾಗಾಗಿ ಆ ಪ್ರಕಾರದ ಚಿತ್ರಗಳೆಂದರೆ ನನಗೆ ಮೊದಲಿನಿಂದಲೂ ವಿಶೇಷ ಆಕರ್ಷಣೆ. ಈ ಸಿನಿಮಾದ ಕಥೆ ಸಂಪೂರ್ಣವಾಗಿ ಭಾವನೆಗಳ ಮೇಲೆ ನಿಂತಿರುವುದರಿಂದ ನನಗೆ ಹೆಚ್ಚು ಇಷ್ಟವಾಯಿತು. ಕಥೆಯಲ್ಲಿ ನಿಗೂಢತೆ ಮತ್ತು ಭಾವನೆಗಳನ್ನು ಬೆರೆಸಿರುವ ರೀತಿ ನನ್ನನ್ನು ಈ ಚಿತ್ರ ನಿರ್ಮಾಣ ಮಾಡಲು ಪ್ರೇರೇಪಿಸಿತು. ನನ್ನ ನಿರ್ಮಾಣದ ಪ್ರಥಮ ಚಿತ್ರ ದೊಡ್ಡದಾಗಿರಬೇಕೆಂಬ ಮಹತ್ವಾಕಾಂಕ್ಷೆ ನನ್ನದು. ಏಕೆಂದರೆ ಈ ಚಿತ್ರವೇ ನನ್ನ ಮುಂದಿನ ಸಿನಿಮಾಗಳಿಗೆ ಬಲವಾದ ಅಡಿಪಾಯ ಹಾಕಲಿದೆ. 70ರ ದಶಕದ ವಿಂಟೇಜ್ ಕಾಲಘಟ್ಟವನ್ನು ಮರುಸೃಷ್ಟಿಸುವುದೇ ನಮಗೆ ಬಹುದೊಡ್ಡ ಸವಾಲಾಗಿತ್ತು. ಇಂಥ ನೈಜ ಸ್ಥಳಗಳನ್ನು ಹುಡುಕಿ



ಚಿತ್ರೀಕರಣ ಮಾಡುವುದು ಅಸಾಧ್ಯ. ಹಾಗಾಗಿ ಕಲಾನಿರ್ದೇಶಕ ವಿಶ್ವಾಸ್ ಮತ್ತವರ ತಂಡ ಪ್ರತಿ ವಸ್ತುವನ್ನೂ ಸೆಟ್‌ನಲ್ಲಿ ಸೃಷ್ಟಿಸಲಾಯಿತು. ಸಿನಿಮಾ ನೋಡುವಾಗ ಪ್ರೇಕ್ಷಕರಿಗೆ ಇದು ಸೆಟ್ಟೋ ಅಥವಾ ನಿಜವಾದ ಸ್ಥಳವೋ ಎಂದು ಗುರುತಿಸಲು ಸಾಧ್ಯವಾಗದಷ್ಟು ನೈಜವಾಗಿ ಸಿನಿಮಾ ಸೆಟ್ ಮೂಡಿಬಂದಿದೆ ಎಂದು ಹೇಳಿದ್ದಾರೆ.

ಡಾಲಿ ಧನಂಜಯ, ಡಾ.ಶಿವರಾಜಕುಮಾರ್ ಪ್ರಮುಖ ಪಾತ್ರದಲ್ಲಿ ನಟಿಸಿರುವ ಆಪರೇಷನ್ ಡ್ರೀಮ್ ಥಿಯೇಟರ್ ಚಿತ್ರಕ್ಕೆ ಚರಣ್‌ರಾಜ್ ಅವರ ಸಂಗೀತ ನಿರ್ದೇಶನ, ಅದ್ವೈತ ಗುರುಮೂರ್ತಿ ಅವರ ಛಾಯಾಗ್ರಹಣ, ವಿಶ್ವಾಸ್ ಕಶ್ಯಪ್ ಅವರ ಕಲಾನಿರ್ದೇಶನ, ಇಂಚರ ಸುರೇಶ್ ಅವರ ವಸ್ತ್ರವಿನ್ಯಾಸ ಮತ್ತು ಇಮ್ರಾನ್ ಸರ್ದಾರಿಯಾ ಅವರ ನೃತ್ಯ ಸಂಯೋಜನೆಯಿದೆ. ಹೈ ಬಜೆಟ್ ಮತ್ತು ದೊಡ್ಡ ಕ್ಯಾನ್ವಾಸ್‌ನಲ್ಲಿ ನಿರ್ಮಿಸಲಾಗುತ್ತಿರುವ ಈ ಚಿತ್ರವನ್ನು ಈ ವರ್ಷದ ದ್ವಿತೀಯಾರ್ಧದಲ್ಲಿ, ತೆಲುಗು ಮತ್ತು ಕನ್ನಡ ಭಾಷೆಯಲ್ಲಿ ಏಕಕಾಲದಲ್ಲಿ ಬಿಡುಗಡೆಗೊಳಿಸಲು ತೀರ್ಮಾನಿಸಲಾಗಿದೆ.

ಕೆಂಪಾಂಬುಧಿ ಟೀಸರ್ ಬಿಡುಗಡೆ

ನಮ್ಮ ಸಮಾಜಕ್ಕೆ ಭದ್ರ ಬುನಾದಿ ಹಾಕಿಕೊಟ್ಟ ಮಹನೀಯರನ್ನು ಮತ್ತು ಅವರ ಆದರ್ಶಗಳನ್ನು ನೆನಪಿಸುವ ಇಂಥ ಕಥೆಗಳು ನಿಜಕ್ಕೂ ಮೌಲ್ಯಯುತವಾದವು. ನಮ್ಮ ಹೆಮ್ಮೆಯ ನಗರದ ಇತಿಹಾಸವನ್ನು ಇಂದಿನ ತಲೆಮಾರಿಗೆ ಪರಿಚಯಿಸುತ್ತಾ, ಅದರ ಹಸಿರು ಭವಿಷ್ಯವನ್ನು ಕಾಪಾಡುವ ಜವಾಬ್ದಾರಿಯನ್ನು ಮುಂದಿನ ಪೀಳಿಗೆಯಲ್ಲಿ ಮೂಡಿಸುತ್ತಿರುವ ಈ ಪ್ರಯತ್ನ ಮನಸ್ಸಿಗೆ ತುಂಬ ಹತ್ತಿರವೆನಿಸುತ್ತದೆ.
- ವಿಜಯ್ ಕಿರಗಂದೂರು, ಸಂಸ್ಥಾಪಕರು, ಹೊಂಬಾಳೆ ಫಿಲಂಸ್


ಬೆಂಗಳೂರು ನಗರದ ನಿರ್ಮಾತೃ ನಾಡಪ್ರಭು ಕೆಂಪೇಗೌಡರ ಆದರ್ಶಮಯ ಬದುಕು, ದೂರದೃಷ್ಟಿ ಮತ್ತು ಪರಂಪರೆಯನ್ನು ತೆರೆಯ ಮೇಲೆ ಅನಾವರಣಗೊಳಿಸುವ ಕೆಂಪಾಂಬುಧಿ ಚಿತ್ರದ ಟೀಸರ್ ಬಿಡುಗಡೆಯಾಗಿದೆ. ಪ್ರಶಾಂತ್ ಪ್ರಕಾಶ್ ಫ್ಯಾಮಿಲಿ ಫೌಂಡೇಶನ್ ಪ್ರಸ್ತುತಪಡಿಸುತ್ತಿರುವ ಈ ಚಿತ್ರಕ್ಕೆ ಹೊಂಬಾಳೆ ಮ್ಯೂಸಿಕ್ ಸಹಯೋಗ ನೀಡಿದೆ.

ದೂರದೃಷ್ಟಿಯ ಆಡಳಿತಗಾರ, ಜನಪರ ನಾಯಕ ಹಾಗೂ ಪರಿಸರದ ಮಹತ್ವವನ್ನು ಬಹಳ ಹಿಂದೆಯೇ ಅರಿತು ಅನುಷ್ಠಾನಗೊಳಿಸಿದ್ದ ನಾಡಪ್ರಭು ಕೆಂಪೇಗೌಡರ ಚಿಂತನೆಗಳು ಇಂದಿಗೂ ಬೆಂಗಳೂರಿನ ಅಸ್ತಿತ್ವದ ಅವಿಭಾಜ್ಯ ಭಾಗವಾಗಿದೆ. ಜಾಗೀರ್ ವೆಂಕಟರಾಮಯ್ಯ ಅವರ ಕಾದಂಬರಿಯನ್ನಾಧರಿಸಿ ಕೆಂಪಾಂಬುಧಿ ಚಿತ್ರ ನಿರ್ಮಾಣವಾಗಿದೆ,

ಇದು ಕೇವಲ ಐತಿಹಾಸಿಕ ಕಥನವಲ್ಲ, ಅಂದಿನ ಮತ್ತು ಇಂದಿನ ಬೆಂಗಳೂರನ್ನು ಜೋಡಿಸುವ ಪ್ರಯತ್ನ. ಈ ಚಿತ್ರವು ಮರೆಯಾಗುತ್ತಿರುವ ಗಾರ್ಡನ್ ಸಿಟಿಯ ಹಸಿರು ವೈಭವವನ್ನು ಮತ್ತೆ ನೆನಪಿಸುವುದರ ಜೊತೆಗೆ, ಪರಿಸರ ಸಂರಕ್ಷಣೆ ಮತ್ತು ನಗರವನ್ನು ಕಟ್ಟಿದ ಮೂಲ ಮೌಲ್ಯಗಳೆಡೆಗೆ ಸಮಾಜದ ಗಮನ ಸೆಳೆಯುತ್ತದೆ. ಈ ಚಿತ್ರಕ್ಕೆ ಪ್ರಶಾಂತ್ ಪ್ರಕಾಶ್ ಫ್ಯಾಮಿಲಿ ಫೌಂಡೇಶನ್ ಬೆಂಬಲ ನೀಡಿದೆ. ನೆನಪಿರಲಿ ಪ್ರೇಮ್, ಮೇಘನಾ ಗಾಂವ್ಕರ್, ರಾಜೇಶ್ ನಟರಂಗ, ಸುಧಾ ಬೆಳವಾಡಿ, ಸಂಯುಕ್ತಾ ಹೊರನಾಡು, ನಾಗಶ್ರೀ ಬೇಗಾರ್, ರಾಜೇಂದ್ರ ಕಾರಂತ್, ರಮೇಶ್ ಪಂಡಿತ್ ಸೇರಿದಂತೆ ಹಲವರು ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ.

ರಮೇಶ್ ಬೇಗಾರ್ ಅವರು ಈ ಚಿತ್ರದ ಕಥೆ, ಚಿತ್ರಕಥೆ ಹಾಗೂ ನಿರ್ದೇಶನ ಮಾಡಿದ್ದಾರೆ. ವೀರ್ ಸಮರ್ಥ್ ಅವರ ಸಂಗೀತ ಹಾಗೂ ಹಿನ್ನೆಲೆ ಸಂಗೀತ, ಕಬೀರ್ ಶೃಂಗೇರಿ ಅವರ ಛಾಯಾಗ್ರಹಣ, ಅವಿನಾಶ್ ಶೃಂಗೇರಿ ಅವರ ಸಂಕಲನ, ಅಭಿಷೇಕ್ ಹುಬ್ಬಾರ್ ಅವರ ಕಲಾ ನಿರ್ದೇಶನ ಈ ಚಿತ್ರಕ್ಕಿದೆ.

ಕರ್ನಾಟಕದ ಇತಿಹಾಸ, ಸಂಸ್ಕೃತಿ ಮತ್ತು ಪರಂಪರೆಯನ್ನು ಹೊಸ ತಲೆಮಾರಿಗೆ ತಲುಪಿಸುವ ಇಂತಹ ಪ್ರಯತ್ನಗಳಿಗೆ ಪ್ರಶಾಂತ್ ಪ್ರಕಾಶ್ ಫ್ಯಾಮಿಲಿ ಫೌಂಡೇಶನ್ ನೀಡುತ್ತಿರುವ ಬೆಂಬಲ ಮಹತ್ವದ ಹೆಜ್ಜೆಯಾಗಿದೆ. ನಾಡಪ್ರಭು ಕೆಂಪೇಗೌಡರ ಜೀವನದೃಷ್ಟಿ ಮತ್ತು ಅವರ ದೂರದರ್ಶಿ ಚಿಂತನೆಗಳನ್ನು ತೆರೆಯ ಮೇಲೆ ಮೂಡಿಸುವ ಈ ಚಿತ್ರದ ಮೂಲಕ ಬೆಂಗಳೂರಿನ ಹಸಿರು ಪರಂಪರೆಯನ್ನು ಕಾಪಾಡುವ ಜವಾಬ್ದಾರಿಯ ಬಗ್ಗೆ ಜನರಲ್ಲಿ ಮತ್ತಷ್ಟು ಅರಿವು ಮೂಡಿಸುವ ಆಶಯವೂ ಇದೆ.



ಮಂತ್ರಾಲಯದಲ್ಲಿ ರಾಯರ ದರ್ಶನ

ಲಕ್ಷ್ಮೀ ಗಣೇಶ ಪ್ರೊಡಕ್ಷನ್ಸ್ ಸಹಯೋಗದಲ್ಲಿ ದಿ ನ್ಯೂ ಇಂಡಿಯನ್ ಟೈಮ್ಸ್ ಅಕಾಡೆಮಿ ಅರ್ಪಿಸುವ 'ರಾಯರ ದರ್ಶನ' ವಿಡಿಯೋ ಹಾಡನ್ನು ಮಂತ್ರಾಲಯದ ಶ್ರೀಸುಬುಧೇಂದ್ರತೀರ್ಥ ಶ್ರೀಪಾದಂಗಳು ಬಿಡುಗಡೆ ಮಾಡಿದರು. ಸುಗುಣ ಭಟ್ ಅವರ ನಿರ್ಮಾಣದ ಈ ಹಾಡಿಗೆ ರಘುಭಟ್ ಅವರು ನಿರ್ದೇಶನ ನಿರ್ಮಾಣ ಮಾಡಿದ್ದಾರೆ.

ಶನಿವಾರ ಸಂಜೆ ಮಂತ್ರಾಲಯದ ಶ್ರೀಮಠದ ಆವರಣದಲ್ಲಿ ವೇದಿಕೆಯಲ್ಲಿ ಮಾತನಾಡಿದ ಶ್ರೀಸುಬುಧೇಂದ್ರ ತೀರ್ಥರು ರಾಯರ ಭಕ್ತರ ಸಹಕಾರದಿಂದ ರಾಯರದರ್ಶನ ಆಲ್ಬಂ ಸಾಂಗ್ ತುಂಬಾ ಚೆನ್ನಾಗಿ ಮೂಡಿಬಂದಿದೆ. ಅನಿಲ್ ಲೋಕನಾಥ್ ಅವರ ಸ್ವರ ಸಂಯೋಜನೆಯಲ್ಲಿ ಹಾಗೂ ಅಪ್ಪು ವಿ. ಅವರ ಗಾಯನದಲ್ಲಿ ಮೂಡಿಬಂದಿರುವ ಈ ಹಾಡಿನಲ್ಲಿ ಶ್ರೀಮಠದಲ್ಲಿ ನಡೆಯುವ ನಿತ್ಯ ಪೂಜೆ, ಉತ್ಸವ ಹಾಗೂ ವಾರ್ಷಿಕ ಉತ್ಸವಗಳನ್ನು ಚೆನ್ನಾಗಿ ತೋರಿಸಿದ್ದಾರೆ ಎಂದು ಹೇಳಿದರು.

ನಿರ್ದೇಶಕ ರಘು ಭಟ್ ಮಾತನಾಡಿ, 'ಕಳೆದ ಎಂಟು ತಿಂಗಳಿಂದ ನಿರಂತರ ಶ್ರಮಪಟ್ಟು ಈ ಹಾಡನ್ನು ಮಾಡಿದ್ದೇವೆ. ನೈಜತೆಗೆ ಹತ್ತಿರವಾಗಿ ಚಿತ್ರೀಕರಣ ಮಾಡಿದ್ದೇವೆ. ನನಗೆ ತಿಳಿದ ಹಾಗೆ ಇಡೀ ಭಾರತದಲ್ಲೇ ಮಠದ ಕುರಿತಾಗಿ ಸಮಗ್ರ ವಿಡಿಯೋ ಸಾಂಗ್ ಯಾರೂ ಮಾಡಿಲ್ಲ, ನಾವೇ ಮೊದಲಿಗರು ಎನ್ನಬಹುದು. ಈ ಆಲ್ಬಂ ಸಾಂಗ್ ತುಂಬಾ ಚೆನ್ನಾಗಿ ಮೂಡಿಬಂದಿದೆ. ಒಂದು ವರ್ಷದಲ್ಲಿ ಮಂತ್ರಾಲಯದಲ್ಲಿ ಏನೆಲ್ಲಾ ಕಾರ್ಯಕ್ರಮ ನಡೆಯುತ್ತವೆ ಎಂಬುದನ್ನು ಈ ಹಾಡಿನಲ್ಲಿ ತೋರಿಸುವ ಪ್ರಯತ್ನ ಮಾಡಲಾಗಿದೆ. ನಾನು ರಾಯರ ಒಬ್ಬ ಭಕ್ತನಾಗಿ ಇದನ್ನು ಮಾಡಿದ್ದೇನೆ. ಈ ಸಂದರ್ಭದಲ್ಲಿ ಶ್ರೀಸುಬುಧೇಂದ್ರ ತೀರ್ಥರಿಗೆ ವಿಶೇಷ ಧನ್ಯವಾದಗಳು. ನಮ್ಮ ಲಕ್ಷ್ಮೀ ಗಣೇಶ ಪ್ರೊಡಕ್ಷನ್ ಯುಟ್ಯೂಬ್ ಚಾನೆಲ್‌ನಲ್ಲಿ ಈ ಹಾಡನ್ನು ಎಲ್ಲರೂ ನೋಡಬಹುದು ಎಂದರು.

ಕಾರ್ಯಕ್ರಮಕ್ಕೂ ಮುನ್ನ ನಡೆದ ಪತ್ರಿಕಾಗೋಷ್ಠಿಯಲ್ಲಿ ಸಂಗೀತ ನಿರ್ದೇಶಕ



ಅನಿಲ್ ಲೋಕನಾಥ್, ಹಿರಿಯನಟಿ ಗಿರಿಜಾ ಲೋಕೇಶ್, ಸಿ.ಆರ್. ಬಾಬು, ಪ್ರಾಜೆಕ್ಟ್ ಹೆಡ್ ಶ್ರೀನಿಧಿ ಕರಣಂ, ಗಾಯಕ ಅಪ್ಪು ವಿ, ನಿರ್ಮಾಪಕ ಸುಗುಣ ರಘು, ಶ್ರೀಶ ಜೋಯಿಸ್, ಛಾಯಾಗ್ರಾಹಕ ನಾಗೇಶ್ ಆಚಾರ್ಯ ಈ ಹಾಡಿನ ವಿಶೇಷತೆಯ ಕುರಿತಂತೆ ತಮ್ಮ ಅಭಿಪ್ರಾಯ ಹಂಚಿಕೊಂಡರು.

ನಾವು ಪ್ರತಿವರ್ಷ ಮೀಡಿಯಾ ಅವಾರ್ಡ್ ಕೊಡುತ್ತಾ ಬಂದಿದ್ದೇವೆ. ಈ ವರ್ಷ ರಾಯರ ದರ್ಶನ ಆಲ್ಬಮ್ ಗೀತೆ ಬಿಡುಗಡೆ ಇದ್ದದ್ದರಿಂದ ಈ ವರ್ಷದ ಅವಾರ್ಡ್‌ಗಳನ್ನು ಸೆಪ್ಟೆಂಬರ್‌ನಲ್ಲಿ ಕೊಡುತ್ತಿದ್ದೇವೆ. ಆದರೆ, ಈ ವರ್ಷದ ಟಿ.ಎನ್.ಐ.ಟಿ. ಮೊದಲ ಮೀಡಿಯಾ ಪ್ರಶಸ್ತಿಯನ್ನು ಶ್ರೀಸುಬುಧೇಂದ್ರ ತೀರ್ಥರಿಗೆ ನೀಡುತ್ತಿದ್ದೇವೆ. ಶ್ರೀಗಳು ಈ ಮೊದಲು ಪೂರ್ವಾಶ್ರಮದಲ್ಲಿ ಒಬ್ಬ ಪತ್ರಕರ್ತ, ಬರಹಗಾರರಾಗಿದ್ದರು. ಹಾಗಾಗಿ ಈ ವರ್ಷದ ಮೊದಲ ಟಿ.ಎನ್.ಐ.ಟಿ. ಅವಾರ್ಡ್‌ನ್ನು ಈ ವೇದಿಕೆಯಲ್ಲಿಯೇ ಅವರಿಗೆ ನೀಡುತ್ತಿದ್ದೇವೆ ಎಂದು ಇದೇ ಸಂದರ್ಭದಲ್ಲಿ ರಘು ಭಟ್ ತಿಳಿಸಿದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26